ಸಂಪುಟ ೧೧
ಸಂಚಿಕೆ ೩

ಕರ್ನಾಟಕ ಭಾರತಿ

ಸಂಕ್ರಮಣ ಸಂಚಿಕೆ

ಫೆಬ್ರುವರಿ, ೧೯೭೯.

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ.

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ, ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವುದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ಪ್ರಸಾರಾಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ ೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ ೪. ಅಕ್ಷಯತೃತಿಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆವೆಚ್ಚ ಸಹಿತ)
ಬಿಡಿ ಸಂಚಿಕೆಯ ಬೆಲೆ : ರೂ. ೨-೫೦
(ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)
(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೪-೦೦ ಮಾತ್ರ)
ಹಣವನ್ನು ಡಿಮಾಂಡ್‌ಡ್ರಾಫ್ಟ್ ಇಲ್ಲವೆ ಪೋಸ್ಟಲ್ ಆರ್ಡರ ಮೂಲಕ
ಫಾಯನಾನ್ಸ್ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ-೫೮೦೦೦೩ ಇವರಿಗೆ ಕಳುಹಿಸಿಕೊಡಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೧೧ ಸಂಚಿಕೆ : ೩

ಪ್ರಧಾನ ಸಂಪಾದಕರು :

ಡಾ. ಎಂ. ಎಸ್. ಸುಂಕಾಪುರ

ಸಹಾಯಕ ಸಂಪಾದಕರು :

ಡಾ. ಕೆ. ಜಿ. ಶಾಸ್ತ್ರಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೧೧ ಸಂಚಿಕೆ : ೩

ಫೆಬ್ರುವರಿ ೧೯೭೯

ಸಂಕ್ರಮಣ ಸಂಚಿಕೆ

ಪ್ರಕಾಶಕರು :
ಶ್ರೀ ಸಿ. ಎಸ್ ಕಣವಿ
ನಿರ್ದೇಶಕರು, ವ್ಯಾಸಂಗ ವಿಸ್ತರಣ-ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :
ಪಿ. ಎಸ್. ಹೊಂಬಾಳಿ
ಹೊಂಬಾಳಿ ಪ್ರಿಂಟರಿ,
ಶಕ್ತಿ ಟಾಕೀಜ ಕಂಪೌಂಡ್, ಕೊಯಿನ್ ರೋಡ, ಹುಬ್ಬಳ್ಳಿ

ಪರಿವಿಡಿ

ಪಂಪಯುಗದ ಪುನಃ ಪರಿಶೀಲನೆ

● ಶಶಿಕಲಾ ಮೋಳದಿ

ಪಂಪಯುಗ[1]ದ ಹರಹು ಹತ್ತನೆಯ ಶತಮಾನದ ಮಧ್ಯಕಾಲದಿಂದ ಹನ್ನೆರಡನೆಯ ಶತಮಾನದ ಮಧ್ಯಕಾಲದ (ಕ್ರಿ. ಶ. 940–1150) ವರೆಗೆ, ಪಂಪನಿಂದ ಬ್ರಹ್ಮಶಿವನ ವರೆಗೆ. ಆದಿಕವಿ ಪಂಪನ ಪ್ರತಿಭೆಯ ಮಿಂಚಿನ ಬೆಳಗು, ಬಿಸಿಗಳು ಉತ್ಕೃಷ್ಟವಾಗಿರುವುದು, ಮುಂಬರುವ ಕವಿಗಳು ಪಂಪನನ್ನು ಅನುಸರಿಸಿದುದು, ಪಂಪಯುಗವೆಂದು ಕರೆಯಲು ಕಾರಣ.[2] ಪಂಪನ ಪ್ರಭಾವವು ಬಸವೇಶ್ವರನ ಕಾಲದ ವರೆಗೆ ಬಲವತ್ತರವಾಗಿತ್ತೆಂಬುದಕ್ಕೆ ಮುಂದೆ ಬಂದ ಕವಿಕೃತಿಗಳೇ ಸಾಕ್ಷಿ. ಈ ಪ್ರಭಾವ ಎಂದೆಂದಿಗೂ ಇರವಂತಹುದು ಎಂದೇ ಅವನು ಯುಗಪ್ರವರ್ತಕ ಕವಿ. ಆದರೂ ಇಲ್ಲಿರುವ ಮೂರು ಶತಮಾನದ ಕವಿಗಳ ಪ್ರವೃತ್ತಿ, ಆಶಯ, ರಚನೆಗಳಲ್ಲಿ ಭಿನ್ನತೆ ಇದ್ದು ಅದು ಸ್ಫುಟವಾಗಿ ಗೋಚರಿಸುತ್ತದೆ.

ಪಂಪಯುಗವನ್ನು ಶತಮಾನಗಳ ಪ್ರಕಾರ ಮೂರು ಭಾಗವಾಗಿ ಮಾಡಿದಲ್ಲಿ ಅಲ್ಲಿ ಬರುವ ಕವಿ ಪಟ್ಟಿಕೆ ಹೀಗಿರುವುದು : 10 ನೇ ಶತಮಾನದಲ್ಲಿ ಪಂಪ, ಪೊನ್ನ, ರನ್ನ, ರತ್ನತ್ರಯರು. ಇದೇ ಕಾಲದಲ್ಲಿ ಜೀವಿಸಿದ್ದ ನೆನ್ನಲಾದ ಚಾವುಂಡರಾಯನ ಆಶ್ರಯದಲ್ಲೂ ಇದ್ದ 1 ನೆಯ ನಾಗವರ್ಮನನ್ನು ಈ ಕವಿ ಮಾಲಿಕೆಯಲ್ಲಿ ಸೇರಿಸಿಕೊಂಡಿರುವದಿಲ್ಲ. ರನ್ನ, ನಾಗವರ್ಮರಿಬ್ಬರೂ ಕ್ರಿ. ಶ. 990 ರಲ್ಲಿದ್ದವರು. ತಮ್ಮ ದಾರಿಯಲ್ಲಿ ನಾಗವರ್ಮನು ಸಾಗಿ

---

1. ಯುಗ ವಿಭಾಗ – ರಂ. ಶ್ರೀ. ಮುಗಳಿಯವರ 'ಕನ್ನಡ ಸಾಹಿತ್ಯ ಚರಿತ್ರೆ'ಯನ್ನನುಸರಿಸಿ,

2. "ಸಾಹಿತ್ಯ ಚರಿತ್ರೆಯಲ್ಲಿ ಮತತತ್ವಕ್ಕಿಂತ ಕವಿ, ವ್ಯಕ್ತಿ ಹೆಚ್ಚು ಗಣ್ಯನು. ಕವಿಕೃತಿ ಹೆಚ್ಚು ಬೆಲೆಯುಳ್ಳದು. ಒಂದೊಂದು ಕಾಲದಲ್ಲಿ ಅಂಥ ಕವಿಗಳೂ ಕೃತಿಗಳೂ ಜನ್ಮತಾಳಿ ಬಹುಮಟ್ಟಿಗೆ ಸಮಾನವಾದ ಒಂದು ಸಾಹಿತ್ಯ ಬಾಂಧವ್ಯಕ್ಕೆ ಒಳಗಾಗಿರುತ್ತವೆ. ಈ ಬಳಗಕ್ಕೆ ಹಿರಿಯನಾದ ಮಾರ್ಗಕವಿ ಇಲ್ಲವೆ ಭಕ್ತಕವಿ ಹಳೆಯದರ ತಿರುಳನ್ನು ತನ್ನಲ್ಲಿ ಅಳವಡಿಸಿಕೊಂಡು ಹೊಸ ದಾರಿಯನ್ನು ಬೆಳಗಿದ್ದಾನೆ. ಆ ಬೆಳಕಿನಲ್ಲಿ ಕೆಲವು ಕವಿಗಳೂ, ಭಕ್ತರೂ ನಡೆದಿದ್ದಾರೆ." ಕ, ಸಾ, ಚ, ಪುಟ 44

ಬರಲಿಲ್ಲವೆಂದು ಹೆಸರಿಸದೇ ಬಿಟ್ಟಿರಬಹುದೆ ? ಅಲ್ಲದೇ ಅವನು ಜೈನನೂ ಅಲ್ಲ. ಹನ್ನೊಂದನೆಯ ಶತಮಾನದಲ್ಲಿ ದುರ್ಗಸಿಂಹ, ಶಾಂತಿನಾಥ, ನಾಗಚಂದ್ರರು. 12 ನೆಯ ಶತಮಾನದ ಪೂರ್ವಾರ್ಧದಲ್ಲಿದ್ದವರು ನಯಸೇನ, ಕರ್ಣಪಾರ್ಯ[3], ಬ್ರಹ್ಮಶಿವರು.

ನಯಸೇನನದು "ನಾಣ್ನುಡಿ ದೇಸಿವೆತ್ತ ಪೊಸನುಡಿ ಮಾರ್ಗಂ". ಕನ್ನಡದ ದೊಡ್ಡ ಅಭಿಮಾನಿ, ಜನತೆಯ ಕವಿ. ಆಡುಭಾಷೆಯ, ಸಂಸ್ಕೃತ ಬಾಹುಳ್ಯವಿರದ ಅಚ್ಚಗನ್ನಡದ ಬಳಕೆ ಇವನದು. ಸಾಮಾಜಿಕ ದೋಷಗಳನ್ನು ವಿಡಂಬನೆಯಿಂದ ಹಾಸ್ಯ ಪೂರ್ಣವಾಗಿ ಎತ್ತಿ ತೋರಿಸುವ ಸಾಮಾಜಿಕ ಪ್ರಜ್ಞೆಯುಳ್ಳ, ಲೋಕವ್ಯವಹಾರಜ್ಞಾನಿಯೂ ಆಗಿರುವ ಕವಿ. ಇದರಿಂದಾಗಿಯೇ ಇವನ ಕಾವ್ಯದಲ್ಲಿ ಕಾವ್ಯಾಂಶಕ್ಕೆ ಕೊರತೆಯುಂಟಾಗಿದೆಯೆನಬಹುದು. "ಈ ಸರಪಣಿಯಂತೆ ಸಾಲು ಹಿಡಿದು ಬರುವ ಉಪಮೆಯಲ್ಲಿ ಔಚಿತ್ಯವಿದೆ, ನಗೆಯಿದೆ. ಆದರೆ ಕಾವ್ಯ ಕಲ್ಪನೆಯ ಅಪೂರ್ವ ಉಜ್ವಲತೆಯಂತೂ ತೀರಾ ಕಡಿಮೆ."[4] ಮುಂಬರುವ ವಚನಕಾರರಲ್ಲಿ ವಿಶೇಷವಾಗಿ ತೋರಿಬರುವ ಸಾಮಾಜಿಕ ಪ್ರಜ್ಞೆ, ಜನಭಾಷೆಯ ಉಪಯೋಗದ ಪೂರ್ವಭಾವಿಯಾದ ಲಕ್ಷಣ ನಯಸೇನನಲ್ಲಿ ಕಂಡು ಬರುತ್ತವೆ. 11 ನೇ ಶತಮಾನದ ಕಥನಸಂಪ್ರದಾಯ ನಯಸೇನ, ಕರ್ಣಪಾರ್ಯರಲ್ಲಿ ಮುಂದುವರಿದಿದೆ. ಈ ಯುಗದ ಕೊನೆಯ ಕವಿ ಬ್ರಹ್ಮಶಿವನಲ್ಲಿ, ಕವಿತ್ವವು ವಿಡಂಬನೆ, ಅಣಕಗಳ ಪ್ರಯೋಗದಲ್ಲಿ ಯಶಸ್ವಿಯಾಗಿ ಪ್ರಕಟಗೊಂಡಿದೆ. ನಯಸೇನ, ಬ್ರಹ್ಮಶಿವರು ಪಂಪ-ರನ್ನಾದಿಗಳಿಂದ ಬಹುದೂರ. ಇವರನ್ನು ಹೋಲಿಸಿ ನೋಡುವುದು ಅಷ್ಟೊಂದು ಉಚಿತವೆನಿಸುವುದಿಲ್ಲ. ಕರ್ಣಪಾರ್ಯನು ಜೈನ ಪುರಾಣ ಬರೆದಿರುವುದರಿಂದ ಹಿಂದಿನ ಕವಿಗಳ ಸ್ಪಷ್ಟ ಛಾಯೆ ಇವನ ಮೇಲಿದೆ. "ಕರ್ಣಪಾರ್ಯನ ಸ್ವೀಕರಣ ಕಾರ್ಯ ಯಥೇಚ್ಛವಾಗಿ ನಡೆದಿದೆ."[5]

ಈಗ ಪರಿಶೀಲಿಸಿ, ಹೋಲಿಸಿ ನೋಡಬೇಕಾದುದು ಕಾಲಗತಿಯಿಂದ, ಪ್ರಭಾವದಿಂದ ಸಮೀಪವರ್ತಿಗಳಾದ ಎರಡು ಶತಮಾನಗಳನ್ನು –10 ಮತ್ತು 11. ಪಂಪನ ಕಾಲದಿಂದ ರನ್ನನ ಕಾಲದವರೆಗಿನ 50 ವರುಷಗಳ ಕಾಲದ ಅವಧಿ ಹತ್ತನೆಯ ಶತಮಾನದ್ದು. ಈ ಅವಧಿಯಲ್ಲಿ ನಾಲ್ಕು ಜನ ಮಹಾಕವಿಗಳನ್ನು ಕನ್ನಡ ಸಾಹಿತ್ಯ ಪಡೆಯಿತು. ಆದರೆ ಮುಂದಿನ ನೂರು ವರುಷಗಳಲ್ಲಿ ಈ ಮಟ್ಟದ ಒಬ್ಬ ಕವಿಯೂ ಹುಟ್ಟಿ ಬರಲಿಲ್ಲ. ಕವಿಸಂಖ್ಯೆಯಲ್ಲಿ ಕಡಿತ, ಕಾವ್ಯಸಾಮರ್ಥ್ಯದಲ್ಲೂ ಕೊರತೆ.

---

3. ಇಲ್ಲಿ ಪ್ರಮುಖ ಕವಿಗಳನ್ನಷ್ಟೇ ಪರಿಗಣಿಸಲಾಗಿದೆ. ಶಾಸ್ತ್ರಕವಿಗಳನ್ನೂ ಸೇರಿಸಿ ಕೊಂಡಿರುವದಿಲ್ಲ.

4. ಡಾ. ರಂ. ಶ್ರೀ. ಮುಗಳಿ : ಕನ್ನಡ ಸಾಹಿತ್ಯ ಚರಿತ್ರೆ ಪುಟ 137.

5. ಸ, ಕ, ಸಾ, ಚ, ಸಂ. 2 ಪುಟ 285.

ಹನ್ನೊಂದನೆಯ ಶತಮಾನ, ಹತ್ತನೆಯ ಶತಮಾನಕ್ಕೆ ಯಾವ ದೃಷ್ಟಿಯಿಂದಲೂ ಸರಿಗಟ್ಟಲಾರದೆಂಬುದು ವೀಕ್ಷಿಸಿ ನೋಡಲಾಗಿ ತಿಳಿದು ಬರುವುದು.

12 ನೆಯ ಶತಮಾನಕ್ಕೂ 10ನೆಯ ಶತಮಾನಕ್ಕೂ ನಡುವೆ 100, 150 ವರುಷಗಳ ಕಾಲ ದೂರವಿರುವುದರಿಂದ ಜಿನಸತ್ವದೊಂದಿಗೆ ಸಾಹಿತ್ಯಶಕ್ತಿಯೂ ಕ್ಷೀಣಿಸುತ್ತ ಬಂದಿರಬಹುದೆಂದೂ ಒಪ್ಪಿಕೊಂಡರೂ, ಒಂದರ ಹಿಂದೆ ಇನ್ನೊಂದು ಬೆಂಬಲಿಸಿ ಬಂದಿರುವ ಸಾಹಿತ್ಯ ರಚನೆಯಲ್ಲಿ ಭಿನ್ನರುಚಿ, ಗುಣವ್ಯತ್ಯಾಸ ಕಂಡು ಬರಲು ಕಾರಣವೇನು ? ಸಾಹಿತ್ಯ ಚರಿತ್ರೆಯ ವಿದ್ಯಾರ್ಥಿಗೆ ಇದೊಂದು ಕುತೂಹಲಕಾರಿಯಾದ ಪ್ರಶ್ನೆಯಾಗುತ್ತದೆ. ಹಾಗೆಂದು ಎಲ್ಲ ಕವಿಗಳು ಏಕಪ್ರಕಾರದ, ನಿರ್ವಿಶೇಷವಾದ ಕೃತಿಗಳನ್ನು ರಚಿಸಬೇಕೆಂಬುದಲ್ಲ. ಹಾಗಿದ್ದರೆ, ಅದು ನಿರ್ಜೀವತೆಯ ಲಕ್ಷಣ. ಸಜೀವವಾದುದು ಒಂದರಂತೆ ಒಂದಿರದು. ನಿಸರ್ಗವೂ ಇದನ್ನೇ ಸಮರ್ಥಿಸುವುದು. ಆದರೆ ಇಲ್ಲಿ ಕಂಡುಬರುವ ವ್ಯತ್ಯಾಸ, ಸತ್ವದ ಕೊರತೆಯಿಂದಾಗಿ ಅದು ಕ್ರಮೇಣ ಹೆಚ್ಚುತ್ತಾ ಹೋಗಿರುವುದು.

10 ನೆಯ ಹಾಗೂ 11 ನೆಯ ಶತಮಾನದ ಸಾಹಿತ್ಯದಲ್ಲಿ ಕೆಲವು ಪ್ರಮುಖವಾದ ವಿಭಿನ್ನ ಗುಣಗಳಿವೆ. ಹತ್ತನೆಯ ಶತಮಾನವು ಕ್ಷಾತ್ರಯುಗವೆಂದೂ, ಕನ್ನಡ ಸಾಹಿತ್ಯದ ಸುವರ್ಣ ಯುಗವೆಂದೂ ಪ್ರಸಿದ್ಧವಾಗಿದೆ. ಇದು ಧರ್ಮ ಪ್ರಚಾರಕ ಯುಗವೂ ಹೌದು. ಪಂಪ, ಪೊನ್ನ, ರನ್ನರು ವೀರರಸ ಪ್ರಧಾನವಾದ ಒಂದೊಂದು ಲೌಕಿಕ ಕಾವ್ಯ[6]ವನ್ನೂ ಧಾರ್ಮಿಕವಾದ ಒಂದೊಂದು ಜೈನ ತೀರ್ಥಂಕರ ಪುರಾಣವನ್ನೂ ಬರೆದರು. ಇದು ಆ ಕವಿಗಳಲ್ಲಿ ಲೌಕಿಕ ಜೀವನಾಸಕ್ತಿ, ಧರ್ಮಶ್ರದ್ಧೆ ಇವೆರಡಕ್ಕೂ ಸಮಾನ ಪ್ರಾತಿನಿಧ್ಯ ವಿದ್ದಿತೆಂಬುದರ ದ್ಯೋತಕ. ಚಂಪೂ ಪ್ರಧಾನವಾದ ಕಾವ್ಯಸ್ವರೂಪವಾಗಿದೆ. ಓಜಸ್ಸು ಪ್ರೌಢಿಮೆಯುಳ್ಳ ಉಜ್ವಲ ಶೈಲಿ. ಆದರೆ ಹನ್ನೊಂದನೆಯ ಶತಮಾನದಲ್ಲಿ ಇವಾವ ಅಂಶಗಳೂ ಕಂಡು ಬಾರವು. ಈ ಶತಮಾನದ ಸಾಹಿತ್ಯ ಮುಖ್ಯವಾಗಿ ಕಥಾಸಾಹಿತ್ಯ. ನಿರೂಪಣಾ ರೀತಿಯಲ್ಲಿ ಆ ಬಿಗಿ ಬಂಧಗಳಿರದೆ, ಸರಳ, ಕೋಮಲತೆಗಳು ತಲೆದೋರಿವೆ. ಕ್ಷಾತ್ರತೇಜಕ್ಕಿಂತ ಭಕ್ತಿಭಾವ, ನೀತಿಯುಪದೇಶ ಸ್ಫುಟವಾಗಿ ತೋರುತ್ತವೆ. ಹೀಗೆ ಭಿನ್ನ ಲಕ್ಷಣಗಳುಳ್ಳ ಈ ಎರಡೂ ಶತಮಾನಗಳನ್ನು ಒಂದಾಗಿ ಸೇರಿಸಿರುವ ಸೂತ್ರವೆಂದರೆ, ಜೈನಧರ್ಮ ಮತ್ತು ಪಂಪನ ಪ್ರಭಾವ.

---

6. "ತನ್ನ ಸಮಕಾಲೀನ ಲೋಕಜೀವನ (ಲೌಕಿಕ)ವನ್ನು, ತನ್ನ ವೈಯಕ್ತಿಕ ಸ್ನೇಹಾನುಬಂಧಗಳನ್ನು, ತಾನು ಕಂಡ ಹಾಗೂ ಪಾಲ್ಗೊಂಡ ರಣರಂಗದ ಅನುಭವಗಳನ್ನು, ತನ್ನ ಕಾಲದ ಜನದ ನಡವಳಿಕೆಗಳನ್ನು, ಒಟ್ಟಿನಲ್ಲಿ ತನ್ನ ಕಾಲಮಾನವನ್ನು ಈ ಕೃತಿಯಲ್ಲಿ ಉಜ್ವಲಗೊಳಿಸಿ ಹೇಳುತ್ತಾನೆ ಎಂದು ಅರ್ಥ". ಸ.ಕ.ಸಾ.ಚ, ಸಂ.2, ಪುಟ 93.

ಈ ವ್ಯತ್ಯಾಸದ ಮೊಳಕೆ ಹತ್ತನೆಯ ಶತಮಾನದ ಕೊನೆಯ ಕವಿಯಾದ, ರನ್ನನ ಸಮಕಾಲೀನನೂ ಆದ ನಾಗವರ್ಮನಲ್ಲಿಯೇ ಕಾಣಿಸಿಕೊಂಡಿದೆ. ಆತನು ಚಂಪೂ ರೂಪವೊಂದನ್ನುಳಿದು ಉಳಿದ ವಿಷಯಗಳಲ್ಲಿ ಸ್ವತಂತ್ರ ಮನೋಭಾವವನ್ನು ತೋರಿದ್ದಾನೆ. ಎರಡು ಕೃತಿ ರಚನೆ ಮಾಡಿದರೂ, ಒಂದು ಶಾಸ್ತ್ರ; ಇನ್ನೊಂದು ಕಾವ್ಯ-ಸಂಸ್ಕೃತ ಕೃತಿಯೊಂದರ ಅನುವಾದ. 'ಕರ್ಣಾಟಕ ಕಾದಂಬರಿ' ವೀರರಸ ಪ್ರಧಾನವಾಗಿರದೆ ಕನ್ನಡದ ಪ್ರಥಮ ಪ್ರಣಯ ಕಾವ್ಯವಾಗಿದೆ. ನಾಗವರ್ಮನ ಆಯ್ಕೆ ಒಂದು ಹೊಸ ದಿಶೆಯಲ್ಲಿ ಹೊರಟಿತೆಂಬುದು ಸ್ಪಷ್ಟ.

ಒಬ್ಬ ಕವಿ ಇತರರನ್ನು ಅನುಸರಿಸಿದ್ದಾನೆಂದರೂ ಅವರವರಲ್ಲಿ ವ್ಯತ್ಯಾಸ ಇದ್ದೇ ಇರುತ್ತದೆ. ಇಲ್ಲದಿದ್ದರೆ ಅದು ನಿರ್ಜೀವ ಪ್ರತಿಬಿಂಬ ಮಾತ್ರವಾಗಿ ಮನಾಕರ್ಷಕವಾಗದು. ಅನುಭವ, ಅಭಿವ್ಯಕ್ತಿಗಳಲ್ಲಿ ಕವಿ ಸ್ವಂತಿಕೆಯುನ್ನುಳ್ಳವನಾದುದರಿಂದ ಈ ವ್ಯತ್ಯಾಸ ಸಹಜವಾಗಿರುವುದು. ಇದಕ್ಕೆ ರನ್ನ, ಜನ್ನರನ್ನು ಉದಾಹರಿಸಬಹುದು. ಒಬ್ಬ ಕವಿಯ ಗುರುತ್ವಾಕರ್ಷಣದ ಹೊರಗಿರುವ ಕವಿಯನ್ನೂ ಗುರುತಿಸಬಹುದು. ಕುಮಾರವ್ಯಾಸನು ಈ ವಿಷಯದಲ್ಲಿ ಉತ್ತಮ ನಿದರ್ಶನ. ದುರ್ಗಸಿಂಹನೂ ಸಹ ಅಂಥವನೇ.

1 ನೆಯ ನಾಗವರ್ಮನಲ್ಲಿ ಬೀಜರೂಪವಾಗಿದ್ದ ವ್ಯತ್ಯಾಸ ವರ್ಧಿಸಿ ಸ್ಫುಟವಾಗಿ ಗೋಚರಿಸಲಾರಂಭಿಸಿದುದು ಕಂಡು ಬರುತ್ತದೆ. ದುರ್ಗಸಿಂಹ ಹನ್ನೊಂದನೆಯ ಶತಮಾನದ ಪ್ರಥಮ ಕವಿ. ಕ್ರಿ. ಶ, 1025[7] (ರನ್ನ ದೀರ್ಘಾಯುಷಿಯಾಗಿದ್ದಲ್ಲಿ ಆ ಕಾಲಕ್ಕೆ ಜೀವಿಸಿರಲು ಸಾಧ್ಯ). ಪಂಪನಲ್ಲಿ ಗೌರವ ಭಾವವುಳ್ಳವನಾದರೂ ಕೃತಿ ಸಂಖ್ಯೆಯಲ್ಲಿ, ವಸ್ತುವಿನ ಆಯ್ಕೆಯಲ್ಲಿ, ಪ್ರತಿಪಾದನಾನುಕ್ರಮದಲ್ಲಿ, ಕಾವ್ಯಗುಣಗಳಲ್ಲಿ, ಯಾವುದರಲ್ಲೂ ಪಂಪನನ್ನು ಅನುಸರಿಸಿಲ್ಲ. ಸಂಸ್ಕೃತ ಕೃತಿಯೊಂದನ್ನು ಅನುವಾದಿಸುವುದರಲ್ಲಿ ನಾಗವರ್ಮನ ಬೆನ್ನು ಹಿಡಿದಿರುವನು. ಪಂಪರನ್ನರಂತೆ ಕಥಾವಸ್ತುವಿನಲ್ಲಿ ವ್ಯತ್ಯಾಸ ಮಾಡುವ ಗೋಜಿಗೆ ಹೋಗಿರುವದಿಲ್ಲ. "ಗದ್ಯ ಪ್ರಧಾನವಾದ ಚಂಪುವಿನ ಬಳಕೆ ದುರ್ಗಸಿಂಹನ ಕಥನಕ್ರಮದ ವೈಶಿಷ್ಟ್ಯ."[8], "ಧರ್ಮವಿರೋಧವಲ್ಲದ ರಾಜನೀತಿಶಾಸ್ತ್ರಪ್ರತಿಪಾದನೆ ಪಂಚತಂತ್ರ ಕಥೆಗಳ ಉದ್ದೇಶವಾಗಿದೆ." ದುರ್ಗಸಿಂಹನ ಕನ್ನಡ ಪಂಚತಂತ್ರದ ಉದ್ದೇಶವೂ ಇದೇ ಎಂದು ಬೇರೆ ಹೇಳಬೇಕಾಗಿಲ್ಲ. "ಪಂಚತಂತ್ರದ ಕತೆಗಳು ಪ್ರಧಾನವಾಗಿ ಲೌಕಿಕ ನೀತಿಯನ್ನು ಬೋಧಿಸುತ್ತವೆ. ಮನುಷ್ಯನು ಜಗತ್ತಿನಲ್ಲಿ ನಿರಾತಂಕವಾಗಿ ಬದುಕಲು

---

7. ಕವಿಗಳ ಕಾಲವನ್ನು 'ಕರ್ಣಾಟಕ ಕವಿಚರಿತೆ'ಯನ್ನನುಸರಿಸಿ ಕೊಡಲಾಗಿದೆ.

8. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂ. 2. ಪುಟ 210.

ಆಗತ್ಯವಾದ ಕೆಲವು ಉಪಾಯಗಳನ್ನು ಅವು ಹೇಳುತ್ತವೆ."[9] ದುರ್ಗಸಿಂಹನ ಉದ್ದೇಶ ಧಾರ್ಮಿಕವಂತೂ ಅಲ್ಲ. ಚರಿತ್ರನಿರೂಪಣೆಯೂ ಅಲ್ಲ. ಹಾಗಿದ್ದಲ್ಲಿ ಅದಕ್ಕೆ ತಕ್ಕುದಾದ, ಕಾವ್ಯಾಂಶಕ್ಕೆ ಅವಕಾಶವೊದಗಿಸುವಂತಹ ಕಥಾವಸ್ತುವನ್ನು ಆಯ್ಕೆ ಮಾಡುತ್ತಿದ್ದನು. ಕವಿಗೆ ಆಗಿನ ಸಾಮಾಜಿಕ ಸ್ಥಿತಿಯ ಅಧೋಗತಿ, ಮಾನವ ದೌರ್ಬಲ್ಯಗಳ ಅನಾಹುತಗಳು ಬೇರೊಂದು ಪ್ರೇರಣೆ ನೀಡಿದಂತೆ ಕಾಣುತ್ತವೆ. ವಿಷಯ, ಸನ್ನಿವೇಶಗಳಲ್ಲಿಯೂ ಮಾನವ ನಡೆದುಕೊಳ್ಳುವ ನಯವನ್ನು ಬೋಧಿಸಲು ಅನುವರ್ತಿಸಿದನು. ಆದುದರಿಂದಲೇ ಸಮಾಜದಲ್ಲಿರುವ ಲೋಪ-ದೋಷ, ಮಾನವನ ದೋಷ-ದೌರ್ಬಲ್ಯಗಳನ್ನು ಕೈಮಾಡಿ ತೋರಿಸುವನು. "ಮನುಷ್ಯನ ನಡವಳಿಕೆಯನ್ನು ಕುರಿತ ತೀವ್ರವಾದ ವ್ಯಂಗ್ಯ ಮತ್ತು ವಿಡಂಬನೆಗಳನ್ನು ಇಲ್ಲಿ ಕಾಣಬಹುದಾಗಿದೆ. ಬ್ರಾಹ್ಮಣರ ಪೊಳ್ಳು ಧಾರ್ಮಿಕತೆ, ಕ್ಷತ್ರಿಯರ ಹೇಡಿತನ, ವೈಶ್ಯರ ಜಿಪುಣತೆ, ಶೂದ್ರರ ಮೌಢ್ಯವೆಲ್ಲವನ್ನೂ ಪ್ರತಿಬಿಂಬಿಸುವ ಪಂಚತಂತ್ರ ಒಂದು ರೀತಿಯಲ್ಲಿ ತನ್ನ ಕಾಲದ ಸಾಮಾಜಿಕ ಜೀವನಕ್ಕೆ ಮತ್ತು ಎಲ್ಲ ಕಾಲದ ಮಾನವ ಸ್ವಭಾವಕ್ಕೆ ಹಿಡಿದ ಕನ್ನಡಿಯಾಗಿದೆ"[10]

ದುರ್ಗಸಿಂಹನೂ ತನ್ನ ಕಾಲದ ಜನಜೀವನಚಿತ್ರ ಮಾಡಿರುವನೆಂಬುದಕ್ಕೆ ಅವನ ಪದಗಳ ಬಳಕೆ, ಮಾತಿನ ರೀತಿ, ಗಾದೆಮಾತುಗಳ ಪ್ರಯೋಗಗಳೇ ಆಧಾರ. "ಆಡುನುಡಿ, ಗಾದೆಮಾತುಗಳ ಬಳಕೆ ಕನ್ನಡ ಪಂಚತಂತ್ರದಲ್ಲಿ ಧಾರಾಳವಾಗಿದೆ. ಕನ್ನಡ ಸುಭಾಷಿತಗಳ ಬಳಕೆಯಲ್ಲಿ ಮತ್ತು ಉಪಮೆಗಳಲ್ಲಿ ದುರ್ಗಸಿಂಹನು ತನ್ನ ಕಾಲದ ಜನಜೀವನದಲ್ಲಿ ಆಳವಾಗಿ ಬೇರು ಬಿಟ್ಟಿದ್ದ ಕವಿಯೆಂಬುದನ್ನು ಧಾರಾಳವಾಗಿ ತೋರಿಸಿಕೊಂಡಿದ್ದಾನೆ."[11] ಯಾವ ಕವಿಯೇ ಆಗಲಿ ತಾನು ಜೀವಿಸಿರುವ ಕಾಲದ ವಲಯಕ್ಕೆ ಹೊರಗಾದವನಾಗಿರಲಾರನು, ಆಗಿರಬಾರದು. ಕವಿಯು ತನ್ನ ಕಾಲದ ಪ್ರತಿನಿಧಿಯಾಗಿರುತ್ತಾನೆ. ಕೆಲವೊಮ್ಮೆ ಕಾಲಗುಣಕ್ಕೆ ವಿಪರೀತವಾದ ಮನೋಭಾವ ತಳೆದುದು ಕಂಡು ಬಂದರೂ, ಅದು ಸ್ಪಷ್ಟವಾಗಿ ಎದ್ದು ಕಾಣುವಂತೆ ಇರುತ್ತದೆ.

ದುರ್ಗಸಿಂಹನು ಇಂತಹ ರಾಜನೀತಿಬೋಧನಾಯುಕ್ತ ಕಥಾವಸ್ತುವನ್ನು ಆಯ್ಕೆ ಮಾಡಲು ಕಾರಣವೇನು ? ಜನ ಒತ್ತಾಯವು ಅರಸನ ಮೂಲಕವಾಗಿ ಪಂಪನಿಂದ ಭಾರತ ಕತೆ ಹೇಳಿಸಿತು. ರನ್ನನಿಗೆ ಪಂಪನ 13 ನೇ ಆಶ್ವಾಸವು ಪ್ರೇರಣೆಯನ್ನಿತ್ತಿತು.

---

9. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂ, 2 ಪುಟ 210.

10. ಅದೇ, ಪುಟ 210.

11. ಅದೇ, ಪುಟ 210.

ಜೈನ ಪುರಾಣಗಳ ಉದ್ದೇಶವಂತೂ ಸ್ಫುಟವಾಗಿದೆ. ರನ್ನನಿಗೆ ತನಗೆ ಆಶ್ರಯವಿತ್ತ ಅಣ್ಣ, ಅಬ್ಬೆಯರನ್ನು ಹಾಡಿ ಹೊಗಳುವುದು ಉದ್ದೇಶವಾಗಿತ್ತೇನೋ! ಹಾಗೆಯೇ ದುರ್ಗಸಿಂಹನಿಗೆ ಆಗಿನ್ನ ಜನಮನೋಧರ್ಮ, ಕಾಲಮಾನಸ್ಥಿತಿ, ರಾಜಕೀಯ ಪರಿಸ್ಥಿತಿ ಇಂಥ ಕೃತಿಯೊಂದನ್ನು ರಚಿಸಲು ಬಲವತ್ಕರಿಸಿರಬೇಕಲ್ಲವೆ? ವೀರತನವು ಕಾಲಕ್ರಮೇಣ ವಿಚಾರಶೂನ್ಯ ಉದ್ಧಟತನವಾಗಿ ಪರಿಣಮಿಸಿರಬೇಕು. ಧೈರ್ಯ ಸಾಹಸಗಳ ಹುಚ್ಚು ಹುಮ್ಮಸ ನೀತಿನಯವಿದತೆಯನ್ನು ಕಡೆಗಣಿಸಿ ಮೌಢ್ಯಕ್ಕೆ ಆಹ್ವಾನವಿತ್ತಿರಬಹುದು. ಸಾಹಿತ್ಯವು ಜನಜೀವನದ ಪ್ರತಿಬಿಂಬ ಮಾತ್ರವಾಗಿರದೆ ಜನಜೀವನವನ್ನು ತಿದ್ದುವ ತಾರಕ ಮಂತ್ರವೂ ಅಹುದಲ್ಲವೆ? ಆಗ ಅವಶ್ಯಕವೆನಿಸಿದುದು ವೀರರ ವಿವರಣೆಯಲ್ಲ; ಚಾತುರ್ಯದ ರಾಜನೀತಿಯುಪದೇಶ. ಪಂಚತಂತ್ರದ ಕಥಾಮುಖದಲ್ಲಿ ವಿವರಿಸಿರುವ ಸ್ಥಿತಿಯೇ ದುರ್ಗಸಿಂಹನ ಕಾಲದ ವಾಸ್ತವ ಸ್ಥಿತಿಯಾಗಿದ್ದಿರಬಹುದೇನೋ! ಎಂದೇ ಅವನು ಧರ್ಮೋಪದೇಶ, ಸಾಹಸ ಚರಿತ್ರೆಗಳ ವಿವರಣೆಗೆ ಹೋಗದೆ ರಾಜನೀತಿ ಬೋಧನೆಗೆ ಕೈಹಾಕಿದುದು. ಉಪದೇಶ ಬೇಸರ ತರುವಂಥದ್ದು. ನೇರವಾಗಿ ಉಪದೇಶಕ್ಕೆ ತೊಡಗದೇ ಈ ಬ್ರಾಹ್ಮಣ ಕವಿ ರೂಪಕದ ಮೂಲಕ ಬೋಧನೆ ಪರಿಣಾಮಕಾರಿಯಾದೀತೆಂದು ಹೀಗೆ ಮಾಡಿದನು. ಭಾರತೀಯರಿಗೆ ಇದು ಹೊಸದೇನಲ್ಲ. ಪುರಾಣಗಳು ಇಂತಹ ಕೃತಿಗಳೇ.

ಶಾಂತಿನಾಥನನ್ನು ಕುರಿತು ಬರೆಯುತ್ತಾ 'ಕನ್ನಡ ಸಾಹಿತ್ಯ ಚರಿತ್ರೆ'ಯಲ್ಲಿ ಹನ್ನೊಂದನೆಯ ಶತಮಾನ ಒಂದು ಮರುಳ್ಗಾಡಿದ್ದಂತೆ. ಈ ಮರುಳ್ಗಾಡಿನಲ್ಲಿ ಶಾಂತಿನಾಥನ ಸುಕುಮಾರ ಚರಿತೆ ಒಂದು ನೀರ್ದಾಣ'' ಎನ್ನುತ್ತಾರೆ ಜಿ. ಬ್ರಹ್ಮಪ್ಪನವರು. ಮರುಳ್ಗಾಡಿನ ಈ ನೀರ್ದಾಣವನ್ನು ನಿಸರ್ಗದ ರಮಣೀಯ ಸಾನ್ನಿಧ್ಯದ ಬಾಣನ ಅಚ್ಛೋದ ಸರೋವರಕ್ಕೋ ಇನ್ನಿತರ ಸುಂದರ ಸುರುಚಿರ ರಸದಾಣಗಳೊಡನೆ ಹೋಲಿಸಿದಾಗ ಅದರ ನೈಜ ಸತ್ವ ಮನವರಿಕೆಯಾಗುತ್ತದೆ. ''ಸುಕುಮಾರಚರಿತೆ ಜೈನಧರ್ಮದ ಕೈಪಿಡಿಯಂತಿದೆ................ಬೇಸರ ತರುವ ಈ (ಧರ್ಮಬೋಧೆಯ) ಭಾಗವನ್ನು ತೆಗೆದು ಹಾಕಿ ಗ್ರಂಥವನ್ನು ಸಂಗ್ರಹಿಸಿದರೆ ಇದು ಹೃದಯ ರಂಜಕವಾಗದಿರದು''[12] ಸುಲಲಿತ ಸರಳ ಮನೋಹರವಾದ ಕಥಾ ಶೈಲಿಗಳುಳ್ಳವನಾಗಿದ್ದರೂ ಶಾಂತಿನಾಥ ಹತ್ತನೆಯ ಶತಮಾನದ ಕವಿಗಳಿಗೆ ಹೆಗಲೆಣೆಯಾಗಿ ನಿಲ್ಲಲಾರನು. ''ಶಾಂತಿನಾಥ ಮಹಾಕವಿಯಲ್ಲ. ಮಹಾ ಕಾವ್ಯದ ಬೃಹತ್ತು-ಮಹತ್ತುಗಳು ಸುಕುಮಾರ ಚರಿತೆಯಲ್ಲಿಲ್ಲ.''[13]

---

12. ಅದೇ, ಪುಟ 217.

13. ಅದೇ, ಪುಟ 222.

ನಾಗವರ್ಮನ ಸತ್ವ ದುರ್ಗಸಿಂಹನಲ್ಲಿ ಉಳಿಯಲ್ಲಿಲ್ಲ; ದುರ್ಗಸಿಂಹನಷ್ಟು ಶಾಂತಿನಾಥನಲ್ಲಿಲ್ಲ. ಹೀಗೆಯೇ ಅದು ಕರಗುತ್ತ ಹೋದುದು ಸರ್ವವಿದಿತವಾಗಿದೆ. "ಒಳ್ಳೆಯ ಅನುವಾದಕನ ವ್ಯುತ್ಪತ್ತಿ, ಪ್ರತಿಭೆಗಳು ದುರ್ಗಸಿಂಹನಲ್ಲಿವೆಯಾದರೂ 1 ನೆಯ ನಾಗವರ್ಮನ ಶಕ್ತಿ ವಿಶೇಷವಾಗಲಿ, ಮೇಲಾದ ಕವಿಯ ಸ್ವತಂತ್ರ ಸ್ಫೂರ್ತಿಯಾಗಲಿ ಅವನಲ್ಲಿ ಇಲ್ಲವೆನ್ನಬೇಕು"[14] ದುರ್ಗಸಿಂಹನ ಧರ್ಮದ ಸೋಂಕಿಲ್ಲದ ಕಥಾಗರ್ಭದೊಡನೆ ಜೊತೆಗೂಡಿದ ನೀತಿ ಬೋಧೆ, ಮಾನವ ಪ್ರತಿರೂಪವಾದ ಪ್ರಾಣಿಗಳ ಆಕರ್ಷಕ ಕಥನಶೈಲಿ. ಹಾಸ್ಯ ವಿಡಂಬನೆಯ ಚುರುಕಿನ ರೀತಿ ಓದುಗನಿಗೆ ಒಂದು ತೆರನ ಉತ್ಸಾಹವನ್ನುಂಟು ಮಾಡುತ್ತವೆ. ಕುತೂಹಲವನ್ನು ಕೆರಳಿಸಿ, ಮುಂದೆ ಸಾಗಿಸಿಕೊಂಡು ಹೋಗುತ್ತವೆ. ಆದರೆ ಶಾಂತಿನಾಥನ ಸುಕುಮಾರ ಚರಿತೆ ಹೆಸರಿಗನ್ವಯವಾಗಿ ಹುಮ್ಮಸ್ಸನ್ನು ಕಳೆದು ತೆಪ್ಪಗಾಗಿ "ಉತ್ತಮ ಕಥೆಗಳಿವು" ಎಂಬ ಸಮಾಧಾನದ ನುಡಿಗಳು ಉಂಟಾಗುತ್ತವೆ. ಈ ಭಾವನೆಗೆ ಅಥವಾ ಪರಿಣಾಮಕ್ಕೆ ಕಾರಣ ತ್ಯಾಗ, ವೈರಾಗ್ಯದ ಅತಿಯಾದ ಧರ್ಮೋಪದೇಶವೇ ಆಗಿರಬೇಕಲ್ಲವೆ ?

ಹನ್ನೊಂದನೆಯ ಶತಮಾನದ ಅಂತಿಮ ಕವಿ ಅಭಿನವ ಪಂಪ. ಪಂಪನ ಸತ್ವ ಸೊಬಗುಗಳೊಡನೆ ಪಂಪಭಾರತ 'ಮುನ್ನಿನ ಕಬ್ಬಗಳನ್ನು ಇಕ್ಕಿ ಮೆಟ್ಟಿದಂತೆ'', ಅಭಿನವಪಂಪನ ಕೃತಿ ಪಂಪಭಾರತವನ್ನು ಮೀರಿಸಿರಬಹುದೆನಿಸುತ್ತದೆ. ಆದರೇನು ? ಅದು ಅನಿಸಿಕೆ ಮಾತ್ರ, ವಾಸ್ತವವಲ್ಲವೆಂಬುದಾಗಿ ತಿಳಿಯಲು ತಡವಾಗದು. ಕಾವ್ಯನಾಮಗಳು ಪ್ರೇರಿಸುವ ಭಾವದಲ್ಲೂ ಬಹು ವ್ಯತ್ಯಾಸವಿದೆ. "ವಿಕ್ರಮಾರ್ಜುನವಿಜಯ"ದ ವೀರೋತ್ಸಾಹ, ಆದಿಪುರಾಣದ ಧೀರತೆ, ಅಭಿನವ ಪಂಪನ ಕಾವ್ಯನಾಮಗಳಲ್ಲಿ ಉಂಟಾಗದು. ಸುಕುಮಾರ ಚರಿತೆಯು ಧಾರ್ಮಿಕ ಕಾವ್ಯವಾದರೂ ವಿದ್ಯಾಮಹತ್ವ, ಕಾರ್ಯಸಾಧನೆಯ ಚಾತುರ್ಯ, ಪ್ರಾಮಾಣಿಕತೆ, ವ್ಯವಹಾರನೀತಿಗಳೆಂಬ ಲೌಕಿಕ ಗುಣಗಳಿಗೂ ಅಲ್ಲಿ ಮಹತ್ವವಿದೆ. ಲೌಕಿಕವೆಂಬುದು ಜೈನಧರ್ಮದ ಸಂಪ್ರದಾಯದ ಪ್ರಕಾರ ಬಂದಿದೆಯೆನ್ನಬಹುದು. ನಾಗಚಂದ್ರನ ಕಾಲಕ್ಕೆ ಅದೂ ಇಲ್ಲವಾಯಿತು. ಲೋಕಜೀವನನಿರಾಸಕ್ತಿ, ಭಕ್ತಿಯ ತನ್ಮಯಭಾವ, ಧರ್ಮೋಪದೇಶದ ಪರವಶತೆಗಳು ಪ್ರಾಪಂಚಿಕ ಜೀವನವನ್ನು ಸಂಪೂರ್ಣವಾಗಿ ಅಲಕ್ಷಿಸುವಂತೆ ಮಾಡಿರಬಹುದು. ಸಂಸ್ಕೃತ ಸಾಹಿತ್ಯ ಚರಿತ್ರೆಯನ್ನು ವೀಕ್ಷಿಸಿದಾಗಲೂ ಇದೇ ಸ್ಥಿತಿಮಾನ ಇರುವುದು ಕಂಡು ಬರುತ್ತದೆ. ಡಾಂಭಿಕತೆ, ನಿರಾಸಕ್ತಿ ಭಾವಗಳು ತುಂಬಿಕೊಂಡಿದ್ದವು. ಕೆಲವು ನೈಜ ಭಕ್ತರಂತೂ ಇಂಥ ಪ್ರಪಂಚದೊಡನೆ ಸಂಬಂಧವಿರಿಸಿಕೊಳ್ಳಲು ಬಯಸದಾದರು. ಸಂಸ್ಕೃತ ವೈರಾಗ್ಯ ಬೋಧನೆಯ ಧಾರ್ಮಿಕ ಕೃತಿಗಳು ಈ ಕಾಲದಲ್ಲಿ ವಿಶೇಷ ಸಂಖ್ಯೆಯಲ್ಲಿ ರಚನೆಗೊಂಡವು.

---

14. ಕ. ಸಾ. ಚ., ಪುಟ 123.

ಪಂಪ, ಅಭಿನವಪಂಪರ ನಡುವಣ ಒಂದೂವರೆ ಶತಮಾನದ ಅಂತರವು ಇವರೀರ್ವರ ಮನೋಧರ್ಮ, ಕಾವ್ಯಕೃತಿಗಳ ನಡುವಣ ಅಂತರಕ್ಕೆ ಕಾರಣವಾಗಿರುವುದು. ಕನ್ನಡ ಸಾಹಿತ್ಯ ಸಿಂಹಾಸನದಲ್ಲಿ ಶಾಶ್ವತವಾಗಿ ಮಂಡಿಸಿದ ಚಕ್ರವರ್ತಿಯೆಂದರೆ ಪಂಪ. ಅವನ ಆದಿಕವಿಯ ಪಟ್ಟಕ್ಕೆ ಇಂದಿಗೂ ಚ್ಯುತಿಯುಂಟಾಗಿಲ್ಲ. "ಪಸರಿಪ ಕನ್ನಡಕ್ಕೊಡೆಯನೊರ್ವನೆ ಪಂಪನಾವಗಂ"[15]; ಅನುಕರಣೀಯವಾದ ಕನ್ನಡ ಸಂಪ್ರದಾಯಕ್ಕೆ 'ಪಂಪನೇ ಮೊದಲಿಗ'.[16] ಅಷ್ಟೇ ಅಲ್ಲದೆ ಯುಗಪ್ರವರ್ತಕ ಕವಿಯೂ ಹೌದು. ಪ್ರತಿಭೆ ಪಾಂಡಿತ್ಯಗಳೊಂದಿಗೆ ಶೌರ್ಯಸಾಹಸಗಳಿಗಾಗರ. ದೇಶ ಮತ್ತು ಭಾಷಾಭಿಮಾನಗಳ ಸಾಗರ. ಐಹಿಕ ಆಮುಷ್ಮಿಕಗಳೆರಡೂ ಅವನ ದೃಷ್ಟಿಯಲ್ಲಿ ಜೀವನ ಪೂರ್ಣತೆಗೆ ಆವಶ್ಯಕ. ತ್ಯಾಗ-ಭೋಗ ಸಮನ್ವಯ, ರಸಿಕತೆ, ಸಾಹಸಗಳ ಸಾಹಚರ್ಯ, ನಡೆನುಡಿಯ ಸಾಮರಸ್ಯ, ಪಂಪನಿಗೆ ಸಾಧಿಸಿದೆ. ಉತ್ತಮ ಕವಿಯಾಗಿ ಕಾವ್ಯ ರಚಿಸಿರುವಂತೆ ವೀರ ಯೋಧನಾಗಿ ರಣಾಂಗಣದಲ್ಲಿ ಹೋರಾಡಿದವನು ಅವನು. ಈ ಸಮನ್ವಯ ಸಾಧನೆ ಮಾನವನ ಜೀವನದ ಆದರ್ಶ. ಇದರಲ್ಲಿ ಹೆಚ್ಚು ಕಡಿಮೆಯಿರುವುದರಿಂದಲೇ ಅನಿಷ್ಟ ಸಂಭವಿಕೆ, ಪಂಪನ ಜೀವಿತ ಕಾಲ, ಕ್ಷಾತ್ರತೇಜಸ್ಸು ಪ್ರಜ್ವಲವಾಗಿದ್ದ ಕಾಲ. ಜೈನ ಧರ್ಮ ಉಜ್ವಲವಾಗಿದ್ದ ಕಾಲ. ಛಲವೇ ಕುಲ, ಗುಣವೇ ಕುಲವಾಗಿದ್ದ ಕಾಲ. ಗುಣದ ಉನ್ನತಿಯಿಂದಲೇ ಮಾನವನಿಗೆ ಘನತೆ ಗೌರವಗಳು ಉಂಟಾಗುತ್ತಿದ್ದುವು. "ಪಂಪ ಜೀವಂತ ಸಮಾಜದ ಮಧ್ಯೆ ಜೀವಂತ ಕವಿ, ಯುಗಶಕ್ತಿಯನ್ನು ಅನುಭವಿಸಿದ ಕವಿ."[17] ಇಂತಹ ವ್ಯಕ್ತಿಯಿಲ್ಲದೆ ಇದ್ದರೆ ಅರಿಕೇಸರಿ ಒತ್ತಾಯಪೂರ್ವಕ ಕರೆಯಿಸಿಕೊಂಡು ಆದರಿಸಿ, ಗಾಢ ಸ್ನೇಹ ಮಾಡುತ್ತಿದ್ದನೋ ಇಲ್ಲವೊ !

ಪಂಪನ ಕ್ಷಾತ್ರ ತೇಜಸ್ಸು ಹೊಳೆದುದು "ವಿಕ್ರಮಾರ್ಜುನ ವಿಜಯ"ದಲ್ಲಿ. ಪಂಪನದು ಉತ್ತರನ ಪೌರುಷವಲ್ಲ, ಅರ್ಜುನನ ಪ್ರತಾಪ. ಅರಿಕೇಸರಿಯ ಸಾಹಸವನ್ನು ಮನಸಾರೆ ಮೆಚ್ಚಿದ ಕವಿ, ಅರ್ಜುನನೊಡನೆ ಹೋಲಿಸಿ ಅಜರಾಮರವನ್ನಾಗಿಸಿದ ಅವನ ಕೀರ್ತಿಯನ್ನು. ಇದರಿಂದುಂಟಾಗುವ ತೊಂದರೆಗಳನ್ನು ಅಷ್ಟೊಂದು ಲಕ್ಷ್ಯಕ್ಕೆ ತರಲಿಲ್ಲ. ಇದು ಅವನ ಲೌಕಿಕ ಸ್ನೇಹಕ್ಕೆ ಇತ್ತ ಅಮೂಲ್ಯ ಕಾಣಿಕೆ.

ಪಂಪನ ವಿಶೇಷಗುಣವಾದ ಔಚಿತ್ಯಜ್ಞಾನ, ಸಮನ್ವಯ ದೃಷ್ಟಿಗೆ ಅವನ ಜೀವನ ಕೃತಿಗಳೆಲ್ಲೆಲ್ಲಿಯೂ ಚ್ಯುತಿಯುಂಟಾಗಿಲ್ಲ.

---

15. ನಾಗರಾಜ : ಪುಣ್ಯಾಸ್ರವ ಚಂಪು 1-15.
16. ಸ. ಕ. ಸಾ. ಚ. ಸಂ. 2 ಪುಟ 60.
17. ಡಾ. ಎಂ. ಚಿದಾನಂದಮೂರ್ತಿ : "ಪಂಪ ಕವಿ ಮತ್ತು ಮೌಲ್ಯ ಪ್ರಸಾರ."

ಆತ್ಮಾಭಿಮಾನದಿಂದ ಅದೇ ಹೆಸರನ್ನಿಟ್ಟುಕೊಂಡು ಆವನೆತ್ತರಕೆ ನಿಲುಕಬೇಕೆಂಬ ಅಭಿಲಾಷೆಯಿಂದ ನಾಗಚಂದ್ರನು ಹೊರಟನಾದರೂ ಸಾಧ್ಯವಾಗಲಿಲ್ಲ. ಮಲ್ಲಿನಾಥ ಪುರಾಣ ಒಂದು ಸತ್ಕೃತಿ ಎನಿಸಿತೇ ವಿನಃ ಆದಿ ಪುರಾಣದ ಭವ್ಯತೆ ಲಭಿಸಲಿಲ್ಲ. "ವಿಷಯ ಚಿಕ್ಕದಾದರೂ 14 ಆಶ್ವಾಸಗಳ ವಿಸ್ತಾರವಿದೆ. ಈ ಅರ್ಥದಲ್ಲಿ ಇದು ಮಹಾಪುರಾಣವೇ"[18] ಎಂದು ಡಾ. ರಂ. ಶ್ರೀ. ಮುಗಳಿಯವರ ಮಾತು ಅತ್ಯಂತ ಧ್ವನಿ ಪೂರ್ಣವಾದುದು. ಇವನೊಬ್ಬನೇ ಅಲ್ಲ; ತೀರ್ಥಂಕರ ಪುರಾಣ ಬರೆದ ಜೈನ ಕವಿಗಳಾರೂ ಪಂಪನಿಗೆ ಸಮಾನವಾಗಿ ನಿಲ್ಲಲಿಲ್ಲ. "ಪಂಪನ ಮಾರ್ಗವನ್ನು ಯಾಂತ್ರಿಕ ವಾಗಿ ಅನುಸರಿಸಿದ ಇವರ್‍ಯಾರೂ ಆದಿ ಪುರಾಣದ ಮಟ್ಟದ ಕೃತಿಯನ್ನು ರಚಿಸ ಲಾಗಲಿಲ್ಲ."[19] ಸಂಗ್ರಹ ಕಲೆಯೊಂದರಲ್ಲಿ ಕೆಲಮಟ್ಟಿಗೆ ನಾಗಚಂದ್ರನು ಪಂಪನಿಗೆ ಸಮಾನವಾಗಿದ್ದರೂ ಶೈಲಿ, ವಸ್ತು ನಿರ್ವಹಣೆ, ರಸಪ್ರತಿಪಾದನೆ ಯಾವುದರಲ್ಲೂ ಅವನ ಸತ್ವ ಇರುವದಿಲ್ಲ. "ಪಂಪನ ಪ್ರತಿಭೆಯ ಓಟವೂ ಸಮಷ್ಟಿಯ ಶಕ್ತಿಯೂ, ಸೂಕ್ಷ್ಮ ದೃಷ್ಟಿಯೂ, ಪರಿಜ್ಞಾನದ ಗಾಂಭೀರ್ಯವೂ ನಾಗಚಂದ್ರನ ಪಾಲಿಗೆ ಮುಗಿಲ ಮಲ್ಲಿಗೆ".[20] ಹೀಗೆಂದು ನಾಗಚಂದ್ರನು ಉತ್ತಮ ಕವಿಯಲ್ಲವೆಂದು ಹೇಳಲಾಗದು. ತನ್ನದೇ ಆದ ಒಂದ ಸ್ಥಾನ ಅವನಿಗಿದೆ. ರಾಮಾಯಣವನ್ನು ಬರೆದ ಮೊದಲ ಕವಿಯಾಗಿ, ಲಲಿತ ಶೈಲಿಯುಳ್ಳ ಕವಿಯಾಗಿ "ಪಂಪ ರಾಮಾಯಣವು ಮಹಾಕವಿ ಯೋಗ್ಯತೆಯುಳ್ಳ ಕವಿಯ ಸತ್ಕಾವ್ಯವೆಂದು ನಮಗೆ ತೋರುತ್ತದೆ."[21] ಮಹಾಕಾವ್ಯಗಳಲ್ಲಿ ಪಂಪನೊಡನೆ ಹೋಲಿಸಿ ದಾಗ ನಾಗಚಂದ್ರನ ಸ್ಥಾನ ಆ ಮಟ್ಟದಲ್ಲಿನಿಲ್ಲದು.

ಯಾವ ನಿಟ್ಟಿನಿಂದ ನಿರುಕಿಸಿದರೂ 11ನೆಯ ಶತಮಾನದ ಸಾಹಿತ್ಯ ಹತ್ತನೆಯ ಶತಮಾನದ ಸಾಹಿತ್ಯಕ್ಕೆ ಹೊಯ್‌ಕೈಯಾಗಿ ನಿಲ್ಲಲಾರದೆಂಬುದು ಸತ್ಯ. 50,60 ವರುಷ ಗಳ ಅವಧಿಯಲ್ಲಿ ಸಾಹಿತ್ಯದಲ್ಲಿ ಇಷ್ಟೊಂದು ಗಮನಾರ್ಹ ವ್ಯತ್ಯಾಸವಾಗಿ ಸತ್ವಗುಣ ತಗ್ಗಲು ಕಾರಣವೇನಿರಬಹುದು ? ಈ ದಿಸೆಯಲ್ಲಿ ಆಲೋಚಿಸಿದಾಗ ಅತಿ ಎನಿಸುತ್ತದೆ. ಸಾಹಿತ್ಯವು ಆಯಾ ಕಾಲದ ಜನಜೀವನದ ಸತ್ವಜಲದಿಂದ ವರ್ಧಿಸುತ್ತದೆ. ಅದೇ ಬರಿದಾಗಲು ಸ್ಫೂರ್ತಿಯೆಲ್ಲಿಂದ ಬಂದೀತು. ಜನಜೀವನವು ಹೀಗೆ ಸಪ್ಪೆಯಾಗಲು ಆಗಿನ ಕಾಲದಲ್ಲಿ, ಸಂಸ್ಕೃತದಲ್ಲೂ ಧರ್ಮಶಾಸ್ತ್ರಗಳೇ ಹೆಚ್ಚಾಗಿ ರಚನೆಯಾಗಿವೆ. ಕಾಲದ

---

18. ಕ. ಸಾ. ಚ. ಪುಟ 128:

19. ಸ. ಕ. ಸಾ. ಚ. ಸಂ. 2. ಪುಟ 124.

20. ಪಂ. ರಾ. ಸಂ. ಪೀಠಿಕೆ. p. xcvi.

21. ಕ. ಸಾ. ಚ. ಪುಟ 135.

ಐತಿಹಾಸಿಕ ಪರಿಣಾಮವೆನಬಹುದು. ಉತ್ತರ ಭಾರತವು ಆಗಲೇ ಅನೇಕಾವರ್ತಿ ಪರಕೀಯ ದಾಳಿ ಲೂಟಿಗಳನ್ನು ಅನುಭವಿಸಿತ್ತು. ರಣಾಂಗಣದಲ್ಲಿ ಅನ್ಯ ದೇಶೀಯರನ್ನು ಎದುರಿಸಲಾರದ ಭಾರತೀಯರು ತಮ್ಮ ಅಧಿದೈವಗಳಿಗೆ ಶರಣು ಹೋದರು. ಆ ದೇವರುಗಳಿಂದ ಯಾವ ಸಹಾಯ ದೊರೆಯದಿರಲು ಇನ್ನೇನು ತಾನೇ ಮಾಡಬಹುದು. ಜಗನ್ಮಿಥ್ಯಾತತ್ವಕ್ಕೆ ನೇಣು ಹಾಕಿಕೊಂಡರು. ನೇರವಾಗಿ ಕನ್ನಡಿಗರ ಮೇಲೆ ಬೆಂಕಿಯುರಿ ಬೀಳದಿದ್ದರೂ ಅದರ ಝಳ ಮಾತ್ರ ತಾಕಿರಬೇಕು. ಭಕ್ತಿಪಂಥದ ಪ್ರಭಾವವೂ ಆ ಕಡೆಯಿಂದ ಈ ಕಡೆಗೆ, ಈ ಕಡೆಯಿಂದ ಅತ್ತ ಕಡೆಗೆ ಹರಿದು ಹೋಗಲಿಲ್ಲವೆ? ಹಾಗೆ ಈ ನಿರುತ್ಸಾಹ, ನಿರಾಸಕ್ತಿ, ನಿಷ್ಕ್ರಿಯತೆಯ ಝಳವೂ ಇತ್ತ ಕಡೆಗೆ ಪ್ರವಹಿಸಿತು. ಮೊದಲೇ ಇಲ್ಲಿರುವ ಜೈನ ಧರ್ಮೋಪದೇಶವೂ ಇದರೊಂದಿಗೆ ಜೊತೆಗೂಡಿತು. ಜನ ಬದುಕಲು ದುಡಿಮೆ, ಧೈರ್ಯ, ನಿಷ್ಠೆಗಳು ಬೇಕೆಂಬುದನ್ನು ಮರೆತಂತೆ ಬರಿ ಭಕ್ತಿಯ ಆವೇಶ, ಧರ್ಮಬೋಧೆಯಲ್ಲಿ ಮಾತ್ರ ಆಸಕ್ತಿಯಿದ್ದಂತೆ ಕಂಡುಬರುತ್ತದೆ ಇಂತಹ ಸ್ಥಿತಿಯೇ ಮುಂದೆ ಅಲ್ಪ ಕಾಲದಲ್ಲಿಯೇ ನಡೆದ ಉತ್ಕ್ರಾಂತಿಗೆ ಆಹ್ವಾನವಿತ್ತಿರಬೇಕು.

ಕಾಲಕಾಲಕ್ಕೂ ವ್ಯತ್ಯಾಸಗೊಳ್ಳುವ ಜನಮನೋಧರ್ಮವನ್ನೂ ಇದರಿಂದ ಗುರುತಿಸಬಹುದು. ಸಂಕಟವನ್ನು ಪರಿಹರಿಸಿ ಸಹಾಯ ಮಾಡುವ ಔದಾರ್ಯ ಭಾವ ಮಾಯವಾಗಿ 'ಗುಣಂ ಕುಲಂ' ಹೋಗಿ 'ಬಲಮೆ ಗುಣಂ'ಯೆಂದಾಗಿರಬೇಕು —"Might is right". ದುರ್ಬಲರಿಗೆ ಜೀವನ ಕಷ್ಟಕರವೆನಿಸಿರಲೂ ಸಾಕು. ಈ ಬದುಕಿನ ಬವಣೆಯಿಂದ ತಪ್ಪಿಸಿಕೊಳ್ಳಲು ಅವರು ಭಕ್ತಿಗೆ ಒಲಿದಿರಬೇಕು. ಎಲ್ಲಾ ಭಕ್ತ ಶ್ರೇಷ್ಠರು, ಸಂತರೂ ಇಂತಹವರೆಂದಲ್ಲ. ಹಾಗಿದ್ದರೆ ಅವನ ಜೀವನ, ವಚನಗಳು ಇಂದಿನವರೆಗೆ ಸ್ಫೂರ್ತಿಗೆ ನೆಲೆದಾಣವಾಗುತ್ತಿರಲಿಲ್ಲ. ಆದರೂ ಸಾಮಾನ್ಯ ಜನರಲ್ಲ ಭಕ್ತಿಯ ಹೆಸರಿನಲ್ಲಿ ಇಂತಹ ನಿರುತ್ಸಾಹ, ನಿಷ್ಕ್ರಿಯೆಯ ಪ್ರವೃತ್ತಿ ಬಲಿದುದು ತಿಳಿದು ಬರುತ್ತದೆ. ಇದೇ ಮೇಲೆ ಕಾಣಿಸಿದ ಸಾಹಿತ್ಯಗುಣದ ವ್ಯತ್ಯಾಸಕ್ಕೆ ಕಾರಣವಾಗಿದೆಯೆಂದು ತೋರುತ್ತದೆ.

ಕಾರಕ ಮತ್ತು ವಿಭಕ್ತಿ

● ವಿಲ್ಯಂ ಮಾಡ್ತ

ಭಾಷೆಯೆಂಬುದು ರಚನೆಗಳ ರಚನೆ. ಈ ಬೃಹತ್ ರಚನೆ ಸರಳವಾಗಿರದೆ ಸಂಕೀರ್ಣಸ್ವರೂಪದ್ದಾಗಿದೆ; ಅರ್ಥಾತ್, ವಿಭಿನ್ನ ಸ್ತರಗಳಿಂದ ಕೂಡಿಕೊಂಡಿದೆ. ಈ ಭಾಷಾಸ್ತರಗಳನ್ನು ಅಂತಃಸ್ತರ (Deep level) ಮತ್ತು ಬಹಿಃಸ್ತರ (Surface level)ಗಳೆಂದು ಕರೆಯುತ್ತಾರೆ.[1]

ಸಂಪರ್ಕಸಾಧನವಿಶೇಷವಾದ ಭಾಷೆಯ ಪರಿಪೂರ್ಣ ಮೂಲಘಟಕವೆಂದರೆ ವಾಕ್ಯ. ಆ ವಾಕ್ಯದಲ್ಲಿ ನಾಮಪುಂಜ (Noun phrase) ಮತ್ತು ಕ್ರಿಯಾಪುಂಜ (Verb phrase)ಎಂಬ ನಿಕಟತಮ ಘಟಕಗಳಿವೆ. ಈ ಘಟಕಗಳ ಪರಸ್ಪರ ವ್ಯಾಕರಣ ಸಂಬಂಧಗಳೇ, ಅರ್ಥಾತ್ ಕಾರಕಾರ್ಥ (Deep case) ಗಳೇ ಭಾಷೆಯ ಅಂತಃಸ್ತರ. ವ್ಯವಹಾರದಲ್ಲಿ ನಾವು ಬಳಸುವ ವಾಕ್ಯಗಳ ಅರ್ಥಾತ್ ನಿಜವಾಕ್ಯ (Actual sentence) ಗಳ ಮೂಲಕ ಆ ಕಾರಕಾರ್ಥಗಳು ಅಭಿವ್ಯಕ್ತಗೊಳ್ಳುತ್ತವೆ. ಈ ಅಭಿವ್ಯಕ್ತಿ ಆ ಭಾಷೆಯ ಬಹಿಃಸ್ತರವೆನಿಸಿಕೊಳ್ಳುತ್ತದೆ. ಕಾರಕಗಳ ಅಭಿವ್ಯಕ್ತಿಗಳನ್ನೇ ವಿಭಕ್ತಿ (Surface case)ಗಳೆಂದು ಕರೆಯುತ್ತಾರೆ. ಒಟ್ಟಿನಲ್ಲಿ ಕಾರಕಗಳು ಭಾಷೆಯ ಅಂತಃಸ್ತರವನ್ನೂ. ವಿಭಕ್ತಿಗಳು ಅದರ ಬಹಿಃಸ್ತರವನ್ನೂ ಗುರುತಿಸುತ್ತವೆ[2]. ಈ ವಿಭಕ್ತಿಗಳನ್ನು ಸೂಚಿಸುವ ಸಂಜ್ಞೆ (Sign)ಗಳಿಗೆ ವಿಭಕ್ತಿಸೂಚಕ (Case marker) ಗಳೆಂದು ಹೆಸರು. ಅವು ಪ್ರತ್ಯಯ ಸ್ವರೂಪಿಗಳಾದರೆ ಅವನ್ನು ವಿಭಕ್ತಿ ಪ್ರತ್ಯಯ (Case suffix)[3]ಗಳೆಂದು ಕರೆಯುತ್ತಾರೆ.

---

1. Charles J. Fillmore, "The Case for Case," Emmon Bach et al. (Ed.), 1968.
2. William Madtha (1976 b : 137)
3. ವಾಕ್ಯದಲ್ಲಿ ನಾಮಪದ ಮತ್ತು ಕ್ರಿಯಾಪದಗಳ ವ್ಯಾಕರಣ ಸಂಬಂಧವನ್ನು ಸೂಚಿಸಲು ನಾಮ ಪ್ರಕೃತಿಗೆ ಸೇರುವ ಪ್ರತ್ಯಯವೇ ವಿಭಕ್ತಿ ಪ್ರತ್ಯಯ. ವಿಲ್ಯಂ ಮಾಡ್ತ, 1975 : 56.

ಪ್ರಸ್ತುತ ಅಧ್ಯಯನದಲ್ಲಿ ಎಂಟು ಕಾರಕಾರ್ಥಗಳನ್ನು ಕನ್ನಡದ ಮಟ್ಟಿಗೆ ಗುರುತಿಸಲಾಗಿದ್ದರೂ ಅವುಗಳ ಬಗೆಗೆ ಹೆಚ್ಚಿನ ಸಂಶೋಧನೆ ಇನ್ನೂ ನಡೆಯಬೇಕು. ಗುರುತಿಸಿದ ಕಾರಕಗಳನ್ನು[4] ಕ್ರಮವಾಗಿ ಕರ್ತೃ (Subjective) ಪ್ರಭಾವ (Affective) ಕರ್ಮ, (Effective) ಕರಣ (Instrumental), ಸಂಪ್ರದಾನ (Dative), ದಿಗ್ವಾಚಿ (Directive) ಮತ್ತು ಅಧಿಕರಣ (Locative)ಗಳೆಂದು ಕರೆಯಲಾಗಿದೆ.

1. ಕರ್ತೃಕಾರಕ :

ಒಂದು ಮೂಲ ವಾಕ್ಯ[5]ದಲ್ಲಿ ಕ್ರಿಯಾಪದ ಸೂಚಿಸುವ ಕ್ರಿಯೆ ಕಾರ್ಯಗತವಾಗಲು

---

4. ಕಾರಕಗಳು ಕ್ರಿಯಾರ್ಥಗಳಾಗಿರುವದರಿಂದ ಅವುಗಳನ್ನು ಕಾರಕಾರ್ಥಗಳೆಂದು ಕರೆಯುವ ರೂಢಿ ವ್ಯಾಕರಣ ಸಂಪ್ರದಾಯದಲ್ಲಿದೆ. ನೋಡಿ: ಮುಳಬಾಗಲ: (1924 : 39)

ಕಾರಕಗಳು ಶಬ್ದಾರ್ಥ (Lexical Meaning) ಕ್ಕೆ ಸಂಬಂಧಪಡದೆ ಕ್ರಿಯಾರ್ಥ/ವ್ಯಾಕರಣಾರ್ಥ (Functional / Grammatical Meaning) ಕ್ಕೆ ಸಂಬಂಧಪಟ್ಟವುಗಳೆಂಬುದಕ್ಕೆ ಕೇಶಿರಾಜನಲ್ಲಿ (**ಶಬ್ದಮಣಿದರ್ಪಣಂ : ಸೂ. 45**) ಯೇ ಆಧಾರವಿದೆ: "ಪದದರ್ಥಮಂ ವಿಭಾಗಿಸುವುದಱಿಂದೆ ವಿಭಕ್ತಿ" ಎಂದು ಹೇಳಿ "ಮರ, ದೇವ ಎಂದು ನಾಮಲಿಂಗಮನಿರಿಸಿ ಮ್ ಎಂಬ ವಿಭಕ್ತಿಯುಂ ಕುಡೆ ಮರಂ, ದೇವಂ ಎಂದು ನಾಮಪದನಕ್ಕುಂ........" ಎಂದು ಆತ ಉದಾಹರಣೆಗಳನ್ನೂ ಕೊಟ್ಟಿದ್ದಾನೆ. ಇದನ್ನು ಗಮನಿಸಿದಾಗ, ಇಲ್ಲಿ ಅರ್ಥವೆಂದರೆ ವ್ಯಾಕರಣಾರ್ಥವೆಂಬುದು ಖಚಿತವಾಗುತ್ತದೆ. 'ನಾಮಪದ' ವೆಂಬುದು ಇಲ್ಲಿ ವ್ಯಾಕರಾಣಾರ್ಥವೇ ಹೊರತು ಶಬ್ದಾರ್ಥವಲ್ಲ. ಅಷ್ಟೇ ಅಲ್ಲದೆ, "ಕಾರಕವೆಂಬುದು ಕ್ರಿಯಾನಿಮಿತ್ತಂ" (**ಶ. ಮ. ದ**: ಸೂ. 103, ವೃತ್ತಿ) ಎಂಬ ಮಾತನ್ನು ಗಮನಿಸಬೇಕು.

5. ಐಚ್ಛಿಕ ರೂಪಾಂತರ ನಿಯಮ (Optional T-Rule) ಗಳನ್ನು ಹಚ್ಚಿ ಉತ್ಪಾದಿಸಿದ ವಾಕ್ಯಗಳನ್ನು **ಸಾಧಿತವಾಕ್ಯ** (Derived / Non-Kernel Sentence) ಗಳೆಂದ ಕರೆಯುತ್ತಾರೆ.

'ರಾಮನು ರಾವಣನನ್ನು ಕೊಂದನು' – ಎಂಬ ವಾಕ್ಯಕ್ಕೆ ಕರ್ಮಣಿ ಪ್ರಯೋಗ ಮಾಡಿದರೆ 'ರಾಮನಿಂದ ರಾವಣ ಕೊಲ್ಲಲ್ಪಟ್ಟನು'–ಎಂಬ ವಾಕ್ಯ ಸಾಧಿತಗೊಳ್ಳುತ್ತದೆ. ಹೀಗೆ ಒಂದು ಮೂಲ ವಾಕ್ಯದಿಂದ ನಾನಾ ವಾಕ್ಯಗಳನ್ನು ರೂಪಾಂತರಿಸುವದಕ್ಕೋಸ್ಕರ ವಾಕ್ಯದ ರಚನೆಯಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡುವ ನಿಯಮಗಳನ್ನು ಐಚ್ಛಿಕ ರೂಪಾಂತರ ನಿಯಮಗಳೆಂದು ಕರೆಯುತ್ತಾರೆ. ಐಚ್ಛಿಕ ರೂಪಾಂತರ ನಿಯಮಗಳು ಉತ್ಪಾದಿಸದ ವಾಕ್ಯಗಳನ್ನು ಮೂಲ/ಸರಳ ವಾಕ್ಯ (Base/Kernel Sentence) ಎಂದು ಕರೆಯುತ್ತಾರೆ. 'ರಾಮನಂ ರಾವಣನನಂ ಕೊಂದನಂ' ಎಂಬ ವಾಕ್ಯದ ಮೂಲ ಘಟಕಗಳು/ರಾಮನ್ + ರಾವಣನ್ + ಅನ್ + ಕೊಲ್ + ನ್ದ್ + –ಅನ್ –ಅವು ವಾಕ್ಯದಲ್ಲಿ ಕೂಡುವಾಗ ಕೆಲವು ರೂಪಾಂತರಗಳು ಕಡ್ಡಾಯವಾಗಿ ಆಗುತ್ತವೆ. ಕೊಲ್ + ನ್ದ್ + ಅನ– ಕೊನ್ದನ್ (ಕೊಂದನು) ಈ ರೀತಿಯ ಸಂಧಿ ಮೊದಲಾದ ಬದಲಾವಣೆಗಳ ಬಗೆಗೆ ಲಕ್ಷ್ಯವಹಿಸಿಕೊಳ್ಳುವ ನಿಯಮಗಳನ್ನು **ಕಡ್ಡಾಯ ರೂಪಾಂತರ ನಿಯಮ** (Obligatory T-Rule) ಗಳೆಂದು ಕರೆಯುತ್ತಾರೆ. (ನೋಡಿ: ವಿಲ್ಯಂ ಮಾತ್ಯ: 1975 : 81–3: (85.89–94) ಈ ನಿಯಮಗಳು ಮೂಲವಾಕ್ಯದ ರಚನೆಗೆ ಸಂಬಂಧಪಟ್ಟವುಗಳಾಗಿವೆ.

ಅದು ನಾಮಪದವನ್ನು[6] ಅವಲಂಬಿಸಿದರೆ ಆ ನಾಮಪದ ವಾಕ್ಯದಲ್ಲಿಯ ಕ್ರಿಯಾಪದ ದೊಡನೆ ಕರ್ತೃಕಾರಕಾರ್ಥದಲ್ಲಿರುತ್ತದೆ.

1. ಸುಶೀಲೆ ಓದುತ್ತಾಳೆ.
2. ಸೀತೆ ಓಡುತ್ತಾಳೆ.

ವಾಕ್ಯ 1–2ರಲ್ಲಿಯ 'ಓದುತ್ತಾಳೆ' ಮತ್ತು 'ಓಡುತ್ತಾಳೆ' ಎಂಬ ಕ್ರಿಯಾಪದಗಳು ಸೂಚಿಸುವ ಕ್ರಿಯೆಗಳು ಫಲಕಾರಿಯಾಗಲು ಕ್ರಮವಾಗಿ 'ಸುಶೀಲೆ' ಮತ್ತು 'ಸೀತೆ' ಎಂಬ ನಾಮಪದಗಳನ್ನು ಅವು ಅವಲಂಬಿಸಿವೆ. ಆದುದರಿಂದ ಈ ನಾಮಪದಗಳು ಅವುಗಳ ಕ್ರಿಯಾಪದಗಳೊಡನೆ ಕರ್ತೃಕಾರಕದಲ್ಲಿವೆ.

ಕನ್ನಡದಲ್ಲಿ ಕರ್ತೃಕಾರಕವಿಲ್ಲದ ಮೂಲವಾಕ್ಯಗಳು ಇರುವುದು ಅಸಾಧ್ಯವಾದುದ ರಿಂದ ಕರ್ತೃಕಾರಕ ಅತ್ಯಂತ ಪ್ರಮುಖವಾಗಿದೆ.[7]

ಕರ್ತೃಕಾರಕ, ಕರ್ತರಿ ಪ್ರಯೋಗದಲ್ಲಿ ಪ್ರಥಮಾ ವಿಭಕ್ತಿಯಲ್ಲಿಯೂ, ಕರ್ಮಣಿ ಪ್ರಯೋಗದಲ್ಲಿ ತೃತೀಯಾ ವಿಭಕ್ತಿಯಲ್ಲಿಯೂ ಅಭಿವ್ಯಕ್ತಗೊಳುತ್ತದೆ.[8]

3. **ರಾಮು** ರಾವಣನನ್ನು ಕೊಂದನು. (ಕರ್ತರಿ)
4. **ರಾಮುನಿಂದ** ರಾವಣ ಕೊಲ್ಲಲ್ಪಟ್ಟನು. (ಕರ್ಮಣಿ)

ಕರ್ತೃಕಾರಕದಲ್ಲಿರುವ 'ರಾಮು' 3 ನೆಯ ವಾಕ್ಯದಲ್ಲಿ ಪ್ರಥಮೆಯಲ್ಲಿಯೂ 4 ನೆಯ ವಾಕ್ಯದಲ್ಲಿ ತೃತೀಯೆಯಲ್ಲಿಯೂ ಅಭಿವ್ಯಕ್ತಗೊಂಡಿದೆ.

2. ಪ್ರಭಾವ ಕಾರಕ :

ಮೂಲ ವಾಕ್ಯದಲ್ಲಿ ಕ್ರಿಯಾಪದ ಸೂಚಿಸುವ ಕ್ರಿಯೆಯಿಂದ ಪ್ರಭಾವಿತಗೊಂಡ ಅಜೀವ ವಸ್ತುವನ್ನು[9] ಪ್ರತಿನಿಧಿಸುವ ನಾಮಪದ ಪ್ರಭಾವಕಾರಕವಾಗುತ್ತದೆ. ಅದು

---

6. ನಾಮಪದವೆಂಬ ಪದವನ್ನು ಸರ್ವನಾಮಗಳನ್ನೊಳಪಡಿಸಿ ಬಳಸಲಾಗಿದೆ.
7. "ಕರ್ತೃ ವಿಭಕ್ತಿಗೆ ಕಾರಕಾರ್ಥವಿಲ್ಲದಿರುವುದರಿಂದ ಕವಿರಾಜಮಾರ್ಗಕಾರ ಕರ್ತೃಕಾರಕವನ್ನು ಒಪ್ಪುವುದಿಲ್ಲ; ಆತನ ಈ ವೈಶಿಷ್ಟ್ಯಪೂರ್ಣವಾದ ಕೊಡುಗೆ ಕನ್ನಡ ವ್ಯಾಕರಣದಲ್ಲಿ ಮಹತ್ವ ವುಳ್ಳದ್ದಾಗಿದೆ" ಎಂಬುದಾಗಿ ಕುಳ್ಳಿಯವರು ಅಭಿಪ್ರಾಯ ಪಡುತ್ತಾರೆ. (ಕುಳ್ಳಿ, 1976; 262-4).
8. ಕನ್ನಡದಲ್ಲಿ ಕರ್ಮಣಿ ಪ್ರಯೋಗ ಕೃತ್ರಿಮವೆಂದು ಕೆಲವರ ಅಭಿಪ್ರಾಯ; ಆದ್ದರಿಂದ ಕರ್ಮಣಿಯ ಬದಲು ಭಾವವಾಚಕ ಅ-ಕರ್ತೃಕ (Impersonal) ಪ್ರಯೋಗವನ್ನು ಅವರು ಬಳಸುತ್ತಾರೆ : ಈ ಸುವಾರ್ತೆ ಲೂಕನಿಂದ ಬರೆಯಲ್ಪಟ್ಟಿತು→ ಈ ಸುವಾರ್ತೆ ಲೂಕನಿಂದ ಬರೆಯಲಾಯಿತು. ನೋಡಿ : Herold Spencer 1950 : 281–2)
9. 'ವಸ್ತು' ಎಂಬ ಪದವನ್ನು ಜೀವಾಜೀವಗಳೆರಡನ್ನೂ ಒಳಪಡಿಸಿ ಸಂದರ್ಭಕ್ಕನುಸಾರವಾಗಿ ಪ್ರಸ್ತುತ ಲೇಖನದಲ್ಲಿ ಬಳಸಿಕೊಳ್ಳಲಾಗಿದೆ.

ದ್ವಿತೀಯಾ ವಿಭಕ್ತಿಯ ಮೂಲಕ ಅಭಿವ್ಯಕ್ತಗೊಳ್ಳುತ್ತದೆ.

5. ತಾಯಿ **ಮಗುವನ್ನು** ಪ್ರೀತಿಸುತ್ತಾಳೆ.

6. ಮಗು **ಹಾಲನ್ನು** ಕುಡಿಯುತ್ತದೆ.

ವಾಕ್ಯ 5–6 ರಲ್ಲಿ 'ಮಗು' ಮತ್ತು 'ಹಾಲು', ಕ್ರಮವಾಗಿ 'ಪ್ರೀತಿಸುತ್ತಾಳೆ' ಮತ್ತು 'ಕುಡಿಯುತ್ತದೆ' ಎಂಬ ಕ್ರಿಯಾಪದಗಳು ಸೂಚಿಸುವ ಕ್ರಿಯೆಯ ಪ್ರಭಾವಕ್ಕೆ ಒಳಗಾಗಿವೆಯೇ ವಿನಃ ಅವುಗಳಿಂದಾಗಿ **ಉಂಟಾಗಲಿಲ್ಲ.**

3. ಕರ್ಮ ಕಾರಕ :

ಮೂಲ ವಾಕ್ಯದಲ್ಲಿ ಕ್ರಿಯಾಪದ ಸೂಚಿಸುವ ಕ್ರಿಯೆಯಿಂದ ಉಂಟಾಗುವ ಅ/ಜೀವ ವಸ್ತುವನ್ನು ನಿರ್ದೇಶಿಸುವ ನಾಮಪದ ಕರ್ಮಕಾರಕಾರ್ಥದಲ್ಲಿರುತ್ತದೆ.

7. ಕುಂಬಾರ **ಮಡಕೆಯನ್ನು** ಮಾಡುತ್ತಾನೆ.

8. ಅಡಿಗೆಯವಳು **ಮಿರ್ಚಿಯನ್ನು**[10] ಮಾಡಿದಳು.

ವಾಕ್ಯ 7–8 ರಲ್ಲಿ 'ಮಡಕೆ' ಮತ್ತು 'ಮಿರ್ಚಿ' ಎಂಬ ನಾಮಪದಗಳು ಕ್ರಮವಾಗಿ 'ಮಾಡುತ್ತಾನೆ' ಮತ್ತು 'ಮಾಡುತ್ತಾಳೆ' ಎಂಬ ಕ್ರಿಯಾಪದಗಳು ಸೂಚಿಸುವ ಕ್ರಿಯೆಗಳಿಂದ ಪ್ರಭಾವಿತಗೊಂಡ ವಸ್ತುಗಳನ್ನು ಸೂಚಿಸುವುದಿಲ್ಲ. ಅವು ಆ ಕ್ರಿಯೆಗಳಿಂದಾಗಿ ಉಂಟಾದ ಅಥವಾ ಫಲಿತಗೊಂಡ ವಸ್ತುಗಳನ್ನು ಸೂಚಿಸುತ್ತವೆ. ಪ್ರಭಾವ ಕಾರಕದಂತೆ ಕರ್ಮ ಕಾರಕವೂ ದ್ವಿತೀಯೆಯ ಮೂಲಕವೇ ಅಭಿವ್ಯಕ್ತಗೊಳ್ಳುತ್ತದೆ.

4. ಕರಣ ಕಾರಕ :

ಮೂಲ ವಾಕ್ಯದಲ್ಲಿ ಕ್ರಿಯಾಪದ ಸೂಚಿಸುವ ಕ್ರಿಯೆಯನ್ನು ಜರುಗಿಸಲು ಬಳಸುವ ಕರಣ/ಸಾಧನವನ್ನು ನಿರ್ದೇಶಿಸುವ ನಾಮಪದ ಕರಣಕಾರಕಾರ್ಥದಲ್ಲಿರುತ್ತದೆ.

9. ಜೋಮ(ನು) **ಕತ್ತಿಯಿಂದ** ಮರ(ವನ್ನು) ಕಡಿದನು.

10. ಮಗ್ದಲೇನ **ಭಕ್ತಿಯಿಂದ** ಮುಕ್ತಿ(ಯನ್ನು) ಪಡೆದಳು.

---

10. ಹಸಿಮೆಣಸಿನಕಾಯಿಯನ್ನು ಹಿಟ್ಟಿನಲ್ಲಿ ಅದ್ದಿ ಕರಿದು ತಯಾರಿಸಿದ ತಿಂಡಿ ವಿಶೇಷ. ಅದು ಉ. ಕರ್ನಾಟಕದಲ್ಲಿ ಅತಿ ಪ್ರಸಿದ್ಧ.

5. ಸಂಪ್ರದಾನ ಕಾರಕ :

ಮೂಲವಾಕ್ಯದಲ್ಲಿ ಕ್ರಿಯಾಪದ ಸೂಚಿಸುವ ಕ್ರಿಯೆಯ ಫಲವನ್ನು ಪಡೆಯುವ ಅಥವಾ ಅದಕ್ಕೆ ಆಶ್ರಯವಾಗುವಂತಹ ಅ/ಜೀವ ವಸ್ತುವನ್ನು ನಿರ್ದೇಶಿಸುವ ನಾಮಪದ ಸಂಪ್ರದಾನ ಕಾರಕಾರ್ಥದಲ್ಲಿರುತ್ತದೆ.

11. ನವದಂಪತಿಗಳು **ನಮಗೆ** ತಾಂಬೂಲ(ವನ್ನು) ಕೊಟ್ಟರು.

12. ಅರುಳಪ್ಪ(ನು) ತನ್ನ ಸರ್ವಸ್ವವನ್ನು **ಸ್ವಾಮಿಗೆ** ಅರ್ಪಿಸಿದ(ನು).

6. ದಿಗ್ವಾಚಿ ಕಾರಕ :

ಮೂಲ ವಾಕ್ಯದ ಕ್ರಿಯಾಪದ ಸೂಚಿಸುವ ಚಲನೆಯ ದಿಕ್ಕನ್ನು ವ್ಯಕ್ತಪಡಿಸುವ ವಸ್ತುವನ್ನು ನಿರ್ದೇಶಿಸುವ ನಾಮಪದ ದಿಕ್ವಾಚಿ ಕಾರಕಾರ್ಥದಲ್ಲಿರುತ್ತದೆ.

13. ನಮ್ಮ ವಿದ್ಯಾರ್ಥಿಗಳು **ಹಳ್ಳಿಗಳಿಗೆ** ಹೋಗುತ್ತಾರೆ.

14. ಯುವಜನರು **ಗುಡಿಗೆ** ಹೋಗುವುದು ಕಡಿಮೆಯಾಗಿದೆ.

ಮೇಲಿನ ವಾಕ್ಯಗಳಲ್ಲಿ 'ಹಳ್ಳಿಗಳಿಗೆ' ಮತ್ತು 'ಗುಡಿಗೆ' ಎಂಬ ಪದಗಳು 'ಹೋಗು'ಎಂಬ ಕ್ರಿಯಾಪದ ಸೂಚಿಸುವ ಕ್ರಿಯೆಯ ಚಲನೆಯ ದಿಕ್ಕನ್ನು ಸೂಚಿಸುತ್ತವೆ.

ದಿಗ್ವಾಚಿಕಾರಕ ಸಂಪ್ರದಾನದಂತೆ ಚತುರ್ಥಿ ವಿಭಕ್ತಿಯ ಮೂಲಕ ಅಭಿವ್ಯಕ್ತಗೊಳ್ಳುತ್ತದೆ.

7. ಅಧಿಕರಣ ಕಾರಕ :

ಮೂಲವಾಕ್ಯದ ಕ್ರಿಯಾಪದ ಗುರುತಿಸುವ ಕ್ರಿಯೆಯ ಆಧಾರ (Locus) ಸೂಚಿಸುವ ಅ/ಜೀವ ವಸ್ತು ಅಧಿಕರಣ ಕಾರಕಾರ್ಥದಲ್ಲಿರುತ್ತದೆ.

15. ಮೋಹನ **ಮೈದಾನಿನಲ್ಲಿ** ಬಿದ್ದ.

16. ಪ್ರಕಾಶ ಆಡುವ **ಸಮಯದಲ್ಲಿ** ಬಿದ್ದ.

15 ನೆಯ ವಾಕ್ಯದಲ್ಲಿ 'ಮೈದಾನು' ಕ್ರಿಯೆಗೆ ಆಧಾರವಾದರೆ 16 ನೆಯ ವಾಕ್ಯದಲ್ಲಿ 'ಸಮಯ' ಆಧಾರವಾಗಿದೆ; ಆದುದರಿಂದ ಅವೆರಡೂ ಅಧಿಕರಣ ಕಾರಕಾರ್ಥದಲ್ಲಿವೆ. ಈ ಕಾರಕದ ಅಭಿವ್ಯಕ್ತಿ ಮುಖ್ಯವಾಗಿ ವೈಯಾಕರಣಿಗಳು ಸೂಚಿಸಿದ ಸಪ್ತಮಿ ವಿಭಕ್ತಿಯ ಮೂಲಕವಾಗುತ್ತದೆ.

ವಾದಗ್ರಸ್ತ ಕಾರಕಗಳು

ಕನ್ನಡ ವ್ಯಾಕರಣ ಗ್ರಂಥಗಳನ್ನು ಅವಲೋಕಿಸಿದಾಗ ಅವುಗಳಲ್ಲಿ ಸಂಬೋಧನಾ (Vocative), ಸಂಬಂಧ (Genitive), ಉದ್ದೇಶ (Purposive), ಹೇತು (Causal), ಅಪಾದಾನ (Ablative), ಸಂಯೋಗ (Comitative) ಮತ್ತು ಸಂವೇದ್ಯ (Sensory) ಗಳೆಂಬ ಕಾರಣಗಳ[11] ಬಗ್ಗೆ ಪ್ರಸ್ತಾಪ ಬರುವುದುಂಟು. ಇವುಗಳ ವಿವೇಚನೆ ಪ್ರಸ್ತುತ ಭಾಗದಲ್ಲಿ ಮಾಡಲಾಗಿದೆ.

1. ಸಂಬೋಧನಾ ಕಾರಕ :

ಕೇಶಿರಾಜ ಸಂಬೋಧನೆಯ ಪ್ರಸ್ತಾಪ[12] ಮಾಡಿದರೂ ಅದನ್ನು ಕಾರಕವೆಂದು ಪರಿಗಣಿಸುವುದಿಲ್ಲ.[13] ಆದರೆ ಕೆಲವು ಶಾಲಾ ವ್ಯಾಕರಣಗಳು[14] ಅಲ್ಲದೆ ಸಂಶೋಧ ನಾತ್ಮಕ ಗ್ರಂಥಗಳು[15] ಕೂಡಾ ಸಂಬೋಧನೆಯನ್ನು ಕಾರಕವನ್ನಾಗಿ ಪರಿಗಣಿಸಿದ್ದುಂಟು.[16]

ವಾಕ್ಯದ ಅಂತಃಸ್ತರದಲ್ಲಿ ಸಂಬೋಧನೆ ಯಾವ ವ್ಯಾಕರಣ ಸಂಬಂಧವನ್ನೂ ತೋರಿಸುವುದಿಲ್ಲವಾದುದರಿಂದ ಅದು ಕಾರಕವಲ್ಲವೆಂದು ನಮ್ಮ ಮತ.[17]

2. ಸಂಬಂಧ ಕಾರಕ :

ಕೇಶಿರಾಜ ಷಷ್ಠಿ ವಿಭಕ್ತಿಯನ್ನು ಒಪ್ಪಿಕೊಂಡು ಅದಕ್ಕೆ ತನ್ನದೇ ಆದ ವಿಶಿಷ್ಟ ಕಾರಕ ವಿಲ್ಲವೆಂದು ಹೇಳಿ, ಸಂಬಂಧಕಾರಕವನ್ನು ಅಲ್ಲಗಳೆದಿದ್ದಾನೆ.[18] ಆದರೂ ಕೆಲವರು[19] ಕಾರಣಗಳನ್ನೀಯದೆ ಸಂಬಂಧಕಾರಕವನ್ನು ಒಪ್ಪಿಕೊಂಡಿದ್ದಾರೆ. ಕವಿರಾಜಮಾರ್ಗಕಾರ

---

11. ವೈಯಾಕರಣಿಗಳು ಇಲ್ಲಿ ವಿಭಕ್ತಿ (Case) ಎಂಬವ್ಯಾಪಕ ಪದವನ್ನು ಬಳಸಿದ್ದರೂ ಅದು ಕಾರಕ (Deep Case) ಎಂಬರ್ಥದಲ್ಲಿದೆ ಎಂಬುದು ಆಯಾಯ ಸಂದರ್ಭದಿಂದ ಸ್ಪಷ್ಟವಾಗುತ್ತದೆ.
12. ಶ. ಮ. ದ. ಸೂ. 134–6
13. ಅದೇ, 103 ಮತ್ತು 137
14. ಮ. ಪ್ರ. ಪೂಜಾರ, 1949 : 15;
15. ಅ) ಕನ್ನಡಕೈಪಿಡಿ, ಪು. 37 ಮತ್ತು 342. ಆ) ಹಂಪನಾಗರಾಜಯ್ಯ 1972; 212. ಇ) Herold Spencer 1950 : 36. ಈ) ಸವದತ್ತಿಮಠ, 1976 : 116.
16. ಮುಳಬಾಗಲ (1924), ಕುಲಕರ್ಣಿ (1967), Nayak ಮತ್ತು Gowda (1972) ಇವರು ಸಂಭೋಧನಾಕಾರಕವನ್ನು ಒಪ್ಪುವುದಿಲ್ಲ.
17. ನೋಡಿ : ವಿಲ್ಯಂ ಮಾಡ್ತ, 1975 : 101.
18. ಸೂ. 103 ಮತ್ತು 143. ಗೌಡರು ಸಂಬಂಧ ಕಾರಕವನ್ನು ಒಪ್ಪುವುದಿಲ್ಲವೆಂಬುದಕ್ಕೆ ಅವರ ಷಷ್ಠಿವಿಭಕ್ತಿಯ ಕುರಿತಿನ ಈ ವಾಕ್ಯವೇ ಸಾಕ್ಷಿ. "ಕಾರಕ ಸಂಬಂಧವಿಲ್ಲದೆ ಹೋದರೂ........ ಇದು (ಷಷ್ಠಿ ವಿಭಕ್ತಿ)........ಉಳಿದುಕೊಂಡಿದೆ" (ಗೌಡ. 1976. ಪು. 394.)
19. ಪೂಜಾರ, Spencer, ಕನ್ನಡ ಕೈಪಿಡಿಕಾರರು, ಹಂಪನಾಮುಂತಾದವರು.

ಷಷ್ಠಿಗೆ ಕಾರಕಾರ್ಥವಿದೆ ಎಂದು ಒಪ್ಪಿಕೊಂಡು ತನ್ನ ಸ್ವಂತತನವನ್ನು ತೋರಿಸಿಕೊಟ್ಟಿದ್ದ ನಲ್ಲದೆ ಕನ್ನಡ ವ್ಯಾಕರಣದ ಮೌಲ್ಯವನ್ನು ಹೆಚ್ಚಿಸಿದ್ದಾನೆಂಬ ಅಭಿಪ್ರಾಯವನ್ನು ಡಾ. ಕುಳ್ಳಿಯವರು[20] ಸೂಚಿಸಿದ್ದಾರೆ.

ಷಷ್ಠಿ ಅಭಿವ್ಯಕ್ತಗೊಳಿಸುವ ಸಂಬಂಧ ಮೂಲವಾಕ್ಯದ ನಾಮ ಮತ್ತುಕ್ರಿಯಾಪದ ಗಳ ನಡುವಿನ ವ್ಯಾಕರಣ ಸಂಬಂಧ–ಕಾರಕಾರ್ಥ–ವಲ್ಲವಾದುದರಿಂದ ಈ ಷಷ್ಠಿಯು ನೇರ ಸಂಭಂಧಕಾರಕವನ್ನು ಒಪ್ಪುವುದು ಭಾಷಾವೈಜ್ಞಾನಿಕ ದೃಷ್ಟಿಯಿಂದ ಅಸಾಧ್ಯವೆಂದು ಹೇಳಬೇಕಾಗುತ್ತದೆ.

3. ಉದ್ದೇಶ ಕಾರಕ :

ಸಂಪ್ರದಾನಕ್ಕಿಂತ ಭಿನ್ನವಾದ ಉದ್ದೇಶಕಾರಕವೊಂದನ್ನು ಗುರುತಿಸುವ ಪ್ರಯತ್ನ ವನ್ನು ಅಲ್ಲಲ್ಲಿ ನಾವು ಕಾಣುತ್ತೇವೆ.[21] ಕೆಳಗಿನ ವಾಕ್ಯ ಗಮನಿಸಿ :

17. ಚೋಮ ತನ್ನ ಆಸ್ತಿಗೆ ರೂ. 6,000 ಕೊಟ್ಟ.

ಮೇಲಿನ ವಾಕ್ಯದಲ್ಲಿ ಹಣ ಸ್ವೀಕರಿಸುವುದು ಆಸ್ತಿಯಲ್ಲ. ಆದುದರಿಂದ ಅದು ಸಂಪ್ರ ದಾನಕಾರಕಾರ್ಥದಲ್ಲಿಲ್ಲ. ಕಾರಣ, ಚತುರ್ಥೀ ವಿಭಕ್ತಿ ಪ್ರತ್ಯಯವನ್ನೊಳಗೊಂಡ ನಾಮ ಪದಗಳನ್ನು ಉದ್ದೇಶ ಚತುರ್ಥೀ ಎಂದು ತಿಳಿಯಬೇಕಾಗುತ್ತದೆಂದು ಗೌಡರ (1972: 349) ವಾದ.

ಮೇಲಿನ ವಾಕ್ಯವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅದರ ಅಂತಃಸ್ತರದಲ್ಲಿ ಎರಡು ಮೂಲ ವಾಕ್ಯಗಳಿರುವುದನ್ನು ನಾವು ಗಮನಿಸಬಹುದು :

17 (ಅ) ಚೋಮ ಒಬ್ಬನಿಗೆ ರೂ. 6,000 ಕೊಟ್ಟ.

17 (ಆ) ಚೋಮ ಅವನಿಂದ ಆಸ್ತಿ ಪಡೆದುಕೊಂಡ.

ಚೋಮ ಆಸ್ತಿಗೆ ರೂ. 6,000 ಕೊಟ್ಟ.

'ಆಸ್ತಿ' ಪ್ರಭಾವಕಾರಕದಲ್ಲಿದ್ದು ಬಹಿಃಸ್ತರದಲ್ಲಿ ಚತುರ್ಥಿವಿಭಕ್ತಿಯ ಮೂಲಕ ಅಭಿವ್ಯಕ್ತ ಗೊಳ್ಳುತ್ತದೆ. ಒಟ್ಟಿನಲ್ಲಿ ಉದ್ದೇಶ ಕಾರಕಕ್ಕೆ ಇಲ್ಲಿ ಅಸ್ತಿತ್ವವಿಲ್ಲ.

---

20. 1976 : 263.

21. ನೋಡಿ : ಸವದತ್ತಿಮಠ (1976 : 117)

4. **ಹೇತು ಕಾರಕ :**

ಕೆಳಗಿನ ವಾಕ್ಯಗಳನ್ನು ಗಮನಿಸಿ :

18. ಓಲಗದಿಂದ ಹಣವನ್ನು ಪಡೆದ.
19. ಧನದಿಂದ ಕೀರ್ತಿಯನ್ನು ಗಳಿಸಿದ.
20. ಹಣ್ಣಿನಿಂದ ಬದುಕಿದ.

ಮೇಲಿನ 18–20 ವಾಕ್ಯಗಳಲ್ಲಿ ಬಂದ 'ಇಂದ' ಕರಣ ಕಾರಕವನ್ನು ಸೂಚಿಸುವುದಿಲ್ಲ. ಕರಣಕಾರಕ ಸೂಚಿಸುವ ರೂಪಕ್ಕೆ 'ಆಗಿ' ಎಂಬ ರೂಪವನ್ನು ಸೇರಿಸುವುದು ಅಸಾಧ್ಯ : ಕೊಡಲಿಯಿಂದ ಕಡಿದ[22] *ಕೊಡಲಿಯಿಂದಾಗಿ ಕಡಿದ. ಆದರೆ ಕೆಳಗಿನ ವಾಕ್ಯಗಳನ್ನು ನೋಡಿ :

18 (ಅ) ಓಲಗದಿಂದಾಗಿ ಹಣವನ್ನು ಪಡೆದ.
19 (ಅ) ಧನದಿಂದಾಗಿ ಕೀರ್ತಿಯನ್ನು ಗಳಿಸಿದ.
20 (ಅ) ಹಣ್ಣಿನಿಂದಾಗಿ ಬದುಕಿದ.

ಆದ್ದರಿಂದ 18–20 ವಾಕ್ಯಗಳು ಕರಣಕಾರದಲ್ಲಿಲ್ಲ; ಹೇತು ಕಾರಕದಲ್ಲಿವೆಂದು ಕೆಲವರ ಅಭಿಪ್ರಾಯ.[23]

ಅಂತಃಸ್ತರದಲ್ಲಿ ಆ ವಾಕ್ಯಗಳನ್ನು ಈ ಕೆಳಕಂಡಂತೆ ತಿಳಿದುಕೊಳ್ಳಬಹುದು :

18 (ಆ) ಓಲಗ (ಅವನಿಗೆ) ಹಣ(ವನ್ನು) ಕೊಟ್ಟಿತು.
19 (ಆ) ಧನ (ಅವನಿಗೆ) ಕೀರ್ತಿ(ಯನ್ನು) ಕೊಟ್ಟಿತು.
20 (ಆ) ಹಣ್ಣು (ಅವನನ್ನು) ಬದುಕಿಸಿತು.

18 (ಆ)–20(ಆ) ವಾಕ್ಯಗಳನ್ನು ಗಮನಿಸಿದಾಗ 'ಓಲಗ, ಧನ, ಹಣ್ಣು' ಎಂಬ ನಾಮಪದಗಳು ಕರ್ತೃಕಾರಕದಲ್ಲಿವೆಯೆಂದೂ, ಆದ್ದರಿಂದ ಹೇತು ಮೋಟಾಕಾರಕವೆಂದೂ ಸ್ಪಷ್ಟವಾಗುತ್ತದೆ. ಆ ಕರ್ತೃಕಾರಕ ಬಹಿಃಸ್ತರದಲ್ಲಿ ತೃತೀಯೆಯ ಮೂಲಕ ಅಭಿವ್ಯಕ್ತಗೊಂಡಿದೆ.

---

22. * ಚಿಹ್ನೆ ಅ–ಸ್ವೀಕೃತ ವಾಕ್ಯಗಳನ್ನು ಗುರುತಿಸುತ್ತದೆ.
23. ಉದಾಹರಣೆಗೆ ನೋಡಿ : Gowda (1972 : 339-341)

5. ಅಪಾದಾನ ಕಾರಕ:

ಕೇಶಿರಾಜ[24] ಅಪಾದಾನ ಕಾರಕವನ್ನು ಒಪ್ಪಿಕೊಂಡಿದ್ದಾನೆ. ಆದರೆ ಆಧುನಿಕ ವಿದ್ವಾಂಸರು[25] ಅಪಾದಾನವನ್ನು ಒಪ್ಪುವುದಿಲ್ಲವೆಂದು ಕೆಲವರು[25] ಆಪಾದಿಸಿದ್ದಾರೆ. ಆದರೆ ಕೈಪಿಡಿಕಾರರು ಅಪಾದಾನ ಕಾರಕ(ಪಂಚಮ್ಯರ್ಥ)ವನ್ನು ಅಲ್ಲಗಳೆಯಲಿಲ್ಲ ಎಂಬುದು "........ಪಂಚಮ್ಯರ್ಥದಲ್ಲಿ ತೃತೀಯೆಯನ್ನೇ ಪ್ರಯೋಗಿಸುತ್ತಾರೆ"– ಎಂಬ ಅವರ ವಾಕ್ಯದಿಂದ ತಿಳಿದುಕೊಳ್ಳಬಹುದು.[27] ಒಟ್ಟಿನಲ್ಲಿ ಅಪಾದಾನ ಕಾರಕ ಅರ್ಥಾತ್ ಪಂಚಮ್ಯರ್ಥ ಸರ್ವಸಾಮಾನ್ಯವಾಗಿ ಈಗ ಬಹುಸಮ್ಮತವಾಗಿದೆ; ಆದರೂ ಕೆಳಗಿನ ವಾಕ್ಯಗಳನ್ನು ಗಮನಿಸಿ:

21. ನಾನು ಬಾವಿಯಿಂದ ನೀರನ್ನು ಸೇದುತ್ತೇನೆ.

22. ನಾರಣಪ್ಪ ಮರದಿಂದ ಹಣ್ಣನ್ನು ಹರಿಯುತ್ತಾನೆ.

23. ಮೋನಪ್ಪ ಮಡಿಕೇರಿಯಿಂದ ಪೂರ್ವಕ್ಕೆ ಹೋಗುತ್ತಾನೆ.

ಮೇಲಿನ 21–23 ವಾಕ್ಯಗಳು ಕೆಲವು ಮೂಲವಾಕ್ಯಗಳಿಂದ ಸಾಧಿತಗೊಂಡವುಗಳಾಗಿವೆ. ಕಾರಕಗಳು ಮೂಲವಾಕ್ಯಗಳಿಗೆ ಸೇರಿದವುಗಳಾದುದರಿಂದ ಅಲ್ಲಿ ಅಪಾದಾನಾರ್ಥವಿದೆಯೇ ಎಂಬುದನ್ನು ಪರಿಶೀಲಿಸಬೇಕು:

21 (ಅ) ಬಾವಿಯಲ್ಲಿ ನೀರುಂಟು;
(ಆ) ಆ ನೀರನ್ನು ನಾನು ಸೇದುತ್ತೇನೆ.
22 (ಅ) ಮರದಲ್ಲಿ ಹಣ್ಣು ಉಂಟು;
(ಆ) ಅದನ್ನು ನಾರಣಪ್ಪ ಹರಿಯುತ್ತಾನೆ.
23 (ಅ) ಮಡಿಕೇರಿಯಲ್ಲಿ ಮೋನಪ್ಪ ಇದ್ದನು.
(ಆ) ಮಡಿಕೇರಿಗೆ ಪೂರ್ವ (ದಿಕ್ಕು) ಇದೆ.
(ಇ) ಮೋನಪ್ಪ (ಆ) ಪೂರ್ವ ದಿಕ್ಕಿಗೆ ಹೋಗುತ್ತಾನೆ.

---

24. ನೋಡಿ : ಸೂ. 103 ಮತ್ತು 126 ಹಾಗೂ ಅವುಗಳ ವೃತ್ತಿ.
25. ಬಿ. ಎಂ. ಶ್ರೀಕಂಠಯ್ಯ (1955), ಟಿ. ಎಸ್. ವೆಂಕಣ್ಣಯ್ಯ (1955), ಟಿ. ಎನ್. ಶ್ರೀಕಂಠಯ್ಯ (1939) ಎ. ಎನ್. ನರಸಿಂಹಯ್ಯ (1941) ಮತ್ತು ಜಿ. ಎಸ್. ಗಾಯಿ (1946).
26. ನೋಡಿ : Gowda (1972 ; 370–1); Madtha (1976) ಅ. ಟಿ. 3; Kulli (1976 ; 137)
27. ಕನ್ನಡ ಕೈಪಿಡಿ. (1955 : 335) ಇದನ್ನೇ ಇನ್ನೊಂದು ರೀತಿಯಲ್ಲಿ : ಅಪಾದಾನ ಕಾರಕಾರ್ಥದಲ್ಲಿ ತೃತೀಯಾ ವಿಭಕ್ತಿಯನ್ನೇ ಪ್ರಯೋಗಿಸುತ್ತಾರೆ ಎಂದೂ ಹೇಳಬಹುದು.

21 (ಅ)–23 (ಇ) ವಾಕ್ಯಗಳಲ್ಲಿರುವ ಕಾರಕಗಳು ಅಧಿಕರಣ ಸಂಪ್ರದಾನವೇ ಹೊರತು ಅಪಾದಾನವಲ್ಲವೆಂಬುದು ಸ್ಪಷ್ಟ; ಆದ್ದರಿಂದ ಅಪಾದಾನಕಾರಕ ಇದೆಯೆಂಬುದು ಕೇವಲ ಭ್ರಮೆ.

6. ಸಂಯೋಗ ಕಾರಕ :

ಕೆಳಗಿನ ವಾಕ್ಯವನ್ನು ಪರಿಶೀಲಿಸಿ :

24. ರಾಮನೊಡನೆ ಸೀತೆ ಕಾಡಿಗೆ ಹೋದಳು;

ಕಾಡಿಗೆ ಹೋಗುವ ಕ್ರಿಯೆಯಲ್ಲಿ ಪ್ರಧಾನ ಪಾತ್ರ ರಾಮನದು; ಸೀತೆಯದು ಗೌಣ; ಆದುದರಿಂದ– 'ಒಡನೆ' ಎಂಬ ಪ್ರತ್ಯಯ 'ರಾಮನ' ಎಂಬ ಪ್ರಕೃತಿಯನ್ನು ಸೇರುತ್ತದೆ.

24 (ಅ) ರಾಮ ಮತ್ತು ಸೀತೆ ಕಾಡಿಗೆ ಹೋದರು.

24 (ಆ) ರಾಮನೂ ಸೀತೆಯೂ ಕಾಡಿಗೆ ಹೋದರು.

ರಾಮನೊಡನೆ ಸೀತೆ ಕಾಡಿಗೆ ಹೋದಳು / ಸೀತೆಯೊಡನೆ ರಾಮ ಕಾಡಿಗೆ ಹೋದ– ಎಂಬ ವಾಕ್ಯದ ಅಂತಃಸ್ತರದಲ್ಲಿ 'ರಾಮ' ಮತ್ತು 'ಸೀತೆ' ಕರ್ತೃಕಾರಕಾರ್ಥದಲ್ಲಿರುವುದರಿಂದ ಅಭಿವ್ಯಕ್ತಗೊಂಡ ನಿಜವಾಕ್ಯ (Actual / Non-kernel Sentence) ದಲ್ಲಿ ಕರ್ತೃಕಾರದಲ್ಲಿರುವ ನಾಮಪದಗಳು ಸಮಾನಸ್ಥಾನೀಯ (Co-Ordinate) ವಾಗಿವೆ.

24ನೆಯ ವಾಕ್ಯದಲ್ಲಿ ಸೀತೆ ಅಪ್ರಧಾನ-ಗೌಣ (Sub-ordinate) ವೆಂದು ತಿಳಿದುಕೊಂಡಾಗ ಪ್ರಧಾನ ನಾಮಪದ ಸಂಯೋಗ ಕಾರಕಾರ್ಥದಲ್ಲಿರುತ್ತದೆ ಯೆಂದು ಕೆಲವರು[28] ವಾದಿಸುತ್ತಾರೆ.

ಈ ಸಂದರ್ಭದಲ್ಲಿ ಮೊದಲನೆಯದಾಗಿ ನೆನಪಿಡತಕ್ಕ ವಿಷಯವೇನೆಂದರೆ ಕಾರಕದ ಅರ್ಥ. ಕಾರಕ ನಾಮಪದದ ಸ್ಥಾನ-ಸಮಾನ ಅಥವಾ ಗೌಣ-ವನ್ನು ಅವಲಂಬಿಸಿಲ್ಲ; ಕ್ರಿಯಾಪದ ಸೂಚಿಸುವ ಕ್ರಿಯೆಯೊಡನೆ ಅದರ ಸಂಬಂಧವೇನು ಎಂಬುದನ್ನು ಮಾತ್ರ ವಿವೇಚಿಸಬೇಕಾಮದು ಪ್ರಸ್ತುತ. ಸೀತೆ ರಾಮನಲ್ಲಿ ಅಂತರ್ಗತವಾಗಿ ಹೋಗಿಲ್ಲ. ಸೀತೆಯ ಹೋಗುವಿಕೆಗೆ ಸೀತೆ ಕರ್ತೃ; ರಾಮನ ಹೋಗುವಿಕೆಗೆ ರಾಮ ಕರ್ತೃ; ಅರ್ಥಾತ್ ಇರುವ ಎರಡು ಕ್ರಿಯಾಪದಗಳಿಗೆ ಎರಡು ಭಿನ್ನ ನಾಮಪದಗಳಿವೆ. ಆ ಎರಡು ನಾಮಪದಗಳು ಕರ್ತೃಕಾರಕಾರ್ಥದಲ್ಲಿವೆ.

---

28. S. Agesthialingom "The So-called Sociative Case in Tamil", *Dravidiam Case System* (1976), pp. 1–31.

ಯಾವ ನಾಮಪದ ಪ್ರಧಾನ/ಅಪ್ರಧಾನವೆಂಬುದನ್ನು ಸಂದರ್ಭಾರ್ಥ (Contextual Meaning) ಗುರುತಿಸುತ್ತದೆಯೇ ವಿನಃ ವ್ಯಾಕರಣಾರ್ಥ (Grammatical Meaning) ಅಲ್ಲ. ಈ ಕಾರಣಗಳಿಂದಾಗಿ ಸಂಯೋಗಕಾರಕಾರ್ಥವೆಂಬುದು ಇಲ್ಲವೆಂದೇ ಹೇಳಬೇಕಾಗುತ್ತದೆ.

೭. ಸಂವೇದ್ಯ ಕಾರಕ :

ಕರಣಕಾರಕದಿಂದ ಭಿನ್ನವಾದ ಸಂವೇದ್ಯಕಾರಕವೊಂದನ್ನು ಕೆಲವರು[29] ಗುರುತಿಸಿದ್ದಾರೆ.

25. ಗೋಪು ಆ ಘಟನೆಯನ್ನು ತನ್ನ ಕಣ್ಣಿನಿಂದ ನೋಡಿದ.

26. ಗೋಪಿ ಆ ವಿಷಯವನ್ನು ತನ್ನ ಕಿವಿಯಿಂದ ಕೇಳಿದಳು.

ಈ 25–26ನೆಯ ವಾಕ್ಯಗಳನ್ನು 9-10ನೆಯ ವಾಕ್ಯಗಳೊಂದಿಗೆ ಹೋಲಿಸಿ ನೋಡಿದರೆ ಅಲ್ಲಿಯ ಕೊಡಲಿಗೆ ಕಡಿಯುವುದೊಂದೇ ಕೆಲಸ; ಭಕ್ತಿಗೆ ಒಲಿಸುವುದೊಂದೇ ಕೆಲಸ. ಆದರೆ ಇಲ್ಲಿಯ ಕಣ್ಣಿಗೆ ನೋಡುವ, ಅಳುವ, ಮುಚ್ಚಿಕೊಳ್ಳುವ, ತೆರೆಯುವ ಅಂತೆಯೇ ಕಿವಿಗೆ ಕೇಳುವ, ಧೂಳುಕಣಗಳನ್ನು ಹೊರಗಿಡುವ ಇತ್ಯಾದಿ ಇತರ ಕೆಲಸಗಳೂ ಇರಬಹುದು. ಅಷ್ಟೇ ಅಲ್ಲದೆ 25–26ನೆಯ ವಾಕ್ಯಗಳ ನಾಮಪದಗಳು ಜ್ಞಾನೇಂದ್ರಿಯಗಳು; ಆದ್ದರಿಂದ ಅವು ಕರಣ ಕಾರಕಗಳಿಗಿಂತ ಭಿನ್ನವೆಂಬ ಅಭಿಪ್ರಾಯ ವ್ಯಕ್ತವಾಗಿದೆ

ಕಣ್ಣು, ಕಿವಿ ಮುಂತಾದವುಗಳು ಕೊಡಲಿ, ಪೆನ್ನು ಮೊದಲಾದ ಕರಣಗಳಿಗಿಂತ ಭಿನ್ನರೀತಿಯವು ಹೌದು; ಆದರೂ ಮೂಲತಃ ಕರಣಗಳೇ ಅಲ್ಲವೆ? ಕರಣ ಐಂದ್ರಿಯವೋ, ಮಾನಸಿಕವೋ, ಜೈವಿಕವೋ ಅಜೈವಿಕವೋ ಎಂಬುದು ವ್ಯಾಕರಣದಲ್ಲಿ ಅಪ್ರಸ್ತುತ, 9-10 ಮತ್ತು 25–26 ವಾಕ್ಯಗಳಲ್ಲಿ –ಇಂದ ಪ್ರತ್ಯಯ ಕೂಡಿಕೊಂಡು ಬಂದಿರುವ ನಾಮಪದಗಳಿಲ್ಲ ಕರಣಕಾರಕಾರ್ಥವನ್ನು ಬಿಟ್ಟಿಲ್ಲ; ಆದ್ದರಿಂದ ಅವು ಸಂವೇದ್ಯಕಾರಕವಲ್ಲವೆಂದೇ ಹೇಳಬೇಕಾಗುತ್ತದೆ.

ಒಟ್ಟಿನಲ್ಲಿ ವಿವೇಚಿಸಿದ ಎಲ್ಲ ವಾದಗ್ರಸ್ತಕಾರಕಗಳೂ ಆಭಾಸಕಾರಕ (Pseudo Case) ಗಳೆಂದೇ ನಮ್ಮ ಎಣಿಕೆ.

29, Gowda (1972 : 342).

ವಿಭಕ್ತಿ :

ಭಾಷೆಯ ಅಂತಃಸ್ತರದಲ್ಲಿರುವ ನಾಮಪದ ಮತ್ತು ಕ್ರಿಯಾಪದಗಳ ನಡುವಿನ ಸಂಬಂಧಗಳು ಕಾರಕಗಳಾದರೆ ಬಹಿಃಸ್ತರದಲ್ಲಿ ಅವುಗಳ ಅಭಿವ್ಯಕ್ತಗಳೇ ವಿಭಕ್ತಿಗಳು.

ಕೆಳಗಿನ ಕೋಷ್ಟಕ ಕಾರಕ ಮತ್ತು ವಿಭಕ್ತಿಗಳ ಸಂಬಂಧ ಸೂಚಿಸುತ್ತದೆ :

ಕೋಷ್ಟಕ–1 :

ವಿಭಕ್ತಿ	ಕಾರಕ
ಪ್ರಥಮಾ	ಕರ್ತೃ[30] ಪ್ರಭಾವ ಮತ್ತು ಕರ್ಮ (ಕರ್ಮಣಿ ವಾಕ್ಯಗಳಲ್ಲಿ)
ದ್ವಿತೀಯಾ	ಕರ್ಮ[31] ಮತ್ತು ಪ್ರಭಾವ.
ತೃತೀಯಾ	ಕರಣ[32] ಮತ್ತು ಅಪಾದಾನ; ಕರ್ತೃ (ಕರ್ಮಣಿ ವಾಕ್ಯಗಳಲ್ಲಿ)[33]
ಚತುರ್ಥಿ	ಸಂಪ್ರದಾನ[34] ಮತ್ತು ದಿಗ್ವಾಚಿ
ಷಷ್ಠೀ	ಕರ್ತೃ, ಕರಣ, ಸಂಪ್ರದಾನ, ಅಧಿಕರಣ.
ಸಪ್ತಮಿ	ಅಧಿಕರಣ[35]

ಮೇಲಿನ ಕೋಷ್ಟಕವನ್ನು ನೋಡಿದಾಗ ಸಂಬೋಧನೆ ಮತ್ತು ಪಂಚಮಿ ವಿಭಕ್ತಿಗಳನ್ನು ಹೆಸರಿಸದಿರುವುದು ಮಾತ್ರವಲ್ಲದೆ ಷಷ್ಠಿಗೆ ವಿಶಿಷ್ಟವಾದ ಕಾರಕವಿಲ್ಲದಿರುವುದೂ ಗಮನಕ್ಕೆ ಬರುತ್ತದೆ.

ವಾದಗ್ರಸ್ತ ವಿಭಕ್ತಿಗಳು :

ಸಂಬೋಧನಾ, ಪಂಚಮಿ ಮತ್ತು ಷಷ್ಠೀ ವಿಭಕ್ತಿಗಳ ಬಗ್ಗೆ ಅನೇಕ ವಾದ-ವಿವಾದಗಳು ನಡೆದಿರುವುದರಿಂದ ಅವನ್ನು ವಾದಗ್ರಸ್ತ ವಿಭಕ್ತಿಗಳೆಂದು ಗುರುತಿಸಿ, ಅವುಗಳ ವಿವೇಚನೆಯನ್ನು ಪ್ರಸ್ತುತದಲ್ಲಿ ಮಾಡಲಾಗಿದೆ.

---

30. ನೋಡಿ : ಅಷ್ಟಾಧ್ಯಾಯಿ 1–3–78
31. ಅದೇ 2–3–2.
32. ಅದೇ 2–3–18.
33. ಅದೇ 2–3–18.
34. ಅದೇ 2-3-13.
35. ಅದೇ 2–3–16.

1. ಸಂಬೋಧನೆ :

ಸಂಬೋಧನೆ ಯಾವ ಕಾರಕ ಸಂಬಂಧವನ್ನೂ ಅಭಿವ್ಯಕ್ತಪಡಿಸುವುದಿಲ್ಲವಾದ್ದರಿಂದ ಅದು ವಿಭಕ್ತಿಯಾಗಲಾರದು.[36] ಸಂಬೋಧನೆಯನ್ನು ಸಂಬೋಧನಾ ಅಣು ಪ್ರತ್ಯಯ (Vocative particle) + ಕರ್ತೃ ಎಂದು ವಿಶ್ಲೇಷಿಸಬಹುದು : ಏ+ರಾಮನ್ → ರಾಮನೇ. ಪ್ರಕೃತಿಯ ಅಂತ್ಯವ್ಯಂಜನ ಲೋಪಗೊಂಡಾಗ ಅದರ ಹಿಂದಿನ ಹ್ರಸ್ವ ಸ್ವರವನ್ನು ದೀರ್ಘಗೊಳಿಸುವುದೂ ಉಂಟು : ಅಪ್ಪಾ, ಅಮ್ಮಾ........ಆಕಾರಾಂತ ರೂಪಗಳನ್ನು ಪ್ಲುತಗೊಳಿಸುವುದೂ ಉಂಟು : ಸೀತಾಽ, ಕಮಲಾಽ ಇತ್ಯಾದಿ.

2. ಪಂಚಮಿ :

ಕನ್ನಡ ವಿದ್ವಾಂಸರಲ್ಲಿ ಕೆಲವರು ಕನ್ನಡದಲ್ಲಿ ಪಂಚಮಿ ವಿಭಕ್ತಿ ಸಹಜವಾಗಿ ಇಲ್ಲ ಎಂಬ ಅಭಿಪ್ರಾಯ ಪಟ್ಟಿದ್ದಾರೆ.[37] ಇವರಲ್ಲಿ ಟಿ. ಎನ್. ಶ್ರೀಕಂಠಯ್ಯ (1939), ಎ. ಎನ್. ನರಸಿಂಹಯ್ಯ (1941), ಜಿ. ಎಸ್. ಗಾಯಿ (1946), ಬಿ. ಎಂ. ಶ್ರೀಕಂಠಯ್ಯ (1955) ಮತ್ತು ಟಿ. ಎಸ್. ವೆಂಕಣ್ಣಯ್ಯ (1955) ಪ್ರಮುಖರು.

ಪಂಚಮಿ ವಿಭಕ್ತಿಯನ್ನು ಮಾನ್ಯ ಮಾಡದಿರಲು ಮೇಲಿನ ವಿದ್ವಾಂಸರು ಕೊಟ್ಟ ಕಾರಣಗಳಲ್ಲಿ ಕೆಳಗಿನವು ಪ್ರಮುಖವಾದವುಗಳು.[38]

1. ಆಡುಗನ್ನಡದಲ್ಲಿ ಪಂಚಮಿಗೆ ವಿಶೇಷಪ್ರತ್ಯಯವಿಲ್ಲ; ಅದಕ್ಕಾಗಿ ತೃತೀಯೆಯನ್ನೇ ಬಳಸುತ್ತಾರೆ.
2. ಹಳಗನ್ನಡ ಸಾಹಿತ್ಯದಲ್ಲಿ ಪಂಚಮಿಯ ಬಳಕೆ ಬಹಳ ಅಪರೂಪ; ಹೆಚ್ಚಾಗಿ ಪಂಚಮಿ ಬದಲು ತೃತೀಯೆ ಕಾಣಬರುತ್ತದೆ.
3. ಪಂಚಮಿಗೆ ಸ್ವತಂತ್ರವಾದ ಪ್ರತ್ಯಯವಿಲ್ಲ; ಅತ್ತಣಿಂದ < ಅತ್ತ 'ಆ ಕಡೆ' +ಅಣ್ (ಸಾಧಿತಪ್ರತ್ಯಯ) + ಇಂದ (ತೃತೀಯಾ ವಿಭಕ್ತಿ ಪ್ರತ್ಯಯ)
4. ಕನ್ನಡ ವ್ಯಾಕರಣಗಳು ಸಂಸ್ಕೃತ ವ್ಯಾಕರಣಗಳ ಅನುಕರಣೆಯಾಗಿದ್ದುವಾದುದರಿಂದ ಅಲ್ಲಿಯ ಪಂಚಮಿಯ[39] ಅನುಕರಣೆ ಇಲ್ಲಿ ಅವಶ್ಯವಾಯಿತು.

---

36. ಕುಳ್ಳಿ (1976 : 140) ಸಂಬೋಧನೆಗೆ ಕಾರಕವಿಲ್ಲವೆಂದು ಹೇಳಿ ಅದನ್ನು ಕೇವಲ ವಿಭಕ್ತಿಯನ್ನಾಗಿ ಪರಿಗಣಿಸಿದ್ದಾರೆ; ಆದರೆ, ಯಾವ ಕಾರಕದ ವಿಭಕ್ತಿಯೆಂಬುದನ್ನು ತಿಳಿಸಿಲ್ಲ.
37. ನೋಡಿ : **ಕನ್ನಡ ಕೈಪಿಡಿ** 1955 : 335.
38. K. Kushalappa Gowda, 1972 : 370.
39. **ಅಷ್ಟಾಧ್ಯಾಯಿ** : 2.3.28.

ಕನ್ನಡ ವಿದ್ವಾಂಸರು ಕೊಟ್ಟ ಈ ಕಾರಣಗಳು ಗೌಡರ[40] ಅಭಿಪ್ರಾಯದ ಪ್ರಕಾರ ಅಸಮಂಜಸ:

> ಅವು ಪ್ರತ್ಯಯಗಳ ಕ್ರಿಯೆಗಳನ್ನು ಲಕ್ಷಿಸದೆ ಕೇವಲ ರೂಪವನ್ನಷ್ಟೇ ಗಮನಿಸಿ ಹೇಳಿದಂತವುಗಳಾಗಿವೆ........ನಾವು ವಿಭಕ್ತಿಯ ಕ್ರಿಯೆಯನ್ನು (function) ನಿರ್ಲಕ್ಷಿಸುವಂತಿಲ್ಲ.[41]

ಒಟ್ಟಿನಲ್ಲಿ ಗೌಡರು ಈ ವಿಭಕ್ತಿಯ ಕ್ರಿಯೆ ಅಪಾದಾನ ಕಾರಕಾರ್ಥವೆಂಬುದನ್ನು ಒಪ್ಪಿಕೊಂಡು ಅದರ ಅಭಿವ್ಯಕ್ತಿ ಪಂಚಮಿಯಿಂದ ಆಗದಿದ್ದರೂ ತೃತೀಯೆಯಿಂದ ಆಗುತ್ತದೆಂದು ಒಪ್ಪಿಕೊಂಡಂತಿದೆ. ಅಪಾದಾನ ಅಭಾಸ ಕಾರಕವೆಂದು ಈ ಮೊದಲೇ ಹೇಳಲಾಗಿದೆ. ಪಂಚಮೀ ವಿಭಕ್ತಿ (5th surface case)ಯ ಅಸ್ತಿತ್ವವನ್ನು ಗೌಡರೂ ಅಲ್ಲಗಳೆದಂತಾಯಿತು!

ಕೇಶಿರಾಜ[42] ಮಾತ್ರ ಪಂಚಮೀ ವಿಭಕ್ತಿಯ ಅಸ್ತಿತ್ವವನ್ನು ಒಪ್ಪಿಕೊಂಡಾಗ ಅಪಾದಾನ ಕಾರಕ ಮತ್ತು ಅದರ ವಿಶಿಷ್ಟ ಅಭಿವ್ಯಕ್ತಿಯನ್ನು ಒಪ್ಪಿಕೊಂಡು ಎಡವಿದ್ದಾನೆ[43]. ಒಟ್ಟಿನಲ್ಲಿ ಕನ್ನಡದಲ್ಲಿ ಪಂಚಮಿ ವಿಭಕ್ತಿ ಇಲ್ಲ ಎಂದೇ ಹೇಳಬೇಕಾಗುತ್ತದೆ.

3. ಷಷ್ಠಿ:

ಷಷ್ಠಿಗೆ ತನ್ನದೇ ಆದ ವಿಶಿಷ್ಟ ಕಾರಕವಿಲ್ಲದಿದ್ದರೂ ಅದು ಹಲವು ಕಾರಕಗಳನ್ನು ಅಭಿವ್ಯಕ್ತಪಡಿಸುತ್ತದೆಂಬುದನ್ನೂ ಗಮನಿಸಬೇಕಾಗಿದೆ. ಕೆಳಗಿನ ವಾಕ್ಯಗಳನ್ನು ಪರಿಶೀಲಿಸಿ;

27. ನಾನು ಈ ಮನೆಯನ್ನು ಕಟ್ಟಿದ್ದೇನೆ.

ಅಥವಾ

28. ನಾನು ಈ ಮನೆಯನ್ನು ಕಟ್ಟಿಸಿದ್ದೇನೆ.

---

40. K. K. Gowda, ಅದೇ.

41. ಅದೇ.

42. ಶ.ಮ. ದ ಸೂ. 103 ಮತ್ತು 126.

43. ಗೌಡರು ಕೊಟ್ಟ ಯಾದಿಯಲ್ಲಿ 3 ನೆಯ ಕಾರಣವನ್ನು ನೋಡಿ. ಕಾಲ್ಡವೆಲ್ಲರ (1961:283) ಮಾತು ಇಲ್ಲಿ ಗಮನಾರ್ಹ : This case appears to have been included in the list of cases by Dravidian grammarians out of deference to the grammatical principles of ... Sanskrit.

ಅಥವಾ

29\. ನಾನು ಈ ಮನೆಯನ್ನು ಕೊಂಡುಕೊಂಡಿದ್ದೇನೆ.
→ ಇದು ನನ್ನ ಮನೆ. ಇಲ್ಲಿ ಷಷ್ಠಿ ಕರ್ತೃಕಾರಕಾರ್ಥವನ್ನು ಸೂಚಿಸುತ್ತದೆ.

30\. ಅವನು ಮಗ್ಗದಿಂದ ಆ ಬಟ್ಟೆಯನ್ನು ನೆಯ್ದಿದ್ದಾನೆ.
→ ಅದು ಮಗ್ಗದ ಬಟ್ಟೆ. ಇಲ್ಲಿ ಷಷ್ಠಿ ಕರಣಾರ್ಥವನ್ನು ಅಭಿವ್ಯಕ್ತಗೊಳಿಸುತ್ತದೆ.

31\. ಹನುಮಂತ ದೇವರಿಗೆ ಇಲ್ಲಿ ಭಕ್ತರಿದ್ದಾರೆ.
→ ಇಲ್ಲಿ ಹನುಮಂತದೇವರ ಭಕ್ತರಿದ್ದಾರೆ.
ಇಲ್ಲಿ ಷಷ್ಠಿ ಸಂಪ್ರದಾನ ಕಾರಕಾರ್ಥವನ್ನು ವ್ಯಕ್ತಗೊಳಿಸುತ್ತದೆ.

32\. ಇಂಗ್ಲೀಷ ಭಾಷೆಯು ಭಾರತದಲ್ಲಿ ಆಡಲಾಗುತ್ತದೆ.
→ ಇಂಗ್ಲೀಷು ಭಾರತದ ಭಾಷೆ. ಇಲ್ಲಿ ಷಷ್ಠಿ ಅಧಿಕರಣಾರ್ಥವನ್ನು ತೋರಿಸುತ್ತದೆ.

ಷಷ್ಠಿಸೇರಿದ (ಸರ್ವ) ನಾಮಪದಗಳು ನಾಮಗುಣವಾಚಕ (Adjective)[44]ಗಳಾಗಿ ವರ್ತಿಸುವುದರಿಂದ ಷಷ್ಠಿರೂಪ, ವಿಭಕ್ತಿಯೂ ಹೌದು; ನಾಮಗುಣವಾಚಕವೂ[45] ಹೌದು. ಕಾರಣ, ಬಹಿಃಸ್ತರ ವ್ಯಾಕರಣ (Surface grammar)ದಲ್ಲಿ ಷಷ್ಠಿಗೆ ಇತರ ವಿಭಕ್ತಿಗಳೊಡನೆ ಸಹಪಂಙ್ತಿ ಕೊಡಲೇ ಬೇಕೆಂದಿಲ್ಲ, ಅರ್ಥಾತ್ ಅದಕ್ಕೆ ಸಾಧಿತ ಪ್ರತ್ಯಯಗಳೊಡನೆ ಸಹಪಂಙ್ತಿ ಕೊಡಬಹುದು.[46]

ಸಂಕ್ಷಿಪ್ತದಲ್ಲಿ ಹೇಳಬೇಕಾದರೆ, ಸಂಬೋಧನೆ ಮತ್ತು ಪಂಚಮಿಗಳಿಗೆ ವಿಭಕ್ತಿಯ ಸ್ಥಾನವಿಲ್ಲ. ಷಷ್ಠಿ ವಿಭಕ್ತಿ ಹೌದು; ಆದರೆ ಅದು ನಾಮಗುಣವಾಚಕವನ್ನು ಸಾಧಿಸುವ ಪ್ರತ್ಯಯವೂ ಆಗುವದರಿಂದ ವ್ಯಾಕರಣದಲ್ಲಿ ಅದಕ್ಕೆ ಸಾಧಿತಪ್ರತ್ಯಯಗಳ ಯಾದಿಯಲ್ಲಿ ಸ್ಥಾನ ಕೊಡಬಹುದು.

44\. ವಿಲ್ಯಂ ಮಾಡ್ತ, "ಕನ್ನಡದಲ್ಲಿ ನಾಮಗುಣವಾಚಕ" **ಕರ್ನಾಟಕ ಭಾರತಿ** (8 : 3 1976 : 16–26) ಧಾರವಾಡ : ಕರ್ನಾಟಕ ವಿಶ್ವವಿದ್ಯಾಲಯ.

45\. ವಿಲ್ಯಂ ಮಾಡ್ತ, **ಕನ್ನಡ ಭಾಷೆಯ ರೂಪರೇಷೆಗಳು,** (1975 : 64). ಧಾರವಾಡ : ಕರ್ನಾಟಕ ವಿಶ್ವವಿದ್ಯಾಲಯ,

46\. ಗೌಡರ ಅಭಿಪ್ರಾಯಕ್ಕೆ ಅವರ ಕೃತಿ (1973 : 394)ಯನ್ನು ನೋಡಿ.

ವಿಭಕ್ತಿ ಪ್ರತ್ಯಯಗಳು

ಕೇಶಿರಾಜನ ಪ್ರಕಾರ ವಿಭಕ್ತಿಪ್ರತ್ಯಯಗಳು ಏಳು.[47] ಕವಿರಾಜಮಾರ್ಗದಲ್ಲಿಯೂ "ವಿಭಕ್ತಿಗಳೇಟೆನಿಕ್ಕುಂ" ಎಂದು ಹೇಳಲಾಗಿದೆ. ಆದರೆ ವಿಭಕ್ತಿಗಳು ಆರೇ ಇರುವುದರಿಂದ ವಿಭಕ್ತಿ ಪ್ರತ್ಯಯಗಳೂ ಆರೇ. ಅವುಗಳಲ್ಲಿ ಕೆಲವುಗಳಿಗೆ ಪರಿಸರವನ್ನನುಸರಿಸಿ ಅನೇಕ ರೂಪಗಳಿರುವುದನ್ನು ಗಮನಿಸಬಹುದು.

ವಿಭಕ್ತಿ ಪ್ರತ್ಯಯಗಳು ಏಕವಚನದಲ್ಲಿ ನೇರವಾಗಿ, ಬಹುವಚನದಲ್ಲಿ ಬಹುವಚನ ಪ್ರತ್ಯಯಗಳ ಬಳಿಕ ನಾಮಪ್ರಕೃತಿಗಳನ್ನು ಸೇರುತ್ತವೆ:

ಮನೆ+ಅನ್ನು > ಮನೆಯನ್ನು

ಮನೆಗಳ+ಅನ್ನು > ಮನೆಗಳನ್ನು

ಪ್ರಥಮಾ ವಿಭಕ್ತಿ ಪ್ರತ್ಯಯ :

ಪ್ರಥಮಾ ವಿಭಕ್ತಿಗೆ ಪ್ರತ್ಯಯವಿಲ್ಲ; ಆದರೆ ಉಳಿದ ವಿಭಕ್ತಿಗಳಿಗೆ ಪ್ರತ್ಯಯಗಳಿರುವುದರಿಂದ ರಚನಾದೃಷ್ಟಿಗೆ ಅನುಗುಣವಾಗಿ ಪ್ರಥಮಾ ವಿಭಕ್ತಿಗೆ ಶೂನ್ಯಪ್ರತ್ಯಯ (zero sufix) — ø ಹಚ್ಚುವುದುಂಟು.

ಕನ್ನಡ ಪ್ರಕೃತಿಗಳಲ್ಲಿ[48] ವ್ಯಂಜನಾಂತ[49] ಮತ್ತು ಸ್ವರಾಂತ[50]ಗಳಿವೆ. ವ್ಯಂಜನಾಂತ ಪ್ರಕೃತಿಗಳನ್ನು ಬಳಸುವಾಗ ಅಂತ್ಯವ್ಯಂಜನವನ್ನು ಲೋಪ ಮಾಡುವ ಬದಲು ಅದಕ್ಕೆ ಉಕಾರ ಸೇರಿಸುವುದುಂಟು.[51] ಕೆಲವೊಮ್ಮೆ ಸಾದೃಶ್ಯ ಸೃಷ್ಟಿ (Analogical

---

47. 'ಸಂಧಿಸಿ ಮಮಿಂಕೆಯದದೊಳ್ಳೆಂದಿರ್ಪುವು ಸಪ್ತ ವಿಧ ವಿಭಕ್ತಿಗಳ್'
ಉದಾ: ಮರನಿರ್ದುದು ಮರನಂ ಕಡಿ ಮರದಿಂ ಮಾಡಾನೆಯುಂ ಮರಕ್ಕೆಱೆ ನೀರಂ"
ಮರದತ್ತಣಿನೆಲೆ ಬಿಟ್ಟುದು ಮರದದು ಪಣ್ ಮರದೊಳ್‌ತಳಿರ್ತಿರು ಮರನೇ
'ವಿಭಕ್ತಿ' ಮತ್ತು 'ಪ್ರತ್ಯಯ'ವೆಂಬ ಪಾರಿಭಾಷಿಕ ಪದಗಳ ಬಳಕೆಯ ಬಗೆಗೆ ಕೇಶಿರಾಜ ಬಹಳ ಅಸ್ಪಷ್ಟನಾಗಿದ್ದಾನೆಂದು ಕುಳ್ಳಿ (1976 : 146–7)ಯವರು ಅಭಿಪ್ರಾಯ ಪಡುತ್ತಾರೆ.
48. ವಿಲ್ಯಂ ಮಾಡ್ತ (1975) ನೋಡಿ: "ಕನ್ನಡ ಪ್ರಕೃತಿಗಳ ವೃಕ್ಷ ಚಿತ್ರ".
49. ಅಪ್ಪನ್, ಅಮ್ಮನ್, ಅಣ್ಣನ್, ಅಕ್ಕನ್, ತಮ್ಮನ್, ರಾಜನ್............
50. ತಂದೆ, ತಾಯಿ. ಅಜ್ಜಿ, ತಂಗಿ, ಗಿಡ, ಹಸು, ಕರು............
51. ಅಪ್ಪ(ನು) ಅಮ್ಮ(ನು) ಅಣ್ಣ(ನು) ಅಕ್ಕ(ನು) ತಮ್ಮ(ನು)............ ಹಳಗನ್ನಡವಲ್ಲಿ ವ್ಯಂಜನ ಪ್ರಕೃತಿಗಳನ್ನೇ ನೇರವಾಗಿ ಬಳಸುತ್ತಿದ್ದರು: ಮರಂ < ಮರಮ್/ಮರನ್ (ನೋಡಿ **ಕನ್ನಡ ಕೈಪಿಡಿ**, ಪು. 339, ಈ/ಮ/ಅ(ಅ)ನ್/ಗಳು ವಿಭಕ್ತಿ ಪ್ರತ್ಯಯಗಳಲ್ಲ; ಅವು ಪ್ರಕೃತಿಯ ಅವಿಭಾಜ್ಯ ಅಂಗಗಳು.

creation)ಯಿಂದಾಗಿ ಸ್ವರಾಂತ ಪ್ರಕೃತಿಗಳಿಗೂ ಉಕಾರಾಂತ ಸೇರಿಸುತ್ತಾರೆ.[52] ಈ ಉಕಾರದ ಹಿನ್ನೆಲೆ ಗೊತ್ತು ಮಾಡಿದ ಬಳಿಕ ಪ್ರಥಮಾ ವಿಭಕ್ತಿ ಪ್ರತ್ಯಯ ಶೂನ್ಯ ಸ್ವರೂಪದ್ದೆಂದೇ ಹೇಳಬೇಕಾಗುತ್ತದೆ.

ದ್ವಿತೀಯಾ ವಿಭಕ್ತಿ ಪ್ರತ್ಯಯ :

ಅನ್ನು[53] ಎಂಬುದು ದ್ವಿತೀಯಾ ವಿಭಕ್ತಿ ಪ್ರತ್ಯಯ. ಈ ಪ್ರತ್ಯಯ ಅಮಹತ್ ನಾಮಪ್ರಕೃತಿಗಳ[54] ಬಳಿಕ ಐಚ್ಛಿಕ.

33. ನಾನು ಹಣ್ಣು/ಹಣ್ಣನ್ನು ತಿಂದೆ(ನು)

34. *ರಾಮು ಸೀತೆ ಕರೆದ(ನು)

ತೃತೀಯಾ ವಿಭಕ್ತಿ ಪ್ರತ್ಯಯ :

ಸಮನಿಸಿ ತೋಱಿಸುಗುಮಿಮಿಂ
ದಮಿಂದೆಯೆಂಬಿವು ತೃತೀಯೆಯಾಳ್ ಮತ್ತಮೇಕಾ
ರಮದೊಂದೆ ಮೇಣ್ ತೃತೀಯೆಗೆ
ಸಮುಚಿತಮಾದೇಶಮಱಿದುಕೊಳ್ಗಿೀಕ್ರಮದಿಂ

ಎಂದು ಕೇಶಿರಾಜ[55] ಹೇಳುವಲ್ಲಿ /ಇಮ ~ ಇಂದೆ ~ ಎ[56]/ ಇವುಗಳನ್ನು ತೃತೀಯಾ ವಿಭಕ್ತಿಪ್ರತ್ಯಯಗಳನ್ನಾಗಿ ಸ್ವೀಕರಿಸಿದಂತಿದೆ. ಆದರೆ ಹೊಸಗನ್ನಡದಲ್ಲಿ—ಇಂದ ಎಂಬುದೊಂದೇ ಪ್ರಯೋಗದಲ್ಲಿದೆ.

ಚತುರ್ಥೀ ವಿಭಕ್ತಿ ಪ್ರತ್ಯಯ :

ಚತುರ್ಥೀ ವಿಭಕ್ತಿಗೆ ಕನ್ನಡದಲ್ಲಿ ಈಗ /ಅಕ್ಕೆ ~ ಗೆ ~ ಕ್ಕೆ ~ ಇಗೆ/ ಎಂಬ ರೂಪಗಳನ್ನು ಗುರುತಿಸಬಹುದು. ಅವುಗಳ ಪರಿಸರ ಇಂತಿದೆ :

---

52. ಸೀತೆ+ಉ > ಸೀತೆಯು; ದನ+ ಉ > ದನವು ಇತ್ಯಾದಿ. ಉಕಾರವನ್ನು ಪ್ರಥಮಾ ವಿಭಕ್ತಿಯನ್ನಾಗಿ ಕೆಲವು ವ್ಯಾಕರಣ ಪುಸ್ತಕಗಳು ಹೇಳುವ ರೂಢಿ ಇದೆ : ಪೂಜಾರ (1949 : 16), ಮುಳಬಾಗಲ (1924 : 40); ಬಿ. ಬಿ. ಪಾಟೀಲ (1976 : 54) ಇತ್ಯಾದಿ.

53. ಅನು <ಅನ್ ~ ಅಮ್ <ಅನ್. **ನೋಡಿ** : G. s. Gai (1946 ;46)

54. ಗಿಡ, ಮರ, ನಾಯಿ, ಬೆಕ್ಕು............**ನೋಡಿ : ಅ. ಟಿ.** 48.

55. **ಶ. ಮ. ದ.** (1964 : 123), ಸೂ. 117.

56. **ನೋಡಿ ; ಕನ್ನಡ ಕೈಪಿಡಿ.** ಪು. 341.

1) ಅಕ್ಕೆ : (ಅ) ಅಮಹತ್ ವ್ಯಂಜನಾಂತ ಮೂಲಾಂಕ

(ಆ) ಮತ್ತು ಅಮಹತ್ ತೃತೀಯಾ ಸರ್ವನಾಮ[57] ಪ್ರಕೃತಿಗಳ ಜೊತೆ ಬರುತ್ತದೆ.

ಉದಾ : (ಅ) ಒಂದ್ + ಅಕ್ಕೆ > ಒಂದಕ್ಕೆ
ಎರಡ್ + ಅಕ್ಕೆ > ಎರಡಕ್ಕೆ

(ಆ) ಅದ್ + ಅಕ್ಕೆ > ಅದಕ್ಕೆ
ಇದ್ + ಅಕ್ಕೆ > ಇದಕ್ಕೆ

2) ~ಗೆ : (ಅ) ಪೂರ್ವ ಸ್ವರಾಂತ ಮತ್ತು

(ಆ) ನಾನೆ, ನೀನೆ, ತಾನೆ ಇವುಗಳ ಏಕ ಮತ್ತು ಬಹುವಚನ ಪ್ರಕೃತಿಗಳ ಜೊತೆ ಬರುತ್ತದೆ.

ಉದಾ : (ಅ) ಇಲಿ + ಗೆ > ಇಲಿಗೆ
ಮನೆ + ಗೆ > ಮನೆಗೆ.

(ಆ) ನಾನ್[58] + ಗೆ > ನನಗೆ
ನೀನ್ + ಗೆ > ನಿನಗೆ
ತಾನ್ + ಗೆ > ತನಗೆ

3) ~ಕ್ಕೆ : ಮಧ್ಯಸ್ವರಾಂತ ಪ್ರಕೃತಿಗಳ ಜೊತೆ ಬರುತ್ತದೆ.

ಉದಾ : ಮರ + ಕ್ಕೆ > ಮರಕ್ಕೆ
ದನ + ಕ್ಕೆ > ದನಕ್ಕೆ

4) ~ಇಗೆ : ಇತರೆಡೆಗಳಲ್ಲಿ.

ಉದಾ : ಕಣ್[59] + ಇಗೆ > ಕಣ್ಣಿಗೆ
ಕಾಲ್ + ಇಗೆ > ಕಾಲಿಗೆ
ಅಜ್ಜನ್ + ಇಗೆ > ಅಜ್ಜನಿಗೆ
ಒಕ್ಕಲಿಗನ್ + ಇಗೆ > ಒಕ್ಕಲಿಗನಿಗೆ.

---

57. ಮಧ್ಯಮ ಪುರುಷಕ್ಕೆ ಸೇರಿದ ಅಮಹತ್ ಲಿಂಗಿ ಸರ್ವನಾಮಗಳು.

58.

ನಾನ್	>	ನನ	/- ಚತುರ್ಥಿ ವಿಭಕ್ತಿ ಪ್ರತ್ಯಯ.
ನಾವ್		ನಮ	
ನೀನ್		ನಿನ	
ನೀವ್		ನಿಮ	
ತಾನ್		ತನ	
ತಾವ್		ತಮ	

59. ಕಣ್ → ಕಣ್ಣ್/–ಸ್ವರಾಧಿ ಪ್ರತ್ಯಯ.

ಷಷ್ಠೀ ವಿಭಕ್ತಿ ಪ್ರತ್ಯಯ :

/—ಅ/ ಷಷ್ಠೀ ವಿಭಕ್ತಿ ಪ್ರತ್ಯಯವಾಗಿದೆ. ಇದೇ ರೂಪಕ್ಕೆ ನಾಮಗುಣ ವಾಚಕಗಳನ್ನೂ ಸಾಧಿಸುವ ಕ್ರಿಯೆ[60] ಇರುವುದರಿಂದ ಷಷ್ಠೀ ವಿಭಕ್ತಿ ಪ್ರತ್ಯಯವನ್ನು ಅನೇಕಾರ್ಥಾಕೃತಿಮಾ (Portmanteau morpheme) ಎಂದು ಪರಿಗಣಿಸ ಬೇಕಾಗುತ್ತದೆ.

ಸಪ್ತಮೀ ವಿಭಕ್ತಿ ಪ್ರತ್ಯಯ :

ಕೇಶಿರಾಜ /-ಒಳ್/ ಎಂಬುದನ್ನು (ಸಪ್ತಮೀ ವಿಭಕ್ತಿ ಪ್ರತ್ಯಯ)ವೆಂದು ಒಂದೆಡೆ[61] ಹೇಳಿದ್ದರೂ ಇನ್ನೊಂದೆಡೆ[62] /-ಅಲ್ಲಿ/ ಮತ್ತು /-ಒಳ್/ ಎಂಬಿವೆರಡೂ ಸಪ್ತಮೀ ವಿಭಕ್ತಿಪ್ರತ್ಯಯಗಳೆಂದು ನುಡಿದಿದ್ದಾನೆ.—ಹೊಸಗನ್ನಡದಲ್ಲಿ ಇವುಗಳಲ್ಲಿ /-ಅಲ್ಲಿ/ ಎಂಬುದು ಮಾತ್ರ ಬಳಕೆಯಲ್ಲಿದೆ.

ಕೆಳಗಿನ ಕೋಷ್ಟಕ ಇಂದಿನ ಪ್ರಮಾಣ ಕನ್ನಡ (Standard Kannada)ದ ವಿಭಕ್ತಿ ಪ್ರತ್ಯಯಗಳನ್ನು ತೋರಿಸುತ್ತದೆ.[63] :

ಕೋಷ್ಟಕ–2

ವಿಭಕ್ತಿ ಪ್ರತ್ಯಯಗಳು

ವಿಭಕ್ತಿ	ಪ್ರತ್ಯಯ
ಪ್ರಥಮ	—∅
ದ್ವಿತೀಯೆ	—ಅನ್ನು
ತೃತೀಯೆ	—ಇಂದ
ಚತುರ್ಥಿ	∞ —ಅಕ್ಕೆ, ಌ ಕ್ಕೆ, ∞ —ಗೆ, ಌ ಇಗೆ
ಷಷ್ಠಿ	—ಅ
ಸಪ್ತಮಿ	—ಅಲ್ಲಿ

60. ನೋಡಿ : ಅ. ಟಿ. 45.
61. ಶ.ಮು.ದ. ಸೂತ್ರ : 103.
62. ಅದೇ. 129.
63. ಕನ್ನಡದ ಪ್ರಾದೇಶಿಕ ಉಪಭಾಷೆಗಳಲ್ಲಿ ವಿಭಕ್ತಿಪ್ರತ್ಯಯಗಳು ಒಂದೇ ತೆರನಾಗಿಲ್ಲ. ನೋಡಿ: **ಕರ್ನಾಟಕ ಭಾರತಿ** (1976 : 9. 1–2) ಮತ್ತು U. P. Upadhyaya, *A Comparative Study of Kannada Dialects*, 1976, Mysore University of Mysore.

ಅಂತ್ಯದಲ್ಲಿ ಕಾರಕ ಮತ್ತು ವಿಭಕ್ತಿಗಳ ಬಗ್ಗೆ ಸಂಕ್ಷಿಪ್ತವಾಗಿ ಹೇಳುವುದಾದರೆ, ವಾಕ್ಯದ ಅಂತಃಸ್ತರದಲ್ಲಿರುವ ಕಾರಕಾರ್ಥಗಳು ಬಹಿಃಸ್ತರದಲ್ಲಿ ವಿಭಕ್ತಿಗಳ ಮೂಲಕ ಅಭಿವ್ಯಕ್ತ ಗೊಳ್ಳುತ್ತವೆ; ವಿವಿಧ ವಿಭಕ್ತಿ ಪ್ರತ್ಯಯಗಳು ಅವನ್ನು ಗುರುತಿಸುತ್ತವೆ. ಪ್ರಸ್ತುತದಲ್ಲಿ ಕನ್ನಡದಲ್ಲಿ ಎಂಟು ಕಾರಕಾರ್ಥಗಳನ್ನೂ ಅವುಗಳನ್ನು ಅಭಿವ್ಯಕ್ತಗೊಳಿಸುವ ಆರು ವಿಭಕ್ತಿ ಗಳನ್ನೂ ಗುರುತಿಸಿದ್ದೇವೆ. ಕಾರಕಗಳಿಗೂ ವಿಭಕ್ತಿಗಳಿಗೂ ಕಡ್ಡಾಯ ಮತ್ತು ಸಹಜ ಅನ್ಯೋನ್ಯ ಸಂಭಂಧವಿಲ್ಲ. ಅರ್ಥಾತ್ ಒಂದು ಕಾರಕಕ್ಕೆ ಒಂದೇ ವಿಭಕ್ತಿ ಇರಬೇಕಾಗಿಲ್ಲ ವೆಂಬುದನ್ನು ತೋರಿಸಿದ್ದೇವೆ.[64] ಪ್ರಭಾವಕಾರಕವನ್ನು ಕರ್ಮಕಾರಕದಿಂದಲೂ ದಿಗ್ವಾಚಿ ಯನ್ನು ಸಂಪ್ರದಾನದಿಂದಲೂ ಬೇರ್ಪಡಿಸಿ ಅವುಗಳಿಗೆ ಸ್ವಂತಸ್ಥಾನವನ್ನು ಕಲ್ಪಿಸಿಕೊಡ ಲಾಗಿದೆ. ಸಂಬೋಧನೆ, ಸಂಬಂಧ, ಉದ್ದೇಶ, ಹೇತು, ಅಪಾದಾನ ಸಂಯೋಗ ಮತ್ತು ಸಂವೇದ್ಯ ಕಾರಕಗಳು ಖೋಟಾ ಕಾರಕಗಳೆಂದೂ, ಸಂಬೋಧನೆ ಮತ್ತು ಪಂಚಮಿ ವಿಭಕ್ತಿಗಳು ಆಭಾಸ ವಿಭಕ್ತಿಗಳೆಂದೂ ಸ್ಪಷ್ಟಪಡಿಸಿ, ಷಷ್ಠಿ ಹಲವು ಕಾರಕಗಳನ್ನು ಅಭಿವ್ಯಕ್ತಗೊಳಿಸುವುದರಿಂದ ಅದಕ್ಕೆ ವಿಭಕ್ತಿಯ ಸ್ಥಾನವನ್ನು ಕೊಟ್ಟು ಅದು ಅನೇಕಾರ್ಥಾಕೃತಿಮಾ ಆದುದರಿಂದ ಬಹಿಃಸ್ತರ—ವ್ಯಾಕರಣದಲ್ಲಿ ಅದಕ್ಕೆ ಇತರ ವಿಭಕ್ತಿ ಗಳೊಡನೆ ಸಹಪಙ್ತಿ ಕೊಡಲೇ ಬೇಕೆಂದಿಲ್ಲವೆಂದೂ ಅದಕ್ಕೆ ಸಾಧಿತ ಪ್ರತ್ಯಯಗಳ ಜೊತೆ ಸ್ಥಾನಕೊಡಬಹುದೆಂದೂ ವಿವರಣೆ ನೀಡಲಾಗಿದೆ. ಕೊನೆಯದಾಗಿ, ಆರು ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ ಚತುರ್ಥೀ ವಿಭಕ್ತಿ ಪ್ರತ್ಯಯದ ಹಲವು ರೂಪಗಳ ನಿರ್ದಿಷ್ಟ ಪರಿಸರಗಳನ್ನು ಸ್ಪಷ್ಟಗೊಳಿಸಲಾಗಿದೆ.

ಆಧಾರ ಸಾಹಿತ್ಯ

ಕನ್ನಡ

1 **ಅಯ್ಯಂಗಾರ ವಿ. ಕೃಷ್ಣಸ್ವಾಮಿ**

1973 "ಕವಿರಾಜ ಮಾರ್ಗದಲ್ಲಿ ಕಾರಕ ವಿಚಾರ" **ಸಾಧನೆ** 2:2 ಬೆಂಗಳೂರು ಬೆಂಗಳೂರು ವಿಶ್ವವಿದ್ಯಾಲಯ.

2 **ಕುಲಕರ್ಣಿ ಪ್ರ. ಗೋ.**

1967 **ಕನ್ನಡ ಭಾಷೆಯ ಚರಿತ್ರೆ, ಬೆಳಗಾಂವ** : ಪ್ರ. ಗೋ. ಕುಲಕರ್ಣಿ, ಹಿಂದವಾಡಿ.

64. ನೋಡಿ ; ಕೋಷ್ಟಕ – 1.

3 **ಗೌಡ, ಕೆ. ಕುಶಾಲಪ್ಪ**

1976 "ಕೊಡಗು ಜಿಲ್ಲೆಯ ಕನ್ನಡ", **ಕರ್ನಾಟಕ ಭಾರತಿ** (9:1–2), ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.

4 **ನರಸಿಂಹಾಚಾರ್, ಡಿ. ಎಲ್. (ಸಂ)**

1964 **ಶಬ್ದಮಣಿ ದರ್ಪಣಂ** : ಮೈಸೂರು: ಶಾರದಾ ಮಂದಿರ.

5 **ನಾಗರಾಜಯ್ಯ, ಹಂಪ.**

1972 **ದ್ರಾವಿಡ ಭಾಷಾವಿಜ್ಞಾನ.** ಮೈಸೂರು : ಡಿ. ವಿ. ಕೆ. ಮೂರ್ತಿ ಕೃಷ್ಣಪುರಂ.

6 **ಪೂಜಾರ, ಮ. ಪ್ರ.**

1949 **ಕನ್ನಡ ನುಡಿಗನ್ನಡಿ–2**, ಧಾರವಾಡ: ಹುಬ್ಬಳ್ಳಿ ಸುಂಕದ ಕಟ್ಟಿ.

7 **ಮೂಡ್ತ, ವಿಲ್ಯಂ.**

1975 **ಕನ್ನಡ ಭಾಷೆಯ ರೂಪರೇಷೆಗಳು,** ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.

1976 (ಅ) "ಧಾರವಾಡ ಜಿಲ್ಲೆಯ ಕನ್ನಡ" **ಕರ್ನಾಟಕ ಭಾರತಿ** (9 : 1–2), ಧಾರವಾಡ : ಕರ್ನಾಟಕ ವಿಶ್ವವಿದ್ಯಾಲಯ.

(ಆ) "ಕನ್ನಡದಲ್ಲಿ ನಾಮಗುಣವಾಚಕ" **ಕರ್ನಾಟಕ ಭಾರತಿ** (8 : 3) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

8 **ಕನ್ನಡ ಕೈಪಿಡಿ,**

1955, ಮೈಸೂರು, ಮೈಸೂರು ವಿಶ್ವವಿದ್ಯಾಲಯ.

9 **ಸವದತ್ತಿಮಠ, ಸಂಗಮೇಶ.**

1976, **ದ್ರಾವಿಡ ಭಾಷಾ ವ್ಯಾಸಂಗ;** ಕಲಬುರ್ಗಿ: ಗೌತಮ ಬುಕ್‌ಹೌಸ.

10 **ಸೀತಾರಾಮಯ್ಯ ಎಂ. ವಿ.**

1975 "ಕವಿರಾಜ ಮಾರ್ಗದಲ್ಲಿ ಕಾರಕ ವಿಚಾರ" **ಸಾಧನೆ** (4.3), ಬೆಂಗಳೂರು, ಬೆಂಗಳೂರು ವಿಶ್ವವಿದ್ಯಾಲಯ.

ENGLISH

11 **Ananthanarayana H. S.**

1970 'The Ka:raka Theory and Case Grammar' *Indian Linguistics,* 31 : 1-2 (Jan–June), Poona Deccan College.

12 **Bach, Emmon and Harms, Robert T. (Eds.)**

1968 *Universals in Linguistic Theory* New York : Holt, Rinehart and Winston.

13 **Caldwell, Robert (Rev.)**

1961 *A Comparative Grammar of Dravidian Languages* (3rd ed.) Madras : University of Madras.

14 **Gai, G. S.**

1946 *Historical Grammar of Old Kannada* Based entirely on Kannada inscriptions of the 8th, 9th, 10th Centuries A.D. Poona : Deccan College.

15 **Gowda, K. Kushalappa**

1972 *A Grammar of Kannada* (Based on the inscriptions of Coorg, South Kanara, and North Canara Districts 1000 to 1400 A. D.) Annamalainagar, Annamalai University.

16 **Krishnaswamy N.**

1971 *An Introduction to Linguistics for Language Teachers* Bombay, Somaiya Publications Pvt. Ltd.

17 **Kulli J. S.**

1976 *Kēśirāia's Śabdamaṇidarpaṇa,* Dharwad : Karnatak University.

18 **Madtha, William**

1976 (a) 'Adjective in Kannada' in *Proceedings of the Third All India Conference of* Dravidian Linguistics, Hiremath R. C. and Kulli J. S. (Ed.) Dharwad: Karnatak University.

19 (b) 'Case System of Kannada' in *Dravidian Case System*, Agesthialingam S. and Gowda, K. Kushalappa (Eds) Annamalainagar : Annamalai University.

20 **Nayak, H. M.**

1967 *Kannada Literary and Colloquial*, Mysore : Rao and Raghavan.

21 **Spencer, Herold**

1950 *A Kanarese Grammar* (Revised by Perston W.), Mysore.

**

ಬಾದಾಮಿಯ 'ಕೋಷ್ಮರಾಯ' ಶಿಲಾವಿಗ್ರಹದ ಕುರಿತು

● ಅ. ಸುಂದರ

ಸುಮಾರು 6–8ನೇ ಶತಮಾನಗಳಲ್ಲಿ ಚಾಲುಕ್ಯ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಬಾದಾಮಿ (ಬಾದಾಮಿ ತಾ. ಬಿಜಾಪುರ ಜಿ.) ಊರೊಳಗಿನ "ಅಗಸ್ತ್ಯತೀರ್ಥ" ಎಂಬ ದೊಡ್ಡ ಕೆರೆಯ ಪೂರ್ವ ಭಾಗದ ಗುಡ್ಡದಂಚಿನಲ್ಲಿ ಒಂದು ನೈಸರ್ಗಿಕ ಗುಹೆಯಿದೆ. ಇದರೊಳಗಿನ ಹಿಂಬದಿಯ ಬಂಡೆಯ ಮೇಲೆ ದೊಡ್ಡ ಪ್ರಮಾಣದ ಒಂದು ಚೆಲುವಾದ ಮೂರ್ತಿಯನ್ನು ಕೆತ್ತಲಾಗಿದೆ. ಇದು ಸಿಂಹಾಸನದ ಮೇಲೆ ಪದ್ಮಾಸನದಲ್ಲಿ ಕುಳಿತ ಒಬ್ಬ ಮಹಾರಾಜನ ಉಬ್ಬು ಶಿಲ್ಪ. ಸ್ಥಳಿಕವಾಗಿ ಇದನ್ನು "ಕೋಷ್ಮರಾಯ"ನ ಮೂರ್ತಿಯೆಂದು ಈಗಲೂ ಹೇಳುವ ವಾಡಿಕೆಯಿದೆ. ಅಲ್ಲದೆ ಇವನ ಬಗ್ಗೆ ಒಂದು ಕಥೆಯೂ ಪ್ರಚಲಿತವಿದೆ. ಇದರ ಛಾಯಾ ಚಿತ್ರವನ್ನು ಕಸೆನ್ಸ್[1] ತಮ್ಮ ಪುಸ್ತಕದಲ್ಲಿ ಪ್ರಕಟಿಸಿದ್ದಾರೆ.

"ಕೋಷ್ಮರಾಯ"ನ ಮೂರ್ತಿ (ಚಿತ್ರ. 1, 1)

ಇದು ಒಂದು ಭವ್ಯ ಉಬ್ಬು ಶಿಲ್ಪ. ಸಿಂಹಾಸನವು 1.55 ಮಿ. ಅಗಲ ಮತ್ತು 0.50 ಮಿ. ಎತ್ತರ. ಪದ್ಮಾಸನದಲ್ಲಿ ಕುಳಿತ ಮಹಾರಾಜನು (1.25 × 1.15 ಮಿ.) ತನ್ನ ಘನತೆಗೆ ತಕ್ಕಂತೆ ಕಿವಿಯೋಲೆ, ರತ್ನಖಚಿತ ಎದೆಹಾರ, ಭುಜಕೀರ್ತಿ, ತೋಳ್ಬಂದಿ, ಕೈಗಳಿಗೆ ತೋಡ, ಉಂಗುರ, ವಕ್ಷಬಂಧ, **ಯಜ್ಞೋಪವೀತ,** ಕಾಲ್ಗಡಗ ಇವೇ ಮೊದಲಾದ ಆಭರಣಗಳಿಂದ ಅಲಂಕೃತನಾಗಿದ್ದಾನೆ. ಆದರೆ ತಲೆಯಮೇಲೆ ಉಚಿತವಾದ ಕಿರೀಟವಿಲ್ಲ. ತಲೆಯ ಹಿಂಬದಿಯಲ್ಲಿ ಪ್ರಭಾಮಂಡಲವಿದೆ. ಎಡಗೈಯು ಧ್ಯಾನ ಮುದ್ರೆಯಲ್ಲೂ ಜಪಸರವುಳ್ಳ ಬಲಗೈಯು ಅಭಯ ಮುದ್ರೆಯಲ್ಲೂ ಇವೆ. ಇವನ ಬೆನ್ನಿಗೆ ಆಸರೆಯಾಗಿ ಸಿಂಹಾಸನದ ಮಕರ ಪಟ್ಟಿ ಇದೆ. ಇವನ ಎರಡು ಬದಿಗಳಲ್ಲಿ ಮಕರ ಪಟ್ಟಿಕೆಯ ಹಿಂಬದಿಯಿಂದ ಕಿರೀಟಧಾರಿಗಳೂ ಸರ್ವಾಭರಣಭೂಷಿತರಾಗಿಯೂ ಇರುವ ಇಬ್ಬರು ರಾಜಪುರುಷರು ಚಾಮರಧಾರಿಗಳಾಗಿ ನಿಂತಿದ್ದಾರೆ. ಮಹಾರಾಜನ ಬದಿಗಳಲ್ಲಿ ಮಕರ ಪಟ್ಟಿಕೆಯ ಮೇಲೆ ಚಕ್ರ ಮತ್ತು ಶಂಖಗಳ ರೇಖಾ

1. ಕಸೆನ್ಸ್, ಎಚ್: 1926 : **ದಿ ಚಾಲುಕ್ಯನ್ ಆರ್ಕಿಟೆಕ್ಚರ್.**

ಚಿತ್ರ-1



ಬಾದಾಮಿ : ನೈಸರ್ಗಿಕ ಗವಿಯಲ್ಲಿಯ ಒಬ್ಬ ಮಹಾರಾಜನ (ಕೋಪ್ಪರಾಯ) ಉಬ್ಬು ಶಿಲ್ಪ

ಚಿತ್ರಗಳನ್ನು ಸೂಕ್ಷ್ಮವಾಗಿ ಬಿಡಿಸಲಾಗಿನೆ. ಪೀಠ ಮತ್ತು ಆಭರಣಗಳ ಶೈಲಿಯು ಈ ಶಿಲ್ಪದ ಹತ್ತಿರ ಇರುವ ವಿಷ್ಣು ಮತ್ತು ಶೈವ ಲಯಣಗಳ ಶಿಲ್ಪದ ಶೈಲಿಗೆ ಸಮೀಪ ವಾಗಿದ್ದು ಈ ಮೂರ್ತಿಯು 7ನೇ ಶತಮಾನದ ಆರಂಭ ಭಾಗದ್ದೆಂದು ತೋರುವುದು.

ಈ ಮೂರ್ತಿಯ ಬಲಬದಿಗೆ ಸಮೀಪದಲ್ಲಿ ಬಂಡೆಯ ಮೇಲೆ ಭದ್ರ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತ ಒಬ್ಬ ಯೋಗಿಯ ಸಣ್ಣ ಉಬ್ಬು ಶಿಲ್ಪವಿದೆ. (0.30 × 0.20 ಸೆ. ಮಿ.) ಬಲಬದಿಗೆ ಇವನ ದಂಡವಿದೆ. (ಚಿತ್ರ. 1, 2)

ದಂತಕಥೆಗಳು :

ಚೆಲುವಾದ ಮೂರ್ತಿಯ ಬಗ್ಗೆ ಎರಡು ವಿಧದ ಕಥೆಗಳಿವೆ :

1. ಕಾಶಿ ದೇಶದ ರಾಜನು ಕುಷ್ಠರೋಗದಿಂದ ನರಳುತ್ತಿದ್ದನಂತೆ. ಅವನು ಇಲ್ಲಿಯ ಅಗಸ್ತ್ಯತೀರ್ಥದ ಮಹಿಮೆಯನ್ನು ಕೇಳಿ ಇಲ್ಲಿಗೆ ಬಂದನಂತೆ. ಪ್ರತಿನಿತ್ಯವೂ ಈ ತೀರ್ಥದಲ್ಲಿ ಸ್ನಾನ ಮಾಡಿದ್ದರಿಂದ ರೋಗ ವಿಮುಕ್ತನಾದನಂತೆ. ಇವನನ್ನು ಇಲ್ಲಿಯ ಜನರು ಕುಷ್ಠರಾಯ (ಕುಷ್ಠರೋಗಿಷ್ಠನಾದ ರಾಜ) ನೆಂದು ಕರೆಯುತ್ತಿದ್ದ ರಂತೆ. ಕ್ರಮೇಣ ಜನರ ಬಾಯಿಯಲ್ಲಿ ಕುಷ್ಠರಾಯನೆಂಬ ಶಬ್ದವೂ ಕೋಷ್ಠ ರಾಯನೆಂದಾಗಿ, ಈ ತೀರ್ಥದ ಬಳಿ ಇರುವ ಮೂರ್ತಿಯೇ ಕೋಷ್ಠರಾಯನದೆಂದು ಒಂದು ಕಥೆ.

2. ಚಾಲುಕ್ಯ ರಾಜವಂಶಸ್ಥನೊಬ್ಬನಾದ ಗೋವಿಂದನೆಂಬವನು ಕುಷ್ಠ ಮಹಾರೋಗ ದಿಂದ ಬಳಲುತ್ತಿದ್ದು, ಇಲ್ಲಿದ್ದ ಯೋಗಿಗಳ ಅಪ್ಪಣೆಯಂತೆ ಅಗಸ್ತ್ಯತೀರ್ಥದಲ್ಲಿ ಪ್ರತಿದಿನವೂ ಸ್ನಾನ ಮಾಡಿ ಧ್ಯಾನಾನುಷ್ಠಾನ ಮಾಡುತ್ತಿದ್ದನು. ಕೆಲವು ಸಮಯದ ನಂತರ ನಿರೋಗಿಯಾದ ಮೇಲೂ ತನ್ನ ಸಾತ್ವಿಕ ಜೀವನವನ್ನು ಮುಂದುವರೆಸಿದನು. ಈ ಕೋಷ್ಠರಾಯನ ಮೂರ್ತಿಯೇ ಇದೆಂದು ಹೇಳುವುದು ರೂಢಿ.

ಮೇಲಿನ ಎರಡು ಕಥೆಗಳ ವಿಷಯ ಒಂದೇ ಇದ್ದು ವ್ಯಕ್ತಿಗಳು ಮತ್ತು ಅವರ ಪ್ರದೇಶಗಳು ಮಾತ್ರ ಬೇರೆ ಬೇರೆ. ಮೊದಲನೆಯ ಕಥೆಯಲ್ಲಿ ಕಾಲಮಾನದ ಸೂಚನೆ ಇಲ್ಲ ಮತ್ತು ವ್ಯಕ್ತಿ ಕಾಲ್ಪನಿಕವೆಂದೇ ತೋರುತ್ತದೆ. ಕಾಶಿ ಹಾಗು ಅದರ ಸುತ್ತ ಮುತ್ತ ಸರ್ವರೋಗಗಳನ್ನು ಪರಿಹಾರ ಮಾಡುವುದೆಂಬ ಪ್ರತೀತಿಯಿರುವ ತೀರ್ಥಕ್ಷೇತ್ರ ಗಳು ಪುರಾತನ ಕಾಲದಿಂದಲೂ ಪ್ರಸಿದ್ಧವಿರುವಾಗ ಬಹುದೂರದಲ್ಲಿರುವ ಈ ಅಗಸ್ತ್ಯ ತೀರ್ಥಕ್ಕೆನೇ ಕಾಶಿರಾಜನು ಬಂದನೆಂದರೆ ಅಸಹಜವಾಗಿಯೇ ತೋರುವುದು. ಅಲ್ಲದೆ ಇದಕ್ಕೆ ಐತಿಹಾಸಿಕಾಧಾರ ಸೂಚ್ಯವಾಗಿಯೂ ದೊರಕುವುದಿಲ್ಲ. ಕಾಶಿ-ಬಾದಾಮಿ ನಡುವೆ ಜನರ ಪರಸ್ಪರ ಸಂಪರ್ಕವಿದ್ದಿರಬಹುದು. ಆದರೆ ಬಾದಾಮಿಯಲ್ಲಿಯ

ಮೂರ್ತಿಯು ಪ್ರತಿನಿಧಿಸುವ ವ್ಯಕ್ತಿ ಕೇವಲ ಒಬ್ಬ ಗಣ್ಯವ್ಯಕ್ತಿಯಾಗಿರದೇ ರಾಜನೋ ಅಥವಾ ಅರಸುಮನೆತನದವನೊ ಆಗಿದ್ದಿರಬೇಕು. ಚಾಲುಕ್ಯರ ರಾಜಧಾನಿಯಲ್ಲಿ ಬೇರೆ ದೇಶದ ರಾಜನ ಪ್ರತಿಮೆಯನ್ನು ಕೆತ್ತಿಸಿದ್ದಾಗಲಿ ಅಥವಾ ಅಂಥ ಚಟುವಟಿಕೆಗೆ ಕಾರಣ ವಾಗಿರಬಹುದಾದ ಸಂದರ್ಭವಾಗಲಿ ಇತಿಹಾಸಕ್ಕೆ ತಿಳಿದಿಲ್ಲ. ಆದ್ದರಿಂದ ಈ ಕಥೆಯು ಕೇವಲ ಅಗಸ್ತ್ಯತೀರ್ಥದ ಮಹಿಮೆಯನ್ನು ವಿಶೇಷವಾಗಿ ಮನಮುಟ್ಟುವ ರೀತಿಯಲ್ಲಿ ಜನತೆಗೆ ತಿಳಿಯಹೇಳುವುದಕ್ಕೋಸ್ಕರ ಉತ್ಪ್ರೇಕ್ಷೆಯಿಂದ ಕೂಡಿದ ಕಾಲ್ಪನಿಕ ಕಥೆಯೆಂದೇ ಹೇಳಬೇಕು.

ಎರಡನೇ ಕಥೆ ಸ್ವಲ್ಪ ಮಟ್ಟಿಗೆ ಸಹಜವಾಗಿರಲು ಸಾಧ್ಯ. ಅಲ್ಲದೆ, ಚಾಲುಕ್ಯರ ಕಾಲಕ್ಕೆ ಸಂಬಂಧ ಪಟ್ಟಿದೆ. ಐಹೊಳೆಯ ರವಿಕೀರ್ತಿಯ ಶಾಸನದ[2] ಪ್ರಕಾರ ಇಮ್ಮಡಿ ಪುಲಕೇಶಿ ಭೀಮಾ ನದಿ ಪ್ರದೇಶದಲ್ಲಿ ಇವನ ಪ್ರಭುತ್ವವನ್ನು ಎದುರಿಸಿದ ಗೋವಿಂದ ಮತ್ತು ಅಪ್ಪಾಯಿಕ ಎಂಬವರನ್ನು ಸೋಲಿಸಿದನು. ಗೋವಿಂದ ಶರಣಾಗತನಾದನು. ಈ ಗೋವಿಂದ ಮತ್ತು ಅಪ್ಪಾಯಕರು ರಾಷ್ಟ್ರಕೂಟ ಕಳಚೂರಿ ರಾಜ್ಯಗಳಲ್ಲಿ ಹಿರಿಯ ಸ್ಥಾನದಲ್ಲಿದ್ದಿರಬೇಕೆಂಬ ಅಭಿಪ್ರಾಯವನ್ನು ಇತಿಹಾಸ ತಜ್ಞರು ವ್ಯಕ್ತಪಡಿಸಿದ್ದಾರೆ.[3] ಚಾಲುಕ್ಯ ಚಕ್ರವರ್ತಿ ಇಮ್ಮಡಿ ಪುಲಕೇಶಿಯನ್ನು ಎದುರಿಸಿ ಸೋತು ಶರಣಾಗತರಾದ ಗೋವಿಂದನ ಮೂರ್ತಿಯನ್ನು ಈ ಚಕ್ರವರ್ತಿಯ ಅಥವ ಇವನ ನಂತರ ಸಿಂಹಾಸನ ವೇರಿದ ಇವನ ಮಗ ಒಂದನೆ ವಿಕ್ರಮಾದಿತ್ಯನ ಕಾಲದಲ್ಲಿ ರಾಜಧಾನಿಯಲ್ಲಿ ಕೆತ್ತಿಸ ಲಾಯಿತೆಂಬುದು ಬಹಳಷ್ಟು ಅಸಹಜವಾಗಿ ಕಾಣುತ್ತದೆ. ಆದ್ದರಿಂದ ಈ ಮೂರ್ತಿ ಕಥೆಯಲ್ಲಿ ಬರುವ ಗೋವಿಂದನನ್ನು ಪ್ರತಿನಿಧಿಸುವುದಿಲ್ಲವೆಂದೇ ಹೇಳಬೇಕಾಗುತ್ತದೆ. ಆದರೆ ಈ ಕಥೆಯಲ್ಲಿ ಒಂದೆರಡು ಅಂಶಗಳು ಐತಿಹಾಸಿಕ ಸತ್ಯವೆಂದು ತೋರುವುದು. ಈ ಮೂರ್ತಿ ಚಾಲುಕ್ಯರ ಕಾಲದ್ದು ಮತ್ತು ಒಬ್ಬ ಚಾಲುಕ್ಯ ರಾಜನನ್ನು ಪ್ರತಿನಿಧಿಸುವುದು. ಹಾಗಾದರೆ ಯಾವ ಚಾಲುಕ್ಯರಾಜನಾಗಿದ್ದಿರಬಹುದು ? ಈ ದಿಶೆಯಲ್ಲಿ ಈಗ ತಿಳಿ ದಿರುವ ಮಟ್ಟಿಗೆ ಬಾದಾಮಿ ಚಾಲುಕ್ಯರ ಶಾಸನಗಳನ್ನು ಪರಿಶೀಲಿಸಿದಾಗ ಬಾದಾಮಿಯ ವಿಷ್ಣುಲಯಣದಲ್ಲಿರುವ ಮಂಗಳೇಶನ ಶಾಸನವು[4] ಗಮನಾರ್ಹ.

ಈ ಶಾಸನದ ಪ್ರಕಾರ "ಪರಮ ಭಾಗವತ" ಮಂಗಳೇಶನು ವಿಷ್ಣುಲಯಣವನ್ನು ಕೊರೆಯಿಸಿ 500ನೇ ಶಕವರ್ಷ (ಕ್ರಿ. ಶ. 578)ದಲ್ಲಿ ವಿಷ್ಣು ಪ್ರತಿಮೆಯನ್ನು ಪ್ರತಿ ಷ್ಠಾಪಿಸಿದನು. ಅದೇ ಸಂದರ್ಭದಲ್ಲಿ ಲಂಜಿಗೇಸರ (ಈಗಿನ ನಂದಿಕೇಶ್ವರ) ಎಂಬ

---

2. ಪಂಚಮುಖಿ ಆರ್. ಎಸ್.; 1967 : **ಕರ್ನಾಟಕದ ಇತಿಹಾಸ, ಪುಟಗಳು, 178-80.**

3. ಅದೇ; ಪು. 178.

4. **ಕರ್ನಾಟಕ ಇನ್‌ಸ್ಕ್ರಿಪ್ಶನ್ಸ್: ಸಂಪುಟ v, ಪುಟಗಳು 3-5.**



೧



೨

ಬಾದಾಮಿ : ನೈಸರ್ಗಿಕ ಗವಿಯಲ್ಲಿಯ ಒಬ್ಬ ಯೋಗಿ (೧) ಯ ಉಬ್ಬು ಶಿಲ್ಪ ಮತ್ತು ಬದಿಯಲ್ಲಿ ಮಹಾರಾಜ ("ಕೋಪ್ಪರಾಯ")ನ ಉಬ್ಬು ಶಿಲ್ಪ (೨)

ಗ್ರಾಮವನ್ನು ಈ ದೇವಾಲಯಕ್ಕೆ ದಾನ ಮಾಡಿದನು. ಆದರೆ ಈ ಶಾಸನದಲ್ಲಿ ಕುತೂಹಲ ಕಾರಿಯಾದ ಅಂಶವೆಂದರೆ, ಅದೇ ಸಂದರ್ಭದಲ್ಲಿ "ನಾರಾಯಣ ಬಲಿ" ಎಂಬ ಧಾರ್ಮಿಕ ವಿಧಿಯನ್ನು ನಡೆಸಲು ಮತ್ತು 16 ಜನ ಬ್ರಾಹ್ಮಣರಿಗೂ ಪರಿವ್ರಾಜಕರಿಗೂ ಛತ್ರದಲ್ಲಿ ಭೋಜನ ನೀಡಲು ವ್ಯವಸ್ಥೆಯನ್ನು ಮಾಡಿಸಿದ್ದು. ದೇವಾಲಯದ ನಿರ್ಮಾಣದ ಕಾರ್ಯದ ಪುಣ್ಯ "ದೇವ ದ್ವಿಜ ಗುರು"ಗಳನ್ನು ಪೂಜ್ಯತೆಯಿಂದ ಕಾಣುತ್ತಿದ್ದ ತನ್ನ ಅಣ್ಣ ಕೀರ್ತಿ ವರ್ಮನಿಗೆ ಸಲ್ಲಲಿ ಎಂದು ಮಂಗಳೇಶನು ಹೇಳಿಕೊಂಡಿದ್ದಾನೆ. ಅಷ್ಟೇ ಅಲ್ಲ, ತನ್ನ ಅಣ್ಣನ ಸೇವೆ ಮಾಡುವ ಪುಣ್ಯ (ಅಸ್ಮದ್ಭ್ರಾತೃ ಶುಶ್ರೂಷಣೇ ಯತ್ಫಲಂ ತನ್ಮಹ್ಯಂ ಸ್ಯಾತ್) ತನಗಿರಲೆಂದು ತನ್ನ ಭ್ರಾತೃಭಕ್ತಿಯನ್ನು ವ್ಯಕ್ತಪಡಿಸಿದ್ದಾನೆ. ಮಹಾಕೂಟದ ಮಂಗಳೇಶನ ಸ್ತಂಭಶಾಸನ[6]ದಿಂದ ಕಲತ್ಯುರಿ ಯುದ್ಧದಲ್ಲಿ ಮಂಗಳೇಶನ ತಂದೆ ಮತ್ತು ಅಣ್ಣ ತಂದ ದ್ರವ್ಯ ಸಂಪತ್ತನ್ನು ಅವರು "ಮಕುಟೇಶ್ವರ ನಾಥ"ನಿಗೆ ಅಣ್ಣನ ಮರಣಾಂತರ ಅವನ ಮಹಾರಾಣಿ ದುರ್ಲಭ ದೇವಿಯ ಇಚ್ಛೆಯಂತೆ, ತನ್ನ 5 ಆಳ್ವಿಕೆ ವರ್ಷದಲ್ಲಿ (ಕ್ರಿ. ಶ. 602) ಅರ್ಪಿಸಿ ಆ ಸ್ತಂಭವನ್ನು ನೆಡಿಸಿದನೆಂದು ತಿಳಿಯುತ್ತದೆ.

ಗೃಹ್ಯಸೂತ್ರದಲ್ಲಿ ನಾರಾಯಣ ಬಲಿ ಕರ್ಮವನ್ನು ಮಾಡುವುದಕ್ಕೆ ಸಾಂದರ್ಭಿಕ ನಿಯಮಗಳನ್ನು ಹೇಳಲಾಗಿದೆ. ಯಾರು ಆಕಸ್ಮಿಕವಾಗಿ ಮರಣ ಹೊಂದುವರೊ ಅಥವಾ ಆತ್ಮಹತ್ಯೆ ಮಾಡಿಕೊಳ್ಳುವರೋ ಅಥವಾ ಯಾರಿಗೆ ದಹನ ಸಂಸ್ಕಾರವು ನಿಷಿದ್ಧವೊ ಅಥವಾ ಯಾರು "ಪಂಚ ಮಹಾಪಾತಕ"ಗಳನ್ನು ಮಾಡುತ್ತಾರೊ, ಅಂತಹವರಿಗೆ ಈ ಕರ್ಮವನ್ನು ಮಾಡಬೇಕೆಂಬ ನಿಯಮವಿದೆ.

ಮಂಗಳೇಶನು ಪಿತೃದೇವತೆಯಾದ ಜನಾರ್ದನ ಸ್ವರೂಪಿಯಾದ ವಿಷ್ಣು ದೇವಾಲಯವನ್ನು ನಿರ್ಮಿಸಿದ್ದು ಹಾಗೂ "ನಾರಾಯಣ ಬಲಿ" ಕರ್ಮವನ್ನು ಮಾಡಿ ಸುವುದಕ್ಕೆ ಏರ್ಪಾಡು ಮಾಡಿದುದು ಕೀರ್ತಿವರ್ಮನ ಅಸ್ವಾಭಾವಿಕ ಮರಣವನ್ನು ಸೂಚಿಸುತ್ತದೆಯೆಂದು ಅಭಿಪ್ರಾಯ ಪಡಲಾಗಿದೆ. ಆದರೆ ಮಂಗಳೇಶನ ಮಹಾಕೂಟ ಧರ್ಮಸ್ತಂಭ ಶಾಸನವು ಅವನ ಐದನೇ ಆಳ್ವಿಕೆಯ ವರ್ಷದಲ್ಲಿ ನೆಡಿಸಿದ್ದರಿಂದ ಕೀರ್ತಿವರ್ಮನು ಕ್ರಿಸ್ತ ಶಕ 596–97ರ ತನಕ ಬದುಕಿದ್ದಿರಬೇಕೆಂಬುದು ಸುಸ್ಪಷ್ಟ. ಹಾಗಿದ್ದಲ್ಲಿ ತನ್ನ ಅಣ್ಣನಲ್ಲಿ ಪರಮ ಭಕ್ತಿಯುಳ್ಳ ಮಂಗಳೇಶನು ಅವನ ಜೀವಿತ ಕಾಲ ದಲ್ಲಿಯೇ ಅಂದರೆ ಕ್ರಿಸ್ತಶಕ 578 ರಲ್ಲಿ "ನಾರಾಯಣ ಬಲಿ" ಕರ್ಮವನ್ನು ಮಾಡಿಸಲು ಕಾರಣವೇನಿದ್ದಿರಬಹುದು? ಈ ಸಂಧಿಗ್ಧ ಪ್ರಶ್ನೆಗೆ ಇತಿಹಾಸ ತಜ್ಞರು ಸ್ಪಷ್ಟವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ. ಡಾ. ಗೋಪಾಲರವರು[7] 'ಕೀರ್ತಿವರ್ಮನು ಪಂಚ

---

5. ಶ್ರೀಕಂಠಶಾಸ್ತ್ರಿ. ಎಸ್., 1940 : ಸೋರ್ಸಸ್ ಆಫ್ ಕರ್ನಾಟಕ ಹಿಸ್ಟ್ರಿ, ಸಂಪುಟ 1, ಪುಟ ಗಳು 36–37.
6. ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್: ಸಂ. v, ಪುಟಗಳು xiii–xiv.

ಮಹಾ ಪಾತಕಗಳಲ್ಲಿ ಯಾವುದಾದರೊಂದನ್ನು ಮಾಡಿದ್ದು, ಅದಕ್ಕೋಸ್ಕರ ನಾರಾಯಣ ಬಲಿ ಕರ್ಮವನ್ನು ಮಾಡುವ ಸಂದರ್ಭವು ಒದಗಿರಬಹುದೇ ಎಂದು ಪ್ರಶ್ನೆ ಹಾಕಿದ್ದಾರೆ. ಆದರೆ ಕೀರ್ತಿವರ್ಮ ಅಂಥ ಮಹಾಪಾತಕಗಳನ್ನು ಮಾಡಿದ್ದಿರಬಹುದಾದ ಗುರುತು ನಮಗೆ ದೊರೆತ ಆಧಾರಗಳಲ್ಲಿ ಎಲ್ಲೂ ಸೂಚಿತವಾಗಿಲ್ಲ. ಬಾದಾಮಿಯ ವೈಷ್ಣವಲಯಣ ದಲ್ಲಿರುವ ಮಂಗಳೇಶನ ಶಾಸನದಲ್ಲಿ ಅವನು ತನ್ನಣ್ಣನನ್ನು "ದೇವ ದ್ವಿಜಗುರು ಪೂಜಿತಾಯ" ಎಂದು ಹೊಗಳಿದ್ದಾನೆ. ಆದ್ದರಿಂದ ಕೀರ್ತಿವರ್ಮನು ಸನಾತನ ಧರ್ಮವನ್ನು ಶ್ರದ್ಧೆಯಿಂದ ನಡೆಸಿಕೊಂಡು ಬಂದಂಥ ಒಬ್ಬ ಉತ್ತಮ ವ್ಯಕ್ತಿ ಎಂದೇ ಕಾಣುವುದು. ಆದರೂ ಕೂಡ ಆಕಸ್ಮಿಕವಾಗಿ ಅಥವಾ ಯಾವ ಎಣಿಕೆಯಿಲ್ಲದೆ ಕೈತಪ್ಪಿ ಸಂದರ್ಭವಶಾತ್ ಪಂಚ ಮಹಾಪಾತಕವೆಂದು ಕರೆಯಬಹುದಾದ ಪಾಪ ಮಾಡಿದ್ದಲ್ಲಿ ಸುಸಂಸ್ಕೃತನಾದ ಇವನು ಸ್ವಪ್ರೇರಣೆಯಿಂದಲೇ ಪಶ್ಚಾತ್ತಾಪಪೂರ್ವಕವಾಗಿ ನಾರಾಯಣ ಬಲಿ ಕರ್ಮವನ್ನು ಪಾಪ ಪರಿಹಾರಕ್ಕೋಸ್ಕರ ಮಾಡಿಸುತ್ತಿದ್ದನು. ಅವನ ತಮ್ಮನು ಅಣ್ಣನ ಹಿತದೃಷ್ಟಿಯಿಂದ ಅದನ್ನು ಮಾಡಿಸುವಷ್ಟು ಕೀರ್ತಿವರ್ಮನು ಅಲಕ್ಷ್ಯ ಮಾಡಿದ್ದನೆಂಬುದು ನಂಬಲು ಕಷ್ಟ ಸಾಧ್ಯ.

"ನಾಗ ಬಲಿ" ಮತ್ತು "ನಾರಾಯಣ ಬಲಿ" ಕರ್ಮಗಳನ್ನು ಸಾಮಾನ್ಯವಾಗಿ ಮದುವೆಯಾಗಿ ಕೆಲವು ವರ್ಷಗಳವರೆಗೂ ಮಕ್ಕಳಾಗದಂತಹ ಗಂಡ–ಹೆಂಡಿರು ಮಾಡಿಸು ವುದು ರೂಢಿ. ಅವರ ಪರವಾಗಿ ಅವರ ಹತ್ತಿರದ ಬಂಧುಗಳೂ ಈ ಕರ್ಮ ಗಳನ್ನು ಮಾಡಿಸುವ ಹಕ್ಕು ಇದೆ. ನಾರಾಯಣ ಬಲಿಯನ್ನು ಮಕ್ಕಳಾಗುವುದಕ್ಕೆ ಅಡ್ಡಿ ಯಾಗುವಂಥಹ "ಪಿತೃಕ್ಷೋಭೆ"ಯನ್ನು ಪರಿಹಾರ ಮಾಡುವುದಕ್ಕೆ ಮಾಡಿಸುತ್ತಾರೆ. ಈ ಹಿನ್ನೆಲೆಯಲ್ಲಿ ಮೇಲಿನ ಸಮಸ್ಯೆಯನ್ನು ಇಲ್ಲಿ ವಿವೇಚಿಸಲಾಗಿದೆ. ಕೀರ್ತಿವರ್ಮನ ಮರಣ ಕಾಲದಲ್ಲಿ ಅವನ ಮಗ ಇಮ್ಮಡಿ ಪುಲಕೇಶಿ ಇನ್ನೂ ಅಪ್ರಾಪ್ತವಯಸ್ಕನೆಂಬುದು ಐತಿಹಾಸಿಕ ಸತ್ಯ. ತಂದೆಯು ಸುಮಾರು ಕ್ರಿಸ್ತಶಕ 596 ರಲ್ಲಿ ಮರಣ ಹೊಂದಿದಾಗ ಇವನಿನ್ನೂ ಪ್ರಾಪ್ತವಯಸ್ಕನಾಗಿರಲಿಲ್ಲ. ಆದ್ದರಿಂದಲೇ ಮಂಗಳೇಶನು ರಾಜ್ಯಸೂತ್ರ ಗಳನ್ನು ಅವನ ಪರವಾಗಿ ತಾನು ವಹಿಸಿಕೊಂಡನು. ಇಮ್ಮಡಿ ಪುಲಕೇಶಿಯು ಪ್ರಾಪ್ತ ವಯಸ್ಕನಾದ ಮೇಲೆಯೂ ತನ್ನ ಚಿಕ್ಕಪ್ಪನು ರಾಜ್ಯಭಾರ ವಹಿಸಿಕೊಂಡಿದುದರಿಂದ ಕೊನೆಗೆ ಅವನೊಡನೆ ಯುದ್ಧ ಮಾಡಿಯೇ ಸುಮಾರು ಕ್ರಿಸ್ತಶಕ 610 ರಲ್ಲಿ ರಾಜ್ಯವನ್ನು ಪಡೆದುಕೊಂಡನು.

ಇವೆಲ್ಲವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಪುಲಿಕೇಶಿಯು ಕ್ರಿ. ಶ. 585ಕ್ಕಿಂತ ಮುಂಚೆ ಹುಟ್ಟಿರಲು ಶಕ್ಯವಿಲ್ಲ. ಮಂಗಳೇಶನ ವೈಷ್ಣವಲಯಣದ ಶಾಸನವು ಕೀರ್ತಿ ವರ್ಮನ 12ನೇ ಆಳ್ವಿಕೆಯ ವರ್ಷದಲ್ಲಿ ಮಾಡಿಸಿದ್ದು. ಈ ಶಾಸನದ ಕಾಲ ಮೇಲೆ ಹೇಳಿ ದಂತೆ ಕ್ರಿ. ಶ. 578. ಅಂದರೆ ಕೀರ್ತಿವರ್ಮನು ಕ್ರಿ. ಶ. 566ರಲ್ಲಿ ಪಟ್ಟಕ್ಕೆ ಬಂದಿರ

ಬೇಕು. ಪಟ್ಟಕ್ಕೆ ಬಂದ ಸಮಯದಲ್ಲಿ ಇವನ ವಯಸ್ಸು ಕನಿಷ್ಟ 25 ಇದ್ದಿರಬೇಕೆಂದು ನಂಬಿದಲ್ಲಿ ತಪ್ಪಾಗಲಿಕ್ಕಿಲ್ಲ. ಅಂದರೆ 2ನೇ ಪುಲಿಕೇಶಿಯು ಇವನ ತಂದೆ ಸುಮಾರು 40-50 ವರ್ಷದವನಾಗಿದ್ದಾಗ ಹುಟ್ಟಿರಬೇಕು. ಈ ಎಣಿಕೆಯಲ್ಲಿ ಸುಮಾರು 5 ವರ್ಷಗಳಷ್ಟು ಹೆಚ್ಚು ಕಡಿಮೆ ಇದ್ದಿರಬಹುದು. ಆದರೂ ಕೀರ್ತಿವರ್ಮನು ಕ್ರಿ. ಶ. 578ರ ನಂತರವೇ ತಂದೆ ಆದದ್ದು. ಆಗಿನ ಕಾಲದಲ್ಲಿ (ಇತ್ತೀಚಿನ ವರೆಗೂ) ಸೂಕ್ತ ಕಾಲದಲ್ಲಿ ಮಕ್ಕಳಾಗದಿದ್ದಲ್ಲಿ ಅಂಥ ಗಂಡ–ಹೆಂಡಿರಿಗೆ ನಿಜವಾಗಿಯೂ ಕಾತುರತೆ, ವ್ಯಥೆಯಾಗುತ್ತಿದ್ದುದು ಸಹಜ. ಹೇಗಾದರೂ ಮಕ್ಕಳನ್ನು ಪಡೆಯುವ ಬಲವತ್ತರದ ಆಸೆಯಿಂದ ಎಂಥ ಧಾರ್ಮಿಕ ನಿಯಮಗಳನ್ನೂ ವ್ರತಗಳನ್ನೂ ಆಚರಿಸುವುದಕ್ಕೆ ಸಿದ್ಧರಾಗುತ್ತಾರೆ. ಮೇಲೆ ವಿಷದಪಡಿಸಿದ ಹಾಗೆ ಕೀರ್ತಿವರ್ಮನಿಗೆ ಇಂಥ ಸ್ಥಿತಿ ಒದಗಿರಬೇಕು. ಅದ್ದರಿಂದಲೊ ಏನೊ ಮಂಗಳೇಶನು ಹೃತ್ಪೂರ್ವಕವಾಗಿ ತಾನು ವಿಷ್ಣುಲಯಣವನ್ನು ನಿರ್ಮಿಸಿದ ಪುಣ್ಯ ತನ್ನಣ್ಣನಿಗೆ ಹೋಗಲಿ ಎಂದು ಬೇಡಿಕೊಳ್ಳುತ್ತಾನೆ ಮತ್ತು ನಾರಾಯಣ ಬಲಿಕರ್ಮವನ್ನೂ ಆಚರಿಸಲು ವ್ಯವಸ್ಥೆ ಮಾಡಿಸುತ್ತಾನೆ. ಕೀರ್ತಿವರ್ಮನು ಕೂಡ ಕಠಿಣ ವ್ರತ ನಿಯಮಗಳನ್ನು ಆಚರಿಸುತ್ತಿದ್ದಿರಬೇಕು: ಪೂಜೆಪುನಸ್ಕಾರಗಳನ್ನು ದಾನಧರ್ಮಗಳನ್ನು ಮಾಡುತ್ತಿದ್ದಿರಬೇಕು. ಹಾಗೆಂತಲೇ "ದೇವ ದ್ವಿಜ ಪೂಜಿತನೂ" ಆಗಿದ್ದನು.

ಬಾದಾಮಿಯಿಂದ ಗುಡ್ಡದ ಮೇಲಿನ ಹಾದಿಯಲ್ಲಿ ಹೋದರೆ ಮಹಾಕೂಟಕ್ಕೆ ಸುಮಾರು ೫ ಕಿ.ಮಿ. ದೂರ ಆಗುವುದು. ಮಹಾಕೂಟವು ಚಾಲುಕ್ಯರಿಗಿಂತಲೂ ಪೂರ್ವದಲ್ಲಿಯೇ ಒಂದು ಪ್ರಬಲ ಶೈವ ಕೇಂದ್ರವಾಗಿತ್ತು. ಇಲ್ಲಿಯ ಸ್ಥಳಪುರಾಣವು ಮಹರ್ಷಿಗಳಾದ ಅಗಸ್ತ್ಯ, ವ್ಯಾಘ್ರಪಾದ ಮುಂತಾದವರು ಇಲ್ಲಿ ತಪಸ್ಸು ಮಾಡುತ್ತಿದ್ದರೆಂದು ವರ್ಣಿಸುತ್ತದೆ. ತೆಳುವಾದ ಹಸಿರು ಗಿಡಮರಳಿಂದ ಆವೃತವಾದ ಸಸುಗೆಂಪು ಮರಳುಕಲ್ಲಿನ ಗುಡ್ಡದ ಕಣಿವೆಯಲ್ಲಿ ಸದಾ ಜುಳು ಜುಳು ಹರಿಯುವ ಹಳ್ಳದ ತಡಿಯಲ್ಲಿರುವ ಮಹಾಕೂಟದ ನಿಸರ್ಗ ರಮಣೀಯತೆ ಮತ್ತು ಪ್ರಶಾಂತ ವಾತಾವರಣವು ಯೋಗಿಗಳನ್ನು ಋಷಿಗಳನ್ನು ಆಕರ್ಷಿಸಿ ಅಲ್ಲಿಯೇ ತಪಸ್ಸು ಮಾಡಲು ಪ್ರೇರೇಪಿಸಿದ್ದಿರಬೇಕು. ಇಲ್ಲಿ ಜನಸಾಮಾನ್ಯರ ವಾಸ್ತವ್ಯದ ಗುರುತುಗಳು ಅಷ್ಟಾಗಿ ಕಂಡುಬರದೆ ಚಾಲುಕ್ಯಪೂರ್ವದ ಸುಮಾರು 20 ಸಣ್ಣ ಸಣ್ಣ ಇಟ್ಟಿಗೆಯ ಶೈವ ದೇವಾಲಯಗಳ ಅವಶೇಷ[7]ಗಳು, ಕಲ್ಲಿನ ದೊಡ್ಡ ದೊಡ್ಡ ಶೈವ ದೇವಾಲಯಗಳಿವೆ. ಈ ಶೈವ ದೇವಾಲಯಗಳಲ್ಲಿ ಪಾಶುಪತ ಶೈವ ಧರ್ಮದ ಲಕುಳೀಶನ ಉಬ್ಬು ಶಿಲ್ಪಗಳು ಅಲ್ಲಲ್ಲಿ ಗೋಡೆಗಳ ಮೇಲಿವೆ. ಆದ್ದರಿಂದ ಈ ಸ್ಥಳವು ಹೆಚ್ಚಾಗಿ ಯೋಗಿಗಳ ನೆಲೆಯಾಗಿತ್ತೆಂಬುದು ಸತ್ಯ. ಬಾದಾಮಿ ಚಾಲುಕ್ಯರು ಮಹಾಕೂಟದೊಡನೆ ನಿಕಟ ಸಂಬಂಧ ಹೊಂದಿದ್ದರೆಂದು ಮಂಗಳೇಶನ ಧರ್ಮಸ್ತಂಭ ಶಾಸನದಿಂದ ತಿಳಿಯುತ್ತದೆ. ಅಲ್ಲದೆ ಬಾದಾಮಿಯ ಉತ್ತರ ಗುಡ್ಡದ ಮೇಲೆ

---

7. ಸುಂದರ. ಅ; 1977; "ಇತ್ತೀಚಿನ ಕೆಲವು ಮುಖ್ಯ ಪುರಾತತ್ವ ಶೋಧನೆಗಳು" **ಕರ್ನಾಟಕ ಭಾರತಿ,** ಸಂಪುಟ 8, ಸಂಚಿಕೆ 3, ಪುಟ 12.

ರಾಜಮನೆತನದವರು ವಾಸಿಸುತ್ತಿದ್ದ ಸ್ಥಳದಿಂದ ಮಹಾಕೂಟದ ದೇವಾಲಯದವರೆಗೆ ಇದ್ದ ರಾಜಮಾರ್ಗದ ಅವಶೇಷಗಳು ಹಾಗೂ ತೋರಣಗಳೂ ಗುಡಿಗಳೂ ಕೂಡಾ ಈ ಸಂಬಂಧವನ್ನು ಪುಷ್ಟೀಕರಿಸುತ್ತವೆ.

ಇಂಥ ಯೋಗಿಗಳು, ಋಷಿಗಳ ಮಾರ್ಗದರ್ಶನದಲ್ಲಿ ಕೀರ್ತಿವರ್ಮನು ತನ್ನ ಧಾರ್ಮಿಕ ವ್ರತಗಳನ್ನು ನಡೆಸುತ್ತಿದ್ದಿರಬೇಕು. ಕೆಲವು ವರ್ಷಗಳುದ್ದಕ್ಕೂ ಇಂಥವರ ದರ್ಶನ ಮತ್ತು ಅವರ ಧರ್ಮ ಪ್ರವಚನಗಳೂ ಹಾಗೂ ತಾನು ನಡೆಸಿಕೊಂಡು ಬರುತ್ತಿದ್ದ ಕಟ್ಟುನಿಟ್ಟಾದ ಧರ್ಮ ವ್ರತಗಳೂ ಇವನ ಮೇಲೆ ಒಳ್ಳೇ ಆಳವಾದ ಪ್ರಭಾವ ಬೀರಿ ಇವನನ್ನು ಒಬ್ಬ ತಪೋನಿರತನಾದ ರಾಜರ್ಷಿಯನ್ನಾಗಿ ಮಾಡಿದ್ದಿರಬೇಕು. ಈ ರೀತಿಯ ಐತಿಹಾಸಿಕ ಸಾಧ್ಯತೆಗಳನ್ನು ಪರಿಶೀಲಿಸಿದಾಗ ಮೇಲೆ ವಿವರಿಸಿದ ಮೂರ್ತಿಯು ಧರ್ಮವ್ರತನಾಗಿ ಜೀವನವನ್ನು ನಡೆಸುತ್ತಿದ್ದ ರಾಜರ್ಷಿ[8] ಕೀರ್ತಿವರ್ಮನದೇ ಆಗಿದ್ದಿರಬೇಕೆಂದು ತೋರುತ್ತದೆ. ಮತ್ತು ಇದರ ಬದಿಯಲ್ಲಿರುವ ಒಬ್ಬ ಯೋಗಿಯ ಉಬ್ಬು ಶಿಲ್ಪವು ಈ ಮಹಾರಾಜನಿಗೆ ಮಾರ್ಗದರ್ಶನ ನೀಡಿದ್ದವರದಾಗಿರಬೇಕು.

ಇವನ ಸುಸಂಸ್ಕೃತ ಧಾರ್ಮಿಕ ಜೀವನ ಕ್ರಮೇಣ ಜನಜನಿತ ಕಥೆಯಾಗಿ ಬೆಳೆದಿರಬೇಕು. ಆದರೆ ಜನಸಾಮಾನ್ಯರಲ್ಲಿ ಇಂಥ ಕಥೆಗಳಲ್ಲಿ ಐತಿಹಾಸಿಕ ಸತ್ಯತೆ ಹೆಚ್ಚು ಕಡಿಮೆ ಆಗಿರಬಾರದೆಂಬ ಪ್ರಜ್ಞೆ ಇರುವುದಿಲ್ಲ. ಆದ್ದರಿಂದ ಸಮಯಕ್ಕನುಗುಣವಾಗಿ, ತಮ್ಮ ಉದ್ದೇಶಕ್ಕೆ ಸರಿಯಾಗುವ ಹಾಗೆ, ಇಂಥ ಐತಿಹಾಸಿಕ ವಿಷಯಕ್ಕೆ ಸಮಯೋಚಿತವಾಗಿ ಬೇಕಾದುದನ್ನು ಸೇರಿಸುವುದು, ಇದ್ದುದನ್ನು ಬದಲಾಯಿಸುವುದು ಮುಂತಾದ ಪ್ರಯತ್ನಗಳನ್ನು ಮಾಡಿರುತ್ತಾರೆ. ಜನಸಾಮಾನ್ಯರಲ್ಲಿ ಅಗಸ್ತ್ಯತೀರ್ಥದ ಮಹಿಮೆಯನ್ನು

---

8. ಪ್ರಭಾ ಮಂಡಲವನ್ನು ಸಾಮಾನ್ಯವಾಗಿ ದೇವರ, ದೇವಿಯರ ಮೂರ್ತಿ ಶಿಲ್ಪಗಳಲ್ಲಿ ಮಾತ್ರ ತೋರಿಸುವ ಪದ್ಧತಿಯಿದೆ. ಇದನ್ನು ಮಾನವ ಮೂರ್ತಿ ಶಿಲ್ಪಗಳಲ್ಲಿ ತೋರಿಸಿರುವುದಿಲ್ಲ. ಮೇಲೆ ವರ್ಣಿಸಿದ ಮೂರ್ತಿಯಲ್ಲಿ ಈ ಲಕ್ಷಣಗಳು ಮತ್ತು ಶಂಖ ಮತ್ತು ಚಕ್ರಗಳ ಚಿಹ್ನೆ ಇರುವುದರಿಂದ ಇದು ತಪೋನಿರತನಾದ ಮಹಾವಿಷ್ಣುವಿನ ಮೂರ್ತಿಯು ಏಕಾಗಿರಬಾರದೆಂಬ ಸಂಶಯವೂ ಬರುತ್ತದೆ. ಆದರೆ ಬಾದಾಮಿ ಚಾಲುಕ್ಯ ಮೂರ್ತಿಶಿಲ್ಪಗಳಲ್ಲಿ ವಿಷ್ಣುವು ಯಾವ ಭಂಗಿಯಲ್ಲಿ ಅಥವಾ ಸ್ಥಿತಿಯಲ್ಲಿ ಇದ್ದರೂ ಚತುರ್ಭುಜನಾಗಿಯೂ ಕಿರೀಟ ಮತ್ತು ವೈಜಯಂತಿ ಮಾಲೆಯನ್ನು ಧರಿಸಿದವನಾಗಿಯೂ ಇರುವನು. ಈ ಮೂರ್ತಿಯಲ್ಲಿ ಈ ಮೂರು ಲಕ್ಷಣಗಳೂ ಇಲ್ಲ. ಪ್ರಭಾಮಂಡಲವನ್ನು ಚಕ್ರವರ್ತಿಗಳ ಶಿಲ್ಪದಲ್ಲಿಯೂ ವರ್ಣ ಚಿತ್ರಗಳಲ್ಲಿಯೂ ತೋರಿಸುವ ಪದ್ಧತಿಯಿದೆ. ಉದಾಹರಣೆಗೆ, ಬಾದಾಮಿಯ ಮೂರನೇ ವೈಷ್ಣವಾಲಯದಲ್ಲಿ ಒಂದು ವರ್ಣಚಿತ್ರದಲ್ಲಿ ರಾಜಸಭೆಯನ್ನು ನಡೆಸುತ್ತಿರುವ ಸಿಂಹಾಸನಸ್ಥ ಮಹಾರಾಜನಿಗೆ ಪ್ರಭಾಮಂಡಲವನ್ನು ತೋರಿಸಲಾಗಿದೆ. ಆದ್ದರಿಂದ ಮೇಲೆ ವರ್ಣಿಸಿದ ಮೂರ್ತಿಯು ಒಬ್ಬ ಚಕ್ರವರ್ತಿಯದೇ ಆಗಿರಬೇಕು. ಅಲ್ಲದೆ ಅವನು ತಪೋಭಂಗಿಯಲ್ಲಿರುವ ಚಿತ್ರವಾದುದರಿಂದ ಪ್ರಭಾಮಂಡಲವು ಇರುವುದು ಅನುಚಿತವಲ್ಲ.

ಹೃದಯಂಗಮವಾಗಿ ಚಿತ್ರಿಸಲು ಐತಿಹಾಸಿಕ ಕಥೆಯನ್ನು ಸಾಕಷ್ಟು ರೂಪಾಂತರ ಮಾಡಿದ್ದುದರ ಫಲವಾಗಿ ಮೇಲೆ ಹೇಳಿದ ಎರಡು ಕಥೆಗಳು ಉದ್ಭವಿಸಿರಬೇಕೆಂದು ತೋರುತ್ತದೆ.

ಮೇಲೆ ವರ್ಣಿಸಿದ ಮೂರ್ತಿಯು ನಿಜವಾಗಿಯೂ ಮೊದಲನೆ ಕೀರ್ತಿವರ್ಮನ ದೆಂದು ವಿವೇಚಿಸಿದ್ದು ಸರಿಯಾಗದಿದ್ದಲ್ಲಿ ಈ ಮೂರ್ತಿಯನ್ನು ಯಾರು ಮಾಡಿಸಿರಬೇಕು ಎಂಬ ಪ್ರಶ್ನೆ ಏಳುತ್ತದೆ. ತನ್ನ ಅಣ್ಣನಲ್ಲಿ ಪರಮ ಭಕ್ತಿ ಇಟ್ಟಿದ್ದ ಮಂಗಳೇಶನಲ್ಲದೆ ಮತ್ತ್ಯಾರೂ ಈ ಮೂರ್ತಿಯನ್ನು ಮಾಡಿಸಿದ್ದ ಸಾಧ್ಯತೆ ಕಾಣುವುದಿಲ್ಲ. ಅಲ್ಲದೆ ಇದರ ಶಿಲ್ಪ ಲಕ್ಷಣಗಳ ಕಾಲಮಿತಿಯು ಇದನ್ನೇ ಪುಷ್ಟೀಕರಿಸುತ್ತದೆ. ಧರ್ಮವ್ರತವನ್ನು ಪಾಲಿಸುತ್ತಿದ್ದ ತನ್ನಣ್ಣನ ಆಶೀರ್ವಾದವನ್ನು ಆಶಿಸುತ್ತಿದ್ದ ಮಂಗಳೇಶನು ಕ್ರಮಬದ್ಧವಾಗಿ ಅಭಯಹಸ್ತವುಳ್ಳ ಹಾಗೂ ಪದ್ಮಾಸನದಲ್ಲಿ ಕುಳಿತು ತಪಸ್ಸು ಮಾಡುತ್ತಿರುವ ಈ ಧರ್ಮ ಮಹಾರಾಜನ ಚಿತ್ರವನ್ನು ಅಂದವಾಗಿ ಕೆತ್ತಿಸಿದ್ದಾನೆ. ತಾನು ಪರಮ ಭಾಗವತನಿದ್ದುದರಿಂದ ವೈಷ್ಣವಧರ್ಮದ ಚಿಹ್ನೆಗಳಾದ ಶಂಖ ಮತ್ತು ಚಕ್ರಗಳನ್ನು ಮೂರ್ತಿಯ ಎರಡು ಬದಿಗಳಲ್ಲಿ ಬಿಡಿಸುವ ಹಾಗೆ ಮಾಡಿದ್ದಾನೆ. ತನ್ನಣ್ಣನ ತಪಸ್ಸಿಗೆ ಭಂಗ ಬರಬಾರದೆಂಬ ಭಾವನೆಯಿಂದ ಅಗಸ್ತ್ಯತೀರ್ಥದ ಬದಿಯಲ್ಲೇ ಹದವಾಗಿ ಬೆಳಕಿರುವ ಒಂದು ಗವಿಯಲ್ಲಿ ಈ ಮೂರ್ತಿಯನ್ನು ಕೆತ್ತಿಸಿರುವುದನ್ನು ನೋಡಿದರೆ, ಇದನ್ನು ಮಾಡಿಸುವುದರಲ್ಲಿ ಅವನು ಎಷ್ಟು ದೀರ್ಘಾಲೋಚನೆಯುಳ್ಳವನಾಗಿದ್ದನು ಮತ್ತು ಎಷ್ಟು ಭಾವನಾಪರವಶನಾಗಿದ್ದನು ಎಂಬುದು ಕಾಣಿಸುತ್ತದೆ. ಅಪೂರ್ವ ಹಾಗೂ ಆದರ್ಶಮಯವಾದ ಭಾವ, ಪ್ರೇಮ, ಮೂರ್ತಿವೆತ್ತಿ ಬಂದಿದೆಯೋ ಅನ್ನುವ ಹಾಗಿದೆ ಈ ಧರ್ಮಮಹಾರಾಜನ ಭವ್ಯ ಮೂರ್ತಿ ಶಿಲ್ಪ. ಇತಿಹಾಸದಲ್ಲಿಯೇ ಎಂಥ ಅನುಪಮ ಭ್ರಾತೃ ಭಕ್ತಿ !

****

ಗಣಕಯಂತ್ರದಲ್ಲಿ ಮುದ್ದಣ ಕವಿ

● ಮೂಲ: ಶ್ರೀನಿವಾಸ ಹಾವನೂರ
● ಅನುವಾದ: ಎಸ್. ಆರ್. ಗುಂಜಾಳ

ಮುದ್ದಣ ಕವಿಯು ಕ್ರಿ. ಶ. 1869 ರಲ್ಲಿ ಬಡ ಕುಟುಂಬದಲ್ಲಿ ಜನಿಸಿದನು. ಅವನು ಪಡೆದ ಶಿಕ್ಷಣ ಅತ್ಯಲ್ಪ. ಕುಂದಾಪುರದ (ದಕ್ಷಿಣ ಕನ್ನಡ ಜಿಲ್ಲೆ) ಶಾಲೆಯೊಂದರಲ್ಲಿ ಶಾರೀರಿಕ ಶಿಕ್ಷಣದ ಶಿಕ್ಷಕನಾಗಿ ತನ್ನ ಜೀವನವನ್ನು ಪ್ರಾರಂಭಿಸಿದನು. ಆದರೆ ಪ್ರಾಚೀನ ಕಾವ್ಯಗಳನ್ನು ಸ್ವಪ್ರಯತ್ನದಿಂದ ಅಭ್ಯಸಿಸಿದನು. ತನ್ನ ಮೂವತ್ತೊಂದನೆಯ ಚಿಕ್ಕ ವಯಸ್ಸಿನಲ್ಲಿ ಕ್ಷಯರೋಗ ಪೀಡಿತನಾಗಿ ತೀರಿಕೊಂಡನು (1901). ಕೆಳಗಿನ ಕನ್ನಡ ಭಾಷೆಯಲ್ಲಿಯ ಪೌರಾಣಿಕ ಗ್ರಂಥಗಳ ಕರ್ತೃ ಅವನೆಂದು ಹೇಳಲಾಗಿದೆ.

1. ರತ್ನಾವತೀ ಕಲ್ಯಾಣ : ರಾಜಕುಮಾರಿ ರತ್ನಾವತಿಯ ಮದುವೆಯನ್ನು ಕುರಿತಾದ ಕಥೆ.
2. ಕುಮಾರ ವಿಜಯ : ಶಿವನ ಪುತ್ರನಾದ ಕುಮಾರನು ರಾಕ್ಷಸನನ್ನು ಜಯಿಸಿದ ಕಥೆ.
3. ಶ್ರೀರಾಮ ಪಟ್ಟಾಭಿಷೇಕ : ವಾಲ್ಮೀಕಿ ಸಂಸ್ಕೃತ ರಾಮಾಯಣದಿಂದ ಆಯ್ದ ಕಥಾಭಾಗವಿದ್ದು, ರಾಮನ ಪಟ್ಟಾಭಿಷೇಕದ ವರ್ಣನೆಯಿದೆ.
4. ಅದ್ಭುತ ರಾಮಾಯಣ : ಶ್ರೀರಾಮನ ಬಗೆಗೆ ರೂಢಿಯಲ್ಲಿರದ ಕಥಾ ಪ್ರಸಂಗ. ಸಾಂಪ್ರದಾಯಿಕ ಕಥೆಯಲ್ಲಿ ರಾಮನು ಹತ್ತು ತಲೆಗಳ ರಾವಣನನ್ನು ಕೊಂದರೆ ಈ ಕಥೆಯಲ್ಲಿ ಸೀತಾದೇವಿಯು ನೂರು ತಲೆಗಳ ರಾವಣನನ್ನು ಸಂಹರಿಸುವಳು.
೫. ರಾಮಾಶ್ವಮೇಧಂ: ರಾಮನ ಅಶ್ವಮೇಧ ಯಜ್ಞವನ್ನು ಕುರಿತಾದ ಕಥೆ; ಉಪಕಥೆಗಳನ್ನೊಳಗೊಂಡಿದೆ. ಮುದ್ದಣ ಕವಿ ಮತ್ತು ಆತನ ಪತ್ನಿಯ ನಡುವೆ ನಡೆದ ಮನೋಹರ ಸಂಭಾಷಣೆಯಿಂದಾಗಿ ಪ್ರಸಿದ್ಧಿ ಪಡೆದ ಕಥಾನಕವಿದು.

ಹಳಗನ್ನಡ ಕವಿಗಳಲ್ಲಿ ಕೊನೆಯವನೂ, ಆಧುನಿಕ ಕವಿಗಳಲ್ಲಿ ಮೊದಲನೆಯವನೂ ಆದ ಮುದ್ದಣ ಕವಿಯು ಕನ್ನಡ ಸಾಹಿತ್ಯದಲ್ಲಿ ವಿಶೇಷ ಸ್ಥಾನವನ್ನು ಪಡೆದಿರುವನು. ಅವನ ಕೃತಿಗಳ ಮುಖ್ಯ ಗುಣಗಳು ಇಂತಿವೆ: (ಅ) ಉಚ್ಚಮಟ್ಟದ ಕಾವ್ಯ ಪ್ರತಿಭೆ; ಹಾಗೂ (ಬ) ರೂಢಿಯಲ್ಲಿಲ್ಲದ ಮತ್ತು ಸ್ವನಿರ್ಮಿತ ಹೊಸ ಶಬ್ದಗಳ ವಿಪುಲ ಪ್ರಯೋಗ.

ಅವನ ಬರವಣಿಗೆ ಬಹಳಷ್ಟಿರದಿದ್ದರೂ ಅನೇಕ ವಿಮರ್ಶಕರ ಗಮನ ಸೆಳೆದಿದೆ. ಅವನ ಜೀವನ ಮತ್ತು ಕೃತಿಗಳನ್ನು ಕುರಿತು ನೂರಕ್ಕೂ ಮಿಕ್ಕಿ ಲೇಖನಗಳು ಮತ್ತು ಹದಿನೇಳು ಗ್ರಂಥಗಳು ಇದುವರೆಗೆ ಪ್ರಕಟಗೊಂಡಿವೆ.

ತನ್ನ ಸ್ವನಾಮದಲ್ಲಿ ಪ್ರಕಟಗೊಂಡ ಮೊದಲಿನ ಎರಡು (ಯಕ್ಷಗಾನ) ಗ್ರಂಥಗಳಿಗೆ ಪ್ರಸಿದ್ಧಿ ಸಿಗಲಿಲ್ಲ. ಆದುದರಿಂದ ಕೆಲವು ಪ್ರಾಚೀನ ಕವಿಗಳಿಂದ ರಚಿತವಾದ ಕೃತಿಗಳೆಂದೂ ಅವುಗಳನ್ನು ಕೇವಲ ಪ್ರತಿಮಾಡಿರುವೆನೆಂದೂ, ಹೇಳಿ ತನ್ನ ತದನಂತರದ ಗ್ರಂಥಗಳನ್ನು 'ಕಾವ್ಯಮಂಜರಿ' ಗ್ರಂಥಪ್ರಕಾಶಕರಿಗೆ ಕಳುಹಿಸಿ ಕೊಟ್ಟನು.[1] ಇದರ ಫಲವಾಗಿ ಅವು ಬೇರೆ ಬೇರೆ ಹೆಸರುಗಳಲ್ಲಿ ಪ್ರಕಟಗೊಂಡವು. ಕೊನೆಯ ಕೃತಿಯ ಕರ್ತೃವಿನ ಹೆಸರು 'ಮುದ್ದಣ' ನೆಂಬುದು.

ಅವನ ಮರಣಾನಂತರ ಕಾಲಕ್ರಮೇಣ ಐದೂ ಕತಿಗಳ ಕರ್ತೃ 'ಮುದ್ದಣ' ಕವಿಯೆಂದು ಗೊತ್ತಾಯಿತು. ಆದರೆ ರಾಮಪಟ್ಟಾಭಿಷೇಕವನ್ನು ಕುರಿತು ಅವನ ಸ್ಮರಣಾರ್ಥ 1926ರಲ್ಲಿ ವಿಮರ್ಶನ ಗ್ರಂಥವೊಂದು ಪ್ರಕಟವಾಗುವವರೆಗೂ ಸಂಶಯ ಉಳಿದಿತ್ತು. ಈ ಗ್ರಂಥದಲ್ಲಿ ಮುದ್ದಣನ ಗ್ರಂಥಗಳ ಪ್ರಕಾಶಕರಾದ ಶ್ರೀ ರಾಮಾನುಜ ಅಯ್ಯಂಗಾರರು 'ಶ್ರೀರಾಮಪಟ್ಟಾಭಿಷೇಕ'ದ ಕರ್ತೃತ್ವವಿಚಾರದಲ್ಲಿ ಹೀಗೆ ಅಭಿಪ್ರಾಯಪಟ್ಟಿರುವರು: "ಈ ಗ್ರಂಥಕ್ಕೂ ನಮ್ಮ ನಂದಳಿಕೆಯವರೇ ಕರ್ತೃವೆಂದು ಯಾರು ಎಷ್ಟು ವಿಚಾರ ಮಾಡಿ ಹೇಳಿದರೂ ನಾನು ಒಪ್ಪಲಾರೆನು." ಆದ್ದರಿಂದ ಈ ಗ್ರಂಥಕರ್ತೃ ಮುದ್ದಣನೇ ಹೇಗೆಂಬುದನ್ನು ನಿರ್ಣಯಿಸುವುದಕ್ಕೋಸುಗ, ಅವನ ಕೆಲವು ವಿಶಿಷ್ಟ ಶಬ್ದಗಳನ್ನು ಗಣಕಯಂತ್ರ ವಿಶ್ಲೇಷಣೆಗೆ ಆಯ್ದುಕೊಳ್ಳಲಾಯಿತು.

1. ಮೂಲ ಸಾಮಗ್ರಿ ಮತ್ತು ಉತ್ಪಾದಿತ ಸಾಮಗ್ರಿ (Data and Output)

ಮುದ್ದಣ ಕವಿಯು ಸುಮಾರು ಐವತ್ತು ಸಾವಿರ ಶಬ್ದಗಳನ್ನು ಪ್ರಯೋಗಿಸಿರುವನು. ಆದರೆ ಕೆಲವು ಪಾತ್ರಗಳಲ್ಲಿ ಹಾಗೂ ಮೇಲಿಂದ ಮೇಲೆ ಅವನ ಗ್ರಂಥಗಳಲ್ಲಿ ಪ್ರಯೋಗವಾದ ರೂಢನಾಮಗಳಲ್ಲಿ ಕೆಲವನ್ನು ಮಾತ್ರ (ಒಟ್ಟಿಗೆ 13) ಗಣಕಯಂತ್ರದ ವಿಶ್ಲೇಷಣೆಗೆ ಆರಿಸಿಕೊಳ್ಳಲಾಯಿತು. ಅವಾವುವೆಂದರೆ:

ರಾಮಾಯಣದ ಕಥೆಗಳಲ್ಲಿ ಬರುವ ಪಾತ್ರಗಳು: ರಾಮ, ಸೀತೆ, ರಾವಣ, ಹಾಗೂ ಹನುಮಂತವಾಚೀ ಶಬ್ದಗಳು.

---

1 ಹದಿನೆಂಟನೆಯ ಶತಮಾನದ ಅಲ್ಪ ವಯಸ್ಕನಾದ ಥಾಮಸ್ ಚಾಟರಟನ್ ಕವಿಗೂ ಇಂಥ ಚೋದ್ಯ ಪ್ರಸಂಗವೊದಗಿತ್ತು.

ದೇವತೆಗಳು: ಹರ, ಹರಿ, ಬ್ರಹ್ಮ, ಮತ್ತು ಇಂದ್ರವಾಚೀ ಶಬ್ದಗಳು.

ರೂಢನಾಮಗಳು : ಅರಸ. ರಾಕ್ಷಸ, ಮುನಿ, ಸ್ತ್ರೀ ಮತ್ತು ಸಮೂಹವಾಚೀ ಶಬ್ದಗಳು.

ಕನ್ನಡದಲ್ಲಿದ್ದ ಮೂಲವಿಷಯವನ್ನು (data) ಗಣಕಯಂತ್ರಕ್ಕೆ ಅಳವಡಿಸುವುದಕ್ಕಾಗಿ ಶಬ್ದಗಳನ್ನು ರೋಮನ್ ಲಿಪಿಯಲ್ಲಿ ಬರೆಯಲಾಯಿತು (ಪಟ್ಟಿಕೆ 1). ದೇವನಾಗರಿ ಲಿಪಿಗೆ ಹೊಂದುವ ಸಂಜ್ಞಾ ಚಿಹ್ನಗಳನ್ನು ಬಳಸಬಹುದೆಂಬುದನ್ನು ಈ ಹಿಂದೆ ಕೆಲವರು ಹೇಳಿದ್ದರೂ, ಕನ್ನಡ ಲಿಪಿಗೆ ಪ್ರತ್ಯೇಕ ಸಂಜ್ಞಾ ಚಿಹ್ನಗಳ ಅವಶ್ಯಕತೆಯೆನಿಸಿತು. ಇದರ ವಿಶೇಷ ವ್ಯತ್ಯಾಸಗಳು ಹೀಗಿವೆ:

(1) ದೀರ್ಘಾಕ್ಷರಗಳನ್ನು ತಿಳಿಸಲು ಹ್ರಸ್ವಾಕ್ಷರದ ಸಂಜ್ಞೆಯನ್ನು ಮತ್ತೆ ಬಳಸುವುದು(ಉದಾ: ಆ–AA)

(2) ಮಹಾಪ್ರಾಣಗಳನ್ನು ತಿಳಿಸಲು 'ಎಚ್' ಚಿಹ್ನ (H) ಬಳಸುವುದು.

(3) ರೋಮನ್ ಅಕ್ಷರಗಳಿಂದ ಸ್ಪಷ್ಟವಾಗಿ ತಿಳಿಸಲು ಬಾರದ (ಅನುನಾಸಿಕಾದಿ) ಶಬ್ದಗಳಿಗೆ 'ಎಕ್ಸ' ಚಿಹ್ನವನ್ನು (X) ಆದಿಪ್ರತ್ಯಯವಾಗಿ ಹಚ್ಚುವುದು.

ಮೇಲೆ ಹೇಳಿದಂತೆ ವಿಶೇಷಾರ್ಥಗಳನ್ನು ಅರುಹುವ 2,725 ಶಬ್ದಗಳು ಬಳಕೆಯಾದ ಸಂಖ್ಯೆಗಳನ್ನು 2ನೆಯ ಪಟ್ಟಿಕೆಯಲ್ಲಿ ಕೊಡಲಾಗಿದೆ. (ರೂಢಿಗತ ಸಮಾನಾರ್ಥ ಶಬ್ದಗಳನ್ನು ಕೈಬಿಡಲಾಗಿದೆ. ಉದಾ: ಶಿವ ಹರ; ರಾಮಚಂದ್ರ ರಾಮ).

2ನೆಯ ಪಟ್ಟಿಕೆಯು, ಮುದ್ದಣನು ಮೇಲೆ ಕಾಣಿಸಿದ 13 ಅಂಕಿತ ರೂಢನಾಮಗಳಿಗಾಗಿ ಎಷ್ಟು ಶಬ್ದಗಳನ್ನು ಬಳಸಿರುವನು ಮತ್ತು ಎಷ್ಟು ಸಲ ತನ್ನ ಗ್ರಂಥಗಳಲ್ಲಿ ಪ್ರಯೋಗ ಮಾಡಿರುವನೆಂಬುದನ್ನು ತೋರಿಸುತ್ತದೆ. ಅವನು ಆ ಒಂದೊಂದು ಅಂಶಕ್ಕೆ ಅನೇಕ ಶಬ್ದಗಳನ್ನು ಬಳಸಿರುವನಾದ್ದರಿಂದ (ಬ) ಮತ್ತು (ಕ) ಖಾನೆಗಳಲ್ಲಿ ಒಟ್ಟು ಶಬ್ದ ಸಂಖ್ಯೆಯಲ್ಲಿ ವ್ಯತ್ಯಾಸ ತೋರುತ್ತದೆ.

2 ನವೀನ ಶಬ್ದಗಳ ನಿರ್ಮಾಣ:

ಗಣಕಯಂತ್ರವು ತೆಗೆದುಕೊಟ್ಟ ಶಬ್ದಪಟ್ಟಿಕೆಗಳನ್ನು ಅವಲೋಕಿಸುತ್ತಿದ್ದಾಗ ಹೊಸ ಮತ್ತು ರೂಢಿಯಲ್ಲಿಲ್ಲದ ವಿಪುಲ ಶಬ್ದಗಳು ನಮಗೆ ಕಂಡುಬಂದವು. ಹೊಸ ಶಬ್ದಗಳೆಂದರೆ, ಆ ವರೆಗೂ ಕನ್ನಡದ ಶಬ್ದಕೋಶಗಳಲ್ಲಿ ಕಂಡುಬರದಂಥವು. ಇವನ್ನು ಅವನು (ಅ) ಸಂಸ್ಕೃತ ಶಬ್ದವನ್ನು ಕನ್ನಡೀಕರಿಸುವದರಿಂದ ಮತ್ತು (ಬ) ಹಳಗನ್ನಡದಲ್ಲಿ ಅಪರೂಪವಾಗಿ ಉಪಯೋಗಿಸಲ್ಪಟ್ಟ ಶಬ್ದಗಳಿಗೆ ಹೊಸ ಜೀವಕಳೆ ತುಂಬುವದರಿಂದ

ಮಾಡಿಕೊಂಡಿರುವನು. ಅವನು ಎರಡು ಸ್ವತಂತ್ರ ಶಬ್ದಗಳನ್ನು ಕೂಡಿಸಿ, ಶಬ್ದಾಂತ ಪ್ರತ್ಯಯ ಜೋಡಿಸಿ ಹೊಸದೊಂದು ಅರ್ಥ ಸೂಸುವಂತೆ ಬುದ್ಧಿಪೂರ್ವಕವಾಗಿ ನವೀನ ಶಬ್ದ ನಿರ್ಮಾಣ ಮಾಡಿರುವುದು ಸಹ ನಮ್ಮ ಗಮನಕ್ಕೆ ಬಂದಿತು. ಸಂಸ್ಕೃತ ಶಬ್ದವನ್ನು ಕನ್ನಡಕ್ಕೆ ಹೊಂದಿಸಿಕೊಳ್ಳುವುದರಲ್ಲಿ ಕನ್ನಡದ ಯಾವುದೇ ಕವಿಗಿಂತ ಅವನು ಶ್ರೇಷ್ಠ ಎನಿಸಿದ್ದಾನೆ. ಅವನ ಶಬ್ದಸಂಪತ್ತು ಶ್ರೀಮಂತವಾಗಿದೆ ಮತ್ತು ಅದು ಅವನ ಜಾಣ್ಮೆಯನ್ನು ಪ್ರಕಟಪಡಿಸುತ್ತದೆ. ಹೀಗಾಗಿ ಅವನು ಕನ್ನಡ ಶಬ್ದ ಭಂಡಾರಕ್ಕೆ ವಿಪುಲವಾಗಿ ಹೊಸ ಶಬ್ದಗಳನ್ನು ಕೊಡಮಾಡಿರುವನು.

3. ಗ್ರಂಥಕರ್ತೃತ್ವ :

ಮುದ್ದಣನ ಐದೂ ಕೃತಿಗಳಲ್ಲಿ ಬಂದಿರುವ, ಈ 2ನೆಯ ಪಟ್ಟಿಕೆಯ (ಬ) ಖಾನೆಯಲ್ಲಿ ಕಾಣಿಸಿದ 1382 ಶಬ್ದಗಳಲ್ಲಿ ನಾವು ಮೂರು ಅಥವಾ ಮೂರಕ್ಕಿಂತ ಹೆಚ್ಚು ಕೃತಿಗಳಲ್ಲಿ ಪ್ರಯೋಗಿಸಲ್ಪಟ್ಟ ಕೇವಲ 21 ಶಬ್ದಗಳನ್ನು ಮುಂದಿನ ವಿಶ್ಲೇಷಣೆಗಾಗಿ ಆಯ್ದುಕೊಂಡಿರುವೆವು. (3ನೆಯ ಪಟ್ಟಿಕೆ). ಗ್ರಂಥ ಕರ್ತೃತ್ವವನ್ನು ಕಂಡು ಹಿಡಿಯುವಲ್ಲಿ ಇದು ಗಣನೆಗೆ ತೆಗೆದುಕೊಳ್ಳುವ ಸಂಖ್ಯೆಯೇನಲ್ಲ. ಆದರೂ ಮುದ್ದಣನು ಹೊಸ ಶಬ್ದನಿರ್ಮಾಣದಲ್ಲಿ ಹೆಚ್ಚಿನವನು ಮತ್ತು ಅವನಿಗೆ ಒಮ್ಮೆ ಪ್ರಯೋಗಿಸಿದ ಶಬ್ದವನ್ನೇ ಪುನಃ ಪ್ರಯೋಗಿಸುವುದಕ್ಕಿಂತ ಹೊಸ ಶಬ್ದವನ್ನು ನಿರ್ಮಿಸುವುದು ಇಷ್ಟ. 2ನೆಯ ಪಟ್ಟಿಕೆಯ (ಬ) ಮತ್ತು (ಕ) ಖಾನೆಗಳನ್ನು ತುಲನೆ ಮಾಡುವುದರಿಂದ ಇದು ಸ್ಪಷ್ಟವಾಗುತ್ತದೆ. ಅಲ್ಲಿ ಶಬ್ದಗಳ ದ್ವಿರುಕ್ತಿ ಪ್ರಮಾಣ 1 : 2 ಇದೆ. ಇನ್ನೊಂದು ಮಾತೆಂದರೆ, ಕೆಲವು ಶಬ್ದಗಳು ಮತ್ತು ಜಾಣ್ನುಡಿಗಳು ಪ್ರತಿಯೊಬ್ಬ ಕವಿಯ 'ಪೇಟೆಂಟ್' ಆಗಿರುತ್ತವೆ. ಮತ್ತು ಅವುಗಳನ್ನು ತನ್ನ ಕೃತಿಗಳಲ್ಲಿ ಸಹಜವಾಗಿ ವಿಪುಲವಾಗಿ ಬಳಸುತ್ತಾನೆ. ಮುದ್ದಣನಲ್ಲಿಯೂ ಸಹ ಕೆಲವು ಹೆಚ್ಚಿನ ಶಬ್ದಗಳ ಪ್ರಯೋಗ ಕಂಡುಬರುತ್ತದೆ.

3ನೆಯ ಪಟ್ಟಿಕೆಯಲ್ಲಿಯ ಅನುಕ್ರಮ ನಂಬರ 2, 6, 8, 10–12, 14–16 ಮತ್ತು 19–20 ಇವುಗಳ ಎದುರಿಗೆ ಕೊಟ್ಟ ಶಬ್ದಗಳು ಈ ವಿಭಾಗಕ್ಕೆ ಸೇರುತ್ತವೆ. ಇನ್ನುಳಿದ ಶಬ್ದಗಳು ಸಹ ಮುದ್ದಣನಿಗೆ ವಿಶೇಷ ಪ್ರೀತಿಯವು. ಪ್ರಾಚೀನ ಕವಿಗಳಿಂದ ಅವು ಕ್ವಚಿತವಾಗಿ ಪ್ರಯೋಗಿಸಲ್ಪಟ್ಟಿವೆ. ಅಥವಾ ಮುದ್ದಣನ ಸ್ವನಿರ್ಮಿತ ಶಬ್ದಗಳಾಗಿವೆ. 3ನೆಯ ಪಟ್ಟಿಕೆಯಲ್ಲಿ ಕಾಣಿಸಿದ ಇಂಥ ಸಂಖ್ಯೆಯ ಗ್ರಂಥಗಳಲ್ಲಿ ಪುನಃ ಪುನಃ ಪ್ರಯೋಗಿಸಲಾದ ಇಂಥ ಇನ್ನೂ ಅನೇಕ ಶಬ್ದಗಳಿವೆ; ಈ ಶಬ್ದಗಳನ್ನು ಹೆಕ್ಕಿತೆಗೆದರೆ, ಅವನ ಗ್ರಂಥಕರ್ತೃತ್ವದ ಬಗೆಗೆ ಹೆಚ್ಚಿನ ಆಧಾರಗಳು ಸಿಗುವವು.

4. ಪಾತ್ರ ಪರಾಮರ್ಶೆ:

ಪಾತ್ರ ಪರಾಮರ್ಶೆಯು ಸಾಹಿತ್ಯ ವಿವೇಚನೆಯ ಮಹತ್ವದ ಅಂಶಗಳಲ್ಲಿ ಒಂದಾಗಿದೆ. ಪಾತ್ರಸೂಚಿ ಶಬ್ದಗಳನ್ನೆಲ್ಲ ಗಣಕಯಂತ್ರದಿಂದ ಪಟ್ಟಿ ಮಾಡಿದರೆ, ಆ ಪಾತ್ರವು

ಕಾಣಿಸಿಕೊಂಡ ವಿವಿಧ ಸಂದರ್ಭಗಳೊಂದಿಗೆ ಅದನ್ನು ಹೆಚ್ಚು ಪರಿಪೂರ್ಣವಾಗಿ ಮತ್ತು ಪ್ರತ್ಯೇಕವಾಗಿ ಅಭ್ಯಸಿಸಲು ಸಾಧ್ಯವಾಗುತ್ತದೆ. ಮುದ್ದಣನ ಕೃತಿಗಳಲ್ಲಿ ಚಿತ್ರಿತವಾದ ಹರನ ವಿಷಯವಾಗಿ ನಾವಿದನ್ನು ಅನುಸರಿಸಿದೆವು. ಹರನು ಲಯಕರ್ತನಾಗಿದ್ದರೂ, ಮುದ್ದಣನಿಗೆ ಮಾತ್ರ ಅತ್ಯಂತ ಮಂಗಳಕರನಾಗಿರುವನು. ಕವಿಯು ಹರನ ಜೀವನದ ಸಂತೋಷಕರ ಘಟನೆಗಳನ್ನೇ ಮುಖ್ಯವಾಗಿ ಆಯ್ದುಕೊಂಡಿರುವನು. ಮತ್ತು ಆಹ್ಲಾದ ಕರ ಗುಣಗಳನ್ನೇ ಉಪಯೋಗಿಸಿಕೊಂಡಿರುವನು. ಅಲ್ಲದೇ ರಾಮನಿಗಿಂತ (ಒಟ್ಟು 191 ಶಬ್ದಗಳು) ಶಿವನನ್ನು ಕುರಿತ ಪ್ರಯೋಗಗಳೇ (ಒಟ್ಟು 305) ಹೆಚ್ಚಿಗಿವೆ. ಇದೊಂದು ವಿಚಿತ್ರ ಸಂಗತಿಯಾಗಿದೆ. ಯಾಕೆಂದರೆ, ಐದು ಕೃತಿಗಳಲ್ಲಿ ಒಂದರಲ್ಲಿಯೂ ಶಿವನದು ಪ್ರಧಾನ ಪಾತ್ರವಲ್ಲ; 2ನೇ ಮೂರು ಕೃತಿಗಳ ಪ್ರಧಾನ ಪಾತ್ರ ರಾಮನದು. ಇದರ ಅರ್ಥವೇನು? ಹರನು ಮುದ್ದಣನಿಗೆ ನಿಜವಾಗಿಯೂ ಹೆಚ್ಚು ಪ್ರೀತಿಯ ದೇವರು ಆಗಿದ್ದನೆಂದೇ ಅಲ್ಲವೇ? ರಾಮಾವತಾರ ತಳೆದ ಹರಿಯನ್ನು ಮತ್ತು ಹರನನ್ನು ಸಮದೃಷ್ಟಿಯಿಂದ ಕಂಡ ಮುದ್ದಣನು ಅದ್ವೈತಿಯಾಗಿದ್ದನೆಂದು ಸಾಮಾನ್ಯವಾಗಿ ನಂಬ ಲಾಗಿತ್ತು. ಆದರೆ ಕಳೆದ ಎಂಟು ದಶಕಗಳಲ್ಲಿ ಸಾಹಿತ್ಯ ವಿಮರ್ಶಕರಿಗೆ ಮುದ್ದಣ ನಿಗೆ ಶಿವನಲ್ಲಿದ್ದ ಈ ಅಧಿಕಾಧಿಕ ಪ್ರೀತಿಯು ಎದ್ದು ಕಂಡಿರಲಿಲ್ಲ.[2]

5. ಬೆಳಕಿಗೆ ಬಾರದಿದ್ದ ಕವಿಯ ಮತ್ತೊಂದು ಗುಣವಿಶೇಷ:

ಇನ್ನೊಂದು ಅಂಶವನ್ನು ಕುರಿತು ಇದೇ ಮಾರ್ಗವನ್ನು ಅನುಸರಿಸಿ ಸಂಶೋಧನೆ ಯನ್ನು ನಾವು ಮುಂದುವರಿಸಿದೆವು.: ಉದಾಹರಣೆಗೆ 'ಸ್ತ್ರೀ' ಶಬ್ದದ 533 ಪರ್ಯಾಯ ನಾಮಗಳು 900 ಸಲ ಪ್ರಯೋಗವಾಗಿವೆ. ಅವನ ಕೃತಿಗಳಲ್ಲಿ ಸ್ತ್ರೀ ಪಾತ್ರಗಳು ಹೆಚ್ಚಾಗಿಲ್ಲದಿರುವ ಸಂಗತಿಯನ್ನು ಗಮನಿಸಿದರೆ ಇದು ಮಹತ್ವದ್ದೇ ಸರಿ. ಸ್ತ್ರೀಯ ಅಂಗಾಂಗಳನ್ನು ವರ್ಣಿಸುವ ಪ್ರಸಂಗದಲ್ಲಿ ಕವಿಗಳು ಅವಳ ಸ್ತನ ಮತ್ತು ಜಘನಗಳ ವರ್ಣನೆ ಮಾಡುವುದಕ್ಕೆ ಮುಂದಾಗುತ್ತಾರೆ. ಅಥವಾ ಇವುಗಳಿಗೆ ಅಸಂಬದ್ಧ ವಿಶೇಷಣಗಳನ್ನು ಜೋಡಿಸುತ್ತಾರೆ. ಆದರೆ 900 ಸ್ತ್ರೀವಾಚೀ ಪ್ರಯೋಗಗಳಲ್ಲಿ ಮುದ್ದಣನು ಈ ಎರಡು ಬಗೆಯ ವರ್ಣನೆಗಳನ್ನು ಕೇವಲ ಏಳು ಶಬ್ದಗಳಲ್ಲಿ ತಂದಿ ರುವನು. ಇಲ್ಲಿಯೂ ಸಹ ಇವು ಪ್ರಾಚೀನ ಕೃತಿಗಳಲ್ಲಿ ವಿಶೇಷವಾಗಿ ಕಂಡುಬರುವು ದರಿಂದ ಈ ಏಳು ಶಬ್ದಗಳ ಅಶ್ಲೀಲತೆಯ ತೀಕ್ಷ್ಣತೆ ಇಲ್ಲವಾಗಿಬಿಟ್ಟಿದೆ. ಮುದ್ದಣನು ರಸಿಕನಾಗಿದ್ದರೂ, ಇವುಗಳನ್ನು ತನ್ನ ಕೃತಿಗಳಲ್ಲಿ ಬಹಳ ಗೌರವಪೂರ್ಣವಾಗಿ ಬಳ ಸಿರುವನೆಂದು ನಾವೀಗ ನಿರ್ಣಯಿಸಬಲ್ಲೆವು. ಇದಲ್ಲದೇ 533 ಶಬ್ದಗಳಲ್ಲಿ ಹೆಚ್ಚಿನವು ಸ್ತ್ರೀತ್ವದ ಗುಣ ಸ್ವಭಾವಗಳನ್ನು ವಿಶಾಲಾರ್ಥದಲ್ಲಿ ಹೇಳುತ್ತವೆ. ಮತ್ತು ಇದರಿಂದಾಗಿ

2 ವಿವರಗಳಿಗಾಗಿ ಕರ್ಮವೀರ 1974, ದೀಪಾವಳಿ ಸಂಚಿಕೆಯಲ್ಲಿ ಬಂದ 'ಮುದ್ದಣ ಕಂಡ ಶಿವ' ಎಂಬ ಲೇಖನವನ್ನು ನೋಡಬಹುದು.

ನಮ್ಮ ಎಣಿಕೆಯಲ್ಲಿ ಕವಿ ತನ್ನ ಕಾವ್ಯಪ್ರತಿಭೆಯಲ್ಲಿ ಉನ್ನತ ಮಟ್ಟಕ್ಕೇರುತ್ತಾನೆ. ಕನ್ನಡ ವಿಮರ್ಶಕರಾದ ಶ್ರೀ ನರಸಿಂಹ ಶಾಸ್ತ್ರಿಗಳು (1970) ಮುದ್ದಣನ ಬಗೆಗೆ ಇದೇ ಅಭಿಪ್ರಾಯ ತಳಿದಿರುವರು. ಆದರೆ ಅವರು ಕೇವಲ ನೂರರಷ್ಟು ಶಬ್ದಗಳನ್ನು ಎತ್ತಿ ತೋರಿಸಿರುವರು. ಕಂಪ್ಯೂಟರ ಸಹಾಯದಿಂದ ಒದಗಿಬಂದ 533 ಶಬ್ದಗಳನ್ನು ಅವಲೋಕನ ಮಾಡುವ ಅವಕಾಶ ಅವರಿಗೆ ಸಿಕ್ಕಿದ್ದರೆ, ಅವರ ಊಹೆ ಪರಿಪೂರ್ಣವೂ ಮತ್ತು ಸಮಗ್ರವೂ ಆಗುತ್ತಿತ್ತು.

6. ಗಣಕಯಂತ್ರ ಮತ್ತು ಭಾರತೀಯ ಸಾಹಿತ್ಯ :

ಮೇಲೆ ಹೇಳಿದಂತೆ ಕೆಲವು ಶಬ್ದಗಳನ್ನು ಮಾತ್ರ ಗಣಕಯಂತ್ರಕ್ಕೆ ಅಳವಡಿಸಲಾಯಿತು. ಇದು ಸಹ ಪ್ರಾಯೋಗಿಕವಾಗಿ ಮಾಡಿದ್ದು. ವಿಷಯನಿಷ್ಠ ವಿವೇಚನೆಯೊಂದಿಗೆ (Qualitative Approach) ಗಣಕಯಂತ್ರದ ಮೂಲಕ ಬರುವ ವಸ್ತುನಿಷ್ಠ ವಿವೇಚನೆಯನ್ನು (Quantitative Approach) ತುಲನೆ ಮಾಡಿ, ಇದು ಎಷ್ಟರಮಟ್ಟಿಗೆ ಸಾಹಿತ್ಯ ವಿಮರ್ಶೆಗೆ ಸಹಾಯ ಮಾಡುತ್ತದೆಂಬುದನ್ನು ಕಂಡುಹಿಡಿಯುವುದೇ ನಮ್ಮ ಉದ್ದೇಶವಾಗಿದೆ. ಈ ದಿಶೆಯಲ್ಲಿ ನಾವು ಕಂಡು ಹಿಡಿದ ನಿರ್ಣಯಗಳು ಅಂತಿಮವಾಗಿರದಿದ್ದರೂ, ಆಶಾದಾಯಕವಾಗಿವೆ.

ಭಾರತೀಯ ಬಹುಸಂಖ್ಯಾಕ ಭಾಷೆಗಳಿಗೆ ಅನೇಕ ಶತಮಾನಗಳ ಸಾಹಿತ್ಯಿಕ ಪರಂಪರೆಯಿದೆ. ಮತ್ತು ಶ್ರೇಷ್ಠ ಕೃತಿಗಳು ರಚಿತವಾಗಿವೆ. ಹೀಗಿದ್ದೂ ಕರ್ತೃತ್ವ ಮತ್ತು ಕವಿಗಳ ಕಾಲದ ಬಗೆಗೆ ಅನಿಶ್ಚಿತವಿರುವ ಅಸಂಖ್ಯ ಉದಾಹರಣೆಗಳಿವೆ. ಪೌರಾಣಿಕ ಗ್ರಂಥಗಳಿಂದ ಸಾಮಾನ್ಯವಾಗಿ ಕಥೆಗಳನ್ನು ಆಯ್ದುಕೊಳ್ಳಲಾಗಿರುತ್ತದೆ. ಮತ್ತು ಹೊಸ ಕೃತಿಯಲ್ಲಿ ಮೂಲ ಕಥೆ ಎಷ್ಟರಮಟ್ಟಿಗೆ ಬಳಕೆಯಾಗಿದೆ ಎಂಬುದನ್ನರಿಯಲು ವಿಮರ್ಶಕನು ಸಂಕಟಪಡಬೇಕಾಗುತ್ತದೆ. ಹಾಗೆಯೆ ಒಬ್ಬ ಗ್ರಂಥಕರ್ತನಿಂದ ಮತ್ತೊಬ್ಬನು ಪ್ರಭಾವಿತನಾದುದಕ್ಕೂ ಅಗಣಿತ ಸಾಕ್ಷಿಗಳಿವೆ. ಇವು ಮತ್ತು ಇಂತಹ ಇತರ ಸಮಸ್ಯೆಗಳು ಪ್ರತಿಯೊಂದು ಪ್ರಮುಖ ಸಾಹಿತ್ಯ ಚರಿತ್ರೆಯಲ್ಲಿ ಸಾಕಷ್ಟಿವೆ. ಗಣಕಯಂತ್ರಗಳು ಸಾಹಿತ್ಯ ಸಂಶೋಧಕರಿಗೆ ಸಮಸ್ಯೆಗಳನ್ನು ಬಿಡಿಸುವಲ್ಲಿ ಸಹಾಯ ಮಾಡಬಲ್ಲವು. ಈ ದಿಶೆಯಲ್ಲಿ ನಮ್ಮದು ಮೊದಲ ಹೆಜ್ಜೆ. ಮತ್ತು ನಮಗೆ ತಿಳಿದಂತೆ ಸಾಹಿತ್ಯರಂಗದಲ್ಲಿ ಗಣಕಯಂತ್ರ ಬಳಸಿದ ಈ ಎತ್ತುಗಡೆಯು ಭಾರತದಲ್ಲಿ ಮೊತ್ತ ಮೊದಲಿನದಾಗಿದೆ.

7. ಕೃತಜ್ಞತೆಗಳು :

ಮುದ್ದಣನ ಬಗೆಗೆ ಉಪಯುಕ್ತ ಸಲಹೆ ನೀಡಿದ ಶ್ರೀ ರಾಮಚಂದ್ರ ಉಚ್ಚಿಲರಿಗೂ, ಗಣಕಯಂತ್ರದ ಬಳಕೆಯಲ್ಲಿ ಅನುಮತಿ ನೀಡಿ ಪ್ರೋತ್ಸಾಹಿಸಿದ ಮುಂಬೈ ಟಾಟಾ

ಮೂಲಭೂತ ಸಂಶೋಧನ ಸಂಸ್ಥೆಯ ಪ್ರೊ. ಆರ್. ನರಸಿಂಹನ್‌ರಿಗೂ ಮತ್ತು ಗಣಕ ಯಂತ್ರದ ಬಳಕೆಗೆ ಬೇಕಾದ ಅಧಿನಿಯಮವನ್ನು (Program) ರೂಪಿಸಿಕೊಟ್ಟ ಡಾ. ಎಸ್. ರಮಣಿಯವರಿಗೂ ನಾನು ಉಪಕೃತನಾಗಿದ್ದೇನೆ.[3]

ಪಟ್ಟಿಕೆ 1

ಸ್ವರಗಳು		ವ್ಯಂಜನಗಳು			
ಅ A	ಎ E	ಕ K	ಞ ZY	ಧ DH	ಱ ZR
ಆ AA	ಏ EE	ಖ KH	ಟ XT	ನ N	ಲ L
ಇ I	ಐ XE	ಗ G	ಠ XTH	ಪ P	ವ V
ಈ II	ಒ ∅	ಘ GH	ಡ XD	ಫ PH	ಶ SH
ಉ U	ಓ ∅ ∅	ಙ XZ	ಢ XDH	ಬ B	ಷ XS
ಊ UU	ಔ X∅	ಚ C	ಣ XN	ಭ BH	ಸ S
ಋ XR	ಅಂ AM	ಛ CH	ತ T	ಮ M	ಹ XH
	ಅಃ AXHA	ಜ J	ಥ TH	ಯ Y	ಳ XL
		ಝ JH	ದ D	ರ R	ೞ ZL

ಕನ್ನಡ ವರ್ಣಮಾಲೆಯ ಆಂಗ್ಲ ಅಕ್ಷರ ಸಂಕೇತಗಳು

3 ಮುಂಬಯಿ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಾಮೆಂಟಲ್ ರಿಸರ್ಚ್ ಇದರ ಗ್ರಂಥಪಾಲರಾದ ಡಾ. ಶ್ರೀನಿವಾಸ ಹಾವನೂರ ಅವರು ಬರೆದು Bulletin of Association for Literary and Linguistic Computing, Vol. 4, (ಪು. 125–130) ಎಂಬ ನಿಯತಕಾಲಿಕೆಯಲ್ಲಿ ಪ್ರಕಟಿಸಿದ "Computer Assistance in Deciding the Authorship of an Indian Poem" ಎಂಬ ಲೇಖನದ ಅನುವಾದವಿದು.

ಪಟ್ಟಿಕೆ 2

ವಿಶೇಷಾಂಶಗಳು	ಈ ವಿಶೇಷಾಂಶವನ್ನು ಸೂಚಿಸುವ ಶಬ್ದ ಸಂಖ್ಯೆ	ಪ್ರತಿಯೊಂದು ವಿಶೇಷಾಂಶದ ಒಟ್ಟು ಶಬ್ದ ಸಂಖ್ಯೆ
(ಅ)	(ಬ)	(ಅ)
1. ರಾಮ (Raama–RM)	134	191
2. ಸೀತಾ (Siitaa–SI)	53	80
3. ರಾವಣ (Raavaxna–RV)	16	23
4. ಹನುಮಾನ್ (Xhanumaan–HN)	11	21
5. ಹರ (Xhara–HR)	188	305
6. ಹರಿ (Xhari–HI)	108	156
7. ಬ್ರಹ್ಮ (Brahma-BR)	51	103
8. ಇಂದ್ರ (Indra–IN)	60	149
9. ಅರಸ (King–AR)	107	404
10. ರಾಕ್ಷಸ (Demon–RK)	40	146
11. ಮುನಿ (Sage–MN)	46	107
12. ಸ್ತ್ರೀ (Woman–ST)	533	899
13. ಸಮೂಹ (Group-SM)	35	140
ಒಟ್ಟು	1,382	2,725

ಆಯ್ದ ವಿಶೇಷಾಂಶಗಳನ್ನು ಸೂಚಿಸುವ ಶಬ್ದ ಸಂಖ್ಯೆ

ಪಟ್ಟಿಕೆ 3

ಅನುಕ್ರಮ ನಂ.	ಶಬ್ದ	ಕೃತಿಗಳು					ಒಟ್ಟು
(ಅ)	(ಬ)	(ಕ)					(ಡ)
1.	ಅಲರೊಡೆಯ (Alaroxdeya)	–	–	1	1	2	4
2.	ಬಾಲೆ (Baale)	6	3	4	14	16	43
3.	ಭೂತಪತಿ (Bhuutapati)	1	1	1	–	–	3
4,	ಬಿದಿ (Bidi)	–	–	1	1	4	6
5.	ಚದುರೆ (Cadure)	3	1	2	–	–	6
6.	ದನುಜ (Danuja)	2	12	4	–	–	18
7.	ದಶರಥರಾಮ(Dasharatharaama)	–	–	1	2	1	4
8.	ಗಡಣ (Gaxdaxna)	2	10	2	–	1	15
9.	ಜಾಣೆ (Jaaxne)	4	1	2	–	2	9
10.	ಕನ್ನೆ (Kanne)	–	2	1	6	–	9
11.	ಕಾಮಿನಿ (Kaamini)	7	10	1	–	6	24
12.	ಖಳ (Khaxla)	7	45	11	1	–	64
13.	ಕಿತ್ತಡಿ (Kittaxdi)	–	–	1	1	3	5
14.	ಮೃಡ (Mxrxda)	4	9	3	–	–	16
15.	ನೀರೆ (Niire)	4	2	2	–	5	13
16.	ಪೆಣ್ (Pexn)	–	–	10	26	13	49
17.	ರಘುಪುಂಗವ (Raghu Pungava)	–	–	2	2	1	5
18.	ರಘುರಾಮ (Raghuraama)	–	–	3	1	2	6
19.	ರಕ್ಕಸ (Rakkasa)	10	35	11	–	–	56
20.	ತಾಪಸ (Taapasa)	1	3	1	1	3	9
21.	ಸೀತಾರಮಣ (Siitaaramaxna)	–	–	2	1	1	4

ಜಾನಪದದಲ್ಲಿ ಕ್ಷೇತ್ರಕಾರ್ಯ - ಕೆಲವು ವಿಚಾರಗಳು

● ಟಿ. ಎಸ್. ಸತ್ಯನಾಥ್

ಕನ್ನಡ ಜಾನಪದ ಅಧ್ಯಯನ ಇನ್ನೂ ಸಂಗ್ರಹದ ಹಂತದಲ್ಲಿದೆ. ಈ ವರೆಗೂ ಜನಪದ ಗೀತೆಗಳ ಸಂಗ್ರಹದಲ್ಲಿ ತೊಡಗಿದ್ದ ಸಂಗ್ರಾಹಕರು ಇತ್ತೀಚೆಗೆ ಕಥೆ, ಗಾದೆ, ಒಗಟು, ಒಡಪು, ನಂಬಿಕೆ, ಶಿಶುಪ್ರಾಸ ಮುಂತಾದ ಪ್ರಕಾರಗಳನ್ನೂ ಸಂಗ್ರಹಿಸಲು ಆರಂಭಿಸಿದ್ದಾರೆ. ಜಾನಪದ ಅದೃಶ್ಯವಾಗತೊಡಗುತ್ತಿದೆ ಎಂಬ ಹೆದರಿಕೆಯಿಂದ ಇವುಗಳನ್ನು ಸಂಗ್ರಹಿಸತೊಡಗಿದ ಸಂಗ್ರಾಹಕರ ಕಾಳಜಿ ನಿಜವಾಗಿಯೂ ಪ್ರಶಂಸನೀಯವೇ ಸರಿ. ಆದರೆ ಜಾನಪದದ ವಿಷಯವ್ಯಾಪ್ತಿಯ ವಿಸ್ತಾರ ಮತ್ತು ಪಾಶ್ಚಾತ್ಯ ಅಧ್ಯಯನಗಳಲ್ಲಿ ಇತ್ತೀಚೆಗೆ ಕಂಡುಬರುತ್ತಿರುವ ಅಂತರ್‌ಶಿಸ್ತಿನ ಸಂಶೋಧನೆಗಳನ್ನು ಗಮನಿಸಿದಾಗ ವೈಜ್ಞಾನಿಕವಾದ ಮತ್ತು ಸಮರ್ಪಕವಾದ ಕ್ಷೇತ್ರಕಾರ್ಯ ಮೆಥಡಾಲಜಿಯನ್ನು ರೂಪಿಸಿಕೊಳ್ಳದೆಯೇ ನಮ್ಮ ಸಂಗ್ರಹಕಾರ್ಯ ನಡೆಯುತ್ತಿರುವುದು ಗೋಚರವಾಗುತ್ತದೆ. ಇದರಿಂದಾಗಿ ಸಂಗ್ರಹವಾಗುತ್ತಿರುವ ಜನಪದ ಸಾಹಿತ್ಯ ಕೇವಲ ಪಠ್ಯರೂಪದಲ್ಲಿ ದೊರೆತಂತಾಗಿ ಅದರ ವಸ್ತು ವಿಶ್ಲೇಷಣೆ (Content Analysis) ಮಾತ್ರ ಸಾಧ್ಯವಾಗುತ್ತದೆ. ಜನಪದ ಪ್ರಕಾರಗಳಿಗೆ ಸಂಬಂಧಿಸಿದಂತೆ ಅಲ್ಪಸ್ವಲ್ಪ ಮಾಹಿತಿಯನ್ನು ನೀಡುವುದನ್ನು ಬಿಟ್ಟರೆ ಉಪಯುಕ್ತತೆಯ ದೃಷ್ಟಿಯಿಂದ ಇತ್ತೀಚಿನ ಸಂಗ್ರಹಗಳು ಯಾವ ವಿಧದಲ್ಲೂ ಹವ್ಯಾಸಿ ಸಂಗ್ರಹಕಾರರ ಸಂಗ್ರಹಗಳಿಗಿಂತ ಭಿನ್ನವಾಗುವುದಿಲ್ಲ. ಪಾಶ್ಚಾತ್ಯ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಗಮನಿಸುವ ವಿಶಾಲ ವ್ಯಾಪ್ತಿಯನ್ನು ಉದಾಹರಿಸಿ ನಾವು ಕ್ಷೇತ್ರಕಾರ್ಯದಲ್ಲಿ ಗಮನಿಸಬೇಕಾದ ಅಂಶಗಳತ್ತ ಜಾನಪದ ವಿದ್ವಾಂಸರ ಗಮನ ಸೆಳೆಯುವುದಲ್ಲದೆ ಅದಕ್ಕೆ ಅಗತ್ಯವಾದ ಒಂದು ಪ್ರಾಯೋಗಿಕ ಪ್ರಶ್ನಾವಳಿಯನ್ನು ಉಪಯೋಗಕ್ಕಾಗಿ ಕೊಡುವುದು ಈ ಪ್ರಬಂಧದ ಉದ್ದೇಶ.

ಪಾಶ್ಚಾತ್ಯರಲ್ಲೂ ಪಠ್ಯದ ಸಂಗ್ರಹಕ್ಕಷ್ಟೇ ಸೀಮಿತವಾಗಿ ಕ್ಷೇತ್ರಕಾರ್ಯ ನಡೆಯುತ್ತಿದ್ದ ಹಂತವೊಂದಿತ್ತು. ಮೆಲಿನೋವ್‌ಸ್ಕಿ ಮತ್ತು ಆ ಪರಂಪರೆಯ ಮಾನವ ಶಾಸ್ತ್ರಜ್ಞರಿಂದ ಸಂದರ್ಭವನ್ನು ಗಮನದಲ್ಲಿಟ್ಟು ಅಧ್ಯಯನ ನಡೆಸಬೇಕೆಂಬ ಧೋರಣೆ ಕೇಳಿಬಂದಿತು. ಭಾಷೆಯ ಅಧ್ಯಯನ ಮಾಡುವಾಗ ಮುಖಭಾವ, ಆಂಗಿಕ ಹಾವಭಾವ ಹಾಗೂ ಭಾಷೆ ಒಂದು ಸಾಮೂಹಿಕ ಪ್ರಕ್ರಿಯೆಯಾಗಿ ವ್ಯವಹರಿಸುವುದನ್ನು ಗಮನಿಸಬೇಕೆಂಬ ಮೆಲಿನೋವ್‌ಸ್ಕಿಯ ಸೂಚನೆ ಮುಂದೆ ಪುರಾಣಗಳ ಅಧ್ಯಯನಕ್ಕೂ ಅನ್ವಯಗೊಂಡಿತು. ಸಂಸ್ಕೃತಿಯ ಹೊರಗೆ ನಿಂತು ಪುರಾಣಗಳ ಅಭ್ಯಾಸ ಮಾಡುವುದಕ್ಕಿಂತ ಅದರ ಸಾಂದರ್ಭಿಕ ವಿವರಗಳತ್ತ ಗಮನಹರಿಸಬೇಕೆಂದು ಅವರು ವಾದಿಸಿದ್ದಲ್ಲದೆ ಟ್ರೊಬ್ರಿಯಾಂಡ್ ದ್ವೀಪಗಳ ಪುರಾಣಗಳ ಅಧ್ಯಯನದಲ್ಲಿ ಸಂದರ್ಭದತ್ತ ಗಮನಹರಿಸುವುದರಿಂದ ಅವುಗಳ ಅರ್ಥವನ್ನು ಹೆಚ್ಚು ಸಮರ್ಪಕವಾಗಿ ವಿವರಿಸಬಹುದೆಂದು ಸಾಧಿಸಿ ತೋರಿಸಿದರು. ಇದರಿಂದಾಗಿ 'ಪಠ್ಯ'ದಿಂದ ವಿದ್ವಾಂಸರ ಗಮನ 'ಸಂದರ್ಭ'ದತ್ತಲೂ ಹೊರಳಿತಲ್ಲದೆ ಮುಂದೆ ಎಥ್ನೋಲಜಿ ತಜ್ಞರ ಒಂದು ಪರಂಪರೆಯೇ ಹುಟ್ಟಿ ಬೆಳೆದು ಅತ್ಯುತ್ತಮ ಕ್ಷೇತ್ರಕಾರ್ಯ ನಡೆಯುವಂತಾಯಿತು. ಪಾಶ್ಚಾತ್ಯ ಜಾನಪದ ವಿದ್ವಾಂಸರಲ್ಲೂ ಸಂದರ್ಭವನ್ನು ಗಮನದಲ್ಲಿಟ್ಟು ಅಧ್ಯಯನ ಮಾಡುವ ಪ್ರವೃತ್ತಿ ಕಳೆದ ದಶಕದಲ್ಲಷ್ಟೇ ಆರಂಭವಾಯಿತು.

ಭಾಷಾ ವಿಜ್ಞಾನಿ ನೋಮ್ ಚೋಮ್‌ಸ್ಕಿಯ ಹೊಸ ಸಿದ್ಧಾಂತಗಳು ಸಂಸ್ಕೃತಿಯ ಅಧ್ಯಯನ, ಎಲ್ಲ ಶಿಸ್ತುಗಳ ಅಧ್ಯಯನ ಕ್ರಮದಲ್ಲೂ ಗಮನಾರ್ಹ ಬದಲಾವಣೆಗಳನ್ನು ಮಾಡಿದವು. ಭಾಷೆಯ ರಚನೆಯಲ್ಲಿ ಕಂಡುಬರುವ ಮೇಲ್ಪದರದ ರಚನೆ (Surface structure) ಮತ್ತು ಆಂತರ್ಯದ ರಚನೆ (Deep structure)ಗಳನ್ನು ವಿವರಿಸಲು ಬಳಸಿದ 'ಟ್ರಾನ್ಸ್‌ಫೊರ್ಮೇಷನ್' ಪರಿಕಲ್ಪನೆ ಸಂಸ್ಕೃತಿಯ ಎಲ್ಲ ಅರ್ಥ ವಲಯಕ್ಕೂ ವ್ಯಾಪಿಸಿ ಮೇಲ್ಪದರದ ಅರ್ಥ (Surface meaning) ಮತ್ತು ಆಂತರ್ಯದ ಅರ್ಥ (Deep meaning) ಗಳಿಗೆ ವಿಸ್ತೃತಗೊಂಡಿತು. ಅವರ ಜನರೇಟಿವ್ ವ್ಯಾಕರಣದ ಹಿಂದಿನ ಪರಿಕಲ್ಪನೆಯಿಂದ ಭಾಷೆಯ ಪ್ರಕ್ರಿಯೆಯಲ್ಲಿ ವ್ಯಾಕರಣದ ನಿಯಮಗಳನ್ನು ಕಲಿಯದೆಯೂ ಭಾಷೆಯ ಅಸಂಖ್ಯಾತ ವಾಕ್ಯರಚನೆಗಳ ಹಿಂದೆ ಪ್ರದರ್ಶಿಸುವ ನಿಯತವಾದ ರಚನಾನಿಯಮಗಳನ್ನು ಅಂತಸ್ಥ ಮಾಡಿಕೊಳ್ಳಬಲ್ಲ ಸಾಮರ್ಥ್ಯ ಆ ಮಾತೃಭಾಷೆಯನ್ನಾಡುವ ಎಲ್ಲ ವ್ಯಕ್ತಿಗೂ ಇರುತ್ತದೆ ಎಂಬ ಅಂಶ ಬೆಳಕಿಗೆ ಬಂದಿತು. ಈ ರೀತಿ ಭಾಷೆಯ ಹಿಂದೆ ಪ್ರವರ್ತಿಸುವ ನಿಯಮಗಳನ್ನು ಭಾಷಾವಿಜ್ಞಾನಿಗಳು ಗುರುತಿಸಿ ತೋರಿಸಿದರು. ಇದರಿಂದ ಪ್ರೇರಿತರಾದ ಹಲವು ಸಾಮಾಜಿಕ ಭಾಷಾ ವಿಜ್ಞಾನಿಗಳು ಭಾಷೆ ಒಂದು ಸಾಂಸ್ಕೃತಿಕ ನಡುವಳಿಕೆಯಾದ್ದರಿಂದ ಯಾವದೇ ಸಾಂಸ್ಕೃತಿಕ ನಡುವಳಿಕೆ ಈ ರೀತಿ ನಿಯತವಾದ ನಿಯಮಗಳ ಚೌಕಟ್ಟಿನಲ್ಲಿಯೇ ಪ್ರವರ್ತಿಸಬೇಕು ಎಂದು ಅದನ್ನು ಗುರುತಿಸಲು ತೊಡಗಿದರು. ಮಾನವನ ವಿವಿಧ ನಡವಳಿಕೆಗಳತ್ತ

ಮತ್ತು ಅವುಗಳ ಹಿಂದಿರುವ ಸಾಂಕೇತಿಕ ಅರ್ಥದತ್ತ ಗಮನಹರಿದು ಅವುಗಳನ್ನು ಅಧ್ಯಯನ ಮಾಡಲು ಕ್ಷೇತ್ರಕಾರ್ಯದಲ್ಲಿ ಗಮನಾರ್ಹ ಬದಲಾವಣೆಗಳು ಕಂಡುಬಂದವು. ಜಾನಪದ ದಲ್ಲೂ ವಿದ್ವಾಂಸರ ಗಮನ ಪಠ್ಯ(Text)ದಿಂದ ಪ್ರದರ್ಶನ (Performance) ಮತ್ತು ಸಂವಹನ (Communication)ಗಳ ಕಡೆಗೆ ಹರಿದು ಅವುಗಳ ಹಿಂದೆಯೂ ನಿಯತವಾದ ನಿಯಮಗಳು ಗೋಚರಿಸುತ್ತಿವೆ ಎಂಬ ಅಭಿಪ್ರಾಯದ ಸಿದ್ಧಾಂತವನ್ನು ಕೆಳಗಿನ ಮಾತುಗಳಲ್ಲಿ ನೋಡಬಹುದು : "The performer of folklore knows – though he may not be overtly aware of such knowledge –a set of rules, a system of communication, a grammar in which the relationships between the attributes of verbal messages and the social-cultural reality are in constant interplay transforming symbols and metaphors, styles and structures, themes and forms in response to social variables of a situation." [1]

ಪ್ರದರ್ಶನ ಮತ್ತು ಸಂವಹನ ಈ ಎರಡು ಪರಿಕಲ್ಪನೆಗಳನ್ನು ಇಂದು ವ್ಯಾಪಕ ವಾಗಿ ಬಳಸಲಾಗುತ್ತಿದೆ. ಪ್ರದರ್ಶನದ ಮೂಲವನ್ನು ಸಸೂರ್‌ನ 'PAROLE' ನಲ್ಲಿಯೇ ಗುರುತಿಸಬಹುದು. ಅಲ್ಲಿ ಅದನ್ನು 'executive side of langu- age' ಎಂದು ವಿವರಿಸಲಾಗುತ್ತದೆ.[2] ಸಮಕಾಲೀನ ಟ್ರಾನ್ಸ್‌ಫೊರ್ಮೇಷನ್ ಜನರೇಟಿವ್ ವ್ಯಾಕರಣದ ಸಿದ್ಧಾಂತಗಳಲ್ಲಿಯೂ ಪ್ರದರ್ಶನವೆಂದರೆ ಭಾಷೆಯು ಬಳಕೆಯಾಗುವ ರೀತಿ ಎಂದೇ ಅನ್ವಯವಾಗುತ್ತದೆ. ಮತ್ತು ವ್ಯಕ್ತಿಯಲ್ಲಿ ಅಂತಸ್ಥವಾಗಿರುವ ಭಾಷಿಕ ಸಾಮರ್ಥ್ಯ (Competence)ಕ್ಕಿಂತ ಅಸಮರ್ಪಕವಾದುದು ಎಂದು ಬಗೆಯ ಲಾಗುತ್ತದೆ. ಜಾನಪದದಲ್ಲಿ ಪ್ರದರ್ಶನವೆಂದರೆ ಒಂದು ಸಂಸ್ಕೃತಿಯ ಪರಂಪರೆ ದೃಶ್ಯ ರೂಪದಲ್ಲಿ ಅಭಿವ್ಯಕ್ತಗೊಳ್ಳುವ ಪ್ರಕ್ರಿಯೆ ಎಂಬ ಅರ್ಥವನ್ನು ಪಡೆದಿದೆ. ಸಂವಹನ ಎಂಬ ಪದವೂ ಭಾಷಾಶಾಸ್ತ್ರಕ್ಕೆ ಸಂಬಂಧಿಸಿದ ಪದವಾಗಿದ್ದು ಅದನ್ನು ಸಂಸ್ಕೃತಿಯ ಪರಿವಲಯಕ್ಕೆ ತಂದವರು ಡೆಲ್ ಹೈಮ್ಸ್. ಸಂಸ್ಕೃತಿಯಲ್ಲಿ ಈ ಪದ ಎಲ್ಲ ರೀತಿಯ ಸಂವಹನ ವ್ಯವಸ್ಥೆಗಳಿಗೆ (Communication Systems) ಅನ್ವಯಿಸಲಾಗು ತ್ತದೆ. ಸಂಸ್ಕೃತಿಗಳಲ್ಲಿ ಎಲ್ಲ ಸಂವಹನ ಜಾಲ (Network)ಗಳ ಹಿಂದೆ ನಿಯತವಾಗಿ

---

1. Dan Ben–Amos and Kennith S. Goldstein., (ed.) Folklore, Performance and Communication., The Hague–Paris, Mouton, (1975), P. 3.
2. Jonathan Keller, Saussure, Glasgow, Fontana (1976), P. 29.

ಪ್ರವರ್ತಿಸುವ ನಿಯಮಗಳಿರುತ್ತವೆ. ಕೇವಲ ಭಾಷೆಯಷ್ಟೇ ಅಲ್ಲದೆ ಭಾಷೆಯ ಉಪಯೋಗದ ಹಿಂದಿರುವ ಸಾಂಸ್ಕೃತಿಕ ಅರ್ಥವಲಯದ ಹಿಂದೆ ಕೂಡ ಈ ನಿಯಮಗಳು ಪ್ರವರ್ತಿಸುತ್ತಿರುತ್ತವೆ ಎಂಬುದು ಇಲ್ಲಿನ ತತ್ವವಾಗಿದೆ. ಭಾಷೆಯ ತಾರ್ಕಿಕವಾಗಿ ಜೋಡಣೆಗೊಂಡ ಪದಗಳ ಅರ್ಥಕ್ಕೂ ಸಂವಹನದ ಅರ್ಥಕ್ಕೂ ವ್ಯತ್ಯಾಸವಿದೆ. ಇಲ್ಲಿನ ಅರ್ಥವನ್ನು —" Meaning in that sense is not only pharaphrase of a statement into its logical constituents, but the comprehension of the entire system of relationship that made the communication of an act of speaking possible, including its cognetive, expressive and behavioral dimension " ಎಂದು ವಿವರಿಸಲಾಗಿದೆ.[3]

ಜಾನಪದದ ಪ್ರಕ್ರಿಯೆಯಲ್ಲಿ ಬದಲಾದ ದೃಷ್ಟಿಕೋಣಗಳಿಂದ ಕ್ಷೇತ್ರಕಾರ್ಯದ ಆಯಾಮ ಪಡೆದುಕೊಂಡ ಹೊಸ ತಿರುವುಗಳನ್ನು ಒಂದೆರಡು ನಿದರ್ಶನಗಳ ಮೂಲಕ ಸ್ಪಷ್ಟಪಡಿಸಲು ಪ್ರಯತ್ನಿಸಬಹುದು. ಇಂತಹ ಒಂದು ಅಧ್ಯಯನವನ್ನು ಕ್ಯಾಂಟೋಮಿಟ್ರಿಕ್ಸ್ (Cantometrics) ಎಂದು ಕರೆಯಲಾಗಿದೆ. ಇಲ್ಲಿ, ಪ್ರಪಂಚದ ಎಲ್ಲ ಸಂಸ್ಕೃತಿಗಳಲ್ಲೂ ಜನಪದ ಗೀತೆಗಳ ಶೈಲಿ, ಅದರ ಸಾಂಸ್ಕೃತಿಕ ರಚನೆ (Structure) ಯ ಕೆಲವು ಅಂಶಗಳನ್ನು ಸಂಕೇತಿಸುತ್ತದೆ ಮತ್ತು ಅದನ್ನು ಸುವ್ಯವಸ್ಥಿತಗೊಳಿಸುತ್ತದೆ ಎಂಬ ಸಿದ್ಧಾಂತವನ್ನು ಮಂಡಿಸಲಾಗಿದೆ. ಮತ್ತು ಜನಪದ ಗೀತೆಗಳ ಹಿಂದೆ ಸಾರ್ವತ್ರಿಕವಾಗಿ ಪ್ರದರ್ಶಿಸುವ ನಿಯಮಗಳನ್ನು ಗುರುತಿಸಿದ್ದಲ್ಲದೆ ಅವುಗಳ ಸಾಮಾಜಿಕ ನಿಯೋಗಗಳನ್ನೂ ವಿವರಿಸಲಾಗಿದೆ. ಅಲೆನ್ ಲೋಮ್ಯಾಕ್ಸ್ ಇದರ ಬಗ್ಗೆ —" For the first time predictable and universal relationships have been established between the expressive and the communication process on the one hand and social structure and cultural pattern on the other hand " ಎಂದಿದ್ದಾರೆ.[4] ಸ್ಪೆಯಿನ್ ದೇಶದ ಗೀತೆಗಳನ್ನು ಇದಕ್ಕೆ ದೃಷ್ಟಾಂತವಾಗಿ ತೆಗೆದುಕೊಳ್ಳಬಹುದು. ಈ ದೇಶದ ಹಾಡುಗಳು ಸ್ತ್ರೀಯರ ವಿವಾಹಪೂರ್ವ ಲೈಂಗಿಕ ಸಂಬಂಧಗಳನ್ನು ನಿಯೋಗವಾಗಿಟ್ಟುಕೊಂಡು ಪ್ರವರ್ತಿಸುತ್ತವೆ. ಪೌರ್ವಾತ್ಯ ರೀತಿಯ ಸಾಮಾಜಿಕ ನಿಬಂಧನೆಗಳನ್ನು ಹೊಂದಿರುವ ದಕ್ಷಿಣ ಸ್ಪೆಯಿನ್‌ನಲ್ಲಿ ಕಿವಿಗೆ ಕರ್ಕಶವೆನಿಸುವ, ಎತ್ತರಿಸಿದ ಶೃತಿಯ ಹಾಗೂ ಬಾಯನ್ನು ಕಿರಿದಾಗಿ ತೆಗೆದು ಹಾಡುವ ಮೇಳಗೀತೆಗಳು ರೂಢಿಯಲ್ಲಿವೆ.

3. Dan Ben-Amos and Kennith S. Goldstein, op. cit., p. 4.
4. Alan Lomax, Folk Song Style and culture, Washington, American Association for the Advancement of Science, Publication No. 88, (1971), p. 4.

ಹೆಚ್ಚು ಸ್ವಾತಂತ್ರ್ಯವಿದ್ದು ಗಂಡು – ಹೆಣ್ಣುಗಳ ಮಿಲನಕ್ಕೆ ಅವಕಾಶವಿರುವ ಉತ್ತರ ಸ್ಪೆಯಿನ್‌ನಲ್ಲಿ ಸುಮಧುರ ಹೊಂದಾಣಿಕೆಯ ಸ್ವರದ, ಕೆಳಶ್ರುತಿಯ ಹಾಗೂ ಬಾಯನ್ನು ಸಹಜವಾಗಿಯೇ ತೆರೆದು ಹಾಡುವ ಮೇಳ ಗೀತೆಗಳು ಕಂಡು ಬರುತ್ತವೆ.

ಈ ಕ್ಯಾಂಟೋಮಿಟ್ರಿಕ್ಸ್ ಅಧ್ಯಯನದಲ್ಲಿ ಮಾನವಶಾಸ್ತ್ರಜ್ಞರು, ಭಾಷಾ ವಿಜ್ಞಾನಿಗಳು, ಎಥ್ನೋಲಜಿಸ್ಟ್, ಸಂಗೀತ ವಿಶ್ಲೇಷಣಾ ತಜ್ಞರು, ನೃತ್ಯ ಮತ್ತು ನಡವಳಿಕೆಗಳ ವಿಶ್ಲೇಷಣಾ ತಜ್ಞರು, ಸಂಖ್ಯಾಕಲನ ಶಾಸ್ತ್ರಜ್ಞರು ಹಾಗೂ ಕಂಪ್ಯೂಟರ್ ತಜ್ಞರು ಒಟ್ಟಾಗಿ ಸಹಕರಿಸಿ ಜನಪದ ಗೀತೆಗಳ ವಾದ್ಯ ಸಂಗೀತ, ಮೇಳಗೀತ, ಧ್ವನಿಶಾಸ್ತ್ರ, ವಸ್ತು ಮತ್ತು ನೃತ್ಯಗಳ ಹಿಂದಿರುವ ನಿಯಮಬದ್ಧ ಮಾದರಿಗಳನ್ನು ಗುರುತಿಸಿದ್ದಾರೆ. ಈ ಅಧ್ಯಯನಕ್ಕಾಗಿ ಮಾಡಿದ ಕ್ಷೇತ್ರಕಾರ್ಯ ಮತ್ತು ಸಂಗ್ರಹಣೆಯಿಂದ ಅಮೇರಿಕದ ಕೋಲಂಬಿಯಾ ವಿಶ್ವವಿದ್ಯಾಲಯದಲ್ಲಿ ಸುಮಾರು 2000 ಧ್ವನಿಮುದ್ರಿತ ಟೇಪುಗಳು ಮತ್ತು 400 ಎಲ್. ಪಿ. ರೆಕಾರ್ಡ್‌ಗಳಷ್ಟು ದೊಡ್ಡದಾದ ಜಗತ್ತಿನ ಜನಪದ ಗೀತೆಗಳ ಸಂಗ್ರಹಾಲಯವೊಂದು ಸ್ಥಾಪಿತವಾಗಿದೆ. ಮತ್ತು ಜನಪದ ನೃತ್ಯಗಳ ಒಂದು ಚಲನಚಿತ್ರ ಸಂಗ್ರಹಾಲಯವೂ ಇದೆ. ಚೈನಾ ಒಂದನ್ನು ಬಿಟ್ಟು ಹೆಚ್ಚು ಕಡಿಮೆ ಜಗತ್ತಿನ ಎಲ್ಲ ದೇಶಗಳ ಜನಪದ ಗೀತೆ ಮತ್ತು ನೃತ್ಯಗಳ ಸಂಗ್ರಹ ಇಲ್ಲಿದೆ.

ಭಾಷಾವಿಜ್ಞಾನ ಮತ್ತು ಜಾನಪದಗಳಲ್ಲದೆ ಹಲವಾರು ಮಾನವಶಾಸ್ತ್ರಜ್ಞರು ಪುರಾಣ, ನಂಬಿಕೆಗಳು ಮತ್ತು ಧಾರ್ಮಿಕ ಆಚರಣೆಗಳನ್ನು ಪ್ರದರ್ಶನ ಮತ್ತು ಸಂವಹನ ಗಳ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಇವುಗಳಲ್ಲಿ ವಿಕ್ಟರ್ ಟರ್ನರ್‌ರ ಜಾಂಬಿಯಾದ ನೆಡುಂಬು ಆದಿವಾಸಿಗಳ ಬಗ್ಗೆ ಮಾಡಿದ ಅಧ್ಯಯನ ಗಮನಾರ್ಹವಾದುದು. ನೆಡುಂಬುಗಳ ಆರ್ಥಿಕ ಚಟುವಟಿಕೆಯಾದ ಬೇಟೆಯನ್ನು ಅವರ ಧಾರ್ಮಿಕ ಆಚರಣೆಯಲ್ಲಿರುವ ಬೇಟೆಯ ಬೆನ್ನಟ್ಟುವಿಕೆಯ ಆಚರಣೆಯನ್ನು ಅರಿಯದೆ ಅರ್ಥ ಮಾಡಿಕೊಳ್ಳುವುದು ಕಷ್ಟ ಎಂದು ಅವರು ಹೇಳುತ್ತಾರೆ. ಬೇಟೆಯ ಶಕ್ತಿಯನ್ನು ಕುರಿತು ಅವರ ಧಾರ್ಮಿಕ ಆಚರಣೆಯ ಸಂಕೇತಗಳಲ್ಲಿ ಅಡಗಿರುವ ಸೂಚನೆಗಳು ನೆಡುಂಬು ಸಾಮಾಜಿಕ ವ್ಯವಸ್ಥೆಯ ಬಗ್ಗೆ ಕೂಡ ಬೆಳಕನ್ನು ಬೀರುತ್ತವೆ. ನೆಡುಂಬು ಸಮಾಜದಲ್ಲಿ ಧಾರ್ಮಿಕ ವ್ಯವಸ್ಥೆ ಅವರ ಜೀವನದ ಎಲ್ಲ ಮುಖಗಳೊಂದಿಗೆ ಹಾಸು ಹೊಕ್ಕಾಗಿ ಹೆಣೆದುಕೊಂಡಿರುವುದು ಕಂಡು ಬರುತ್ತದೆ. ಅವರ ಆಚರಣೆಯಲ್ಲಿ ಉಪ ಯೋಗಿಸಲಾಗುವ ಒಂದೊಂದು ಪದಾರ್ಥ, ಪ್ರತಿಯೊಂದು ಚಲನವಲನವೂ, ಶಾಬ್ದಿಕ ಅಭಿವ್ಯಕ್ತಿಯ ಒಂದೊಂದು ತುಣುಕೂ. ಕಾಲದೇಶಾದಿಗಳ ಪ್ರತಿಯೊಂದು ಘಟಕವೂ ದಿನ ನಿತ್ಯದ ಬಳಕೆಯಲ್ಲಿ ಸ್ವಾಭಾವಿಕವಾಗಿ ನೀಡುವ ಅರ್ಥಕ್ಕಿಂತ ಭಿನ್ನವಾದ ಸಾಂಕೇತಿಕ ಅರ್ಥ ವಲಯವನ್ನು ಪಡೆದಿರುತ್ತವೆ.[5] ಇಂತಹ ಅಧ್ಯಯನಗಳ ಕ್ಷೇತ್ರಕಾರ್ಯವನ್ನು ಟರ್ನರ್

5. Victor W. Turner, The Ritual Process, London, Routledge and Keganpaul, (1969), P. 15.

ರವರು ವಾಸ್ತವಿಕವಾಗಿ ನೆಡುಂಬುಗಳೊಂದಿಗೆ ನೆಲೆಸಿ ಅವರಲ್ಲಿಯೇ ಒಬ್ಬರಾಗಿ ಬದುಕುತ್ತಾ ಮಾಡಿದ್ದಾರೆ.

ಮೇಲಿನ ನಿದರ್ಶನಗಳು ಪಾಶ್ಚಾತ್ಯರ ಅಧ್ಯಯನದಲ್ಲಿ ಕ್ಷೇತ್ರಕಾರ್ಯದ ಬಹುಮುಖತ್ವ ಮತ್ತು ವಿಶಾಲವ್ಯಾಪ್ತಿಯನ್ನು ಸ್ಪಷ್ಟಪಡಿಸುತ್ತವೆ. ಆದರೂ ಇವುಗಳಲ್ಲಿನ ಲೋಪದೋಷಗಳನ್ನು ಗುರುತಿಸಿ ಸಮರ್ಪಕಗೊಳಿಸಲು ಅವರು ಪ್ರಯತ್ನ ಪಡುತ್ತಿದ್ದಾರೆ. ಧಾರ್ಮಿಕ ನಂಬಿಕೆ ಮತ್ತು ಆಚರಣಾ ವಿಧಿ–ವಿಧಾನಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ನಡೆದಿರುವ ಸಂಶೋಧನೆಗಳನ್ನು ಗಮನಿಸುತ್ತಾ ಭಾಷಾಶಾಸ್ತ್ರದಲ್ಲಿ ಟ್ರಾನ್ಸ್‌ಫೊರ್ಮೇಷನ್ ಜನರೇಟಿವ್ ಪಂಥ ಪ್ರಮುಖ ಪಾತ್ರ ವಹಿಸಿದಂತೆ ಮಾನವ ಶಾಸ್ತ್ರದಲ್ಲಿ ಒಂದು ಪ್ರಮುಖ ಪಂಥ ಕಂಡುಬರದಿರುವುದು ಹಾಗೂ ಕಳೆದ ದಶಕದ ಸಂಶೋಧನೆಗಳಲ್ಲಿ ವಿವಾದಾಸ್ಪದ ಚರ್ಚೆಯೇ ಕಂಡುಬರದಿರುವ ಕೊರತೆಯನ್ನು ಭಾರತಿ ತೋರಿದ್ದಾರೆ. ಈ ಅಧ್ಯಯನಗಳನ್ನು (i) descriptivists, (structurists, taxonomists, story tellers), (ii) psychologists, (iii) historians ಎಂದು ವಿಭಜಿಸಿ ಅದರಲ್ಲಿ story tellers, psychologists, ಮತ್ತು historians ರ ಅಧ್ಯಯನ ಕ್ರಮಗಳನ್ನು ಒಪ್ಪದೇ ಹೋದರೂ "....they certainly produce permissible ethnological reports' ಎಂದು ಅವರ ಕ್ಷೇತ್ರಕಾರ್ಯವನ್ನು ಮಾತ್ರ ಒಪ್ಪಿಕೊಳ್ಳುತ್ತಾರೆ.[6]

ನಮ್ಮ ಕ್ಷೇತ್ರ ಕಾರ್ಯದಲ್ಲಿ ಪಾಶ್ಚಾತ್ಯರ ಬಹುಮುಖತ್ವ ಮತ್ತು ವಿಶಾಲವ್ಯಾಪ್ತಿಯನ್ನು ಅಳವಡಿಸಿಕೊಳ್ಳಲು ನಮ್ಮ ಸಂಗ್ರಹಕಾರ್ಯದಲ್ಲಿ ಮೂಲಭೂತ ಬದಲಾವಣೆಗಳನ್ನು ಮಾಡಬೇಕಾಗಿದೆ. ನಮ್ಮ ಈವರೆಗಿನ ಸಂಗ್ರಹಕಾರ್ಯ ಬಹಳಷ್ಟು ಶಾಬ್ದಿಕ ಜಾನಪದವನ್ನು ಕೈಯಲ್ಲಿ ಬರೆದು ಕೊಳ್ಳುವುದರ ಮೂಲಕ ನಡೆದಿದೆ. ಕೆಲವು ಸಂಗ್ರಹಗಳನ್ನು ಧ್ವನಿಮುದ್ರಣದ ಆಧಾರದ ಮೇಲೆ ತರಲಾಗಿದೆಯಾದರೂ ದೃಶ್ಯಮಾಧ್ಯಮದ ಯಾವ ವಿವರಗಳೂ ದೊರಕುವಂತಿಲ್ಲ. ಪಾಶ್ಚಾತ್ಯರಲ್ಲಿ ದೃಶ್ಯಸಂಗ್ರಹಣೆಗಾಗಿ ವಿಡಿಯೋ ಟೇಪ್ (video tape), ಸ್ಥಿರ ಚಿತ್ರಣ ಮತ್ತು ಚಲನಚಿತ್ರ, ಹಾಗೂ ರೇಖಾಚಿತ್ರ ಮತ್ತು ಬಣ್ಣದ ಚಿತ್ರಗಳ ನೆರವನ್ನು ಪಡೆಯುತ್ತಾರೆ. ಶಬ್ದ ಮಾಧ್ಯಮಕ್ಕೆ ಟೇಪ್ ರೆಕಾರ್ಡರನ್ನು ಉಪಯೋಗಿಸುತ್ತಾರೆ. ಇದರ ಜೊತೆಗೆ ಕ್ಷೇತ್ರಕಾರ್ಯಕ್ಕಾಗಿ ಅವಕ್ಕೆ ಸೂಕ್ತವಾದ ಪ್ರಶ್ನಾವಳಿಯೊಂದನ್ನು ಮಾಹಿತಿಗಾಗಿ ಇಟ್ಟುಕೊಳ್ಳಲಾಗುತ್ತದೆ. ಆಚರಣೆಗಳ ವಿವರವನ್ನು ಪ್ರಶ್ನಾವಳಿಯಿಂದ ಗಳಿಸಿದ ನಂತರ ಅದರ ದೃಶ್ಯ ಅಭಿವ್ಯಕ್ತಿಯನ್ನು

---

6. Aghehananda Bharati (ed), The Realm of the Extra-Human Agents and Audiences, The Hague-Paris, Mouton, (1976) p. 2–3.

ಕ್ಯಾಮರಾ ಮತ್ತು ಶಾಬ್ದಿಕ ಅಭಿವ್ಯಕ್ತಿಯನ್ನು ಟೇಪ್ ರೆಕಾರ್ಡರ್ ಸೀಡುತ್ತದೆ. ಪಾಶ್ಚಾತ್ಯರಲ್ಲಿ ಇತ್ತೀಚೆಗೆ ದೃಶ್ಯಮಾನವಶಾಸ್ತ್ರ (visual anthropology) ಎಂಬ ವಿಭಾಗ ಪ್ರಮುಖವಾಗಿ ಬೆಳೆಯುತ್ತದೆ. ಚಿಕಾಗೋದಲ್ಲಿ ನಡೆದ 9ನೆಯ ಅಂತರರಾಷ್ಟ್ರೀಯ ಮಾನವವಿಜ್ಞಾನ ಮತ್ತು ಎಥ್ನೊಲಾಜಿಕಲ್ ಸೈನ್ಸ್‌ಗಳ ಕಾಂಗ್ರೆಸ್ ದೃಶ್ಯಮಾನವಶಾಸ್ತ್ರಕ್ಕೇ ಗೋಷ್ಠಿಯೊಂದನ್ನು ನಡೆಸಿತು. ಇದರಲ್ಲಿ ಪ್ರಬುದ್ಧ ಹಂತದಲ್ಲಿರುವ ಪಾಶ್ಚಾತ್ಯ ಕ್ಷೇತ್ರಕಾರ್ಯದ ಬಗ್ಗೆ ಮಾರ್ಗರೆಟ್ ಮೀಡ್ ಕಟುಟೀಕೆಯನ್ನು ಮಾಡಿದ್ದರೂ ನಮ್ಮ ಜಾನಪದಕ್ಕೂ ಆ ಮಾತುಗಳು ಹೇಳಿದಂತಿವೆ : "....while departments of Anthropology continue to send field workers out with no equipment beyond a pencil and a note book and perhaps a few tests or questionnaires"[7]. ದೃಶ್ಯ ಮತ್ತು ಶಬ್ದಮಾಧ್ಯಮಗಳ ಸಂಗ್ರಹಕ್ಕೆ ನಮ್ಮ ಎದುರಿಗೆ ಸವಾಲಾಗುವ ಆರ್ಥಿಕ ಸಂಪನ್ಮೂಲಗಳ ಕೊರತೆ ಲೇಖಕನಿಗೆ ಸ್ಪಷ್ಟವಾಗಿ ಗೊತ್ತಿದೆ. ಈ ಕಾರಣವನ್ನು ಮುಂದೆ ಮಾಡಿ ಕೈಕಟ್ಟಿ ಕೂರುವುದಕ್ಕಿಂತ ಏನಾದರೂ ಪ್ರಯತ್ನ ಮಾಡುವ ಅವಶ್ಯಕತೆ ಇದೆ. ಈ ಸಂದರ್ಭದಲ್ಲಿ ಒಂದೆರಡು ಸೂಚನೆಗಳನ್ನು ಮಾಡಬಹುದು.

(i) ಕರ್ನಾಟಕದಲ್ಲಿನ ಮೂರೂ ವಿಶ್ವವಿದ್ಯಾಲಯಗಳು ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಜಾನಪದದ ಬಗ್ಗೆ ಅಧ್ಯಯನ ನಡೆಸುತ್ತಿವೆ. ಪಾಶ್ಚಾತ್ಯರಲ್ಲಿ ಜಾನಪದ ಅಧ್ಯಯನ ಸಾಮಾನ್ಯವಾಗಿ ಮಾನವಶಾಸ್ತ್ರ ವಿಭಾಗದ ಒಂದು ಅಂಗವಾಗಿ ನಡೆಯುತ್ತದೆ. ಆದರೆ ನಮ್ಮಲ್ಲಿ ಅದು ಕನ್ನಡ ವಿಭಾಗದ ಅಂಗವಾಗಿ ನಡೆಯುತ್ತಿದೆ. ಇದರಿಂದಾಗಿ ಮಾನವಶಾಸ್ತ್ರದ ಪರಿಕಲ್ಪನೆಗಳ ಹಿನ್ನೆಲೆ ನಮ್ಮ ಜಾನಪದ ಅಧ್ಯಯನ ಮತ್ತು ಕ್ಷೇತ್ರಕಾರ್ಯಗಳಲ್ಲಿ ಕಾಣದೇ ಹೋಗಿದೆ. ಜಾನಪದದ ಜೊತೆಗೆ ವಿಶ್ವವಿದ್ಯಾಲಯಗಳಲ್ಲಿ ಬೋಧಿಸಲಾಗುವ ಮಾನವಶಾಸ್ತ್ರದ ಪಠ್ಯಕ್ರಮ ಅದರ ಪಾಡಿಗೆ ಅದು ದೂರ ಉಳಿದಿದೆ. ಸಾಂಸ್ಕೃತಿಕ ಮಾನವಶಾಸ್ತ್ರದ ಸ್ಪಷ್ಟ ತಿಳುವಳಿಕೆ ನಮ್ಮ ಜಾನಪದ ಅಧ್ಯಯನದಲ್ಲಿ ಮೂಡುವವರೆಗೆ ನಮ್ಮ ಕ್ಷೇತ್ರಕಾರ್ಯ ವೈಜ್ಞಾನಿಕ ಮಟ್ಟವನ್ನು ತಲುಪಲು ಸಾಧ್ಯವಿಲ್ಲ. ಇದರ ಬಗ್ಗೆ ವಿಶ್ವವಿದ್ಯಾಲಯಗಳು ಗಮನಹರಿಸಬೇಕಾದ ಅಗತ್ಯವಿದೆ.

(ii) ನಮ್ಮ ಮೂರೂ ವಿಶ್ವವಿದ್ಯಾಲಯಗಳು ಮತ್ತು ಪರಿಷತ್ತು ಯಾವ ವಿಧವಾದ ಅಂತರ್‌ಕ್ರಿಯೆಗೂ ಒಳಪಡದೆ ತಮ್ಮ ಪಾಡಿಗೆ ತಾವು ಕೋಣೀಕೃತ (compartmentalized) ಅಧ್ಯಯನಗಳಲ್ಲಿ ತೊಡಗಿವೆ. ಪರಿಷತ್ತು ಎರಡು

7. Margaret Mead, Visual Anthropology in a Discipline of Words. In Principles of Visual Anthropology, (ed. Paul Hockings) The Hague–Paris, Mouton, (1975), p.

ವರ್ಷಗಳ ಹಿಂದೆ ಲಕ್ಷಾಂತರ ರೂಪಾಯಿಗಳನ್ನು ವ್ಯಯಿಸಿ ಅವೈಜ್ಞಾನಿಕವಾಗಿ ನಡೆದ ಕ್ಷೇತ್ರಕಾರ್ಯದಿಂದ ಪುಸ್ತಕವೊಂದನ್ನು ಹೊರತಂದಿತು. ಚಲನಚಿತ್ರ ಮತ್ತು ಧ್ವನಿ ಮುದ್ರಣದ ಮೂಲಕ ಕ್ಷೇತ್ರಕಾರ್ಯದಲ್ಲಿ ತೊಡಗಲು ಆರ್ಥಿಕ ಸಂಪನ್ಮೂಲಗಳ ಕೊರತೆ ಇರುವಾಗ ಎಲ್ಲ ಸಂಸ್ಥೆಗಳ ಜಾನಪದ ವಿದ್ವಾಂಸರು ಒಟ್ಟಾಗಿ ಕೂಡಿ ತಮ್ಮ ಆರ್ಥಿಕ ಹಾಗ ಬೌದ್ಧಿಕ ಸಂಪನ್ಮೂಲಗಳ ಸಂಘಟಿತ ಮತ್ತು ವ್ಯವಸ್ಥಿತ ಪ್ರಯೋಜನವನ್ನು ಪಡೆದುಕೊಳ್ಳುವ ಅವಶ್ಯಕತೆ ಇದೆ.

(iii) ಮಾನವಶಾಸ್ತ್ರಕ್ಕೆ ಸಂಬಂಧಿಸಿದ ಚಲನಚಿತ್ರಗಳನ್ನು ತೆಗೆಯುವ ಅವಶ್ಯಕತೆಯಿಂದಾಗಿ ಪಾಶ್ಚಾತ್ಯದೇಶಗಳಲ್ಲಿ ಮಾನವಶಾಸ್ತ್ರ ಚಲನಚಿತ್ರಸಂಗ್ರಹಾಲಯಗಳು ಸ್ಥಾಪನೆಗೊಳ್ಳುತ್ತಿವೆ. ನ್ಯೂ ಮೆಕ್ಸಿಕೋದ ಮಾನವಶಾಸ್ತ್ರ ಚಲನಚಿತ್ರ ಕೇಂದ್ರ ಈ ತರಹದ ಪ್ರಯತ್ನಗಳಲ್ಲಿ ಮೊದಲನೆಯದು. 1974ರಲ್ಲಿ ಅಮೇರಿಕದ ಸ್ಮಿತ್ ಸೋನಿಯನ್‌ನಲ್ಲಿ ರಾಷ್ಟ್ರೀಯ ಮಾನವಶಾಸ್ತ್ರ ಚಲನಚಿತ್ರ ಕೇಂದ್ರ ಆರಂಭವಾಗಿದೆ. ಅಮೇರಿಕದ ಉದ್ದಗಲಕ್ಕೂ ಎಲ್ಲ ವಿಶ್ವವಿದ್ಯಾಲಯಗಳು ಜಾನಪದದ ಧ್ವನಿಮುದ್ರಿತ ಟೇಪುಗಳು ಮತ್ತು ಚಲನಚಿತ್ರಗಳ ಸಂಗ್ರಹಾಲಯವನ್ನು ಹೊಂದಿವೆ. ಕರ್ನಾಟಕದಲ್ಲೂ ಫಿಲಂ ತರಪೇತಿ ಕೇಂದ್ರಗಳು ಮತ್ತು ರಾಜ್ಯಸರ್ಕಾರ, ತಜ್ಞ ಮಾನವಶಾಸ್ತ್ರಜ್ಞರು ಮತ್ತು ಜಾನಪದ ವಿದ್ವಾಂಸರ ಮಾರ್ಗದರ್ಶನದಲ್ಲಿ ಇಂತಹ ಚಲನಚಿತ್ರಗಳನ್ನು ತೆಗೆಯಲು ಸಾಧ್ಯವಿದೆ. ಧ್ವನಿಮುದ್ರಣದ ದಿಸೆಯಲ್ಲಿ ವಿಶ್ವವಿದ್ಯಾನಿಲಯಗಳು ಮೂರು ಬಗೆಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಹುದು :

a) ಒಂದು ಕೇಂದ್ರೀಕೃತ ಅಥವಾ ಪ್ರಾದೇಶಿಕ ಸಂಗ್ರಹಾಲಯಗಳನ್ನು ಧ್ವನಿ ಮುದ್ರಿತ ಟೇಪುಗಳಿಗಾಗಿ ಸ್ಥಾಪಿಸಿ ಆ ಮೂಲಕ ಜಾನಪದ ಅಧ್ಯಯನಾಸಕ್ತರಿಗೆ ಅನುಕೂಲತೆಯನ್ನು ಕಲ್ಪಿಸಬಹುದು.

b) ಕರ್ನಾಟಕದಲ್ಲಿ ಇನ್ನೂ ಸಂಗ್ರಹವಾಗದೆ ಉಳಿದಿರುವ ಜಾನಪದ ಸಂಗ್ರಹಣೆಗಾಗಿ ಒಂದು ಸಂಘಟಿತ ಮತ್ತು ವ್ಯವಸ್ಥಿತ ಯೋಜನೆಯನ್ನು ಹಾಕಿಕೊಂಡು ಇನ್ನು ಮುಂದಾದರೂ ವೈಜ್ಞಾನಿಕ ಕ್ಷೇತ್ರಕಾರ್ಯದ ಮೂಲಕ ಅದನ್ನು ಸಂಗ್ರಹಿಸುವದು.

c) ಈ ಬಗೆಯ ವೈಜ್ಞಾನಿಕ ಸಂಗ್ರಹಣೆಗೆ ಬೇಕಾದ ಅಗತ್ಯ ಮಾರ್ಗದರ್ಶನ ಮತ್ತು ತರಪೇತಿಯನ್ನು ನಮ್ಮ ಸಂಗ್ರಾಹಕರಿಗೆ ನೀಡುವ ವರ್ಕ್‌ಷಾಪ್‌ಗಳನ್ನು ನಡೆಸುವುದು.

ಜಾನಪದ ಕಣ್ಮರೆಯಾಗುತ್ತಿದೆ; ಅದನ್ನು ಸಂಗ್ರಹದ ರೂಪದಲ್ಲಿಯಾದರೂ ರಕ್ಷಿಸಿಡಬೇಕು ನಿಜ. ಇಂತಹ ಸಂಗ್ರಹಕಾರ್ಯ ಜಾನಪದ ಮತ್ತು ಪರಂಪರೆಯ ಬಗ್ಗೆ ಹಳಹಳಿಕೆಯ ನೆನಪುಗಳ ಧೋರಣೆಗಳಾಗದೆ ಪರಂಪರೆಯಲ್ಲಿ ನೈಸರ್ಗಿಕ ಶಕ್ತಿ

ಮತ್ತು ಮಾನವ ಸಮಾಜದ ನಡುವಣ ಅಂತರ್ ಕ್ರಿಯೆಯ ವಿವಿಧ ಸಂದರ್ಭಗಳಲ್ಲಿ ಮಾನವನ ಕಲಿಕೆಯ ಪ್ರಕ್ರಿಯೆ ಮತ್ತು ಈ ಕಲಿಕೆಯ ಮೂಲಭೂತ ಚೈತನ್ಯಗಳನ್ನು ಗುರುತಿಸುವ ಮೂಲಕ ನಮ್ಮ ಇಂದಿನ ಪರಿಸರಕ್ಕೆ ಹೊಂದುವ ಹೊಸ ಸೂತ್ರಗಳ ಆವಿಷ್ಕಾರಕ್ಕೆ ಮಾರ್ಗದರ್ಶಿಯಾಗಬೇಕಾಗುತ್ತದೆ.

ಕನ್ನಡ ಜಾನಪದದಲ್ಲಿ ಈ ತನಕ ಸಾರ್ವತ್ರಿಕವಾಗಿ ಪ್ರಕಟವಾದ ಮತ್ತು ಒಪ್ಪಿಗೆಯಾದ ಕ್ಷೇತ್ರಕಾರ್ಯ ಪ್ರಶ್ನಾವಳಿ ಇಲ್ಲ ಎಂಬುದನ್ನು ಗಮನಿಸಿ ಸಂಗ್ರಾಹಕರ ಅವಗಾಹನೆಗಾಗಿ ಪ್ರಶ್ನಾವಳಿಯೊಂದನ್ನು ನೀಡಲಾಗುತ್ತಿದೆ. ಈ ಪ್ರಶ್ನಾವಳಿಯನ್ನು ಲೇಖಕನು ನಡೆಸಬೇಕೆಂದುಕೊಂಡಿರುವ ಕ್ಷೇತ್ರಕಾರ್ಯಕ್ಕೆಂದು ಆಂಗ್ಲ ಮೂಲವೊಂದರಿಂದ ರೂಪಾಂತರಿಸಿಕೊಳ್ಳಲಾಗಿದೆ.[8] ಆಂಗ್ಲ ಪ್ರಶ್ನಾವಳಿ ಮೂಲತಃ ಪಾಶ್ಚಾತ್ಯವಲ್ಲದ (non-western) ಪ್ರದರ್ಶನಗಳಿಗಾಗಿ ರೂಪುಗೊಂಡಿದ್ದು ಪೌರ್ವಾತ್ಯ ಕ್ಷೇತ್ರಕಾರ್ಯದ ಸೂತ್ರಗಳಿಗನುಗುಣವಾಗಿಯೇ ರಚಿಸಲಾಗಿದೆ. ಅದರಿಂದ ಅಲ್ಪ ಸ್ವಲ್ಪ ಬದಲಾವಣೆಗಳನ್ನು ಅಗತ್ಯತೆಗನುಗುಣವಾಗಿ ಮಾಡಿಕೊಳ್ಳಲಾಗಿದೆ. ಪ್ರಶ್ನಾವಳಿ ಇನ್ನೂ ರಚನೆಯ ಹಂತದಲ್ಲಿದ್ದು ಸಂಗ್ರಹಕಾರ್ಯ ನಡೆದಂತೆ ಇನ್ನಷ್ಟು ಸಮರ್ಪಕವಾಗಲು ಅವಕಾಶವಿದೆ. ಇದನ್ನು ಮಾದರಿಯಾಗಿಟ್ಟುಕೊಂಡು ಸಂಗ್ರಾಹಕರು ತಮ್ಮ ಉದ್ದೇಶ್ಯಗಳಿಗನುಗುಣವಾಗಿ ಪ್ರಶ್ನಾವಳಿಗಳನ್ನು ರೂಪಿಸಿಕೊಳ್ಳಬಹುದಾಗಿದೆ. ವಕ್ತೃವಿನ ಮಾಹಿತಿಗೆ ಸಂಬಂಧಿಸಿದ ಕೆಲವು ಪ್ರಶ್ನೆಗಳನ್ನು (ಹೆಸರು, ಊರು, ಕುಲ, ಜಾತಿ, ಲಿಂಗ ಇತ್ಯಾದಿ) ಪ್ರಶ್ನಾವಳಿಯ ಮೊದಲಿಗೆ ಅಗತ್ಯತೆಗಳಿಗನುಗುಣವಾಗಿ ಸೇರಿಸಿಕೊಳ್ಳಬೇಕಾಗುತ್ತದೆ. ಪ್ರಶ್ನೆಗಳನ್ನು ಇಲ್ಲಿ ಮುದ್ರಣಗೊಂಡಿರುವಂತೆಯೇ ನೇರವಾಗಿ ಕೇಳಲಾಗುವುದಿಲ್ಲ ಎಂಬುದು ಲೇಖಕನಿಗೆ ಸ್ಪಷ್ಟವಾಗಿ ಗೊತ್ತಿದೆ. ಈ ಪ್ರಶ್ನೆಗಳು ಸಂಗ್ರಹಕಾರನಿಗೆ ಒಂದು ಸೂಚಿ ಮಾತ್ರ. ಪ್ರಶ್ನೆಗಳ ಆಶಯ ಸಂಗ್ರಹಕಾರನಿಗೆ ಮುಟ್ಟಲೆಂದು ಪ್ರಸ್ತುತ ಭಾಷೆಯನ್ನು ಉಪಯೋಗಿಸಲಾಗಿದೆ. ವಕ್ತೃಗಳ ಆಡುನುಡಿಗೆ ಸಮೀಪವಾಗುವಂತೆ ಪ್ರಶ್ನೆಗಳನ್ನು ಉಪಯೋಗಿಸಬೇಕಾಗುತ್ತದೆ. ಆದ್ದರಿಂದಲೇ ಮೂಲದಲ್ಲಿ ಕೇವಲ ಪ್ರಶ್ನೆಗಳ ಪಟ್ಟಿಯಾಗಿ ಉಳಿದಿದ್ದನ್ನು ನಮ್ಮ ಅಗತ್ಯಕ್ಕೆ ಹೊಂದುವಂತೆ ಏಳು ಪ್ರಮುಖ ಶೀರ್ಷಿಕೆಗಳಲ್ಲಿ ಪ್ರಶ್ನೆ ಉಪಪ್ರಶ್ನೆಗಳಾಗಿ ವರ್ಗೀಕರಿಸಿ ನೀಡಲಾಗಿದೆ. ಪ್ರೇಕ್ಷಕ ಮತ್ತು ಪ್ರದರ್ಶಕರಿಬ್ಬರಿಗೂ ಇಲ್ಲಿನ ಎಲ್ಲ ಪ್ರಶ್ನೆಗಳನ್ನು ಹಾಕುವುದರ ಮೂಲಕ ಅವರಿಬ್ಬರೂ ಪರಸ್ಪರ ಏನು ಅಭಿಪ್ರಾಯವನ್ನಿಟ್ಟುಕೊಂಡಿದ್ದಾರೆಂಬುದನ್ನು ಅರಿಯಬಹುದು.

---

8. ಈ ಪ್ರಶ್ನಾವಳಿಯು ಆಂಗ್ಲಮೂಲ ಜಾನ್ ಎಮಿಗ್‌ರವರು ತಮ್ಮ ಕ್ಷೇತ್ರಕಾರ್ಯಕ್ಕಾಗಿ ರೂಪಿಸಿಕೊಂಡಿದ್ದಾಗಿದೆ. ಅವರು ಅಮೇರಿಕದ ಬ್ರೌನ್ ವಿಶ್ವವಿದ್ಯಾಲಯದ ನಾಟಕ ವಿಭಾಗದಲ್ಲಿದ್ದು ನಾಟಕ ನಿರ್ದೇಶನ ಮತ್ತು ಬೋಧನೆಗಳನ್ನು ಮಾಡುತ್ತಿದ್ದಾರೆ. ಮನೋವಿಜ್ಞಾನ ಮತ್ತು ಮಾನವಶಾಸ್ತ್ರದ ಪರಿಕಲ್ಪನೆಗಳ ಮೂಲಕ ಪರಂಪರೆಯ ಪ್ರವರ್ತನಗಳನ್ನು ಅಭ್ಯಾಸ ಮಾಡುತ್ತಿದ್ದಾರೆ. ಹಾಗೂ ಅದರ ತಂತ್ರಗಳನ್ನು ಅರ್ಥಪೂರ್ಣವಾಗಿ ಆಧುನಿಕ ರಂಗಭೂಮಿಯಲ್ಲಿ ಪ್ರಯೋಗಿಸುತ್ತಿದ್ದಾರೆ. ಈ ಪ್ರಶ್ನಾವಳಿಯನ್ನು ಅವರು ಇಂಡೋನೇಷ್ಯಾದ ಕೋಪೆಂಗ್ ಮತ್ತು ನ್ಯೂಗಿನಿಯಾದ ಮುಖವಾಡದ ನೃತ್ಯಗಳ ಅಧ್ಯಯನಕ್ಕಾಗಿ ರೂಪಿಸಿಕೊಂಡಿದ್ದಾರೆ. ಪ್ರಶ್ನಾವಳಿಯನ್ನು ಉಪಯೋಗಿಸಿಕೊಳ್ಳಲು ಅನುಮತಿ ನೀಡಿ ಪ್ರೋತ್ಸಾಹಿಸಿದ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಪ್ರಶ್ನಾವಳಿ

ಪ್ರಶ್ನಾವಳಿಯಲ್ಲಿ ಏಳು ಪ್ರಮುಖ ವಿಭಾಗಗಳಿದ್ದು ಒಂದೊಂದರಲ್ಲೂ ಸುಮಾರು 15–20 ಪ್ರಶ್ನೆಗಳೂ ಉಪಪ್ರಶ್ನೆಗಳೂ ಇವೆ. ಪ್ರಮುಖ ವಿಭಾಗಗಳು ಕೆಳಕಂಡಂತಿವೆ:

I) ಪ್ರದರ್ಶಕರ ಮಾಹಿತಿ
II) ಪ್ರೇಕ್ಷಕರ ಮಾಹಿತಿ
III) ಪ್ರದರ್ಶನ ಮತ್ತು ಪ್ರದರ್ಶಕರ ನಡುವಣ ಸಂಬಂಧಗಳು
IV) ಪ್ರದರ್ಶನ ಮತ್ತು ಪ್ರೇಕ್ಷಕರ ನಡುವಣ ಸಂಬಂಧಗಳು
V) ಪ್ರದರ್ಶನದ ಪರಿಕರಗಳ ಮಾಹಿತಿ
VI) ಪ್ರದರ್ಶನಾವಧಿಯ ಮಾಹಿತಿ
VII) ಪ್ರದರ್ಶನದ ಪರಂಪರೆಯ ಮತ್ತು ಪ್ರಸ್ತುತ ಮಾಹಿತಿ

I. ಪ್ರದರ್ಶಕರ ಮಾಹಿತಿ

1 ಪ್ರದರ್ಶನ ನಡೆಯುವಾಗ ಪ್ರದರ್ಶಕರಿಗೂ ಪ್ರೇಕ್ಷಕರಿಗೂ ವ್ಯತ್ಯಾಸವನ್ನು ಗುರುತಿಸಲಾಗುತ್ತದೆಯೆ ? ಹಾಗಿದ್ದಲ್ಲಿ ಪ್ರದರ್ಶಕರನ್ನು ಪ್ರೇಕ್ಷಕರಿಗಿಂತ ಭಿನ್ನವಾಗಿ ಯಾವ ಆಧಾರದ ಮೇಲೆ ಗುರುತಿಸಲಾಗುತ್ತದೆ ?

2 ಪ್ರದರ್ಶನದ ಸಂಸ್ಕೃತಿಯೊಳಗೆ ಪ್ರದರ್ಶಕರಿಗೂ ಇತರ ವ್ಯಕ್ತಿಗಳಿಗೂ ವ್ಯತ್ಯಾಸಗಳಿವೆಯೆ ? ಹಾಗಿದ್ದಲ್ಲಿ ಈ ವ್ಯತ್ಯಾಸವನ್ನು ಹೇಗೆ ಗುರುತಿಸಲಾಗುತ್ತದೆ ?

3 a) ಪ್ರದರ್ಶಕನ ಅರ್ಹತೆಗಳೇನು ?

b) ಅರ್ಹತೆಗಳನ್ನು ಕೆಳ ಕಂಡವುಗಳಲ್ಲಿ ಯಾವ ಅಂಶದ ಆಧಾರದ ಮೇಲೆ ಮತ್ತು ಹೇಗೆ ಗುರುತಿಸಲಾಗುತ್ತದೆ ? : (i) ವಯಸ್ಸು (ii) ಲಿಂಗಭೇದ (iii) ಜಾತಿ (iv) ಸಾಮಾಜಿಕ ಅಂತಸ್ತು (v) ಆರ್ಥಿಕ ಸ್ಥಾನಮಾನ (vi) ಪ್ರದರ್ಶನ ಕೌಶಲ್ಯ (vii) ಬಂಧುತ್ವ ಅಥವಾ ಕುಟುಂಬ ಸಂಬಂಧಗಳು (viii) ಅನ್ಯ ಪ್ರದರ್ಶಕರಿಗೆ ಸಾಮೀಪ್ಯತೆ ಮತ್ತು ಸಹವಾಸ (ix) ಇವೆಲ್ಲಕ್ಕಿಂತ ಭಿನ್ನವಾದ ಸಾಮಾಜಿಕ ವಿಶಿಷ್ಟತೆ.

c) ಪ್ರದರ್ಶಕರನ್ನು ಆಯಲು ವಿಶಿಷ್ಟವಾದ ಸ್ಪರ್ಧಾತ್ಮಕ ವಿಧಾನ ಉಂಟೆ ?

4 ಪ್ರದರ್ಶಕರಾಗಲು ಯಾವುದಾದರೂ ಬಗೆಯ ಅನರ್ಹತೆ ಉಂಟೆ ?
(i) ವಯಸ್ಸು (ii) ಲಿಂಗಭೇದ (iii) ಜಾತಿ (iv) ಸಾಮಾಜಿಕ ಅಂತಸ್ತು (v) ಆರ್ಥಿಕ ಸ್ಥಾನಮಾನ (vi) ಬಂಧುತ್ವ ಅಥವಾ ಕುಟುಂಬದ ಸಂಬಂಧಗಳು (vii) ವಿಶಿಷ್ಟ ಸಾಮಾಜಿಕ ಕಾರಣ.

5 ಪ್ರದರ್ಶನದ ಕಾರ್ಯಕ್ರಮವನ್ನು ಪ್ರದರ್ಶಕರಿಗೆ ಹೇಗೆ ವಹಿಸಿಕೊಡಲಾಗುತ್ತದೆ ?

6 ಕೆಲವು ಪ್ರದರ್ಶಕರಿಗೆ ಮಾತ್ರ ವಿಶಿಷ್ಟವಾದ ನಿಯೋಗಗಳು ಮತ್ತು ಪಾತ್ರಗಳು ಉಂಟೆ ? ಹಾಗಿದ್ದಲ್ಲಿ ಅವುಗಳನ್ನು ಯಾವ ರೀತಿ ನಿರ್ಧರಿಸಲಾಗುತ್ತದೆ ?

7 ಕೆಲವು ಪ್ರದರ್ಶಕರು ಮಾತ್ರ ಭಾಗವಹಿಸಿ ಉಳಿದ ಪ್ರದರ್ಶಕರು ಭಾಗವಹಿಸಲು ಅವಕಾಶವಿಲ್ಲದಿರುವ (i) ಸಂದರ್ಭಗಳು (ii) ಸ್ಥಳಗಳು ಉಂಟೆ ?

8 ಪ್ರದರ್ಶಕರಲ್ಲಿ ತರತಮ (Hierarchy) ಪರಿಗಣನೆ ಕಂಡು ಬರುತ್ತದೆಯೇ ? ಹಾಗಿದ್ದಲ್ಲಿ ಯಾವ ಆಧಾರದ ಮೇಲೆ ಅದನ್ನು ನಿರ್ಧರಿಸಲಾಗುತ್ತದೆ ?

9 ಪ್ರದರ್ಶನ ನೀಡುವುದಕ್ಕಾಗಿ ಪ್ರದರ್ಶಕರಿಗೆ ಏನಾದರೂ ಸಂಭಾವನೆಯನ್ನು ನೀಡಲಾಗುತ್ತದೆಯೇ ? ಹಾಗಿದ್ದಲ್ಲಿ ಯಾವ ರೂಪದಲ್ಲಿ ಮತ್ತು ಹೇಗೆ ನೀಡಲಾಗುತ್ತದೆ ?

10 ಪ್ರದರ್ಶಕರಲ್ಲಿ ಹವ್ಯಾಸಿ (Amateur) ಮತ್ತು ವೃತ್ತಿನಿರತ (Professional) ಎಂಬ ವೃತ್ತಿಭೇದ ಕಂಡು ಬರುತ್ತದೆಯೇ ?

11 a) ಪ್ರದರ್ಶಕರು ತಮ್ಮ ಜೀವನೋಪಾಯಕ್ಕೆಂದು ಪ್ರದರ್ಶನವನ್ನು ಮಾತ್ರ ಆಧಾರವಾಗಿಟ್ಟುಕೊಂಡಿದ್ದಾರೆಯೇ ಅಥವಾ ಬೇರೆ ಬೇರೆ ಆರ್ಥಿಕ ಚಟುವಟಿಕೆಗಳನ್ನು ಅವಲಂಬಿಸಿದ್ದಾರೆಯೇ ?

b) ಬೇರೆ ರೀತಿಯ ಅವಲಂಬನೆ ಇದ್ದಲ್ಲಿ ಅದರ ವಿವರಗಳೇನು ?

12 a) ಸಮಾಜದಲ್ಲಿ ಪ್ರದರ್ಶಕನ ಸ್ಥಾನಮಾನಗಳೇನು ?

b) ಪ್ರದರ್ಶಕನ ಸ್ಥಾನಮಾನ ನಿರ್ಧಾರಣೆ ಅವನ ಪ್ರದರ್ಶನ ಕೌಶಲ್ಯದ ಮೇಲೆ ಆಧರಿಸಿದೆಯೋ ಅಥವಾ ಅವನ ಪ್ರದರ್ಶಕನ ಪಟ್ಟವನ್ನು ಆಧರಿಸಿದೆಯೋ ?

13 ಪ್ರದರ್ಶಕರು ಸಮಾಜದಲ್ಲಿ ಪ್ರದರ್ಶನಕ್ಕಿಂತ ಭಿನ್ನವಾದ ವಿಶೇಷ ಹೊಣೆಗಾರಿಕೆಯನ್ನು ಹೊಂದಿದ್ದಾರೆಯೇ ?

14 ಪ್ರದರ್ಶಕರು' ಎಂಬ ಸ್ಥಾನಮಾನದಿಂದ ಸಮಾಜದಲ್ಲಿ ಅವರಿಗೆ ಏನಾದರೂ ವಿಶೇಷ ಸೌಲಭ್ಯ ಮತ್ತು ಸವಲತ್ತುಗಳು ದೊರಕುತ್ತವೆಯೇ ?

15 ಪ್ರದರ್ಶಕರು ಸುವ್ಯವಸ್ಥಿತ ಹಾಗೂ ಕ್ರಮಬದ್ಧ ತರಪೇತಿಯನ್ನು ಪಡೆಯುತ್ತಾರೆಯೇ? ಹಾಗಿಲ್ಲದಿದ್ದಲ್ಲಿ ಬೇರೆ ಯಾವ ರೀತಿಯಿಂದ ಪ್ರದರ್ಶನ ಕೌಶಲ್ಯವನ್ನು ಪಡೆಯುತ್ತಾರೆ ?

16 a) ಪ್ರದರ್ಶನವನ್ನು ಪ್ರದರ್ಶಕರು ಹೇಗೆ ಆರಂಭಿಸುತ್ತಾರೆ?
b) ಇದಕ್ಕೆ ಸಂಬಂಧಪಟ್ಟ ವಿಶಿಷ್ಟ ಆಚರಣಾ ವಿಧಿ-ವಿಧಾನಗಳುಂಟೆ?

17 a) ತಮ್ಮ ವೃತ್ತಿಯಿಂದ ಪ್ರದರ್ಶಕರು ಯಾವಾಗ ನಿವೃತ್ತರಾಗುತ್ತಾರೆ?
b) ಇದಕ್ಕೆ ಸಂಬಂಧಪಟ್ಟ ವಿಶಿಷ್ಟ ಆಚರಣಾ ವಿಧಿ-ವಿಧಾನಗಳುಂಟೆ?

II. ಪ್ರೇಕ್ಷಕರ ಮಾಹಿತಿ

1 ಪ್ರದರ್ಶನ ಎಂದು ಕರೆಸಿಕೊಳ್ಳುವ ಪ್ರದರ್ಶಕರನ್ನು ಬಿಟ್ಟು ಬೇರೆಯವರ ಹಾಜರಿಯ ಅಗತ್ಯ ಉಂಟೆ? ಅವರನ್ನು ಏನೆಂದು ಕರೆಯಲಾಗುತ್ತದೆ?

2 ಪ್ರದರ್ಶನದಲ್ಲಿ ಯಾವುದಾದರೂ ವಿಶೇಷ ಶಕ್ತಿಗಳು (Spiritual entities) ಹಾಜರಿರುತ್ತವೆಯೇ?

3 a) ಪ್ರದರ್ಶನವನ್ನು ನೋಡಲು ಯಾರಿಗಾದರೂ ನಿಷಿದ್ಧತೆ ಇದೆಯೇ?
b) ಹಾಗಿದ್ದಲ್ಲಿ, ಕೆಳಕಂಡವುಗಳಲ್ಲಿ ಯಾವ ಅಂಶದ ಆಧಾರದ ಮೇಲೆ ಮತ್ತು ಹೇಗೆ ನಿಷೇಧಿಸಲಾಗುತ್ತದೆ. i) ವಯಸ್ಸು, ii) ಲಿಂಗಭೇದ, iii) ಜಾತಿ, iv) ಸಾಮಾಜಿಕ ಅಂತಸ್ತು, v) ಬಂಧುತ್ವ ಅಥವಾ ಕುಟುಂಬದ ಸಂಬಂಧಗಳು, vi) ಇವಕ್ಕಿಂತ ಭಿನ್ನವಾದ ವಿಶೇಷ ಕಾರಣ.

4 ಪ್ರದರ್ಶನ ನಡೆಯಲು ಅಗತ್ಯವಿರಲೇಬೇಕಾದ ಪ್ರೇಕ್ಷಕರು ಯಾರಾದರೂ ಉಂಟೆ?

5 ಪ್ರೇಕ್ಷಕರಿಗೆ ಪ್ರವೇಶಧನವೆಂದು ಯಾವುದಾದರೂ ಬಗೆಯ ಶುಲ್ಕವನ್ನು ವಿಧಿಸುವ ಪದ್ಧತಿ ಉಂಟೆ?

6 ಪ್ರೇಕ್ಷಕನಾಗುವ ಅರ್ಹತೆಯನ್ನು ಸಂಪಾದಿಸಲು ಯಾವುದಾದರೂ ವಿಶಿಷ್ಟ ದೀಕ್ಷಾ ವಿಧಿಯನ್ನು ಆಚರಿಸಬೇಕೆ?

7 ಪ್ರೇಕ್ಷಕರು ಕೆಳಕಂಡವುಗಳಲ್ಲಿ ಯಾವುದಾದರೂ ಅಂಶದಿಂದ ವಿಶಿಷ್ಟವಾಗುತ್ತಾರೆಯೆ?: i) ವಯಸ್ಸು ii) ಲಿಂಗಭೇದ iii) ಜಾತಿ iv) ಸಾಮಾಜಿಕ ಅಂತಸ್ತು v) ಆರ್ಥಿಕ ಸ್ಥಾನಮಾನ vi) ವಿದ್ಯಾಭ್ಯಾಸ vii) ಬಂಧುತ್ವ ಅಥವಾ ಕುಟುಂಬದ ಸಂಬಂಧಗಳು viii) ಭೌಗೋಲಿಕ ಸಾಮೀಪ್ಯತೆ ix) ಧಾರ್ಮಿಕ ಅಂಗೀಕಾರ x) ಇವಕ್ಕಿಂತ ಭಿನ್ನವಾದ ಪುರಸ್ಕೃತ ಸ್ಥಾನಮಾನ.

8 ಪ್ರದರ್ಶನವನ್ನು ನೋಡಲು ಪ್ರೇಕ್ಷಕರು ಗುಂಪುಗುಂಪಾಗಿ ಬರುವರೋ ಅಥವಾ ಒಂಟಿಯಾಗಿ ಬರುವರೋ?

9 ಪ್ರದರ್ಶನದಲ್ಲಿ ಪ್ರೇಕ್ಷಕರು ಯಾರಾದರೂ ವಿಶಿಷ್ಟವಾಗಿ ಜೊತೆಯಾಗಿ ಕೂರುವ ಅಥವಾ ಜೊತೆಯಾಗಿ ನಿಲ್ಲುವ ವಾಡಿಕೆಯುಂಟೆ ?

10 ಪ್ರದರ್ಶನ ನಡೆಯುತ್ತಿರುವಾಗ ಪ್ರೇಕ್ಷಕನೊಬ್ಬ ಪ್ರದರ್ಶಕನಾಗಿ ರೂಪಾಂತರ ಗೊಳ್ಳಲು ಸಾಧ್ಯವಿದೆಯೇ ?

11 ಪ್ರದರ್ಶಕರ ಪ್ರದರ್ಶನ ಕೌಶಲ್ಯವನ್ನು ಆದರ ಪ್ರೇಕ್ಷಕರೂ ಬಲ್ಲವರಾಗಿರು ತ್ತಾರೆಯೇ ?

12 ಪ್ರದರ್ಶನವನ್ನು ಅರ್ಥಮಾಡಿಕೊಳ್ಳಲು ಪ್ರೇಕ್ಷಕರಿಗೆ ಯಾವ ಬಗೆಯ ಪೂರ್ವ ಭಾವಿ ತರಪೇತಿ ದೊರೆತಿರುತ್ತದೆ ?

13 ಪ್ರದರ್ಶನದ ಬಗ್ಗೆ ಪ್ರೇಕ್ಷಕನಿಗೆ ತಿಳಿದಿರಬೇಕಾದ ಸಾಮಾನ್ಯ ಮಾಹಿತಿಗಳಾವುವು?

14 ಪ್ರದರ್ಶನದ ಬಗ್ಗೆ ಪ್ರೇಕ್ಷಕನಿಗೆ ಯಾವುದಾದರೂ ವಿಶೇಷ ಸೂಚನೆ ಅಥವಾ ವಿಶೇಷ ಮಾಹಿತಿಯನ್ನು ನೀಡುವುದುಂಟೆ ?

III. ಪ್ರದರ್ಶನ ಮತ್ತು ಪ್ರದರ್ಶಕರ ನಡುವಣ ಸಂಬಂಧಗಳು

1 ಪ್ರದರ್ಶನದ ಕ್ರಿಯಾತ್ಮಕ ಚಟುವಟಿಕೆಗಳಾವುವು ?

2 a) ಪ್ರದರ್ಶನಕ್ಕೆ ಪೂರ್ವಭಾವಿಯಾಗಿ ತೊಡುಗುವ ಸಿದ್ಧತೆಗಳಾವುವು ?

b) ಪ್ರದರ್ಶನಕ್ಕೆ ಪೂರ್ವಭಾವಿಯಾಗಿ ಯಾವುದಾದರೂ ಪೂಜೆ ಸಲ್ಲುತ್ತದೆಯೇ ?

c) ಈ ಪೂಜೆಗೆ ಸಂಬಂಧಿಸಿದ ಹಾಡುಗಳೇನಾದರೂ ಉಂಟೆ ?

3 ಪ್ರದರ್ಶನದಲ್ಲಿ ಪ್ರದರ್ಶಕನ ಎಲ್ಲ ಚಟುವಟಿಕೆ ಮತ್ತು ಚಲನವಲನಗಳನ್ನು ಪ್ರದರ್ಶನದ ಒಂದು ಭಾಗ ಎಂದು ಬಗೆಯಲಾಗುತ್ತದೆಯೇ ?

4 ಪ್ರೇಕ್ಷಕರಿಗೆ ಕಾಣದಂತೆ ಪ್ರದರ್ಶಕರು ಪ್ರದರ್ಶನವ ಒಂದು ಭಾಗವಾಗಿ ಮಾಡುವ ಚಟುವಟಿಕೆಗಳೇನಾದರೂ ಉಂಟೆ ?

5 ಪ್ರದರ್ಶಕರ ದೈನಂದಿನ ನಿತ್ಯಕರ್ಮಗಳಿಗೂ ಪ್ರದರ್ಶನದ ಚಟುವಟಿಕೆಗಳಿಗೂ ಏನಾದರೂ ಸಂಬಂಧಗಳಿವೆಯೇ ?

6 a) ಪ್ರದರ್ಶನಕ್ಕಾಗಿ ವಿಶೇಷ ಉಡುಗೆ ತೊಡುಗೆಗಳನ್ನು ಪ್ರದರ್ಶಕ ತೊಡು ತ್ತಾನೆಯೇ ?

b) ಹಾಗಿದ್ದಲ್ಲಿ ಈ ಉಡುಗೆ ತೊಡುಗೆಗಳ ಆಯ್ಕೆಯ ವಿಧಾನ ಹೇಗೆ ?

c) ಯಾವ ಕಾರಣಕ್ಕಾಗಿ ಅದರ ಬಣ್ಣ ಮುಂತಾದ ವಿವರಗಳನ್ನು ಆಯ್ದು ಕೊಳ್ಳಲಾಗಿದೆ ?

d) ಉಡುಗೆ ತೊಡುಗೆಗಳನ್ನು ಯಾವಾಗ ಮತ್ತು ಹೇಗೆ ಧರಿಸಲಾಗುತ್ತದೆ ?

e) ಉಡುಗೆ ತೊಡುಗೆಗಳ ವಿಶೇಷ ಅರ್ಥವೇನು ?

7 ಪ್ರದರ್ಶನದಲ್ಲಿ ಪ್ರದರ್ಶಕರು ದಿನನಿತ್ಯದಲ್ಲಿ ರೂಢಿಯಲ್ಲಿರುವುದಕ್ಕಿಂತ ಭಿನ್ನವಾದ (i) ಹಾವಭಾವಗಳನ್ನು (ii) ಪದಗಳನ್ನು (iii) ವಾಕ್ಯಗಳನ್ನು (iv) ಲಯ ಮತ್ತು ಪ್ರಾಸಬದ್ಧ ಮಾತುಗಾರಿಕೆಯನ್ನು ಉಪಯೋಗಿಸುತ್ತಾರೆಯೇ ?

8 ಪ್ರದರ್ಶನದಲ್ಲಿ ಪ್ರದರ್ಶಕರು ಸಮಾಜದಲ್ಲಿ ದಿನನಿತ್ಯ ಆಚರಿಸಲಾಗುವ ನೈತಿಕ ನಿಷಿದ್ಧತೆಗಳನ್ನು ಮತ್ತು ನ್ಯಾಯಸಂಹಿತೆಯ ನಿಯಮಗಳನ್ನು ಉಲ್ಲಂಘಿಸಿ ನಡೆದು ಕೊಳ್ಳುತ್ತಾರೆಯೇ ?

9 a) ಪ್ರದರ್ಶಕನು ಕಾಲ್ಪನಿಕ ಪಾತ್ರವನ್ನು ವಹಿಸುತ್ತಾನೆಯೇ ?

b) ಹಾಗಿದ್ದಲ್ಲಿ ಈ ಕಾಲ್ಪನಿಕ ಪಾತ್ರ ನಿಶ್ಚಿತವಾದುದೆ ಅಥವಾ ವ್ಯತ್ಯಯವಾಗ ಬಲ್ಲುದೆ ?

10 ಪ್ರದರ್ಶನದಲ್ಲಿ ಪ್ರದರ್ಶಕನ ಮೈಮೇಲೆ ಆವೇಶಬಂದು ಮೈದುಂಬುವುದು ಕಂಡು ಬರುತ್ತದೆಯೇ? ಹಾಗಿದ್ದಲ್ಲಿ ಯಾವಾಗ ಮತ್ತು ಹೇಗೆ ಈ ಸ್ಥಿತಿ ಉಂಟಾಗುತ್ತದೆ?

11 ಪ್ರದರ್ಶನದಲ್ಲಿ ಪ್ರದರ್ಶಕ ಇನ್ನಾವುದಾದರೂ ರೀತಿಯಲ್ಲಿ ಒಂದು ಪಾತ್ರದಿಂದ ಮತ್ತೊಂದು ಪಾತ್ರಕ್ಕೆ ರೂಪಾಂತರ ಪಡೆಯುತ್ತಾನೆಯೇ ?

12 ಪ್ರದರ್ಶಕ ಮತ್ತು ಪ್ರೇಕ್ಷಕರಿಬ್ಬರೂ ಪ್ರದರ್ಶಕನ ಚಿತ್ತಸ್ಥಿತಿಯನ್ನು ಪಡೆದಿರು ತ್ತಾರೆಯೇ?

13 ಪ್ರದರ್ಶನದಲ್ಲಿ ಪ್ರೇಕ್ಷಕನಿಗಿರುವ ಅರ್ಥಕ್ಕಿಂತ ಭಿನ್ನವಾದ ಮತ್ತು ತನ್ನದೇ ಆದ ಅರ್ಥವಿರುವ ಚಟುವಟಿಕೆಗಳಲ್ಲಿ ಪ್ರದರ್ಶಕ ಭಾಗವಹಿಸುತ್ತಾನೆಯೇ ?

14 a) ಪ್ರದರ್ಶನದಲ್ಲಿ ಪ್ರದರ್ಶಕರು ತಮ್ಮ ನಿಯೋಗವನ್ನು ಹೇಗೆ ಭಾವಿಸುತ್ತಾರೆ ?

b) ಇದರ ಬಗ್ಗೆ ಪ್ರೇಕ್ಷಕರ ಭಾವನೆಗಳಿಗೂ ಪ್ರದರ್ಶಕನ ಭಾವನೆಗಳಿಗೂ ಹೊಂದಾಣಿಕೆ ಉಂಟೇ ಅಥವಾ ಭಿನ್ನತೆಗಳುಂಟೇ ?

15 a) ಪ್ರದರ್ಶನದ ಸಾರ್ಥಕತೆ ಮತ್ತು ಯಶಸ್ವಿಯಾಗುವಿಕೆಯ ಮೌಲ್ಯಮಾಪನ ಕ್ಕಾಗಿ ಪ್ರದರ್ಶಕರು ಯಾವ ರೀತಿಯ ಮಾನದಂಡಗಳನ್ನು ಉಪಯೋಗಿಸು ತ್ತಾರೆ ?

b) ಇದರ ಬಗ್ಗೆ ಪ್ರೇಕ್ಷಕರ ಮಾನದಂಡಗಳಾವುವು ?

c) ಪ್ರೇಕ್ಷಕರ ಮತ್ತು ಪ್ರದರ್ಶಕರ ಮಾನದಂಡಗಳಲ್ಲಿ ಹೊಂದಾಣಿಕೆ ಕಂಡು ಬರುತ್ತದೆಯೇ ?

16 ಪ್ರೇಕ್ಷಕರ ಬಗ್ಗೆ ಪ್ರದರ್ಶಕನ ಅನ್ನಿಸಿಕೆಗಳೇನು ? ಪ್ರದರ್ಶನದಲ್ಲಿ ಮತ್ತು ಹೊರಗಡೆ ಪ್ರದರ್ಶಕರು ಪ್ರೇಕ್ಷಕರ ಬಗ್ಗೆ ಯಾವ ರೀತಿಯ ಧೋರಣೆಗಳನ್ನು ಇಟ್ಟುಕೊಂಡಿದ್ದಾರೆ ?

17 a) ಪ್ರದರ್ಶನದ ಬಗ್ಗೆ ಮಾಹಿತಿ ನೀಡುವಾಗ ಪ್ರೇಕ್ಷಕರು ಮತ್ತು ಪ್ರದರ್ಶಕರು ಯಾವ ಬಗೆಯ ಪದಕೋಶವನ್ನು ಉಪಯೋಗಿಸುತ್ತಾರೆ ?

b) ಪ್ರದರ್ಶನದ ಹೊಣೆಗಾರಿಕೆಯನ್ನು (i) ದುಡಿಮೆ ಎಂದು (ii) ಆಟ ಎಂದು (iii) ವಿಶೇಷ ಕೌಶಲ್ಯ ಎಂದು (iv) ಕೆಲವು ವಿಶಿಷ್ಟವಾದ ಪರಿಣಾಮಗಳನ್ನುಂಟು ಮಾಡಲು ಎಂದು, ವಿವರಿಸಲಾಗುತ್ತದೆಯೇ ?

18 a) ಪ್ರದರ್ಶಕರು ಆಚರಿಸಲು ಬಹಿಷ್ಕೃತವಾದ ಚಟುವಟಿಕೆಗಳೇನಾದರೂ ಉಂಟೆ ?

b) ಇವುಗಳನ್ನು ರೂಪಿಸಿದವರು ಯಾರು ?

19 ಪ್ರದರ್ಶಕನ ಭಾಷಿಕ ಅಭಿವ್ಯಕ್ತಿಯ ರೂಪವನ್ನು ಯಾರಾದರೂ ನಿರ್ಧರಿಸುತ್ತಾರೆಯೆ ?

20 ಪ್ರದರ್ಶನವನ್ನು ಗುಣಾತ್ಮಕವಾಗಿ ಉತ್ತಮಗೊಳಿಸಲು ಎಷ್ಟರಮಟ್ಟಿಗಿನ ಅವಕಾಶಗಳಿವೆ ?

21 a) ಪ್ರದರ್ಶನಕ್ಕಾಗಿ ಪ್ರದರ್ಶಕರು ಯಾವ ರೀತಿಯ ಪೂರ್ವಭಾವಿ ತಾಲೀಮನ್ನು ಮಾಡಿಕೊಳ್ಳುತ್ತಾರೆ ?

b) ಇಂತಹ ತಾಲೀಮುಗಳಲ್ಲಿ ಹೊರಗಿನವರು ವೀಕ್ಷಿಸಲು ಹಾಜರಿರುತ್ತಾರೆಯೆ ?

22 a) ಪ್ರದರ್ಶನದ ಚಟುವಟಿಕೆಗಳಿಂದ ದಿನನಿತ್ಯದ ಚಟುವಟಿಕೆಗಳಿಗೆ ಗಮನಾರ್ಹ ಸ್ಥಿತ್ಯಂತರ ಚಾಚುವಿಕೆ ಕಂಡುಬರುತ್ತದೆಯೇ ?

b) ಪ್ರದರ್ಶಕರು ದಿನನಿತ್ಯದ ಚಟುವಟಿಕೆಗಳಲ್ಲಿ ಕೂಡ ವಿಶಿಷ್ಟ ರೀತಿಯ ನಡೆ, ನುಡಿ ಮತ್ತು ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಬೇಕೆಂದು ನಿರೀಕ್ಷಿಸಲಾಗುತ್ತದೆಯೇ ?

IV. ಪ್ರದರ್ಶನ ಮತ್ತು ಪ್ರೇಕ್ಷಕರ ನಡುವಣ ಸಂಬಂಧಗಳು

1 ಪ್ರದರ್ಶಕರು ಮತ್ತು ಪ್ರೇಕ್ಷಕರನ್ನು ಭಿನ್ನವಾಗಿ ಪರಿಗಣಿಸಲಾಗುತ್ತದೆಯೇ ? ಹಾಗಿದ್ದಲ್ಲಿ ಈ ಪರಿಗಣನೆ ಹೇಗೆ ಮತ್ತು ಯಾವ ಆಧಾರದ ಮೇಲೆ ನಡೆಯುತ್ತದೆ ?

2 ಪ್ರದರ್ಶಕರ ಮತ್ತು ಪ್ರೇಕ್ಷಕರ ಪಾತ್ರಗಳು ಪೂರ್ವ ನಿಶ್ಚಿತವಾದವುಗಳೇ ? ಅವು ತಮ್ಮ ಎಲ್ಲೆಯನ್ನು ಮೀರಿ ಒಂದರೊಡನೊಂದು ಬೆರೆಯುವ ಸಂಭವ ಉಂಟೇ ?

3 ಪ್ರದರ್ಶಕರಿಂದ ಪ್ರೇಕ್ಷಕರು ಏನನ್ನು ನಿರೀಕ್ಷಿಸುತ್ತಾರೆ ?

4 ಪ್ರದರ್ಶನವನ್ನು ನೋಡುತ್ತಿರುವಾಗ ಪ್ರೇಕ್ಷಕರು ಅದರ ಯಾವ ಅಂಶಗಳ ಬಗ್ಗೆ ಜಾಗೃತರಾಗಿರುತ್ತಾರೆ ? ಪ್ರೇಕ್ಷಕರು ಯಾವ ಅಂಶಗಳ ಬಗ್ಗೆ ಜಾಗೃತರಲ್ಲದೆ ಇರುತ್ತಾರೆ ?

5 a) ಪ್ರದರ್ಶನವನ್ನು ಅರ್ಥಮಾಡಿಕೊಳ್ಳಲು ಮತ್ತು ಮೆಚ್ಚಲು ಯಾವ ಗ್ರಹಣೇಂದ್ರಿಯಗಳು ಚುರುಕಾಗಿರಬೇಕೆಂದು ಬಯಸಲಾಗುತ್ತದೆ ?

b) ಪ್ರದರ್ಶನದಲ್ಲಿ ಯಾವುದಾದರೂ ಅಭಿವ್ಯಕ್ತಿ ಮಾಧ್ಯಮ ಉಳಿದವಕ್ಕಿಂತ ಪ್ರಧಾನವೆಂದು ಭಾವಿಸಲಾಗುತ್ತದೆಯೇ ?

6 ಪ್ರದರ್ಶನವನ್ನು ನೋಡುತ್ತಿರುವಾಗ ಪ್ರೇಕ್ಷಕನ ಯಾವ ನಡತೆಗಳನ್ನು ಒಳ್ಳೆಯ ನಡವಳಿಕೆ ಎಂದೂ ಯಾವುದನ್ನು ದುರ್ನಡವಳಿಕೆಗಳು ಎಂದೂ ಭಾವಿಸಲಾಗುತ್ತದೆ ?

7 a) ಪ್ರೇಕ್ಷಕರ ದೃಷ್ಟಿಯಿಂದ ಪ್ರದರ್ಶನದ ಮೌಲ್ಯಮಾಪನ ಮಾಡಲು ಉಪಯೋಗಿಸುವ ಮಾನದಂಡಗಳಾವುವು ?

b) ಸಮರ್ಥ ಅಭಿವ್ಯಕ್ತಿ ಎಂದು ಹೇಗೆ ಭಾವಿಸಲಾಗುತ್ತದೆ ?

c) ಪ್ರದರ್ಶನದ ಗ್ರಹಣದಲ್ಲಿ ಪರಿಣಾಮಕಾರಿ ಅಥವಾ ರಸಭಂಗ ಎಂದು ಯಾವಾಗ ಪರಿಗಣಿಸಲಾಗುತ್ತದೆ ?

8 ಪ್ರದರ್ಶನದ ಬಗ್ಗೆ ಮೆಚ್ಚುಗೆ ಅಥವಾ ಹೊಗಳಿಕೆ ಯಾವ ರೀತಿ ವ್ಯಕ್ತವಾಗುತ್ತದೆ ?

9 ಪ್ರದರ್ಶನದ ಬಗ್ಗೆ ಅಸಹನೆ ಅಥವಾ ತೆಗಳಿಕೆ ಯಾವ ರೀತಿ ವ್ಯಕ್ತವಾಗುತ್ತದೆ ?

10 ಪ್ರದರ್ಶನದ ಮೌಲ್ಯಮಾಪನದಲ್ಲಿ ಸೌಂದರ್ಯಾನುಭವಕ್ಕಿಂತ ಭಿನ್ನವಾದ ಮಾನದಂಡವನ್ನು ಉಪಯೋಗಿಸಲಾಗುತ್ತದೆಯೇ ?

11 a) ಉತ್ತಮ ಪ್ರದರ್ಶನವನ್ನು ಹೊಗಳುವ ರೀತಿ ಹೇಗಿರುತ್ತದೆ?
b) ಕೆಟ್ಟ ಪ್ರದರ್ಶನವನ್ನು ಟೀಕಿಸುವ ರೀತಿ ಹೇಗಿರುತ್ತದೆ?

12 ಪ್ರದರ್ಶನದ ಮೌಲ್ಯಮಾಪನದಲ್ಲಿ ಪ್ರೇಕ್ಷಕರ ಮಾನದಂಡಗಳನ್ನೇ ಪ್ರದರ್ಶಕರೂ ಆಧಾರವಾಗಿಟ್ಟುಕೊಳ್ಳುತ್ತಾರೆಯೇ?

13 ಪ್ರೇಕ್ಷಕರ ಮತ್ತು ಪ್ರದರ್ಶಕರ ನಡುವಣ ಸಂಬಂಧಗಳನ್ನು ಪರಸ್ಪರ ವಿರುದ್ಧವಾದ ನೆಲೆಗಳು ಎಂದು ಭಾವಿಸಲಾಗುತ್ತದೆಯೋ ಅಥವಾ ಸಾಮೂಹಿಕವಾದುದು ಎಂದು ಭಾವಿಸಲಾಗುತ್ತದೆಯೋ?

14 ಪ್ರೇಕ್ಷಕರು ಪ್ರದರ್ಶನ ನಡೆಯುತ್ತಿದ್ದಾಗ ವ್ಯಕ್ತಪಡಿಸುವ ಪ್ರತಿಕ್ರಿಯೆಗಳಿಗೂ ಅದಕ್ಕಿಂತ ಭಿನ್ನವಾದ ಸಾಮಾಜಿಕ ಚಟುವಟಿಕೆಗಳ ಸಂದರ್ಭದಲ್ಲಿ ವ್ಯಕ್ತಪಡಿಸುವ ಪ್ರತಿಕ್ರಿಯೆಗಳಿಗೂ ವ್ಯತ್ಯಾಸವುಂಟೆ?

15 ಪ್ರದರ್ಶನದ ಪರಂಪರೆ 'ಜನಪ್ರಿಯ'ವಾದುದೆ? ಹಾಗಿದ್ದಲ್ಲಿ ಯಾರಲ್ಲಿ ಜನಪ್ರಿಯವಾಗಿದೆ?

16 ಪ್ರದರ್ಶನದ ಜನಪ್ರಿಯತೆಯನ್ನು ಪ್ರದರ್ಶನದ ಉತ್ತಮ ಮಟ್ಟದ ವಿಶ್ವಾಸಾರ್ಹ ಸೂಚಿ ಎಂದು ಪರಿಗಣಿಸಲಾಗುತ್ತದೆಯೇ?

17 ಪ್ರದರ್ಶನದಲ್ಲಿ ಪ್ರದರ್ಶಕರು ಪ್ರೇಕ್ಷಕರಿಗೆ ಯಾವ ರೀತಿಯ ಸಂಬಂಧಗಳನ್ನು ವ್ಯಕ್ತಪಡಿಸುತ್ತಾರೆ?

18 ಪ್ರೇಕ್ಷಕರ ಅಭಿರುಚಿ ಮತ್ತು ಅಪೇಕ್ಷೆಗಳನ್ನು ಗಮನದಲ್ಲಿಟ್ಟು ಪ್ರದರ್ಶಕರು ಪ್ರದರ್ಶನಕ್ಕೆ ಪೂರ್ವಭಾವಿಯಾಗಿಯೇ ವ್ಯತ್ಯಾಸಗಳನ್ನು ಮಾಡಿಕೊಳ್ಳುತ್ತಾರೆಯೇ?

19 ಪ್ರದರ್ಶನ ನಡೆಯುತ್ತಿರುವಾಗ ಪ್ರೇಕ್ಷಕರ ಅಭಿರುಚಿ, ಅಪೇಕ್ಷೆಗಳಿಗನುಗುಣವಾಗಿ ಪ್ರದರ್ಶಕರು ವ್ಯತ್ಯಾಸಗಳನ್ನು ಮಾಡಿಕೊಳ್ಳುತ್ತಾರೆಯೇ?

20 ಪ್ರದರ್ಶನ ಮತ್ತು ಪ್ರದರ್ಶಕರ ಬಗ್ಗೆ ಪ್ರೇಕ್ಷಕರಿಗೆ ಪೂರ್ವಭಾವಿಯಾಗಿ ಸ್ಪಷ್ಟ ತಿಳುವಳಿಕೆ ಇರುತ್ತದೆಯೇ?

21 ಪ್ರದರ್ಶನದಲ್ಲಿ ತಮ್ಮ ಅಪೇಕ್ಷೆಗನುಗುಣವಾಗಿ ಪ್ರದರ್ಶಕನು ಗಮನ ನೀಡುತ್ತಿದ್ದಾನೆ ಎಂಬುದು ಪ್ರದರ್ಶಕರಿಗೆ ತಿಳಿಯುತ್ತದೆಯೇ?

22 ಪ್ರೇಕ್ಷಕರು ಅಥವಾ ಪ್ರೇಕ್ಷಕನೊಬ್ಬ ಪ್ರದರ್ಶನಕ್ಕೆಂದೇ ವಿಶಿಷ್ಟವಾದ ಉಡುಗೆ-ತೊಡುಗೆಗಳನ್ನು ಧರಿಸುವ ವಾಡಿಕೆ ಉಂಟೆ?

V. ಪ್ರದರ್ಶನದ ಪರಿಕರಗಳ ಮಾಹಿತಿ

1 ಪ್ರದರ್ಶನಕ್ಕಾಗಿ ಅಗತ್ಯವಾದ ಭೌತಿಕ ಪರಿಕರಗಳಾವುವು ?

2 ಪ್ರದರ್ಶನಕ್ಕಾಗಿ ವಿಶಿಷ್ಟ ಸ್ಥಳದ ಆಯ್ಕೆ ನಡೆಯುತ್ತದೆಯೇ ? ಹಾಗಿದ್ದಲ್ಲಿ ಅಂತಹ ಸ್ಥಳಕ್ಕಿರಬೇಕಾದ ಅಗತ್ಯತೆಗಳಾವುವು ?

3 ಪ್ರದರ್ಶನದ ಸ್ಥಳಕ್ಕೆ ಬರಲು ಮತ್ತು ನೋಡಲು ಯಾವುದಾದರೂ ಬಗೆಯ ಮಿತಿಯುಂಟೆ ?

4 ಪ್ರದರ್ಶನದ ಸ್ಥಳವನ್ನು ಪ್ರದರ್ಶನಕ್ಕಿಂತ ಭಿನ್ನವಾದ ಚಟುವಟಿಕೆಗಳಿಗೆ ಉಪಯೋಗಿಸಲಾಗುತ್ತದೆಯೇ ?

5 a) ಪ್ರದರ್ಶನದ ಸ್ಥಳವನ್ನು ಪ್ರದರ್ಶನದ ಉಪಯೋಗಕ್ಕಾಗಿಡಲು ಯಾವ ಬಗೆಯ ರಕ್ಷಣೆ ಮತ್ತು ಮೇಲುಸ್ತುವಾರಿಗಳ ಅವಶ್ಯಕತೆ ಇದೆ ?

b) ಇವುಗಳನ್ನು ನೋಡಿಕೊಳ್ಳುವರಾರು ?

6 ಕೆಲವು ಪ್ರದರ್ಶನ ಸ್ಥಳಗಳನ್ನು ಮಾತ್ರ ಮಿಕ್ಕವಕ್ಕಿಂತ ಉತ್ತಮ ಎಂದು ಭಾವಿಸಲಾಗುತ್ತದೆಯೇ ? ಹಾಗಿದ್ದಲ್ಲಿ ಯಾವ ಕಾರಣಗಳಿಗಾಗಿ ?

7 a) ಪ್ರದರ್ಶನಕ್ಕಾಗಿ ತಯಾರಾಗುವ ನಿಯೋಗಾತ್ಮಕ ಪರಿಕರಗಳು ಯಾವುವು ?

b) ಅವುಗಳನ್ನು ಯಾರು ತಯಾರು ಮಾಡುತ್ತಾರೆ ? ಮತ್ತು ಹೇಗೆ ಉಪಯೋಗಿಸಲಾಗುತ್ತದೆ ?

c) ಪ್ರದರ್ಶನಕ್ಕೆ ಸಂಬಂಧಿಸಿದಂತೆ ಅವು ಏನನ್ನು ಸಂಕೇತಿಸುತ್ತವೆ ?

8 a) ಪ್ರೇಕ್ಷಕರ ಮತ್ತು ಪ್ರದರ್ಶಕರ ನಡುವೆ ಪ್ರದರ್ಶನದ ಸ್ಥಳ ಹೇಗೆ ವಿಭಾಗವಾಗುತ್ತದೆ ?

b) ಈ ವಿಭಾಗ ಕ್ರಮ ನಿರ್ದಿಷ್ಟವಾದುದೆ ?

9 ಪ್ರದರ್ಶನ ನಡೆಯುತ್ತಿರುವಾಗ ಅದರ ಸ್ಥಳದಲ್ಲಿ ಏನಾದರೂ ಬದಲಾವಣೆ ಆಗುವುದುಂಟೆ ?

10 ಸ್ಥಳವನ್ನು ಪ್ರದರ್ಶನಕ್ಕಾಗಿ ಸಿದ್ಧಪಡಿಸಲು ವಿಶೇಷವಾದ ಏರ್ಪಾಡುಗಳು ನಡೆಯುತ್ತವೆಯೇ ? ಹಾಗಿದ್ದಲ್ಲಿ ಈ ಏರ್ಪಾಡುಗಳನ್ನು ಯಾರು ಮಾಡುತ್ತಾರೆ ?

11 ಪ್ರದರ್ಶಕರು ಪ್ರದರ್ಶನದಲ್ಲಿ ಸ್ಥಳದೊಂದಿಗೆ ಯಾವ ರೀತಿಯ ಸಂಬಂಧವನ್ನು ಪಡೆದಿರುತ್ತಾರೆ ?

12 ಪ್ರೇಕ್ಷಕರು ಪ್ರದರ್ಶನದಲ್ಲಿ ಸ್ಥಳದೊಂದಿಗೆ ಯಾವ ರೀತಿಯ ಸಂಬಂಧಗಳನ್ನು ಪಡೆದಿರುತ್ತಾರೆ ?

13 ಸುತ್ತಲಿನ ನೈಸರ್ಗಿಕ ಪರಿಸರ ಮತ್ತು ಭೌಗೋಲಿಕ ಪರಿಸರದೊಂದಿಗೆ ಪ್ರದರ್ಶನದ ಸ್ಥಳ, ಪ್ರದರ್ಶನ ಮತ್ತು ಅದರ ವಸ್ತು ಯಾವುದಾದರೂ ಬಗೆಯ ಸಂಬಂಧ ಗಳನ್ನು ಪಡೆದಿದೆಯೇ ?

VI. ಪ್ರದರ್ಶನಾವಧಿಯ ಮಾಹಿತಿ

1 ಪ್ರದರ್ಶನಗಳು ಯಾವ ಕಾಲದಲ್ಲಿ ನಡೆಯುತ್ತವೆ ?

2 a) ಪ್ರದರ್ಶನಗಳು ಋತುಚಕ್ರದ ಕಾಲಗಳಿಗನುಗುಣವಾಗಿ ನಡೆಯುತ್ತವೆಯೇ ? ಹಾಗಿದ್ದಲ್ಲಿ ಅದರ ವಿವರಗಳೇನು ?

b) ಪ್ರದರ್ಶನಗಳು rites of passageಗಳಿಗೆ (ಹುಟ್ಟು, ವಯಸ್ಕರಾಗುವಿಕೆ, ವಿವಾಹ, ಸಾವು ಅಥವಾ ಅಂತ್ಯಸಂಸ್ಕಾರ ಇತ್ಯಾದಿ) ಸಂಬಂಧಿಸಿದಂತೆ ನಡೆ ಯುತ್ತವೆಯೋ ? ಅವುಗಳ ವಿವರಗಳೇನು ?

3 ಪ್ರದರ್ಶನಗಳು ನಿಯತವಾಗಿ ತಪ್ಪದೇ ನಡೆಯುತ್ತವೆಯೇ ?

4 ಪ್ರದರ್ಶನಗಳು ಸಾಮಾಜಿಕ ಉತ್ಕ್ರಾಂತಿ ಅಥವಾ ಸಂಕ್ರಮಣಾವಸ್ಥೆ ತಲೆದೋರಿ ದಾಗ ನಡೆಯುವುದುಂಟೆ ?

5 ಪ್ರದರ್ಶನಗಳು ಎಷ್ಟುದಿನಗಳಿಗೊಮ್ಮೆ ನಡೆಯುತ್ತವೆ ?

6 ದಿನದ ಯಾವ ವೇಳೆಯಲ್ಲಿ ಪ್ರದರ್ಶನ ನಡೆಯುತ್ತದೆ ?

7 a) ಪ್ರದರ್ಶನದ ನಾಂದಿ ಯಾವಾಗ ಆರಂಭವಾಗುತ್ತದೆ ?

b) ಪ್ರದರ್ಶನದ ಆರಂಭವನ್ನು ಹೇಗೆ ಗುರುತಿಸಲಾಗುತ್ತದೆ ?

c) ಪ್ರದರ್ಶನದ ಆರಂಭವನ್ನು ಯಾರು ನಿರ್ಧರಿಸುತ್ತಾರೆ ?

8 ಪ್ರದರ್ಶನದ ಅಂತ್ಯ ಅಥವಾ ಮಂಗಳ ಹೇಗೆ ನಡೆಯುತ್ತದೆ ? ಪ್ರೇಕ್ಷಕರು ಮಂಗಳವನ್ನು ಯಾವ ರೀತಿ ಅರಿಯುತ್ತಾರೆ ?

9 a) ಪ್ರದರ್ಶನದ ನಡುವೆ ಬಿಡುವಿನ ಅವಧಿಗಳು ಬರುತ್ತವೆಯೇ ?

b) ಈ ಬಿಡುವಿನ ಅವಧಿಯನ್ನು ಹೇಗೆ ಉಪಯೋಗಿಸಲಾಗುತ್ತದೆ ?

c) ಪ್ರದರ್ಶನ ಮತ್ತು ಬಿಡುವುಗಳ ವ್ಯತ್ಯಾಸವನ್ನು ಪ್ರೇಕ್ಷಕರು ಹೇಗೆ ಅರಿ ಯುತ್ತಾರೆ ?

10 a) ಪ್ರದರ್ಶನ ನಡೆಯುವ ಕಾಲಾವಧಿ ಎಷ್ಟಿರುತ್ತದೆ ?
b) ಈ ಕಾಲಾವಧಿಯ ನಿಯಮ ಕಟ್ಟುನಿಟ್ಟಾಗಿ ಪಾಲಿತವಾಗುತ್ತದೆಯೇ ?

11 ಪ್ರೇಕ್ಷಕರಲ್ಲಿ ವರ್ತಮಾನಕಾಲಕ್ಕಿಂತ ಭಿನ್ನವಾದ ಕಾಲದ ಪಾತ್ರಗಳನ್ನು ನೋಡುತ್ತಿದ್ದೇವೆಂಬ ಅರಿವು ಸ್ಪಷ್ಟವಾಗಿ ಮೂಡುತ್ತದೆಯೇ ?

12 ಪ್ರದರ್ಶನದಲ್ಲಿ ವರ್ತಮಾನ ಕಾಲದ ಪಾತ್ರಗಳು ಮಧ್ಯದಲ್ಲಿ ಪ್ರವೇಶಿಸುವುದುಂಟೆ ? ಹಾಗಿದ್ದಲ್ಲಿ, ಅವು ಪ್ರದರ್ಶನದ ಮಿಕ್ಕ ಪಾತ್ರಗಳೊಂದಿಗೆ ಯಾವ ರೀತಿಯ ಸಂಬಂಧವನ್ನು ಪಡೆದಿರುತ್ತವೆ ?

13 ಪ್ರದರ್ಶನದಲ್ಲಿ ಕುತೂಹಲ (Suspense)ಕಾರಿಯಾದ ಅಂಶ ಕಂಡುಬರುತ್ತದೆಯೇ ?

14 ಪ್ರದರ್ಶನವು ನಡೆಯುವ ದಿನ ಮತ್ತು ವೇಳೆಯನ್ನು ಎಷ್ಟು ಮುಂಚಿತವಾಗಿ ಗೊತ್ತುಪಡಿಸಲಾಗುತ್ತದೆ ?

15 ಪ್ರದರ್ಶನಗಳನ್ನು ಇದ್ದಕ್ಕಿದ್ದಂತೆ ಬೇಕೆನಿಸಿದಾಗ ಗೊತ್ತುಮಾಡುವುದುಂಟೆ ?

16 ಪ್ರದರ್ಶನ ಕಾಲಾವಧಿಯಲ್ಲಿ ವಸ್ತುವಿನ ವಿವಿಧ ಸಂಯೋಜನೆಗಳು (Organisation) ಯಾವ ರೀತಿ ಇರುತ್ತವೆ ?

17 ಪ್ರದರ್ಶನಾವಧಿಯ ಘಟನೆಗಳನ್ನು ಅನಿಶ್ಚಿತವೆಂದು ಬಗೆಯಲಾಗುತ್ತದೆಯೋ ಅಥವಾ ಅನುಕ್ರಮವೆಂದು ಬಗೆಯಲಾಗುತ್ತದೆಯೋ ?

18 ಪ್ರದರ್ಶನಕ್ಕೆ ಕಥಾನಕ ಇರುತ್ತದೆಯೇ ? ಹಾಗಿದ್ದಲ್ಲಿ ಅದನ್ನು ಯಾವ ಆಕರಗಳಿಂದ ಆಯಲಾಗುತ್ತದೆ ?

19 ಪ್ರದರ್ಶನಕ್ಕೆ ಅಗತ್ಯವಾದ ಮಾನಸಿಕ ವಾತಾವರಣವನ್ನು ಸೃಷ್ಟಿಸಲು ಪ್ರದರ್ಶನಕ್ಕೆ ಪೂರ್ವಭಾವಿಯಾಗಿ ವೇಳೆಯನ್ನು ವಿನಿಯೋಗಿಸಲಾಗುವುದೆ ?

20 ಪುರಾಣಗಳನ್ನು ಪ್ರದರ್ಶನಕ್ಕೆ ಉಪಯೋಗಿಸಬಹುದಾದರೆ ಪ್ರದರ್ಶನದಲ್ಲಿ ಅವುಗಳಲ್ಲಿ ಯಾವುದಾದರೂ ಮಾರ್ಪಾಡುಗಳನ್ನು ಮಾಡಬಹುದೆ ? ಹಾಗಿದ್ದಲ್ಲಿ ಯಾವ ವಿಧದ ಮಾರ್ಪಾಡುಗಳನ್ನು ಮಾಡಬಹುದು ?

VII. ಪ್ರದರ್ಶನದ ಪರಂಪರೆಯ ಮತ್ತು ಪ್ರಸ್ತುತ ಮಾಹಿತಿ

1 ಪ್ರದರ್ಶನ ಪರಂಪರೆಯ ಉಗಮದ ಬಗ್ಗೆ ಇರುವ ಮಾಹಿತಿಗಳಾವುವು ?

2 ಸಂಸ್ಕೃತಿಯಲ್ಲಿ ಪ್ರದರ್ಶನವನ್ನು ಯಾವ ರೀತಿ ನಿರ್ವಚಿಸಲಾಗುತ್ತದೆ (Difine) ?

3 a) ಪ್ರದರ್ಶನ ಪರಂಪರೆಗೂ ಸಂಸ್ಕೃತಿಯ ಧಾರ್ಮಿಕ ವ್ಯವಸ್ಥೆಗೂ ಇರುವ ಸಂಬಂಧಗಳೇನು ?

b) ಈ ಸಂಬಂಧಗಳಲ್ಲಿ ಏನಾದರೂ ಬದಲಾವಣೆಗಳು ಕಂಡುಬಂದಿವೆಯೇ ?

4 a) ಪ್ರದರ್ಶನ ಪರಂಪರೆಗೂ ಸಂಸ್ಕೃತಿಯ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಗೂ ಇರುವ ಸಂಬಂಧಗಳೇನು ?

b) ಈ ಸಂಬಂಧಗಳಲ್ಲಿ ಏನಾದರೂ ಬದಲಾವಣೆಗಳು ಕಂಡು ಬಂದಿವೆಯೇ ?

5 ಪ್ರದರ್ಶನ ಪರಂಪರೆಗೂ ಸಂಸ್ಕೃತಿಯ ಲೈಂಗಿಕ ಮತ್ತು ಸಾಮಾಜಿಕ ನೀತಿ ನಿಯಮಗಳಿಗೂ ಇರುವ ಸಂಬಂಧಗಳೇನು ?

6 ಸಂಸ್ಕೃತಿಯ ಬೇರೆ ಬೇರೆ ಪ್ರದರ್ಶನಾ ಪರಂಪರೆಗಳಿಗೂ ಈ ಪ್ರದರ್ಶನ ಪರಂಪರೆಗೂ ಇರುವ ಚಾರಿತ್ರಿಕ ಸಂಬಂಧಗಳೇನು ?

7 ಈ ಪ್ರದರ್ಶನ ಪರಂಪರೆಗೆ ಸಾಮ್ಯವಿರುವ ಪ್ರದರ್ಶನಗಳು ಸುತ್ತಮುತ್ತಲಿನ ಅನ್ಯಭಾಷೀಯ ಸಂಸ್ಕೃತಿಗಳಲ್ಲಿ ಕಂಡುಬರುತ್ತವೆಯೇ ?

8 ಪ್ರದರ್ಶನ ಪರಂಪರೆಯೊಳಗೇ ಗಮನಾರ್ಹವಾಗಿ ಗುರುತಿಸಬಹುದಾದ ಶೈಲಿ ವ್ಯತ್ಯಾಸಗಳಿವೆಯೇ ?

9 a) ಪ್ರದರ್ಶನದಲ್ಲಿ ಹೊಸ ಶೈಲಿಗಳು ಗೋಚರವಾಗುತ್ತವೆಯೇ ? ಹೇಗೆ ?

b) ಹೊಸ ಶೈಲಿಗಳನ್ನು ಪ್ರೋತ್ಸಾಹಿಸಲಾಗುತ್ತದೆಯೇ ಅಥವಾ ಹೀಯಾಳಿಸಲಾಗುತ್ತದೆಯೇ ?

10 ಪ್ರದರ್ಶನದ ಶೈಲಿಗಳು ಕಣ್ಮರೆಯಾದುದುಂಟೆ ? ಹೇಗೆ ?

11 ಪ್ರದರ್ಶನ ಪರಂಪರೆಯನ್ನು ಆರ್ಥಿಕವಾಗಿ ಪ್ರೋತ್ಸಾಹಿಸುವವರು ಯಾರು ?

12 a) ಪ್ರದರ್ಶನ ಪರಂಪರೆಯ ಜನಪ್ರಿಯತೆ ಏರುಪೇರಾಗದೆ ನಿರಂತರವಾಗಿ ಉಳಿದಿದೆಯೇ ?

b) ಪ್ರೇಕ್ಷಕ ಸಮುದಾಯದಲ್ಲಿ ಜಾತಿ ಮತ್ತು ವರ್ಗಗಳ ಬದಲಾವಣೆ ಉಂಟಾಗಿದೆಯೇ ?

13 ಪ್ರದರ್ಶಕರಲ್ಲಿ ಯಾವುದಾದರೂ ಜಾತಿ ಮತ್ತು ವರ್ಗಗಳ ಬದಲಾವಣೆ ಉಂಟಾಗಿವೆಯೇ ?

14 ಪ್ರದರ್ಶನ ಪರಂಪರೆಯಲ್ಲಿ ಪ್ರಾದೇಶಿಕ ಭೇದಗಳು ಕಂಡು ಬರುತ್ತವೆಯೇ? ಹಾಗಿದ್ದರೆ ಯಾವ ಆಧಾರದ ಮೇಲೆ ಇದನ್ನು ಗುರುತಿಸಲಾಗುತ್ತದೆ ?

15 ಪ್ರದರ್ಶನದಲ್ಲಿ ಜನಪದವ ಮತ್ತು ವೃತ್ತಿನಿರತ ಪ್ರಭೇದಗಳು ಕಂಡು ಬರುತ್ತವೆಯೇ ?

16 ಪ್ರದರ್ಶನದಲ್ಲಿ ನಗರ ಮತ್ತು ಹಳ್ಳಿಯ ರೂಪಗಳಲ್ಲಿ ವ್ಯತ್ಯಾಸಗಳಿವೆಯೇ ?

17 ಪ್ರದರ್ಶನ ಶೈಲಿಗಳಲ್ಲಿ ಕೆಲವನ್ನು ಮಿಕ್ಕವಕ್ಕಿಂತ i) ಮುಂದುವರೆದ ii) ಕೀಳು ಮಟ್ಟಕ್ಕಿಳಿದ iii) ಪ್ರತಿಗಾಮಿಯಾದ ಶೈಲಿಗಳೆಂದು ಗುರುತಿಸಲಾಗುತ್ತದೆಯೆ ?

18 ಪ್ರದರ್ಶನದ ಹೊಸ ಹೊಸ ಶೈಲಿಗಳ ಉಗಮ ಇಂದಿಗೂ ಕಂಡು ಬರುತ್ತದೆಯೇ ?

19 a) ಪ್ರದರ್ಶನದ ಹಳೆಯ ರೂಪಗಳನ್ನು ರಕ್ಷಿಸಲು ಅಥವಾ ಪುನರುಜ್ಜೀವನಗೊಳಿಸಲು ಪ್ರಯತ್ನಗಳು ನಡೆಯುತ್ತಿವೆಯೇ ? ಹಾಗಿದ್ದಲ್ಲಿ ಅವುಗಳ ವಿವರಗಳೇನು ?

b) ಈ ಪ್ರಯತ್ನಗಳನ್ನು ಯಾರು ನಡೆಸುತ್ತಿದ್ದಾರೆ ?

20 a) ಸಂಸ್ಕೃತಿಯಲ್ಲಿ ಬೇರೆ ಬೇರೆ ಪ್ರದರ್ಶನ ಪರಂಪರೆಗಳು ಪರಸ್ಪರ ಸಂಬಂಧವನ್ನು ಪಡೆದುಕೊಂಡಿವೆಯೇ ? ಹಾಗಿದ್ದಲ್ಲಿ ಯಾವ ರೀತಿಯ ಸಂಬಂಧವನ್ನು ಪಡೆದಿವೆ ?

b) ಪರಂಪರೆಯ ಇತಿಹಾಸದಲ್ಲಿ ಈ ಸಂಬಂಧಗಳು ಬದಲಾಗಿರುವುದು ಕಂಡು ಬರುತ್ತದೆಯೇ ?

21 ಪ್ರದರ್ಶನದ ವಸ್ತು, ಸಂಸ್ಕೃತಿ (ವೇಷ–ಭೂಷಣ ಇತ್ಯಾದಿ) ಇತಿಹಾಸದಲ್ಲಿ ಬದಲಾವಣೆಯನ್ನು ಪಡೆದಿರುವುದು ಕಂಡುಬರುತ್ತದೆಯೆ ? ಅವುಗಳ ವಿವರಗಳೇನು ?

**

ಹನಿಗಳು

● ರಘುಪತಿ ಕೆಮ್ತೂರು

1. ಪ್ರಸವ :

ಈ ನನ್ನ ಪೆನ್ನಿನಿಂದ
ಅದೆಷ್ಟು ಸೃಷ್ಟಿಯಾಗಿದೆ ಎಂದು
ಸುಮ್ಮನೆ ಬೀಗುತ್ತ ಬಿರಿದಾಗ
ಪೆನ್ನು ಸ್ಟ್ಯಾಂಡಿನಡಿಯಲ್ಲಿ
ಉದುರಿತ್ತು ಒಂದು
ಹಸಿಹಸಿ ಕವಿತೆ :
(ಅದಕ್ಕೆ ಅಳು;
ನನಗೆ ವೇದನೆ)

2. ಪೂರ್ವಿಕರಿಗೆ :

ಮಂಗಗಳೆ,
ನೀವು ನನ್ನ ಪೂರ್ವಿಕರೆಂದು
ಕೊಚ್ಚಿಕೊಳ್ಳುವುದ ನೋಡಿ
ನನ್ನೆದೆಗೆ ಶೂಲ ಬಿದ್ದಂತೆ.
ಏನು ಮಾಡೋಣ ?
ನನಗೆ ಇಳಿಯಲು ಬರುವಂತೆ
ಹತ್ತುವ ಗುಟ್ಟು
ಇನ್ನೂ ತಿಳಿದಿಲ್ಲವಲ್ಲ ?

3. ಮಾನಸಿಕದೂರ :

ಕೆಲವು ವರ್ಷಗಳಿಂದ
ಈ ಹುಡುಗಿಯರ
ಕೆನ್ನೆಯಲ್ಲಿ
ಕಿತ್ತಳೆ ಸೇಬು ಅರಳೋದನ್ನ
ಅರಳಿ ಮೆಲ್ಲಗೆ ಬಿರಿಯೋದನ್ನ
ಗಜದಷ್ಟೇ ದೂರ ಕಂಡು
ಬೆರಗಾಗಿದ್ದೇನೆ
ಖುಷಿ ಪಟ್ಟಿದ್ದೇನೆ
ಆದರೆ—
ಕೈಮುಟ್ಟಿಲ್ಲ
ಹಸಿವು ತಟ್ಟಿಲ್ಲ.

4. ಆಕಾಶವಾಣಿಗೆ :

ಆಕಾಶವಾಣಿಯೇ,
ಸ್ವಲ್ಪ ತುಟಿ ಹೊಲಿಯುತ್ತೀಯ ?
ನನಗೆ
ಆಕಾಶದ ಮಹಾಮೌನದ
ಭಾಷೆಗೆ ಅರ್ಥ ಹುಡುಕುವ
ಪರಮಾರ್ಥವಿದೆ.

5. ರಸ್ತೆಗಳಿಗೆ :

ರಸ್ತೆಗಳೆ,
ನಿಮ್ಮ ಎದೆಮೇಲೆ
ಹರಿದ ನೀರಿಗಿಂತ
ಹೆಚ್ಚು
ಚರಂಡಿಯಲ್ಲಿ ಹರಿದಿದೆ
ನೆನಪಿಡಿ.

ಕರ್ನಾಟಕದ ಜೈನ ಮಂತ್ರಿಗಳು - ಸೇನಾಪತಿಗಳು

● ಎಸ್. ಪಿ. ಪಾಟೀಲ

ಭಾರತವು ಹಲವಾರು ಮತ ಧರ್ಮಗಳ ನೆಲೆವೀಡು. ಅದರಲ್ಲಿ ಜೈನಧರ್ಮವೂ ಒಂದು. ಜೈನಧರ್ಮ, ಸಂಸ್ಕೃತಿಯ ಕುರಿತು ಅನೇಕ ಪ್ರಾಚೀನ ಜೈನೇತರ ಕೃತಿಗಳಲ್ಲಿಯೂ ಉಲ್ಲೇಖ ದೊರೆಯುವುದು. ಭಾರತದಲ್ಲಿ ಆರ್ಯರ ಆಗಮನಕ್ಕಿಂತ ಪೂರ್ವದಲ್ಲಿಯೇ ಅದು ನೆಲಸಿದ್ದಿತು ಎಂಬ ವಿಷಯ ವಿದ್ವಾಂಸರಿಗೆ ಸಮ್ಮತವಾಗಿದೆ. ಈ ಜೈನಧರ್ಮದ ಇತಿಹಾಸವು ಕರ್ನಾಟಕದ ಇತಿಹಾಸದೊಂದಿಗೆ ಬೆರೆತು ಒಂದಾಗಿ ಮುಂದುವರಿದಿದೆ. ಆದರೆ ಅದು ಕರ್ನಾಟಕಕ್ಕೆ ಯಾವಾಗ ಕಾಲಿರಿಸಿತೆಂಬ ಬಗೆಗೆ ಖಚಿತವಾಗಿ ಹೇಳಲು ಬರುವುದಿಲ್ಲ. ಕರ್ನಾಟಕವನ್ನು ಜೀವಂಧರನೆಂಬ ರಾಜನು ಆಳುವ ಕಾಲಕ್ಕೆ ಮಹಾವೀರ ತೀರ್ಥಂಕರರ ಸಮವಸರಣವು ಅಲ್ಲಿಗೆ ಬಂದಿತ್ತೆಂದು ಭಾಸ್ಕರ ಕವಿಯ ' ಜೀವಂಧರ ಚರಿತೆ 'ಯಲ್ಲಿ ಹೇಳಲಾಗಿದೆ. ಆದರೆ ಇದಕ್ಕಿಂತ ಖಚಿತವಾದ ಆಧಾರವೆಂದರೆ ಕ್ರಿ.ಶ. ಪೂರ್ವ 3 ನೆಯ ಶತಮಾನದಲ್ಲಿ ಕಡೆಯ ಶ್ರುತಕೇವಲಿಗಳಾದ ಭದ್ರಬಾಹು ಸ್ವಾಮಿಗಳು ಮೌರ್ಯ ಚಂದ್ರಗುಪ್ತನೊಂದಿಗೆ ಶ್ರವಣಬೆಳಗೊಳಕ್ಕೆ ಬಂದರು. ಅಲ್ಲಿಯ ಚಂದ್ರಗಿರಿಯ ಬೆಟ್ಟದ ಮೇಲೆ ಕ್ರಿ.ಶ. ಪೂರ್ವ 297 ರಲ್ಲಿ ಸಲ್ಲೇಖನವಿಧಿಪೂರ್ವಕ ಕಾಲವಶರಾದರು ಎಂದು ಶ್ರವಣಬೆಳಗೊಳದ ಒಂದು ಶಾಸನದಲ್ಲಿ ಹೇಳಲಾಗಿದೆ. ದಕ್ಷಿಣ ಭಾರತದ ಕರ್ನಾಟಕದಲ್ಲಿ ಜೈನಧರ್ಮದ ಬೆಳವಣಿಗೆಯ ಪ್ರಥಮ ಹಂತವಿದು. ಅಲ್ಲಿಂದ ಮುಂದೆ 12–13 ನೆಯ ಶತಮಾನದ ವರೆಗೆ ಜೈನಧರ್ಮವು ಕರ್ನಾಟಕದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಕ್ಷೇತ್ರಗಳಲ್ಲಿ ಪ್ರಮುಖ ಪಾತ್ರ ವಹಿಸಿರುವದು ವೇದ್ಯವಾಗುವದು.

ಕರ್ನಾಟದಲ್ಲಿ ಜೈನಧರ್ಮದ ಪ್ರಭಾವಕ್ಕೊಳಗಾಗದ ಒಂದೂ ಅರಸುಮನೆತನವಿರಲಿಲ್ಲ. ಕದಂಬ, ಗಂಗ, ರಾಷ್ಟ್ರಕೂಟ, ರಟ್ಟ ಮತ್ತು ಕಲಚೂರಿ –ಇವು ಪ್ರಭಾವಿ ಹಾಗೂ ಪ್ರಬಲ ಅರಸುಮನೆತನಗಳಾಗಿದ್ದು, ಜೈನಧರ್ಮವನ್ನು ರಾಜಧರ್ಮವೆಂದು ಅಥವಾ ರಾಜ್ಯದಲ್ಲಿದ್ದ ಆ ಧರ್ಮದ ಅಸಂಖ್ಯ ಪ್ರಜೆಗಳನ್ನು ತಮ್ಮ ಆಶ್ರಯದಲ್ಲಿ

ಉದಾರ ಭಾವ, ಸಹನಶೀಲತೆಯಿಂದ ರಕ್ಷಿಸಿಕೊಂಡು ಬಂದವುಗಳಾಗಿವೆ. ಗಂಗರಿಂದ ಜೈನಧರ್ಮಕ್ಕೆ ರಾಜಾಶ್ರಯ ಲಭಿಸಿತು. ಕದಂಬರು ಜೈನಧರ್ಮದ ರಕ್ಷಣೆ-ಪೋಷಣೆ ಗಾಗಿ ಜೈನಧರ್ಮದವರಿಗೆ ಅನೇಕ ದಾನವಿತ್ತ ಸಂಗತಿಯನ್ನು ವಿವರಿಸುವ ಶಾಸನಗಳು ದೊರೆಯುವವು. ಈ ರಾಜವಂಶದ ಧರ್ಮ ಜೈನಧರ್ಮವಾಗಿದ್ದಿತು.[1]

ಬನವಾಸಿಯ ಪ್ರಾಚೀನ ಕದಂಬರೂ, ಚಾಲುಕ್ಯರೂ-ಪಲ್ಲವರ ನಂತರ ತುಳುವ ದೇಶದ ಮೇಲೆ ರಾಜ್ಯಮಾಡಿದವರು -ನಿಸ್ಸಂದೇಹವಾಗಿ ಜೈನರಿದ್ದರೆಂದು ಗೊತ್ತಾಗು ತ್ತದೆ.[2] ಹೀಗೆ ರಾಜಾಶ್ರಯವನ್ನು ಪಡೆದ ಜೈನಧರ್ಮವು ಕರ್ನಾಟಕದಲ್ಲೆಲ್ಲ ಹಬ್ಬಿ ತನ್ನ ಪ್ರಭಾವ ಬೀರಿತು. ಆದುದರಿಂದಲೇ ಹದಿನೈದನೆಯ ಶತಮಾನದ ಒಂದು ಶಾಸನ ಅಂದಿನ ಜೈನಧರ್ಮದ ವೈಭವದ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವದು:

> ಜಿನಧರ್ಮಾವಾಸಮಾದತ್ತಮಳ ವಿನಯದಾಗರಮಾದತ್ತು ಪದ್ಮಾ
> ಸನನಿರ್ಪಾಸದ್ಮಮಾದತ್ತತಿ ವಿಶದ ಯಶೋಧಾಮಮಾದತ್ತು ವಿದ್ಯಾ
> ಧನ ಧರ್ಮಸ್ಥಾನಮಾದತ್ತಸಮ ತರಳ ಗಂಭೀರ ಸದ್ಗೇಹಮಾದ
> ತ್ತೆನಿಸಲ್ಕಿಂತುಳ್ಳ ನಾನಾಮಹಿಮೆಯೊಳೆಸೆಗುಂ ಚಾರು ಕರ್ನಾಟದೇಶಂ
>
> —ಶಾಸನಪದ್ಯಮಂಜರಿ-240

ಕರ್ನಾಟಕದಲ್ಲಿ ಜೈನಧರ್ಮಕ್ಕೆ ಆರಂಭದಿಂದಲೇ ರಾಜಾಶ್ರಯ ಲಭಿಸಿತು. ಅನೇಕ ರಾಜರು ಸ್ವತಃ ಜೈನಧರ್ಮದವರಾಗಿದ್ದರು. ಇದರಿಂದಾಗಿ ಅವರ ಚಟುವಟಿಕೆ ಇನ್ನಷ್ಟು ಹೆಚ್ಚಲು ಸಹಾಯವಾಯಿತು. ರಾಜರಂತೆ ಅವರ ಮಂತ್ರಿಗಳೂ, ಸೇನಾ ಪತಿಗಳೂ ಜೈನರಾಗಿದ್ದು ನಾಡಿನ ಆಡಳಿತ-ಸಂರಕ್ಷಣೆಯ ಕಾರ್ಯವನ್ನು ದಕ್ಷತೆಯಿಂದ ಪೂರೈಸುವದರ ಜೊತೆಗೆ ಧರ್ಮಮಾರ್ಗದಿಂದಲೂ ಮಾನವಕುಲದ ಕಲ್ಯಾಣಕ್ಕಾಗಿ ಶ್ರಮಿಸಿದುದು ಕಂಡುಬರುವದು. ಆದರೆ ಸಾಮಾನ್ಯವಾಗಿ ಇತಿಹಾಸವು ರಾಜ-ಮಹಾ ರಾಜರ ಶೌರ್ಯ-ಸಾಹಸ, ದಾನ-ಧರ್ಮ, ಸಾಹಿತ್ಯ-ಕಲಾಭಿರುಚಿ ಮೊದಲಾದ ಅಂಶ ವನ್ನು ಚಿತ್ರಿಸುವ ಸಾಧನವಾಗಿದೆಯಲ್ಲದೆ ಈ ವಿಷಯಗಳಲ್ಲಿ ಅವರಿಗೆ ಮಾರ್ಗದರ್ಶನವೀ ಯುವ ಮಂತ್ರಿ, ಯುದ್ಧಭೂಮಿಯಲ್ಲಿ ಜಯಗಳಿಸಿಕೊಡುವ ಸೇನಾಪತಿಗಳ ಹೆಸರುಗಳು ತೆರೆಯ ಮರೆಯಲ್ಲಿ ಉಳಿಯುವ ಸಂಭವವೇ ಅಧಿಕ. ಹೀಗಾಗಿ ಕನ್ನಡನಾಡಿನ ಅನೇಕ ಜೈನ ಮಂತ್ರಿ-ಸೇನಾಪತಿಗಳ ಹಿರಿಯ ವ್ಯಕ್ತಿತ್ವದ ಪರಿಚಯವಾಗಿರದೇ ಉಳಿದಿರುವ ಸಂಭವವಿದೆ. ಆದರೂ ಕೆಲವು ಜನರು ತಮ್ಮ ವಿಶಿಷ್ಟ ವ್ಯಕ್ತಿತ್ವದಿಂದಾಗಿರುವ ಅದ್ವಿ ತೀಯ ಮಾನವೀಯತೆಯಿಂದಾಗಿ ನಾಡಿನ ಜನರ ಹೃದಯದಲ್ಲಿ ಇಂದಿಗೂ ಗೌರವದ

---

1. ಮಿರ್ಜಿ ಅಣ್ಣಾರಾಯರು : ಜೈನಧರ್ಮ, ಪು. 104.
2. ಅದೇ ಪು. 104-105 (ಎಪಿಗ್ರಾಫಿಯಾ ರಿಪೋರ್ಟ, 1923-24)

ಸ್ಥಾನ ಪಡೆದಿದ್ದಾರೆ. ಅವರ ಹಾಗೂ ಅವರ ಕುಟುಂಬ ವರ್ಗದವರ ಉದಾತ್ತ ಕಾರ್ಯಗಳು ಮುಂದಿನ ಜನಾಂಗಕ್ಕೆ ಆದರ್ಶಪ್ರಾಯವಾದ ಸ್ಮಾರಕಗಳಾಗಿ ನಿತ್ಯನಂದಾದೀಪಗಳಾಗಿ ಉಳಿದಿವೆ. ಈ ದೃಷ್ಟಿಯಿಂದ ಕರ್ನಾಟಕದ ಜೈನಮಂತ್ರಿಗಳು–ಸೇನಾಪತಿಗಳಲ್ಲಿ ಕೆಲವರ ಕುರಿತು ಯೋಚಿಸಬಹುದಾಗಿದೆ. ಆದರೆ ಈ ಮಹಾವ್ಯಕ್ತಿಗಳ ಕುರಿತು ವಿವರವಾದ ವಿವೇಚನೆಗೆ ಇನ್ನೂ ಸಾಕಷ್ಟು ಅವಕಾಶವಿದೆಯೆಂಬುದನ್ನು ಮರೆಯಲಾಗದು.

ಕರ್ನಾಟದ ಜೈನ ಸೇನಾಪತಿ–ಮಂತ್ರಿ–ಕವಿಗಳಲ್ಲಿ ರಾಜನಿಷ್ಠನಾಗಿ, ಅತಿಶಯ ಪರಾಕ್ರಮದಿಂದ ಹೋರಾಡಿ, ಧರ್ಮವನ್ನು ನಿತ್ಯಜೀವನದಲ್ಲಿ ಬಾಳಿ ಬದುಕಿ, ಲೋಕೋತ್ತರ ಕಲಾಪೂರ್ಣವಾದ ಶಿಲ್ಪವನ್ನು ನಿರ್ಮಿಸಿ, ರನ್ನನಂತಹ ಮಹಾಕವಿಗೆ ಆಶ್ರಯವಿತ್ತು ಅಜರಾಮರನಾದ ಚಾವುಂಡರಾಯನ ಚಿತ್ರ–ಚರಿತ್ರೆ ಅದ್ವಿತೀಯವೂ, ಅಪೂರ್ವವೂ ಆಗಿದೆ. ಚಾವುಂಡರಾಯ ಗಂಗ ಮಾರಸಿಂಹನ ಮಂತ್ರಿ, ಗಂಗ ಮಾರಸಿಂಹ ಯುಗ ಪುರುಷ, ಒಳ್ಳೆಯ ವೈಭವದಿಂದ ರಾಜ್ಯವಾಳಿ, ಕೊನೆಗೆ ರಾಜ್ಯಪದವನ್ನು ತ್ಯಜಿಸಿ, ಅಜಿತಸೇನಾಚಾರ್ಯರಲ್ಲಿ ದೀಕ್ಷೆಪಡೆದು, ಸಲ್ಲೇಖನ ವ್ರತ ಸ್ವೀಕರಿಸಿ, ಬಂಕಾಪುರದಲ್ಲಿ ಕ್ರಿ. ಶ. 975ರಲ್ಲಿ ದೇಹ ತ್ಯಜಿಸಿದವನು. ಮಾರಸಿಂಹನ ತರುವಾಯ ಪಟ್ಟಕ್ಕೆ ಬಂದ ಎಳೆಹರೆಯದ ರಾಚಮಲ್ಲನ ಮಂತ್ರಿ, ಸೇನಾಪತಿಯಾಗಿ ಚಾವುಂಡರಾಯ ರಾಜ್ಯದ ಭಾರವನ್ನು ಹೊತ್ತು ಯಶಸ್ವಿಯಾಗಿ ನಿರ್ವಹಿಸಿದನು. ಗಂಗರ ಅನೇಕ ವಿಜಯಗಳ ಕಾರಣಪುರುಷ ಚಾವುಂಡರಾಯ. ಅವನ ಧೈರ್ಯ ಸಾಹಸಗಳ ವರ್ಣನೆ ಅನೇಕ ಶಾಸನಗಳಲ್ಲಿ ಕೆನೆಗೊಂಡು ನಿಂತಿದೆ.

“ನೀಳ್ದನ ಬೆಸದಿಂ ಖೇಡಗ ಕಾಳಗದೊಳ್ ವಜ್ಜ್ರದೇವನಂ ಗೆಲ್ದ ಸಾಹಸದಿಂ **ಸಮರದುರಂಧರಂ,** ಗೋನೂರ ಬಯಲೊಳ್ ಬಂದೊಡ್ಡಿದ ನೊಳಂಬರ ಕಾಳಗದೊಳ್ ಜಗದೇಕವೀರನ ಮುಂದೆ ತನ್ನ ಬಲಮುಂ ಮೆರೆದುದರಿಂ **ವೀರಮಾರ್ತಾಂಡಂ,** ಉಚ್ಚಂಗಿಯ ಕೋಂಟೆಯೊಳ್ ರಾಜಾಯ್ತನೊಳ್ ಓರ್ವನೆ ರಣಮಂ ಮೆರೆದುದರಿಂದೆ **ರಣರಂಗಸಿಂಗಂ,** ಬಾಗೆಯೂರ ಕೋಟೆಯೊಳ್ ರಾಜ, ಬಾಸ. ಸಿವರ, ಕೂಣಾಂಕ ಮೊದಲಾದ ಕಲಿಗಳ ಒಂದೇ ಮೈಯ್ಯೊಳ್ ಪೆಣೆದಿರಿದುದರಿಂ **ಭುಜವಿಕ್ರಮಂ,** ತನ್ನ ತಮ್ಮನಂ ನಾಗವರ್ಮನಂ ಕೊಂದ ಪತಿಗೆ ಛಲದಂಕ ಗಂಗನುಂ ಗಂಗರಭಟನುಮೆನಿಸಿದ ಮದುರಾಚಯ್ಯನಂ ಕೊಂದುದರಿಂದ **ಸಮರಪರುಶರಾಮಂ,** ಜಟ್ಟಿಗರನಟ್ಟಿದ ದಂಡಿನೊಳ್ ನಿಷ್ಕಂಟಕಂ ಮಾಡಿದುದರಿಂ **ಪ್ರತಿಪಕ್ಷರಾಕ್ಷಸಂ,** ವೀರಭಟಕೋಟೆಯುಂ ತವೆ ಕೊಂದುದರಿಂದ **ಭಟಮಾರಿ,** ನಿಶ್ಯಂಕಾದಿ ಗುಣ ಪರಿರಕ್ಷಣೈಕಕಾರಣನಪ್ಪದರಿಂ **ಸಮ್ಯಕ್ತ್ವರತ್ನಾಕರಂ,** ಪರಾಂಗನಾ, ಪರದ್ರವ್ಯ ಪರಾಙ್ಮುಖನಪ್ಪದರಿಂ **ಶೌಚಾಭರಣಂ,** ಪರಿಹಾಸದೊಳಂ ಸೂನ್ನತ ವಚನನಪ್ಪುದರಿಂ **ಸತ್ಯಯುಧಿಷ್ಠಿರಂ,** **ಅತಿಪ್ರಚಂಡವೀರ,** ಮಾಂಡಲೀಕ ಖಂಡಮುಂಡನಮಣಿಯಪ್ಪುದರಿಂದ **ಸುಭಟ**

ಚೂಡಾಮಣಿ", (ಚಾವುಂಡರಾಯ ಪುರಾಣ) –ಅವನ ಈ ಪದವಿಗಳು ಅವನ ಶೌರ್ಯ, ಸಾಹಸ, ಸಮ್ಯಕ್ತ್ವಕ್ಕೆ ಸಾಕ್ಷಿಯಾಗಿವೆ.

ಚಾವುಂಡರಾಯನ ತಾಯಿ ಕಾಳಲಾದೇವಿ. ಜಿನಭಕ್ತೆ. ಅವಳ ಬಯಕೆಯಂತೆ ಶ್ರವಣ ಬೆಳಗೊಳದ ವಿಂಧ್ಯಗಿರಿಯ ಮೇಲೆ ಲೋಕೋತ್ತರ ಕಲಾನಿಧಿ ಬಾಹುಬಲಿಯ ಬೃಹತ್ ಮೂರ್ತಿಯನ್ನು ಆತನು ನಿರ್ಮಿಸಿದನು. ಬಾಹುಬಲಿಯ ತ್ಯಾಗವನ್ನೂ, ಶಾಂತಭಾವ ವನ್ನೂ, ಮಂದಹಾಸವನ್ನೂ ಪ್ರತಿನಿಧಿಸುವ ಈ ಶಿಲ್ಪಕಲಾಕೃತಿ ಕನ್ನಡನಾಡಿನ ಶಿಲ್ಪಕ್ಷೇತ್ರಕ್ಕೆ ಚಾವುಂಡರಾಯನ ಅಪೂರ್ವ ಕಾಣಿಕೆಯಾಗಿದೆ. ಭದ್ರಬಾಹು ಭಟ್ಟಾರಕರಿಂದ ಪವಿತ್ರ ಧಾರ್ಮಿಕ ಕ್ಷೇತ್ರವಾದ ಶ್ರವಣಬೆಳಗೊಳವು ಚಾವುಂಡರಾಯನಿಂದ ಅದ್ವಿತೀಯ ಕಲೆಯ ಬೀಡಾಗಿ ಜಗತ್ತಿನ ಎಲ್ಲ ಮೂಲೆಯ ಜನರನ್ನು ಆಕರ್ಷಿಸಿ, ಸಂಸಾರದ ನಶ್ವರತೆಯನ್ನೂ ತ್ಯಾಗದ ಹಿರಿಮೆಯನ್ನೂ ಬೀರುವ ಮಹಿಮೋನ್ನತ ಕ್ಷೇತ್ರವಾಗಿ ಪರಿಣಮಿಸಿತು. ಚಾವುಂಡರಾಯನನ್ನು ಪ್ರೀತಿಯಿಂದ 'ಗೊಮ್ಮಟ'ನೆಂದು ಕರೆಯುತ್ತಿದ್ದುದರಿಂದ ಅವನು ಸ್ಥಾಪಿಸಿದ ಬಾಹುಬಲಿಯು 'ಗೊಮಟೇಶ್ವರ'ನೆಂದು ಪ್ರಸಿಧ್ಧನಾದನು.

ಚಾವುಂಡರಾಯನಿಂದ ಮಾಡಿಸಲ್ಪಟ್ಟ ಗೊಮ್ಮಟನ ಮುಖಾರವಿಂದವನ್ನು ಸರ್ವಾರ್ಥ ಸಿದ್ಧಿಯ ದೇವತೆಗಳೂ ಪರಮಾವಧಿಯ ಮುನಿಗಳೂ ನೋಡಿ ಪುನೀತರಾದರು ಎಂದು ಅದರ ಪವಿತ್ರತೆಯನ್ನೂ, ಮಹಿಮೆಯನ್ನೂ ಹೊಗಳಲಾಗಿದೆ.[3]

ಚಾವುಂಡರಾಯ ಸಿದ್ಧಾಂತಚಕ್ರವರ್ತಿ ನೇಮಿಚಂದ್ರಾಚಾರ್ಯರ ಶಿಷ್ಯ. ಮೊದಲಿನಿಂದಲೂ ಸಾಹಿತ್ಯಪ್ರಿಯ, ಸಂಸ್ಕೃತಿಯ ಅಭಿಮಾನಿ, ರಕ್ಷಕ. ಎಡೆಬಿಡದ ರಾಜಕಾರ್ಯದಲ್ಲಿಯ ಬಿಡುವಿನ ಸಮಯದಲ್ಲಿ ಗುರುಗಳಲ್ಲಿ ಹೋಗಿ ಧರ್ಮಚಿಂತನೆ ಮಾಡುವ ಸಾತ್ವಿಕ ಶ್ರಾವಕ. ಅವನಿಗಾಗಿ ನೇಮಿಚಂದ್ರಾಚಾರ್ಯರು ಧವಳ ಮೊದಲಾದ ಗ್ರಂಥಗಳನ್ನು ಓದಿ ವಿವರಿಸಿ ಹೇಳುತ್ತಿದ್ದರು. ಅಷ್ಟೇ ಅಲ್ಲದೆ ಗೊಮ್ಮಟನಿಗಾಗಿ ಅದನ್ನು ಸಂಗ್ರಹಿಸಿ 'ಗೊಮ್ಮಟಸಾರ'ವನ್ನು ಸಿದ್ಧಪಡಿಸಿದರು.[4] "ಚಾವುಂಡರಾಯನು ಕರ್ಮ ವಿಜ್ಞಾನದ ಗೊಮ್ಮಟಸಾರಕ್ಕೆ ಅಚ್ಚಗನ್ನಡದಲ್ಲಿ ವೃತ್ತಿಯನ್ನು ಬರೆದನು."[5]

'ತ್ರಿಷಷ್ಟಿಲಕ್ಷಣ ಮಹಾಪುರಾಣ'ವು ಚಾವುಂಡರಾಯನಿಂದ ರಚಿತವಾದ ಗದ್ಯ ಮಹಾಪುರಾಣ. ಕನ್ನಡ ಸಾಹಿತ್ಯದಲ್ಲಿ ಎರಡನೆಯ ಗದ್ಯಕೃತಿಯೆಂಬ ಗೌರವಕ್ಕೆ ಪಾತ್ರ ವಾಯಿತು. ಚಾವುಂಡರಾಯನಿಂದ ರಚಿತವಾದುದರಿಂದ 'ಚಾವುಂಡರಾಯ ಪುರಾಣ' ವೆಂದು ಕರೆಯಲ್ಪಡುವದು. 'ಗದ್ಯಗೊಮ್ಮಟ'ವೆಂಬ ಗೌರವವೂ ಅದಕ್ಕೆ ಸಂದಿದೆ.

---

3. ಗೊಮ್ಮಟಸಾರ, ಭಾಗ 2, ಪು. 969
4. ಅದೇ, ಭಾಗ 2, ಪು. 972
5. ದಿವ್ಯಧ್ವನಿ : ಸಂ. ಹಂಪ ನಾಗರಾಜಯ್ಯ, ಪು. 100

ಚಾವುಂಡರಾಯನು ಸಂಸ್ಕೃತದಲ್ಲಿ 'ಚರಿತ್ರಸಾರ'ವೆಂಬ ಗ್ರಂಥವನ್ನು ರಚಿಸಿದನೆಂದು ಹೇಳಲಾಗುವದು. ರನ್ನನಂತಹ ಮಹಾಕವಿಗೆ ಆಶ್ರಯವಿತ್ತು ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದನು. ರನ್ನನ 'ಸಮರಪರಶುರಾಮಚರಿತೆ' ಚಾವುಂಡರಾಯನ ಚರಿತೆಯೇ ಆಗಿರಬಹುದು. ಚಾವುಂಡರಾಯನಿಂದ ಜೈನ ಸಾಹಿತ್ಯ-ಸಂಸ್ಕೃತಿ ಕಲೆಗಳ ಬೆಳವಣಿಗೆಗೆ ತುಂಬ ಸಹಾಯ ಸಂದಿದೆ. "ಗೊಮ್ಮಟರಾಯನ ವ್ಯಕ್ತಿತ್ವವು ಶ್ರವಣಬೆಳಗೊಳದ ಗೊಮ್ಮಟ ಮೂರ್ತಿಗಿಂತಲೂ ಉನ್ನತವಾಗಿತ್ತು. ಎಂತಲೇ ಅವನು ಮಾಡಿದ ಕಾರ್ಯಗಳು ಜೈನಧರ್ಮ ಇರುವವರೆಗೂ ಇರುವಂತಹವಿವೆ. ಇಷ್ಟೇ ಅಲ್ಲ ಧರ್ಮದ ವಿಕಾಸಕ್ಕೆ ನೆರವಾಗುವಂತೆಯೂ ಇವೆ."[6]

ಚಾವುಂಡರಾಯನ ಮಗ ಜಿನದೇವನೂ ಅಜಿತಸೇನಾಚಾರ್ಯರ ಶಿಷ್ಯ. ಶ್ರವಣಬೆಳಗೊಳದಲ್ಲಿ ಜಿನಮಂದಿರ ನಿರ್ಮಿಸಿದ ವಿವರ ಒಂದು ಶಾಸನದಲ್ಲಿ ಬರುವದು :

ಜಿನಗೃಹಮಂ ಬೆಳ್ಗೊಳದೊಳ್
ಜನಮೆಲ್ಲಂ ಪೊಗಳೆ ಮನ್ತ್ರಿ ಚಾಮುಂಡನ ನಂದ
ನನೊಲವಿಂ ಮಾಡಿಸಿದಂ
ಜಿನದೇವಣಜಿತಸೇನ ಮುನಿಪರ ಗುಡ್ಡಂ[7]

ಹೀಗೆ ತಂದೆ ಮಕ್ಕಳಿಬ್ಬರೂ ರಾಷ್ಟ್ರೋನ್ನತಿಯ ಕಾರ್ಯದೊಂದಿಗೆ ಆತ್ಮೋನ್ನತಿಯ ಕಾರ್ಯವನ್ನು ಕೈಕೊಂಡವರು.

ನೃಪತುಂಗನ ರಾಜ್ಯಾಡಳಿತೆಯ ಕಾಲದಲ್ಲಿ ಬಂಕೇಯನೆಂಬ ವೀರನ ಹೆಸರನ್ನು ಕಾಣುತ್ತೇವೆ. ಅವನ ತಂದೆ ಘೋರ, ತಾಯಿ ವಿಜಯಾಂಬೆ. ಅವನು ನೃಪತುಂಗನಿಗೆ ರಾಜ್ಯಕಾರ್ಯದಲ್ಲಿ ಮಾರ್ಗದರ್ಶಕನಾಗಿದ್ದನು. ಅವನನ್ನು 'ವಿತತ ಜ್ಯೋತಿರ್ನಿಶಿತಾಸಿರಿವಾಪರಃ'' ಎಂದು ಕರೆಯಲಾಗಿದೆ. ನೃಪತುಂಗನಿಂದ ದೊರೆತ ಭೂದಾನವನ್ನು ಕೋಳನೂರಿನಲ್ಲಿ ತಾನು ಕಟ್ಟಿದ ಜಿನಮಂದಿರದ ಪೂಜಾಕಾರ್ಯಗಳ ವ್ಯವಸ್ಥೆಗಾಗಿ ದಾನವಿತ್ತನು. ವೀರನಾಗಿದ್ದಂತೆ ಭವ್ಯ ಶ್ರಾವಕನೂ ಆಗಿದ್ದನು. ಅವನ ಹೆಸರಿನಲ್ಲಿ ಅವನ ಮಗ ಬಂಕಾಪುರವೆಂಬ ನಗರವನ್ನು ನಿರ್ಮಿಸಿದನೆಂದು ತಿಳಿಯುವದು. ಗಂಗಮಾರಸಿಂಹ ಸಲ್ಲೇಖನ ವ್ರತ ಸ್ವೀಕರಿಸಿದುದು ಇಲ್ಲಿಯೇ. ಬಂಕೇಯನಿಂದಾಗಿ ಮಾನ್ಯಖೇಟ ರಾಜಧಾನಿಯಲ್ಲಿ ಜೈನ ವಿದ್ವಾಂಸರು ಹಾಗೂ ಅಧಿಕಾರಿಗಳು ಬೆಳೆಯಲು ಅನುಕೂಲವಾಯಿತು.

---

6. ಮಿರ್ಜಿ ಅಣ್ಣಾರಾಯರು : ಜೈನಧರ್ಮ, ಪು. 107
7. ಎಪಿಗ್ರಾಫಿಯ ಕರ್ನಾಟಿಕ 2 (1973) ನಂ. 150

ದಾನಚಿಂತಾಮಣಿ ಅತ್ತಿಮಬ್ಬೆಯ ತಂದೆ ಮಲ್ಲಪ ಹಾಗೂ ಕಕ್ಕ ಪೊನ್ನಮಯ್ಯರು ರಾಷ್ಟ್ರಕೂಟ 3ನೆಯ ಕೃಷ್ಣನೃಪನಲ್ಲಿ ಸೇನಾಪತಿಗಳಾಗಿದ್ದರು. ಪೊನ್ನ ಮಹಾಕವಿಯಿಂದ ಶಾಂತಿಪುರಾಣವನ್ನು ಬರೆಯಿಸಿದರೆಂಬುದನ್ನು ಪೊನ್ನನೇ 'ಶಾಂತಿಪುರಾಣ'ದಲ್ಲಿ ಹೇಳಿದ್ದಾನೆ:

ಶಾಂತಿಪುರಾಣದ ನಿರ್ವಾ
ಣಂ ತಕ್ಕದೆ ಮಲ್ಲಪಯ್ಯನಿಂ ತದನುಜನಿಂ
ಶಾಂತಿಧನ ಪುನ್ನಮಯ್ಯನಿ
ನೇ ತಮ್ಮುತ್ತೀರ್ವರುಂ ಕೃತಾರ್ಥರೋ ಜಗದೊಳ್

ಅದರಂತೆ ಶಾಂತಿಪುರಾಣದ 1. 37–55; 12. 61–63, 81 ಪದ್ಯಗಳಲ್ಲಿ ಆಶ್ವಾಸಾಂತ ಗದ್ಯದಲ್ಲಿ ಈ ಪುರಾಣಕರ್ತೃಗಳಾದ ಸಹೋದರರನ್ನು ಪೊನ್ನಕವಿ ಶ್ರದ್ಧೆ-ಭಕ್ತಿಯಿಂದ ಹೊಗಳಿದ್ದಾನೆ.

ಮಲ್ಲಪ–ಪೊನ್ನಮಯ್ಯರ ಮನೆ ಪಂಡಿತಮಂಡಳಿ, ಕವಿಮಂಡಳಿಗೆ ತವರ್ಮನೆಯಾಗಿತ್ತು.[8] ಅವರೀರ್ವರೂ ರಣವೀರರು, ಧರ್ಮಪರರು; ಶೀಲ, ಬಲ, ಕಲೆ ಹಾಗೂ ಸಂಯಮ ಸಂಪನ್ನರು. ಇಂಥ ಮನೆತನದಲ್ಲಿ ಮಲ್ಲಪನ ಕುವರಿಯಾಗಿ ಜನಿಸಿದ ಅತ್ತಿಮಬ್ಬೆಯು 'ರತ್ನತ್ರಯಾಲಂಕೃತೆಯುಂ, ದಾನಚಿಂತಾಮಣಿಯುಂ, ಚರಿತ್ರ ಮೇರುವುಂ, ಗುಣದಂಕಕಾರ್ತಿಯುಂ....ಕವಿವರ ಕಾಮಧೇನುವುಂ, ಜಿನಧರ್ಮ ಪತಾಕೆಯುಂ, ಮಹಾಸತಿಕುಲತಿಲಕೆಯುಂ'[9] ಆಗಿದ್ದಳು. ಕೈಹಿಡಿದ ಪತಿ ನಾಗಮಯ್ಯನು ಚಾಲುಕ್ಯ ಆಹವಮಲ್ಲನ ದಂಡನಾಯಕ, 'ಒರಟರ ಮಲ್ಲ' ಬಿರುದಾಂಕಿತ. ಹೀಗೆ ಹೆತ್ತಮನೆ, ಹೊಕ್ಕಮನೆಗಳೆರಡೂ ಶೌರ್ಯ-ವೀರಸಾಹಸಕ್ಕೆ ಹೆಸರಾದುದರಿಂದ ಅತ್ತಿಮಬ್ಬೆ ಹೆಣ್ಣಾದರೂ, ಸೇನಾಪತಿ–ಮಂತ್ರಿಯಾಗಿರದಿದ್ದರೂ ಮನೆಯಲ್ಲಿದ್ದು ಅವಳು ಮಾಡಿದ ಕಾರ್ಯ ಯಾವ ಮಂತ್ರಿ ಸೇನಾಪತಿಗಳಿಗೂ ಕಡಿಮೆಯದಲ್ಲ. ಯುದ್ಧರಂಗದಲ್ಲಿ ವೈರಿಗಳೊಡನೆ ಹೋರಾಡುತ್ತ ವೀರಸ್ವರ್ಗವನ್ನು ಸೇರಿದ ಪತಿಯ ಅಗಲುವಿಕೆಯಿಂದ ಅತ್ತಿಮಬ್ಬೆಯ ಜೀವನ ಇನ್ನಷ್ಟು ಕರ್ತವ್ಯಪರವಾಯಿತು. ರಾಷ್ಟ್ರಕಾರ್ಯ, ಧರ್ಮ ಕಾರ್ಯಕ್ಕಾಗಿ ತನ್ನ ಜೀವಿತವನ್ನು ಮುಡುಪಿಟ್ಟಳು. 'ಅಸಿಧಾರಾವ್ರತಂಗಳಂ ತಾಳ್ದ ಧರ್ಮಮಂ ಮಾಡುವ.... ಒಡಲನುಪವಾಸದಿಂ ತನ್ನೊಡವೆಯನವರ ದಾನದಿಂ ತವಿಸಿ ಜಸಂ ಪಡೆದಳ್"[10] ಅವಳ ದಾನ, ಪೂಜೆ, ಶೀಲ, ಉಪವಾಸಗಳ ಕೀರ್ತಿ ನಾಲ್ಕೂ ದಿಕ್ಕಿನಲ್ಲಿ ಹಬ್ಬಿತು.

---

8. ರನ್ನ : ಅಜಿತನಾಥ ಪುರಾಣ, 1–28
9. ಅದೇ, 1–38 ವ.
10. ಅದೇ, 1–50, 51

ಬುಧಜನವಂದಿತೆ ಧರ್ಮ
ಪ್ರಧಾನೆ ದರ್ಶನವಿಶುದ್ಧೆ ದಾನ ಗುಣೈಕಾಂ
ಬುಧಿಯೆನಿಸಿದ ಕವಿವರ ಕಾ
ಮಧೇನುವೆಂದೆಂಬುದತ್ತಿಮಬ್ಬೆಯನೆ ಜಗಂ[11]

ಜಿನಪದಭಕ್ತೆ ಜಗತ್ರಯ
ಜಿನವಂದಿತೆ ಚಕ್ರವರ್ತಿಪೂಜಿತೆ ಜಿನಶಾ
ಸನರುಚಿ ಪಡೆವಳ ತೈಲನ
ಜನನಿಯೆ ತೀರ್ಥಂಕರ ಜನನಿಯೆನ್ನದರೊಳರೆ[12]

ಆಸನ್ನಭವ್ಯೆಯುಂ ಜಿನ
ಶಾಸನ ದೀಪಿಕೆಯುಮೆನಿಸಿ ಮಣಿಕನಕಮಯೋದ್ಭಾ
ವಿಸಿ ಜಿನಪ್ರತಿಮೆಗಳಂ
ಸಾವಿರದಯ್ನೂರರನಳ್ತಿಯಿಂ ಮಾಡಿಸಿದಳ್[13]

ಪೊನ್ನನ 'ಶಾಂತಿಪುರಾಣ'ದ ಸಾವಿರ ಪ್ರತಿಗಳನ್ನೂ 1500 ಜಿನಬಿಂಬಗಳನ್ನು ಮಾಡಿಸಿ ದಾನಚಿಂತಾಮಣಿಯಾದಳು. ಚಾವುಂಡರಾಯ, ಶಂಕರಗಂಡ ಇವು ಧರ್ಮಕಾರ್ಯ ದಲ್ಲಿಯ ಹಿರಿಯ ಹೆಸರುಗಳು. ಆದರೆ ಇವರೆಲ್ಲರಿಗಿಂತಲೂ ಅತ್ತಿಮಬ್ಬೆಯ ವ್ಯಕ್ತಿತ್ವ ಹಿರಿದೆಂದು ರನ್ನ ಕವಿಯ ಅಭಿಪ್ರಾಯ.[14] ಅಷ್ಟೇ ಏಕೆ ಚಕ್ರವರ್ತಿಗಳಿಗಿಂತ ಅವಳ ವ್ಯಕ್ತಿತ್ವ ಹಿರಿದೆಂದು ಅವನು ಹೇಳುವನು.[15] ಅಲ್ಲದೆ,

ಬಿಳಿಯುರಳೆಯಂತೆ ಗಂಗಾ
ಜಳದಂತೆಸೆವಜಿತಸೇನ ಮುನಿಪತಿಯ ಗುಣಾ
ವಳಿಯಂತೆ ನೆಗಳ್ದ ಕೊಪಣಾ
ಚಳದಂತೆ ಪವಿತ್ರಮತ್ತಿಮಬ್ಬೆಯ ಚರಿತಂ[16]

ಎಂದು ಅವಳ ಪವಿತ್ರ ಜೀವನವನ್ನು ರನ್ನಕವಿ ತನ್ನ ಭಕ್ತಿಭಾವರಸದಲ್ಲಿ ಅದ್ದಿ ಸಾಕಾರ ಗೊಳಿಸಿದ್ದಾನೆ.

---

11. ಅದೇ. 1-56
12. ಅದೇ, 1-56
13. ಅದೇ, 1-58
14. ಅದೇ, 12-9
15. ಅದೇ, 12-11
16. ಅದೇ, 12-6

ಹೊಯ್ಸಳ ವಿಷ್ಣುವರ್ಧನ (1110–1142)ನು ಪ್ರಸಿದ್ಧ ಅರಸುಗಳಲ್ಲಿ ಒಬ್ಬ. ಅವನು ಸ್ವತಃ ವೈಷ್ಣವ ಮತವನ್ನು ಸ್ವೀಕರಿಸಿದ್ದರೂ ಅವನ ಪ್ರಭಾವಶಾಲಿಯಾದ ಮಂತ್ರಿಗಳೂ ಸೇನಾಪತಿಗಳೂ ಜೈನಧರ್ಮಾನುಯಾಯಿಗಳಾಗಿದ್ದರು. ಅವರಲ್ಲಿ ಸೇನಾಪತಿಯಾದ ಗಂಗರಾಜನ ಧಾರ್ಮಿಕ ಕಾರ್ಯಗಳ ವರ್ಣನೆ ಶ್ರವಣಬೆಳಗೊಳ ಶಾಸನಗಳಲ್ಲಿ ದೊರೆಯುವದು. ಗಂಗರಾಜನ ತಂದೆಯಾದ ಏಚಿಗಾಂಕನ ಮನೆಯಲ್ಲಿ "ಮುನಿಜನ ಸಮೂಹಮುಂ ಬುಧಜನಮುಮಂ ಜಿನಪೂಜನೆ ಜಿನವಂದನೆ ಜಿನಮಹಿಮೆಗಳಾವ ಕಾಲಮುಂ ಶೋಭಿಸುಗುಂ"[17]. ಅವನ ತಾಯಿ ಉತ್ತಮ ಗುಣವತಿ ವನಿತಾವೃತ್ತಿಯನೊಳಕೊಂಡುದೆಂದು ಜಗಮೆಲ್ಲಂ ಕಯ್ಯೆತ್ತುವಿನಮವಳಮಳ ಗುಣಸಂಪತ್ತಿಗೆ ಜಗದೊಳಗೆ ಮೋಚಿಕಬ್ಬೆಯೇ ನೋನ್ತಳೋ"[18] ಈ ಸಾತ್ವಿಕ ದಂಪತಿಗಳ ಮಗ ಗಂಗರಾಜ 'ಪ್ರತ್ರನಖಿಳ ತೀರ್ಥಕರ ಪರಮದೇವರ ಪರಮಚರಿತಾಕಣ್ಣನೋದೀಣನೋದೀರ್ಣವಿಪ್ರಳಪುಳಕ ಪರಿಕಳಿತವಾರಬಾಣ ...ವಾಹಾರಾಭಯಭೈಶಜ್ಯ ಶಾಸ್ತ್ರದಾನ ವಿನೋದನುಂ ಸಕಳಲೋಕ ಶೋಕಾಪನೋದನುಂ....ಇಂತೆನಿಪ ಶ್ರೀಮನ್ಮಹಾಪ್ರಧಾನಂ ದಂಡನಾಯಕಂ'[19] ಈ ಪರಿಸರದಲ್ಲಿ ಬೆಳೆದು ಬಂದ ಗಂಗರಾಜ ಜಿನಧರ್ಮವನ್ನು ಬದುಕಿ ಬೆಳೆಸುವುದಕ್ಕೋಸ್ಕರ ಶ್ರಮಿಸಿದುದು ಸಹಜವಾಗಿದೆ. ಅದರ ಪರಿಣಾಮವಾಗಿ ಅನೇಕ ಜಿನಮಂದಿರಗಳ ನಿರ್ಮಾಣವಾಯಿತು, ಹಲವು ಮಂದಿರಗಳ ಜೀರ್ಣೋದ್ಧಾರ ಕಾರ್ಯ ಆರಂಭವಾಯಿತು. ಅದರಂತೆ ಅನೇಕ ಜೈನ ಸಂಸ್ಥೆಗಳಿಗೆ ವಿಪುಲ ದಾನ ಲಭಿಸಿತು.

ಗಂಗರಾಜನು ಶುಭಚಂದ್ರ ಸಿದ್ಧಾಂತದೇವರ ಶಿಷ್ಯ. 'ಶ್ರೀಜೈನಧರ್ಮಾಮೃತಾಂಬುಧಿ ಪ್ರವರ್ಧನ ಸುಧಾಕರ, ಸಮ್ಯಕ್ತ್ವ ರತ್ನಾಕರ, ಆಹಾರಾಭಯ-ಭೈಷಜ್ಯ-ಶಾಸ್ತ್ರದಾನ ವಿನೋದ, ಸಕಳಲೋಕಶೋಕಾಪಾನೋದನುಂ'[20], ಮಹಾಸಾಮಂತಾಧಿಪತಿ, ಮಹಾಪ್ರಚಂಡ ದಂಡನಾಯಕಂ, ವೈರಿಭಯದಾಯಕಂ, ಗೋತ್ರಪವಿತ್ರಂ, ಬುಧಜನಮಿತ್ರಂ, ಶ್ರೀ ಜೈನಧರ್ಮತಾಂಬುಧಿ ಪ್ರವರ್ಧನ ಸುಧಾಕರಂ, ಸಮ್ಯಕ್ತ್ವ ರತ್ನಾಕರಂ ಎಂಬ ಅನೇಕ ಪದವಿಗಳು ಅವನ ವ್ಯಕ್ತಿತ್ವದ ಉದಾತ್ತ ಅಂಗವನ್ನು ಸ್ಪಷ್ಟಪಡಿಸುವವು.

ಹೊಯ್ಸಳ ವಿಷ್ಣುವರ್ಧನನ ಅನೇಕ ವೈರಿಗಳನ್ನು ಗಂಗರಾಜ ಸೋಲಿಸಿದನು. ಇವನ ವಿಜಯದಿಂದ ಹೊಯ್ಸಳ ರಾಜ್ಯವು ಕೊಂಗುನಂಗಲಿ, ಗಂಗವಾಡಿ, ಬನವಾಸಿ, ಹಾನುಗಲ್, ಹುಲಿಗೆರೆ, ಹಲಸಿಗೆ, ಬಿಳುವಲಿಗೆ ವರೆಗೆ ವಿಸ್ತಾರಗೊಂಡಿತು. ಗಂಗರಾಜನು ಚಾಲುಕ್ಯರಾಜನಾದ, ತ್ರಿಭುವನಮಲ್ಲನ ಸೈನ್ಯವನ್ನು ಸೋಲಿಸಿದಾಗ 'ಪರಮ್' ಎಂಬ

---

17. ಎ. ಕ. 2, ನಂ. 82
18. ಅದೇ ನಂ. 82
19. ಅದೇ ನಂ. 82
20. ಅದೇ ನಂ. 82

ಹೆಸರಿನ ಊರನ್ನು ಬಿಟ್ಟಿದೇವನು ಬಹುಮಾನವಾಗಿ ಕೊಟ್ಟನು. ಗಂಗರಾಜನು ಅದನ್ನು ತನ್ನ ತಾಯಿ ಪೊಚ್ಚಿಕಬ್ಬೆ ಹಾಗೂ ಹೆಂಡತಿ ಲಕ್ಷ್ಮೀಮತಿಯೂ ಕೂಡಿ ಕಟ್ಟಿಸಿದ ಜಿನ ಮಂದಿರಕ್ಕೆ ಅರ್ಪಿಸಿದನು. ಅದರಂತೆ ಗಂಗವಾಡಿಯನ್ನು ಸಂಪಾದಿಸಿ ಗೋಮಟೇಶ್ವರನ ವಿನಿಯೋಗಕ್ಕಾಗಿ ಕೊಟ್ಟನು.

'ತ್ರೈಲೋಕ್ಯರಂಜನಂ ಜೈನಚೈತ್ಯಾಲಯಮಚೀಕರತ್'[23] ಎಂದು ಒಂದು ಶಾಸನದಿಂದ ತಿಳಿಯುವದು. ಶ್ರವಣಬೆಳಗೊಳದ ಗೋಮಟೇಶ್ವರನ ಪಾದದ ಬಳಿಯ ಶಾಸನ[24] 'ಶ್ರೀ ಗಂಗರಾಜ ಸುತ್ತಾಲಯುವಂ ಮಾಡಿಸಿದ' ಎಂದು ಹೇಳುವದು. ಇದನ್ನೇ ಇನ್ನೊಂದು ಮರಾಠಿ ಶಾಸನ[25] 'ಶ್ರೀಗಂಗರಾಜೇ ಸುತ್ತಾಲೇ ಕರವಿಯಲೇ' ಎಂದು ತಿಳಿಸುವದು. ಗಂಗರಾಜನು ಗೋವಿಂದವಾಡಿಯ ಪಾರ್ಶ್ವನಾಥ ತೀರ್ಥಂಕರ ಬಸದಿಯನ್ನು ಕಟ್ಟಿ ದಾನಕೊಟ್ಟ ವಿವರವನ್ನು ಸಾಣೇನಹಳ್ಳಿ ಶಾಸನ[26] ವಿವರಿಸುವದು.

ಗಂಗರಾಜನ ತಾಯಿ ಪೊಚ್ಚಿಕಬ್ಬೆ "ತನುವಂ ಜಿನಪತಿಯಿಂ, ಧನಮಂ ಮುನಿಜನದ ತೃಪ್ತಿಯಿಂ ಸಫಳಮಿದೆಂನೆನಗೆಂಬೀ ನಂಬುಗೆಯೊಳ್ಮನಮಂ ಜಗದೊಳಗೆ ಪೋಚಿಕಬ್ಬೆ ನಿಜಿಪಳು" ಚಾರಿತ್ರ್ಯಸಂಪನ್ನೆ ತನ್ನ ಇಳಿವಯಸ್ಸಿನಲ್ಲಿ ಸಲ್ಲೇಖನವ್ರತ ಸ್ವೀಕರಿಸಿದಳು.[27] ಈ ಮಹಾತಾಯಿಯ ಸ್ಮರಣಾರ್ಥವಾಗಿ ಗಂಗರಾಜ ಶ್ರವಣಬೆಳ್ಗೊಳದಲ್ಲಿ ಒಂದು ಬಸದಿಯನ್ನು ಕಟ್ಟಿಸಿದನು.[28]

ಹೀಗೆ ಜಿನಧರ್ಮ ರಕ್ಷಣೆಗಾಗಿ ಜಿನಮಂದಿರಗಳ ನಿರ್ಮಾಣ, ಜೀರ್ಣೋದ್ಧಾರ, ನಿತ್ಯನಿರ್ವಹಣೆಗಾಗಿ ದಾನಕಾರ್ಯಾದಿಗಳಿಂದ ಗಂಗರಾಜ ಅಂದು **ಜಿನಸಮಯವಾರ್ಧಿವರ್ಧನ ಚಂದ್ರ**ನಾಗಿದ್ದನು. ಅವನ ಕಾರ್ಯ ಚಾವುಂಡರಾಯನಗಿಂತ ಅನಂತಪಟ್ಟು ಶ್ರೇಷ್ಠವೆಂಬುದನ್ನು ವಿವರಿಸುವ ಶಾಸನ ಹೀಗಿದೆ :

"ಗಂಗರಾಜನಾಮುನ್ನಿನ ಗಂಗರಾಯಂಗಂ ನೂರ್ಮ್ಮಡಿ ಧನ್ಯನಲ್ತೆ ॥ ಎತ್ತಿದನೆಲ್ಲಿಗಲ್ಲಿ ನೆಲೆವೀಡನೆ ಮಾಡಿದನೆಲ್ಲಿಗಲ್ಲಿ ಕಣ್ಪತ್ತಿದುಗೆಲ್ಲಿಗಲ್ಲಿ ಮನಮಾಪೆಡೆಗೆಯ್ದಿದುದೆಲ್ಲಿಗಲ್ಲಿ ಸಂಪತ್ತಿನ ಜೈನಗೇಹಮನೆ ಮಾಡಿಸೆ ದೇಶದೊಳಲ್ಲಿಗಲ್ಲಿಗೆತ್ತೆತ್ತಲುಮಾವಗಂ ಪಳೆಯ

21. ಎ. ಕ. 2 ನಂ. 136
22. ಅದೇ ನಂ. 82
23. ಅದೇ ಸಂ. 149
24. ಅದೇ ನಂ. 274
25. ಅದೇ ನಂ. 277
26. ಅದೇ ನಂ. 547
27. ಅದೇ ನಂ. 136
28. ಅದೇ ನಂ. 80

ಮಾಳ್ಕೆವೊಲಾದುದು ಗಂಗರಾಜನಿಂ॥ ಜಿನಧರ್ಮಾಗ್ರಣಿಯತ್ತಿಮಬ್ಬೆಯರಸಿಯಂ ಲೋಕಂ ಗುಣಂಗೊಳ್ವುದೇಕೆನೆ ಗೋದಾವರಿ ನಿಂದ ಕಾರಣದಿನೀಗಳು ಗಂಗದಂಡಾಧಿನಾಥನುಮಂ ಕಾವೇರಿ ಪೆರ್ಚಿಸುತ್ತಿ ಪಿರಿದುಂ ನೀರೊತ್ತಿಯುಂ ಮುಟ್ಟತಿಲ್ಲೆನೆ ಸಂಮ್ಯಕ್ತ್ವದ ಪೆಂಪನೇಂ ನೆಱೆಯೆ ಬಂಣಿಪಂಣನೇ ಮಣಿಪಂ"[29]

ಗಂಗರಾಜನಂತೆ ಅವನ ಮನೆತನದ ಉಳಿದ ಸಂಬಂಧಿಗಳೂ ಜೈನಧರ್ಮದ ಶ್ರೇಷ್ಠ ಉಪಾಸಕರಾಗಿದ್ದರು. ಗಂಗರಾಜನ ಪತ್ನಿ ಲಕ್ಷ್ಮೀಮತಿಯು ಅವನೊಂದಿಗೆ ಧರ್ಮ ಕಾರ್ಯದಲ್ಲಿ ಸದಾ ಮುಂದೆ ಇದ್ದವಳು. ಅವಳು "ಪರಮಪದಾರ್ಥನಿರ್ಣ್ಣಯಮನಾಂತ ವಿದಗ್ಧತೆ, ದುರ್ನ್ನಯಂಗಳೊಳ್ಪರಿಚಯಮೆಂದುಮಿಲ್ಲದತಿ ಮುಗ್ಧತೆ, ತನ್ನಿನಿಯಂಗೆ ಚಿತ್ರದೊಳ್ಪಿರಿದನುರಾಗಮಂ ಪಡೆವ ರೂಪು. ವಿನೇಯ ಜನಾಂತರಂಗದೊಳ್ನಿರುಪಮ ಭಕ್ತಿಯುಂ ಪಡೆವ ಪೆಂಪಿವು ಲಕ್ಷ್ಮಲೆಗೆಂದುಮನ್ವಿತಂ॥

"ಚತುರತೆಯೊಳ್ ಲಾವಣ್ಯದೊ
ಳತಿಶಯಮೆನೆ ಸೆಗಳ್ದ ದೇವ ಭಕ್ತಿಯೊಳಿಂತೀ
ಕ್ಷಿತಿಯೊಳಗೆ ಗಂಗರಾಜನ
ಸತಿ ಲಕ್ಕ್ಮಂಬಿಕೆಯೊಳಿತರ ಸತಿಯದ್ದೊರೆಯೇ ॥
ಸೌಭಾಗ್ಯದೊಳಮದ್ದಾದಂ
ಸೋಭಾಸ್ಪದಮಾದ ರೂಪಿನೊಳ್ಪಿಂ ಪ್ರತ್ಯ
ಕ್ಷೀ ಭೂತಲಕ್ಷ್ಮೀಯೆಂದಪು
ದೀ ಭೂತಳಮಿನಿತುಮೆಯ್ದೆ ಲಕ್ಷ್ಮೀಮತಿಯಂ"[30]

ಎಂದು ಲಕ್ಷ್ಮೀಮತಿಯ ಸಚ್ಚಾರಿತ್ರವನ್ನೂ, ದೇವಭಕ್ತಿಯನ್ನೂ ಈ ಶಾಸನ ವಿಶದ ಪಡಿಸುವುದು.

ಅವಳ ಬಂಧು ಬೂಚಣ್ಣನು ಶುಭಚಂದ್ರ ಸಿದ್ಧಾಂತದೇವರ ಶಿಷ್ಯನಾಗಿದ್ದನು. ಇವನು ಸರ್ವಪರಿಗ್ರಹಗಳನ್ನು ತ್ಯಜಿಸಿ ಸಲ್ಲೇಖನ ವಿಧಿಯಿಂದ ದೇಹ ತ್ಯಜಿಸಿದನು. ಲಕ್ಷ್ಮೀಮತಿಯು ಇವನಿಗಾಗಿ ಒಂದು ಸ್ಮಾರಕಕಂಬವನ್ನು ನಿಲ್ಲಿಸಿ ಶಾಸನವನ್ನು ಬರೆಯಿಸಿದ್ದಾಳೆ.[31] ಅಲ್ಲದೆ ಮೇಘಚಂದ್ರ ತ್ರೈವಿಧ್ಯದೇವರ ಸ್ಮರಣೆಗಾಗಿ ಶ್ರವಣಬೆಳಗೊಳದಲ್ಲಿ ಒಂದು ಜಿನಮಂದಿರವನ್ನು ಕಟ್ಟಿಸಿದ್ದಾಳೆ. ಅದಕ್ಕೆ ಈಗ 'ಎರಡುಕಟ್ಟೆ ಬಸ್ತಿ' ಎಂದು ಕರೆಯುವರು.[32] 'ಕೊನೆಯಲ್ಲಿ ಸಲ್ಲೇಖನ ವಿಧಿಪ್ರಕಾರ ದೇಹ ತ್ಯಜಿಸಿದ ಧರ್ಮಾತ್ಮೆ ಇವಳು.

---

29. ಅದೇ ನಂ. 82
30. ಅದೇ ನಂ. 157
31. ಅದೇ ನಂ. 155
32. ಅದೇ ನಂ. 156

ಬಮ್ಮಚಮೂಪತಿಯು ಗಂಗರಾಜನ ಅಣ್ಣ. ಹೊಯ್ಸಳ ರಾಜ್ಯದಲ್ಲಿ ಸೇನಾಪತಿಯಾಗಿದ್ದವ. ಈ ಇಬ್ಬರೂ ಅಣ್ಣ ತಮ್ಮಂದಿರು ಅನೇಕ ಜಿನಮಂದಿರಗಳನ್ನು ನಿರ್ಮಿಸಿದರು. ಬಮ್ಮಚಮೂಪತಿಯ ಪತ್ನಿ "ಶುಭಚಂದ್ರದೇವರ ಗುಡ್ಡಿ". ವರಜಿನಪೂಜೆಯುಸತ್ಕಾರದರದಿಂದಂ ಜಕ್ಕಣಬ್ಬೆ ಮಾಡಿಸುವಳು, ಸಚ್ಚರಿತೆ ಗುಣಾನ್ವಿತೆಯೆಂದೀ ಧರಣೀತಳ ಮೆಚ್ಚಿ ಪೊಗಳುತಿರ್ಪುದು ನಿಚ್ಚಂ"[33]. ಅವಳು 'ಮೋಕ್ಷತಿಳಕ'ವನ್ನು ನೋಂತು 'ನಯಣದ ದೇವರ' ಮಾಡಿಸಿ ಪ್ರತಿಷ್ಠೆ ಮಾಡಿಸಿದಳೆಂದೂ[34] ಕೆರೆಯನ್ನು ಕಟ್ಟಿಸಿದಳೆಂದೂ[35] ದಾನವಿತ್ತ ವಿವರ[36] ಶಾಸನಗಳಿಂದ ತಿಳಿಯುದು.

ಗಂಗರಾಜನ ಮಗ ಬೊಪ್ಪಣ್ಣ. ಇವನೂ ವಿಷ್ಣುವರ್ಧನನ ಸೇನಾಪತಿ. ಶ್ರವಣಬೆಳಗೊಳದಲ್ಲಿ ಅವನು ಕಟ್ಟಿಸಿದ ಜಿನಮಂದಿರಕ್ಕೆ 'ಬೊಪ್ಪಣ್ಣ ಚೈತ್ಯಾಲಯ'ವೆಂಬ ಹೆಸರಿದೆ. ಅಲ್ಲದೆ ಗಂಗರಾಜನ ಮರಣದ ತರುವಾಯ ಅವನ ನೆನಪಿಗಾಗಿ ಶ್ರವಣಬೆಳಗೊಳದಲ್ಲಿ ಪಾರ್ಶ್ವನಾಥ ಮಂದಿರವನ್ನು ಕಟ್ಟಿಸಿದನು. ಅದನ್ನು ಭೋರಘಟ್ಟ ಜಿನಾಲಯವೆಂದು ಕರೆಯುವರು. ಅದರಂತೆ ತಂದೆಯ ಸ್ಮರಣಾರ್ಥವಾಗಿ ನಾಗಮಂಗಲ ತಾಲೂಕಿನ ಕವಡಹಳ್ಳಿಯಲ್ಲಿಯೂ ಒಂದು ಜಿನಮಂದಿರವನ್ನು ಕಟ್ಟಿಸಿದನು.

ಬೊಪ್ಪಣನ ಹೆಂಡತಿ ಸೇನಾಪತಿ ಮರಿಯಣ್ಣ, ಭರತ ಇವರ ತಂಗಿಯಾಗಿದ್ದಳು. ಗಂಗರಾಜನ ಹೆಂಡತಿ ಲಕ್ಷ್ಮೀಮತಿ ಮರಿಯಣ್ಣ–ಭರತರಿಗೆ ಸೋದರತ್ತೆಯಾಗಿದ್ದಳು. ಇವರೀರ್ವರು 1ನೆಯ ನರಸಿಂಹ (1141–1173)ನ ಕಾಲದಲ್ಲಿ ಸೇನಾನಾಯಕರಾಗಿದ್ದರು. ಶ್ರವಣಬೆಳಗೊಳದಲ್ಲಿ ಭರತ–ಬಾಹುಬಲಿಯ ಮೂರ್ತಿಗಳನ್ನು ಸ್ಥಾಪಿಸಿದರು.[37] ಗಂಡವಿಮುಕ್ತ ಸಿದ್ಧಾಂತದೇವರು ಇವರ ಗುರುಗಳು.

'ಭರತಬಾಹುಬಲಿ ಕೇವಲಿಗಳ ಪ್ರತಿಮೆಗಳುಮನೀಬಸದಿಗಳುಮಾತೀರ್ಥದ್ವಾರ ಪಕ್ಷಕೋಭಾರ್ತ್ಥಂ ಮಾಡಿಸಿದನೀರಂಗಮು ಹಪ್ಪಳಿಗೆಯುಮನೀ ಮಹಾಸೋಪಾನ ಪಜ್ತಿಯುಮಂ ಠಚಿಸಿದಂ, ಶ್ರೀ ಗೊಮ್ಮಟದೇವರ ಸುತ್ತಲು ರಂಗಮು ಹಪ್ಪಳಿಗೆಯುಂ ಬಿಗಿಯಿಸಿದನನ್ನುಮಲ್ಲದೆ —ಯುಮೀ**ಗಂಗವಾಡಿ** ನಾಡೊಳಲ್ಲಿಗಲ್ಲಿಗೆಲ್ಲಿ ನೋರ್ಪಡಂ॥ ಪ್ರಕಟಯಶೋವಿಭುವೆಣ್ಬತ್ತು ಕನ್ನೆವಸದಿಗಳನೊಸೆದು ಜೀರ್ಣೋದ್ಧಾರ ಪ್ರಕರಮನಿನ್ನೂಜಿನಲೌಕಿಕಧೃತಿಮಾಡಿಸಿದನೆನೆಯೆ ಭರತಚಮೂಪಂ॥[38] ಚಾವುಂಡರಾಯನಂತೆ

33. ಅದೇ ನಂ. 135
34. ಅದೇ ನಂ. 503
35. ಅದೇ ನಂ. 504
36. ಅದೇ ನಂ. 550
37. ಅದೇ ನಂ. 371; 372
38. ಅದೇ ನಂ. 373

ಭರತ ಬಾಹುಬಲಿಗಳ ಮೂರ್ತಿಯನ್ನು ನಿರ್ಮಿಸಿ, ಎಂಬತ್ತು ಜಿನಮಂದಿರಗಳನ್ನು ನಿರ್ಮಿಸಿ, ಎರಡುನೂರು ಜಿನಮಂದಿರಗಳ ಜೀರ್ಣೋದ್ಧಾರ ಕಾರ್ಯ ಕೈಕೊಂಡ **ಜಿನಧರ್ಮದೀಪಕ**ನೆನಿಸಿದನು.

ಹೊಯ್ಸಳ 1ನೆಯ ನರಸಿಂಹನ 'ಮಹಾಪ್ರಧಾನ' ಹಾಗೂ 'ಹಿರಿಯ ಭಂಡಾರಿ' ಹುಲ್ಲರಾಜ, ಹುಲ್ಲಪ್ಪನ ಕುರಿತು ಅನೇಕ ಶಾಸನಗಳು ವಿವರಿಸುವವು. "ಜಿನಗೇಹೋದ್ಧರಣಂಗಳಿಂ ಜಿನಮಹಾಪೂಜಾಸವಾಜಂಗಳಿಂ ಜಿನಯೋಗಿಬ್ರಜದಾನದಿಂ ಜಿನಪದ ಸ್ತೋತ್ರ ಕ್ರಿಯಾನಿಷ್ಠೆಯಿಂ ಜಿನಸತ್ಪುಣ್ಯಪುರಾಣಸಂಶ್ರವಣದಿಂ ಸಂತೋಷಮಂ ತಾಳ್ದಿ ಭವ್ಯನುತಂ ನಿಚ್ಚಲುಮಿನ್ತೆ ಪೆಟ್ಟುಗಳೆವಂ ಶ್ರೀಹುಳ್ಳದಂಡಾಧಿಪಂ"[39] ಅವನು ಕೊಲ್ಲಾಪೂರದ ರೂಪನಾರಾಯಣ ಬಸದಿಗೆ ದಾನವಿತ್ತನು, ಬಂಕಾಪೂರದ, ಜಿನಮಂದಿರದ ಜೀರ್ಣೋದ್ಧಾರ ಕೈಕೊಂಡನು. ಕೊಪ್ಪಳದ ಅನೇಕ ಜಿನಮಂದಿರಗಳಿಗೆ ದಾನವಿತ್ತನು. ಶ್ರವಣಬೆಳಗೊಳದ ಗೊಮ್ಮಟೇಶ್ವರ, ಪಾರ್ಶ್ವನಾಥ, ಹಾಗೂ ತಾನು ಕಟ್ಟಿಸಿದ ಚತುರ್ವಿಂಶತಿ ಬಸದಿಯ ತೀರ್ಥಂಕರರ ಅಷ್ಟವಿಧಾರ್ಚನೆಪೂಜೆಗೂ ಹಾಗೂ ಮುನಿಗಳ ಆಹಾರ ದಾನಕ್ಕಾಗಿಯೂ 'ಸವಣೇರು' ಊರನ್ನು ದತ್ತಿಯಾಗಿ ಕೊಟ್ಟನು.[40]

ಗಂಗರಾಜನ ತಾಯಿ, ಹೆಂಡತಿ, ಅತ್ತಿಗೆ ಮೊದಲಾದ ಸಂಬಂಧಿಗಳೆಲ್ಲ ಜೈನಧರ್ಮದ ಸಂರಕ್ಷಕರಾಗಿದ್ದರು. ಆದುದರಿಂದ ಅವನನ್ನು 'ಜಿನಧರ್ಮಪ್ರತಿಪಾಲಕ'ನೆಂದು ಕರೆಯುವದು ಸೂಕ್ತವಾಗಿದೆ. ಹೀಗೆ ಹೊಯ್ಸಳರಾಜ್ಯದ ಅನೇಕ ಜೈನ ಮಂತ್ರಿ ಸೇನಾಪತಿ ಹಾಗೂ ಅವರ ಕುಟುಂಬ ವರ್ಗದವರಿಂದ ಜೈನಧರ್ಮಕ್ಕೆ ಪರ್ಯಾಯವಾಗಿ ಕರ್ನಾಟಕದ ಸಾಂಸ್ಕೃತಿಕ ಇತಿಹಾಸಕ್ಕೆ ಅಪೂರ್ವ ಸೇವೆ ಸಂದಿದೆ. ಆದುದರಿಂದಲೇ ಒಂದು ಶಾಸನದಲ್ಲಿ ನೂರು ಜನ ಚಾವುಂಡರಾಯರಕ್ಕಿಂತ ಗಂಗರಾಜನ ತೂಕವು ಹೆಚ್ಚಾಗುವದೆಂದು ಹೇಳಿದೆ.[41]

ಸೌದತ್ತಿಯ ರಟ್ಟರು ಆರಂಭದಲ್ಲಿ ರಾಷ್ಟ್ರಕೂಟರ. ಹಾಗೂ ತರುವಾಯ ಚಾಲುಕ್ಯರ ಸಾಮಂತರಾಗಿ ಈಗಿನ ಬೆಳಗಾವಿ ಜಿಲ್ಲೆಯ ಬಹುಭಾಗ ಹಾಗೂ ಅದರ ನೆರೆ ಭಾಗವೂ ಸೇರಿ ಆದ 'ಕುಹುಂಡಿ' 3000 ವನ್ನು ಆಳಿದರು. "ಈ ಕುಹುಂಡಿ ದೇಶದ ದಂಡನಾಯಕನಾದ ಗೋಂಕರಸನು ತೇರದಾಳದಲ್ಲಿ ಭಗವಾನ್ ನೇಮಿನಾಥ ತೀರ್ಥಂಕರರ ಮಂದಿರವನ್ನು ಕಟ್ಟಿಸಿದನು. ಕಾರ್ತವೀರ್ಯನೂ ಗೋಂಕರಸ ಮೊದಲಾದವರು ಜೈನರಿದ್ದರೆಂಬುದು ತೇರದಾಳದ ಶಾಸನದಿಂದ ಸ್ಪಷ್ಟವಾಗುವದು"[42]

---

39. ಅದೇ ನಂ. 476
40. ಅದೇ ನಂ. 275, 342
41. ಮಿರ್ಜಿ ಅಣ್ಣಾರಾಯರು : ಜೈನಧರ್ಮ, 112
42. ಅದೇ ಪು. 117

ವಿಜಯನಗರ ಸಾಮ್ರಾಜ್ಯದಲ್ಲಿಯೂ ಬಲ್ಲಪ ದಂಡನಾಯಕನು ಮಹಾಮಂಡಲೇಶ್ವರನಾಗಿದ್ದನು. ಗಂಗದೇವನು ಒಂದು ಪ್ರಾಂತದ ಅಧಿಕಾರಿಯಾಗಿದ್ದನು. "ಬುಕ್ಕರಾಜನ ಆಳಿಕೆಯಲ್ಲಿ ದಂಡನಾಯಕ ಮುಂಡಪ್ಪ, ಮಲ್ಲಪ್ಪ. ಬೈಚಪ್ಪ ಮೊದಲಾದ ಜೈನವೀರರು ಅಧಿಕಾರ ಸ್ಥಾನದಲ್ಲಿದ್ದರು. ಬೈಚಪ್ಪ (1320–1380) ಸೇನಾಪತಿಯು ಗೋವೆಯನ್ನು ಗೆದ್ದು ವಿಜಯನಗರ ರಾಜ್ಯಕ್ಕೆ ಸೇರಿದನು. ಆ ರಣರಂಗದಲ್ಲಿ ಅವನು ಮಡಿದುದರಿಂದ, ಅವನ ನೆನಪಿಗಾಗಿ ನೆಟ್ಟ ವೀರಗಲ್ಲೊಂದು ಗೋವೆಯ ಸೀಮೆಯಲ್ಲಿ ಇನ್ನೂ ಇದೆ".[43]

ಬೈಚಪ್ಪನ ಮಗ ಇರುಗಪ್ಪನು ಎರಡನೆಯ ಹರಿಹರನ ಮಹಾಪ್ರಧಾನನಾಗಿದ್ದನು. ಇವನೂ ಪ್ರಸಿದ್ಧ ಜೈನವೀರನು. ಇವನು ಶ್ರವಣಬೆಳಗೊಳದಲ್ಲಿ ಒಂದು ಕೆರೆಯನ್ನೂ. ಹೂದೋಟವನ್ನೂ ನಿರ್ಮಿಸಿದನು.[44] ವಿಜಯನಗರ ಸಾಮ್ರಾಜ್ಯದಲ್ಲಿ ಅನೇಕ ಜಿನ ಮಂದಿರಗಳನ್ನು ಕಟ್ಟಿಸಿದನು.[45] ಅಲ್ಲದೆ ಸಂಸ್ಕೃತ 'ನಾನಾರ್ಥ-ರತ್ನಮಾಲೆ' ಎಂಬ ಕೋಶವನ್ನು ರಚಿಸಿದನು. ಇವನ ಪ್ರಭಾವದಿಂದಾಗಿ ಅನೇಕ ಜನರು ಜೈನಧರ್ಮವನ್ನು ಸ್ವಿಕರಿಸಿದರು. ಇದೇ ಸುಮಾರಿಗೆ ಮುಂಡಪ್ಪ ದಂಡನಾಯಕನ ಆಶ್ರಯದಲ್ಲಿದ್ದ ಮಧುರಕವಿಯು ಧರ್ಮನಾಥ ತೀರ್ಥಂಕರ ಪುರಾಣವನ್ನು ರಚಿಸಿದನು.

ಕನ್ನಡ ಸಾಹಿತ್ಯದ ಆದಿಮಹಾಕವಿ ಗೌರವಕ್ಕೆ ಪಾತ್ರನಾದ ಪಂಪಮಹಾಕವಿಯು ರಾಷ್ಟ್ರಕೂಟರ ಮಹಾಸಾಮಂತನಾಗಿದ್ದ ಅರಿಕೇಸರಿಯ ಆಶ್ರಯದಲ್ಲಿದ್ದನು. ಕವಿಯಾಗಿದ್ದಂತೆ ಕಲಿಯೂ ಆಗಿದ್ದನು. "ಕವಿತೆ ನೆಗೞ್ತೆಯನಿರಿಸೆ ಜೋಳದ ಪಾೞಿ ನಿಜಾದಿನಾಥನಾಹವದೊಳರಾತಿನಾಯಕರ ಪಟ್ಟನೆ ಪಾಱಿಸೆ.... ಎಂ ಕಲಿಯೋ ಸತ್ಕವಿಯೋ ಗುಣಾರ್ಣವಂ" ಎಂದು ಅವನೇ ಹೇಳಿಕೊಂಡಿದ್ದಾನೆ.

ಶಾಂತಿನಾಥ ಕವಿಯು ಚಾಲುಕ್ಯರ ಎರಡನೆಯ ಸೋಮೇಶ್ವರ (1068–1076)ನ ಮಂತ್ರಿ ಹಾಗೂ ಸೇನಾಪತಿಯಾಗಿದ್ದನೆಂಬ ಉಲ್ಲೇಖವು 1068ರ ಶಾಸನವೊಂದರಿಂದ ದೊರೆಯುವದು. ಅವನು ಕವಿಯಲ್ಲದೆ ಕಲಿಯೂ ಆಗಿದ್ದನು. 11ನೆಯ ಶತಮಾನದ ಉತ್ತರಾರ್ಧದಲ್ಲಿ ಪ್ರೌಢಕಾವ್ಯ ಸಂಪ್ರದಾಯವನ್ನು ಮುಂದುವರಿಸಿದ ಕೀರ್ತಿ ಅವನದು. 'ಸರಸ್ವತಿಮುಕುರ' ಎಂಬ ಬಿರುದು ಅವನಿಗಿದ್ದಿತು. ಅವನು ರಚಿಸಿದ ಕಾವ್ಯ 'ಸುಕುಮಾರ ಚರಿತೆ'. ಅವನ "ಕವಿತ್ವ ಸಹಜಪ್ರಸನ್ನವಾಗಿದೆ, ಶೈಲಿ ಧಾರಾಳವಾಗಿದೆ ಪ್ರೌಢಿಮೆಯಿಂದ ಸರಳ ಸೌಂದರ್ಯಕ್ಕೆ ತಿರುಗುತ್ತಿದ್ದ ಚಂಪೂ ರೂಪಕ್ಕೆ ಇಲ್ಲಿಯೊಂದು ಮಾದರಿಯಿದೆ".[46] ಎಂಬ ಅಭಿಪ್ರಾಯವಿದೆ.

---

43. ಅದೇ ಪು. 118
44. ಎ. ಕ. 2, ನಂ. 357
45. South Indian Inscriptions Nos. 152, 153, 156
46. ರಂ. ಶ್ರೀ ಮುಗಳಿ : ಕನ್ನಡ ಸಾಹಿತ್ಯ ಚರಿತ್ರೆ (1953) ಪು. 122

ಪಂಪನಂತಹ ವರ್ಣಮಯ ವ್ಯಕ್ತಿತ್ವವನ್ನು ಪಡೆದ ಇನ್ನೊಬ್ಬ ಕವಿ —ಕಲಿ ಜನ್ನ. ಹೊಯ್ಸಳ ವೀರಬಲ್ಲಾಳನ (1173–1220) ಆಶ್ರಯದಲ್ಲಿ 'ಯಶೋಧರ ಚರಿತೆ' ಯನ್ನು ರಚಿರಿದನು. 'ಮನ್ನಿಸಿ ಬಲ್ಲಾಳಂ ಕುಡೆ! ಜನ್ನಕವಿಚಕ್ರವರ್ತಿವೆಸರಂ ಪಡೆದಂ'[47] ಎಂದು ಕವಿಚಕ್ರವರ್ತಿಯ ಗೌರವವನ್ನು ಪಡೆದ ಕವಿ ಜನ್ನ. ಹೊಯ್ಸಳ ವೀರಬಲ್ಲಾಳನ ಮಗನಾದ ವೀರನರಸಿಂಹನ (1220–1235) ಓಲಗದಲ್ಲಿ 'ನಿಂದಿರೆ **ದಂಡಾಧೀಶಂ, ಕುಳ್ಳಿರೆ ಮಂತ್ರಿ,** ತೊಡಂಕೆ **ಕವಿ**'[48] ಆಗಿದ್ದನು. ಇವನ ಆಶ್ರಯದಲ್ಲಿಯೇ 'ಅನಂತನಾಥ ಪುರಾಣ'ವನ್ನು ರಚಿಸಿದನು. "ತಂದೆಯ ಕಾಲಕ್ಕೆ ಕವಿಚಕ್ರವರ್ತಿ ಎನಿಸಿದ ಜನ್ನ ಮಗನಾದ ನರಸಿಂಹನ ಕಾಲಕ್ಕೆ ರಾಜ್ಯದ ಹಿರಿಯ ವ್ಯಕ್ತಿಗಳಲ್ಲೊಬ್ಬ"[49]ನಾಗಿದ್ದ.

ಬರೆಯಲ್ಮೇಣ್ಮಚ್ಚರದಿಂ
ಕೊರೆಯಲ್ಮೇಣ್ಕೆಯ್ಗೆ ಪಲಗೆ ಬರೆ ಕಾವ್ಯಕಲಾ
ಪರಿಣತೆಯೊಳ್ ಖಡ್ಗಕಳಾ
ಪರಿಣತೆಯೊಳ್ ಭಾಳನೇತ್ರನೆನಿಪಂ ಜನ್ನಂ[50]

ಎಂದು ಖಡ್ಗ, ಲೇಖನಗಳೆರಡರಲ್ಲಿಯೂ ಪರಿಣತೆ ಪಡೆದ ವ್ಯಕ್ತಿ ಜನ್ನ. ಚದುರನಿಧಿ, ಚಲದನೆಲೆ, ಚಾಗದಸಾಗರಂ, ಅಣ್ಮಿನಾಗರಂ[51] ಎಂದು ಹೇಳಿಕೊಂಡಿದ್ದಾನೆ. ತಾನಿತ್ತ ಕೈಯಲ್ಲದೆ, ಒಡ್ಡಿದ ಕೈಯಲ್ಲದ ಪೆಂಪು[52] ಅವನದು. ಪರಮಶ್ರೀ ಜಿನಪಾದ ಪಲ್ಲವ ಲತಾಂತಂ, ನಿರ್ಮಳಂ, **ಜೈನಮಂದಿರ ನಿರ್ಮಾಣಧನಂ**' ಎಂದೂ ಹೇಳಿಕೊಂಡಿದ್ದಾನೆ. ಯಶೋಧರ ಚರಿತೆ, ಅನಂತನಾಥ ಪುರಾಣಗಳೆರಡರಲ್ಲಿಯೂ ಧರ್ಮಬಾಹಿರ ಪ್ರಣಯ ಸಮಸ್ಯೆಯನ್ನು ಚಿತ್ರಿಸಲು ಪ್ರಯತ್ನಿಸಿದ್ದಾನೆ. ಕಾವ್ಯಧರ್ಮ ಹಾಗೂ ಧರ್ಮಗಳ ಸಮನ್ವಯ 'ಯಶೋಧರಚರಿತೆ'ಯಲ್ಲಿ ಸಿದ್ಧಿಸಿದೆ.

ರಾಜ ಮಹಾರಾಜರ ಪ್ರೀತಿ ವಿಶ್ವಾಸ ಗಳಿಸಿಕೊಂಡು, ಜನಬಲ ಧನಬಲ ಹೊಂದಿ, ಅಧಿಕಾರದಿಂದ ಕೂಡಿದ ವ್ಯಕ್ತಿ ಸ್ವಸುಖದಲ್ಲಿಯೇ ಮುಳುಗುವದು ಸಹಜ. ಆದರೆ ಕರ್ನಾಟಕದ ಜೈನ ಮಂತ್ರಿ, ಸೇನಾಪತಿಗಳು ಲೌಕಿಕದಲ್ಲಿದ್ದರೂ, ಅದರಿಂದ ಮುಕ್ತರಾಗಿದ್ದಂತೆ ತೋರುವರು. ನಿರಂತರ ಗುರುಗಳ ಮಾರ್ಗದರ್ಶನ ಪಡೆಯುವ ಸೌಭಾಗ್ಯ

47. ಜನ್ನ : ಯಶೋಧರ ಚರಿತೆ, 1–21
48. (ಸಂ.) ಬಿ.ಬಿ. ಮಹೀಶವಾಡಿ : ಅನಂತನಾಥ ಪುರಾಣ; 1–56
49. ಬಿ.ಬಿ. ಮಹೀಶವಾಡಿ : ಸಾಧನೆ; 5–2, ಪು. 41
50. ಅನಂತನಾಥ ಪುರಾಣ, 1-54
51. ಯಶೋಧರ ಚರಿತೆ 1–20
52. ಅನಂತನಾಥ ಪುರಾಣ 14–80
53. S.I.I. Vol. IV, No. 267

ಅವರದಾಗಿದೆ. ಆದುದರಿಂದ ರಾಷ್ಟ್ರಕಾರ್ಯದ ಲೋಕಲ್ಯಾಣದೊಂದಿಗೆ ಆತ್ಮಕಲ್ಯಾಣದ ಕುರಿತು ಸದಾಜಾಗೃತರಾಗಿದ್ದಾರೆ. ಸಾಹಿತ್ಯ ಕಲೆಗಳನ್ನು ಗೌರವಿಸಿ ಅವುಗಳ ಬೆಳವಣಿಗೆಗೆ ಸಹಾಯಕರಾಗಿದ್ದಾರೆ. ಕೇವಲ ಮಂತ್ರಿ, ಸೇನಾಪತಿಗಳು ಮಾತ್ರ ಈ ಧರ್ಮಕಾರ್ಯ ವನ್ನು ಕೈಕೊಂಡಿರದೆ ಹೆಂಡತಿ-ತಾಯಿ ಮೊದಲಾಗಿ ಅವರ ಕುಟುಂಬ ವರ್ಗದವರೆಲ್ಲರೂ ಅದರಲ್ಲಿ ಭಕ್ತಿ ಭಾವದಿಂದ ಸಹಭಾಗಿಯಾದುದು ಅವರ ವ್ಯಕ್ತಿತ್ವದಲ್ಲಿ ಧರ್ಮ ಒಂದಾ ಗಿದ್ದಿತೆಂಬುದನ್ನು ತೋರುವದು.

> "ಕೆರೆಯಂ ಕಟ್ಟಿಸು, ಬಾವಿಯಂ ಸವೆಸು ದೇವಾಗಾರಮಂ ಮಾಡಿಸ
> ಜ್ಜರೆಯೊಳ್ ಸಿಲ್ಕಿದನಾಥರಂ ಬಿಡಿಸು, ಮಿತ್ರರ್ಗಿಂಬುಕೆಯ್ ನಂಬಿದ
> ರ್ಗೆರೆವಟ್ಟಾಗಿರು ಶಿಷ್ಯರಂ ಮೊರೆಯೆನುತ್ತಿಂತೆಲ್ಲವಂ ಪಿಂದೆ ತಾ
> ಯೆರದಳ್ವಾಲೆರೆವಂದುತೊಟ್ಟು ಲಕ್ಷ್ಮೀಧರಾಮಾತ್ಯನಾ"[53]

ಮೇಲಿನ ಶಾಸನ ಹೇಳುವಂತೆ ತಾಯಂದಿರ ಈ ನೀತಿಯ ಪಾಠವನ್ನು ಎಳವೆಯಲ್ಲಿಯೇ ಅರಗಿಸಿಕೊಂಡು, ಧರ್ಮಗುರುಗಳ ಉಪದೇಶವನ್ನು ಪಡೆದು, ಜನಹಿತ ಆತ್ಮಹಿತ ಕಾರ್ಯ ಮಾಡಿ ಬಾಳಿ ಬೆಳಗಿದ್ದಾರೆ ಈ ಕರ್ಣಾಟಕದ ಜೈನ ಮಂತ್ರಿ-ಸೇನಾಪತಿಗಳು. ಇಂದಿನ ಬದಲಾದ ಪರಿಸ್ಥಿತಿಯಲ್ಲಿ ಶ್ರೀಮಂತ ದಾನಿಗಳಿಗೂ, ಅಧಿಕಾರಿಗಳಿಗೂ, ಸಕಲ ಪ್ರಜೆ ಗಳಿಗೂ ತಮ್ಮ ಮಹಾತ್ಕಾರ್ಯದಿಂದ ಆದರ್ಶಪ್ರಾಯರಾಗಿದ್ದಾರೆ, ಅನುಕರಣೀಯ ರಾಗಿದ್ದಾರೆ.

**

ಕನ್ನಡ ವೃತ್ತಿ ಪದಕೋಶ-3

ಎಲೆಬಳ್ಳಿ ತೋಟದ ವೃತ್ತಿ ಪದಗಳು

● ವಿ. ಶಿವಾನಂದ

'ವೀಳೆಲೆ' ಅಥವ 'ಎಲೆ' ಹಸುರಾದ, ಕೋಮಲವಾದ, ಊಟವಾದ ಮೇಲೆ ಸೇವನೆಗೆ ಯೋಗ್ಯವಾದ, ತುಟಿಗಳಿಗೆ ಒಂದು ರೀತಿಯ 'ಲಿಪ್‌ಸ್ಟಿಕ್'ದಂತಹ ಸೌಂದರ್ಯವನ್ನು ತರುವ ಸಸ್ಯಜಾತಿ. 13ನೆಯ ಶತಮಾನದಲ್ಲಿ ಭಾರತಕ್ಕೆ ಬಂದಿದ್ದ 'ಮಾರ್ಕೊ ಪೋಲೊ' ಎಂಬ ಪ್ರವಾಸಿಕನು 'ಎಲೆ ತಿನ್ನುವದು ಪಾಂಡ್ಯ ರಾಜ್ಯದಲ್ಲಿ ಬಡವನಿಗೂ ಸುಖ-ಭೋಗದ ಸಂಕೇತವಾಗಿತ್ತು' ಎಂದು ವಿವರಿಸಿದ್ದಾನೆ. (Marco Polo, Travels p. 324)

ಕನ್ನಡದ ಪ್ರಾಚೀನ ಶಾಸನ, ಕಾವ್ಯಗಳಲ್ಲಿ ತೋಟಪಟ್ಟಿಯ ವರ್ಣನೆ ಯಥೇಷ್ಟವಾಗಿ ಬರುತ್ತದೆ. ಶಾಸನಾಧಾರಗಳ ಮೇಲಿಂದ ತೋಟಿಗ ವ್ಯವಸಾಯದವರನ್ನು ಮೂರು ರೀತಿಯಲ್ಲಿ ವರ್ಗೀಕರಿಸಬಹುದಾಗಿದೆ: (1) ಮಾಲಗಾರರು (2) ಎಲೆಯ ಭುಜಂಗ ಅಥವ ತಂಬುಲಿಗಳು (3) ತೋಟಿಗರು.

ಎಲೆಯ ಭುಜಂಗರದು ಅಥವ ತಂಬುಲಿಗರದು ದೊಡ್ಡ ವ್ಯವಸಾಯ ಸಂಘವಾಗಿತ್ತು. ಹುಬ್ಬಳ್ಳಿ ತಾಲೂಕಿನ ಕೂಡಿನಕೆರೆ ಶಾಸನದಲ್ಲಿ (ಕ್ರಿ.ಶ. 1108) ಐಸೂರು ನಾಲ್ವೆಲೆಯ 'ಭುಜಂಗ'ರ ನಾಮ ನಿರ್ದೇಶನವಿದೆ. ಈ ವೃತ್ತಿಕಾರರನ್ನು ಶಬ್ದಮಣಿ ದರ್ಪಣದಲ್ಲಿ ಕೇಶಿರಾಜ 'ಅಡಪವಳ' (ಅಡಪ+ವಳ್ಳ) (ಶ.ಮ.ದ.ಸೂ. 198) ಎಂದು

ನಿರ್ದೇಶಿಸಿದ್ದಾನೆ.[1] 'ತಳ್ತ ಎಲೆವಳ್ಳಿಯೆ' ಎಂಬ ಪಂಪ ಮಹಾಕವಿಯ ವರ್ಣನೆಯಿಂದ ಬನವಾಸಿ ನಾಡಿನ ಪ್ರಮುಖ ಬೆಳೆಯಲ್ಲಿ 'ಎಲೆಬಳ್ಳಿ'ಯೂ ಒಂದಾಗಿತ್ತೆಂಬುದು ಗೊತ್ತಾಗುತ್ತದೆ. ಈ ವ್ಯವಸಾಯದವರ ಉತ್ಪನ್ನದ ಮೇಲೆ ಹಿಂದೆ ಕರಭಾರ (Tax)ವನ್ನು ಗೊತ್ತು ಮಾಡಲಾಗಿತ್ತು. 'ಎಲೆಯ ಹೇಜುಂಗೆ ಅಜುನೂರು' (ಶ್ರವಣಬೆಳ್ಗೊಳ Vol. II, No. 444 ಕ್ರಿ. ಶ. 481) ಎಲೆಯ ಭುಜಂಗರು ತಮ್ಮ ಉತ್ಪನ್ನಕ್ಕೆ ಕರವನ್ನು ಸಲ್ಲಿಸುತ್ತಿದ್ದರಲ್ಲದೆ ಅನೇಕ ದೇವಾಲಯಗಳಿಗೆ, ವಿದ್ಯಾಸಂಸ್ಥೆಗಳಿಗೆ ದಾನ-ಧರ್ಮಗಳನ್ನು ಸಲ್ಲಿಸಿದ ವಿವರಗಳೂ ನಮಗೆ ಗೊತ್ತಾಗುತ್ತದೆ.

ಎಲೆಬಳ್ಳಿ ತೋಟಗಳು ನಮಗೆ ಒಂದೊಂದು ಪ್ರದೇಶದಲ್ಲಿ ಅಧಿಕ ಸಂಖ್ಯೆಯಲ್ಲಿ ಕಾಣದೊರೆಯುತ್ತವೆ. ಹಿಂದಿನ ಶಾಸನ, ಕಾವ್ಯಗಳಿಂದ 'ಎಳಲತೆ' 'ಎಲೆಹೇಜು' 'ಎಲೆದೆಜು' 'ಅಡಪವಳ' 'ತಾಮ್ಬೂಲ' 'ಎಲೆ ಭುಜಂಗ' ಮುಂತಾದ ಪದಗಳನ್ನು ಸಂಗ್ರಹಿಸಬಹುದಾಗಿದೆ. ಈಗಲೂ ತೋಟದಲ್ಲಿ ನಿತ್ಯ ವ್ಯವಹಾರದಲ್ಲಿ ಬಳಕೆಮಾಡುವ ಎಷ್ಟೋ ಶಬ್ದಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿ ಕೇಳಿಬರುತ್ತವೆ. ಇವನ್ನು ಸಂಗ್ರಹಿಸುವದರ ಮೂಲಕ ಆಯಾ ಭಾಗದ ಆಡುನುಡಿಯ ವೃತ್ತಿಪದಕೋಶವನು ನಾವು ಸುಲಭವಾಗಿ ಸಿದ್ಧಪಡಿಸಬಹುದು. ಸಾಮಾನ್ಯವಾಗಿ ಎಲೆಗಾರ, ಎಲೆಗಾರ್ತಿ, ಎಲಿಪೂಜೆ, ಎಲಿಗಟ್ಟು, ಎಲಿಯಡಕಿ, ಮುಂತಾದ ಪದಗಳನ್ನು ನಾವು ಉತ್ತರ ಕರ್ನಾಟಕದ ಎಲ್ಲ ಕಡೆಗೂ ಕೇಳುತ್ತೇವೆ. ಇವು ಉಚ್ಚಾರಣೆಯಲ್ಲಿ ಎ>ಯ (ಉನ್ನತ ಮಧ್ಯ ಪೂರ್ವಸ್ವರ ಅವನತಮಧ್ಯ ಅರೆವ್ಯಂಜನವಾಗಿ ಮಾರ್ಪಡುವದು) ಧ್ವನಿವ್ಯತ್ಯಾಸದಿಂದ 'ಯಲಗಾರ', 'ಯಲಗಾರ್ತಿ', 'ಯಲಿಗಟ್ಟು', 'ಯಲಿಯಡಕಿ'ಯೆಂದಾಗುತ್ತವೆ. 'ವೀಳೆಯ'[2] (ಸಂಸ್ಕೃತ 'ವೀಟಿಕೆ'ಯ ತದ್ಭವ. ಶ. ಮ. ದ. ಸೂ. 244). ಎಲೆ ಈಗ ಕೇವಲ 'ಎಲೆ' ಎಂದು ಮಾತ್ರ ವ್ಯವಹಾರದಲ್ಲಿ ಬಳಕೆಯಾಗುತ್ತದೆ. 'ವೀಳೆಲೆ ತೋಟ'ಕ್ಕೆ ಬದಲಾಗಿ 'ಎಲೆ ತೋಟ'ವೆಂದೇ ಅದನ್ನು ಕರೆಯುವದು ವಾಡಿಕೆಯಾಗಿದೆ. 'ಎಲೆ' ಒಂದು ಕಾಲಕ್ಕೆ ಯಾವುದೇ ಗಿಡ-ಮರದ ತೊಪ್ಪಲು ಎಂಬರ್ಥ ಕೊಡುತ್ತಿದ್ದು. ಈಗ ವೀಳೆಯ ಎಲೆಗೆ ಮಾತ್ರ ಆ ಅರ್ಥ ಸೀಮಿತ (Restrict) ವಾದಂತೆ ತೋರುತ್ತದೆ. ಆದರೆ ಬ್ರಾಹ್ಮಣರು ಊಟಕ್ಕೇಳುವಾಗ 'ಎಲೆ ಹಾಕು' ಎಂಬ ಪ್ರಯೋಗವಿದ್ದರೂ ಅದು ಅಲ್ಲಿ ಬಾಳೆಯ ಎಲೆಗೆ ಸಂಬಂಧ ಪಡುತ್ತದೆ. ಅದೊಂದು ಸಂದರ್ಭ ಬಿಟ್ಟರೆ ಬಹುಶಃ 'ಎಲೆ' ಎಂದರೆ 'ವೀಳೆಲೆ' ಎಂಬರ್ಥ ಸರ್ವೇಸಾಮಾನ್ಯವಾಗಿದೆ.

---

1. ತಮಿಳಿನಲ್ಲಿ ಇದೇ ಅರ್ಥವಿರುವ ಪದ 'ಇತ್ತೈ-ಪಾರ್ಪುರ್' (Tamil Lexicon)
2. ಸಂಸ್ಕೃತ-ವೀಳೆಯ. ತಮಿಳು-ವೆಟ್ಟಿಲ್ಲೈ/ವೆಜಿಲೈ. ಮಲೆಯಾಳಂ-ವೆಟ್ಟಿಲ. ಇಂಗ್ಲೀಷ-betal c/f ತಮಿಳು ವೆಟ್ಟಿಲೈ> ಪೋರ್ತುಗೀಜ-ಬೆತ್ರೆ ?

ಎಲೆಬಳ್ಳಿ ತೋಟಕ್ಕೆ ಸಂಬಂಧಿಸಿದ ಇಲ್ಲಿನ ವೃತ್ತಿ ಪದಗಳನ್ನು ಕಲಬುರ್ಗಿ ಜಿಲ್ಲೆಯ ಭಾಷಾ ಪ್ರದೇಶದಿಂದ ಪ್ರಮುಖವಾಗಿ ಸಂಗ್ರಹಿಸಲಾಗಿದೆ. ಇದರಲ್ಲಿ ಕನ್ನಡ ಆಡು ನುಡಿ ಪ್ರಯೋಗಗಳಲ್ಲದೆ, ಅನೇಕ ಅನ್ಯದೇಶೀಯ ಶಬ್ದಗಳೂ ಬಳಕೆಯಲ್ಲಿವೆ. ಮುಖ್ಯ ವಾಗಿ ಮರಾಠಿ ಪದಗಳು ಉಲ್ಲೇಖನಾರ್ಹವಾಗಿವೆ. ಆರಂಭದಲ್ಲಿ ಎಲೆಬಳ್ಳಿತೋಟದ ಸಿದ್ಧತೆ ಮತ್ತು ಅದರ ಪ್ರಕಾರದ ಬಗೆಗೆ ಮಾಹಿತಿ ಕೊಟ್ಟು ಅನಂತರ ಈ ವೃತ್ತಿಪದಗಳ ಅರ್ಥ ವಿವರಣೆಗೆ ತೊಡಗಬಹುದು. (ಎಲೆಬಳ್ಳಿತೋಟ ಮಾಡುವ ವಿವರ ಕುರಿತ್ತು ಕರ್ನಲ್ ಮೆಕೆಂಝಿ ಅವರ 'Local records' ಸಂಗ್ರಹದಲ್ಲಿನ ವಿಷಯವನ್ನು ಅನುಬಂಧದಲ್ಲಿ ಕೊಟ್ಟಿದೆ.)

ಎಲೆಬಳ್ಳಿ ತೋಟದ ಸಿದ್ಧತೆ ಮತ್ತು ಪ್ರಕಾರಗಳು :

(i) ಅಗಿ ತುಳಿಯುವಿಕೆ :

ಜೂನ್ ತಿಂಗಳಲ್ಲಿ ಮೃಗಮಿಂಚಿದ ಮೇಲೆ ಕಾರ್ಹುಣ್ಣಿಮೆಯ ಮುನ್ನಾದಿನವಾದ ಹೊನ್ನುಗ್ಗಿಯಂದು ನುಲಿ ಹಿಡಿದು 'ಮಡಿ' ಗಳನ್ನು ನಿರ್ಮಿಸುವರು. ಮರುದಿನ ನುಗ್ಗಿ, ಪಾಂಗ್ರಿ, ಚೊಗಚಿ, ಕರಿಭಡಿ, ಹೊನ್ನವರಿ ಮುಂತಾದ ಗಿಡದ ಬೀಜ ಚೆಲ್ಲುವರು. ಅದಕ್ಕೆ ಮೂರು ದಿನಕ್ಕೊಂದಾವರ್ತಿ ನೀರುಣಿಸುವರು. ಗಿಡಗಳು 2' ಎತ್ತರವಾದ ಮೇಲೆ ಅಗಪ್ಟು ತಿಂಗಳಲ್ಲಿ ಮಡಿಗಳ ಒಳಭಾಗದ 'ಬೋದಿ'ನಲ್ಲಿ ಎಲೆಬಳ್ಳಿಯನ್ನು ಹಚ್ಚುವರು. ಹಚ್ಚಿದ ದಿನ ಹೆಣ್ಣುಮಕ್ಕಳು ಅಗಿಯ ಎದೆಭಾಗವನ್ನು ತುಳಿಯುವರು. 15–20 ದಿನಗಳಾದ ಮೇಲೆ ಬಳ್ಳಿಗಳನ್ನು ಲೆಕ್ಕದ ಮೇಲೆ ಹೊಂದಿಸುವರು. ಅನಂತರ ಆ ಬಳ್ಳಿ ಬೆಳೆಯುತ್ತ ಹೋಗುವದು. ಗಿಡಕ್ಕೂ ಬಳ್ಳಿಗೂ 'ಅಪಿ'ನ ದೇಟಿನಿಂದ ಕಟ್ಟಿ ಬಳ್ಳಿಯನ್ನು ಬೆಳೆಸುತ್ತ ಹೋಗುವರು. ಶಿವರಾತ್ರಿ–ಉಗಾದಿಯ ವೇಳೆಗೆ ಬಳ್ಳಿ 5–6 ಅಡಿಯಷ್ಟು ಎತ್ತರವಾಗಿ ಬೆಳೆದು ನಿಲ್ಲುವದು.

(ii) ಮುಂಟಿ ತಿರುವುದು :

ಶಿವರಾತ್ರಿಯ ವೇಳೆಗೆ ಬೆಳೆದ ಬಳ್ಳಿಯನ್ನು ಗಿಡದಿಂದ ಇಳುಹಿ ನೆಲಕ್ಕೆ ತಂದು ನಾಲಿಯಲ್ಲಿ ಆ ಬಳ್ಳಿಯನ್ನೆಲ್ಲ ಮುಚ್ಚಿ ಕೇವಲ ಒಂದು ಗೇಣಿನಷ್ಟು ಅದರ ಮೇಲ್ಭಾಗ ವನ್ನು ಬೆಳೆಯಲು ಬಿಡುವರು. ಅದು ಮತ್ತೆ ಬೆಳೆಯುತ್ತದೆ. ಬಸವಜಯಂತಿಯ ವೇಳೆಗೆ ತೋಟದ ಬಳ್ಳಿಗೆ 'ಶಾಂತಿ' ಮಾಡಿ ಎಲೆ ಕೊಯ್ಯಲು ಆರಂಭಿಸುವರು.

(iii) 'ಸಿಂಬಿ' ಹಾಕುವದು :

ಜನೆವರಿ ಫೆಬ್ರುವರಿ ತಿಂಗಳಿನ ಅವಧಿಯಲ್ಲಿ ಎಲೆಗಳನ್ನು ಇಳಿಸಿ ಕಟ್ಟುವದಕ್ಕೆ ಸಿಂಬಿ ಹಾಕುವದು ಎನ್ನುತ್ತಾರೆ. 'ಸಿಂಬಿ' ಹಾಕುವದೆಂದರೆ 'ಮುಂಟಿ' ಹಾಕಿದ ಬಳ್ಳಿ

ಬಿರುಸಾಗಿ ಬೆಳೆದ ಮೇಲೆ ಪುನಃ ಅದನ್ನು ಇಳಿಸಿ ಸಿವುಡಿನ ಆಕಾರದಲ್ಲಿ ಕಟ್ಟುವದು ಎಂದರ್ಥ ('ಸಿವುಡೆನೆ ಸಿಂಬಿ: ಕರ್ನಾಟಕ ಶಬ್ದಮಂಜರಿ' ಪು. 66).

(iv) ಸಂರಕ್ಷಣೆ :

ಇದು ತೀರ ಕೋಮಲವಾದ ಬೆಳೆಯಾದುದರಿಂದ ಹೆಚ್ಚು ಗಾಳಿ ಬರದಂತೆ ಸುತ್ತಲೂ 'ಕೇರು' ಅಥವ 'ನೆರಕಿ' ಕಟ್ಟಬೇಕು. 'ಹೊರಸಿನ' ಕೆಳಗೆ ಬೀಳುವ ಬಿಸಿಲಿನ ಪ್ರಮಾಣದಂತೆ ಎಲೆಬಳ್ಳಿಗೆ ಸೂರ್ಯನ ಕಿರಣಗಳು ಬೀಳಬೇಕು. ಹೆಚ್ಚು ಬಿಸಿಲು ಬಿದ್ದರೆ ಬಳ್ಳಿ ಬಾಡಿ ಹೋಗುವದು. ಆಶ್ರಯಕ್ಕೆ ಬೆಳಸಿದ ಗಿಡದ ಕೆಳಗಿನ ಟೊಂಗೆಗಳನ್ನು ಸವರಿ ಮೇಲೆ ಮಾತ್ರ ಚಂಡಿಕೆಯಾಕಾರದಲ್ಲಿ ಟೊಂಗೆಗಳನ್ನು ಕೊಯ್ದರೆ ಬಳ್ಳಿಯ ಮೇಲೆ ಬಿಸಿಲು ಹಿತ-ಮಿತವಾಗಿ ಬೀಳಲು ಸಾಧ್ಯವಾಗುವದು. ಗಾಳಿ-ಮಳೆ ಬಿಸಿಲುಗಳಿಂದ ಇದನ್ನು ಚೆನ್ನಾಗಿ ರಕ್ಷಿಸಿದರೆ, ಮತ್ತೆ ಕೆಲವು ರೋಗಗಳಿಂದ ತಡೆಗಟ್ಟಿದರೆ ಈ ಬಳ್ಳಿ 3-4 ವರುಷಗಳ ಕಾಲವಷ್ಟೇ ಅಲ್ಲ 50-60, ವರುಷಗಳವರೆಗೂ ಉಳಿಯಲು ಸಾಧ್ಯ. ಈ ಬೆಳೆಯನ್ನು ಈಗ ಎಲ್ಲರೂ ಬೆಳೆಯಲು ಆರಂಭಿಸಿರುವರಾದರೂ ಈ ತೋಟದ ವೃತ್ತಿ ಬಹು ಹಿಂದಿನಿಂದ 'ಎಲೆಗಾರ'ರಿಗೇ ಮೀಸಲಾಗಿತ್ತೆಂಬುದನ್ನಿಲ್ಲಿ ಗಮನಿಸಬೇಕು. ಎಲೆಗಳನ್ನು ಕೊಯ್ಯುವದೂ ಕೂಡ ಪರಂಪರಾಗತ ಕಲೆಯೇ ಆಗಿತ್ತು. ಕೆಲವು ಪ್ರಾಚೀನ ಶಾಸನಗಳಲ್ಲಿ 'ಉಗುರು ಮೂನೂರ್ವರು' ಎಂಬ ಉಲ್ಲೇಖವಿದೆ. ತಮ್ಮ ಬೆರಳಿನ ಉಗುರನ್ನೇ ಬೆಳಸಿ ಎಲೆ ಕೊಯ್ಯುವ ಕಲೆಯಲ್ಲಿ ಪಳಗಿದ ಆ ಮೂರು ನೂರು ವೃತ್ತಿಕಾರರ ಒಂದು ಸಂಘ ಅಲ್ಲಿದ್ದುದರಿಂದ ಆ ಊರಿಗೂ ಸಹ 'ಉಗುರು' ಎಂಬ ಹೆಸರು ಬಂದುದು ಎಲೆಬಳ್ಳಿ ತೋಟದ ವ್ಯವಸಾಯದ ಕುಶಲಕಲೆಗಾರಿಕೆಯ ಪ್ರತೀಕವಾಗಿದೆ.

ಪದಗಳ ಸಂಗ್ರಹ :

ಎಲೆಬಳ್ಳಿ ತೋಟದ ಹಿಂದಿನ ವ್ಯವಸಾಯ ಕ್ರಮದ ಬಗೆಗೆ ನಾವು ಪ್ರಾಚೀನ ಸಾಹಿತ್ಯ ಶಾಸನಗಳನ್ನೇ ಅವಲಂಬಿಸಬೇಕು. ಆದರೆ ಈಗ ಪ್ರಚಲಿತವಿರುವ ಈ ವೃತ್ತಿ ವಿಷಯವೂ ಸಹ ನಮ್ಮ ಭಾಷಿಕಅಧ್ಯಯನಕ್ಕೆ ಒಂದು ಕ್ಷೇತ್ರವಾಗಿದೆ. ಇಲ್ಲಿ ಬಳಕೆಯಾಗುವ ಶಬ್ದಗಳನ್ನು ಒಂದೆಡೆಗೆ ಸಾಧ್ಯವಿದ್ದಷ್ಟನ್ನೂ ಸಂಗ್ರಹಿಸಿದೆ. ಕಲಬುರ್ಗಿ ಜಿಲ್ಲೆಯ ಕಲಬುರ್ಗಿ ಹಾಗೂ ಅಫಜಲಪುರ ತಾಲೂಕುಗಳಲ್ಲಿ ಸಂಗ್ರಹಿಸಿದ ಪದಗಳೇ ಇಲ್ಲಿ ಮುಖ್ಯವಾಗಿದ್ದರೂ[3] ಬೇರೊಂದು ಪ್ರದೇಶದ ಕೆಲವು ಪದಗಳೂ ಇಲ್ಲಿ ಸೇರಿವೆ. ಅವನ್ನಿಲ್ಲಿ ಈ ಕೆಳಗಿನ ಸಂಕ್ಷೇಪಗಳ ವಿವರಣೆಯಿಂದ ತಿಳಿಯಬಹುದು.

---

3. ಶ್ರೀ ಚಿರಂಜೀವಿ ಕಂಠೆಪ್ಪ ಟೆಂಗಳಿ. (ಕಪನೂರು. ಕಲಬುರ್ಗಿ ತಾಲೂಕ) ಶ್ರೀ ಶಾಂತಪ್ಪ ಪಾಟೀಲ ಸಿಂಪಾಳ ಅವರು ನೀಡಿರುವ ಮಾಹಿತಿಗಾಗಿ ಕೃತಜ್ಞತೆಗಳು.

ಸಂಕ್ಷೇಪಗಳ ವಿವರ :

ಕ.ಕ. —ಕಲಬುರ್ಗಿ ಕನ್ನಡ (ಕಪನೂರು) ದ.ಕ.ಕ. —ದಕ್ಷಿಣ ಕನ್ನಡ ಜಿಲ್ಲೆ ಕನ್ನಡ
ಕ.ಅಫ್.ಕ. —ಕಲಬುರ್ಗಿ ಅಫಜಲಪುರ ಕನ್ನಡ (ನಿಂಬಾಳ)
ಧಾ.ಗ.ಕ. —ಧಾರವಾಡ ಗದಗ ಕನ್ನಡ (ಗದಗ) ಕಾ.ಕ. —ಕಾರವಾರ ಕನ್ನಡ
ಕು.ವ್ಯಾ.ಭಾ. —ಕುಮಾರವ್ಯಾಸ ಭಾರತ. ರಾ.ಶೇ.ವಿ. —ರಾಜಶೇಖರ ವಿಳಾಸ
ಉ. —ಉಚ್ಚಾರಭೇದ. ಪ್ರ. —ಪ್ರಭೇದಗಳು. ಪರ್ಯಾ —ಪರ್ಯಾಯವಾಚಿ.
ಮ. —ಮರಾಠಿ. ಇಂ. —ಇಂಗ್ಲಿಷ.

ವಿಷಯ ವಿಭಜನೆ :

ಇಲ್ಲಿನ ಪದಗಳ ವಿಷಯ ವಿಭಜನೆ ಈ ಕೆಳಗಿನಂತಿದೆ.

1) ತೋಟದ ಸಿದ್ಧತೆ ಮತ್ತು ಆಕಾರ ಕುರಿತ ಪದಗಳು.
2) ಸಂರಕ್ಷಣೆಯ ಬೇಲಿಗೆ ಸಂಬಂಧಪಟ್ಟ ಪದಗಳು.
3) ಉಪಕರಣದ ಹೆಸರುಗಳು.
4) ಎಲೆಯ ಪ್ರಕಾರಗಳು.
5) ಎಲೆಗಳ ಎಣಿಕೆ.
6) ಕೆಲವು ಮುಖ್ಯ ಕ್ರಿಯಾಪದಗಳು.
7) ಬೆಳವಣಗೆಯ ಹಂತಗಳು.
8) ಎಲೆಬಳ್ಳಿಗೆ ಅಂಟುವ ರೋಗಗಳು.
9) ಎಲೆಗಾರ ವೃತ್ತಿ-ಜೀವನ-ನಂಬುಗೆ ಮತ್ತು ಸಂಪ್ರದಾಯಕ್ಕೆ ಸಂಬಂಧಪಟ್ಟ ಶಬ್ದಗಳು.

ಅನುಬಂಧಗಳು :

1) ಎಲೆಬಳ್ಳಿ ತೋಟದ ಎರಡು ಮಾದರಿ ಆಕೃತಿಗಳು. (ರೇಖಾ ಚಿತ್ರದಲ್ಲಿ)
2) ಕರ್ನಲ್ ಮೆಕೆಂಝಿ ಸಂಗ್ರಹದಿಂದಾಯ್ದ ವೀಳೆದೆಲೆ ತೋಟದ ವಿವರ.

I) ತೋಟದ ಸಿದ್ಧತೆ ಮತ್ತು ಅದರ ಆಕಾರ :

ಇರ್ಫ (ಮ) : ಮೂರು ಹಾಡುಗಳ ನೆಲ (ಕ.ಅಫ್.ಕ.) = 21 ಮಡಿಗಳು.

ಎಕರೆ : <Acre (ಇಂ) ಒಂದು ಎಕರೆ = 41 ಗುಂಟೆಗಳ ನೆಲ.

ಚೀರಿ (ಮ) : ಚೌಕಿನಿಂದ ಮಾಡಿದ ನಾಲ್ಕು ಮಡಿಗಳ ನೆಲ (ಕ.ಅಫ್.ಕ.) **ಪರ್ಯಾ :** ವಾರಿ (ಧಾ. ಗ. ಕ.)

ಟಾಂಗ(ಮ) : ಅಡ್ಡಮಡಿ (ಕ. ಅಫ್. ಕ.)

ಪಾಗಲ : >ಪಾಂಗು–ಆಕಾರ. ಪಾಗು>ಪಾಗಲ. ತೋಟದ ಆಕಾರ. ಈಗ ಎಲೆ, ಬಳ್ಳಿ ತೋಟದ ಅರ್ಧ ಭಾಗ. ಇದರ ಎರಡೂ ಬದಿಗೆ ನುಗ್ಗೆ, ಚೊಗಚಿ ಗಿಡಗಳಿದ್ದು ತೋಟದ ನಡುವೆ ಕಾಲುಹಾದಿ ಇದ್ದಂತೆ ಇರುತ್ತದೆ.

ಮಂಟಿ ಶೆಡುಗಾವಲಿ: ಈ ಕಾಲುವೆಯಲ್ಲಿ ಒಂದು ವರ್ಷದ ಎಲೆ ಬಳ್ಳಿಯ ಬೆಳೆಯನ್ನು ಮಾಡುವರು.

ಮಡಿ : ಚೌಕು ಇಲ್ಲವೆ ಉದ್ದನೆಯ ಆಕಾರದ ಮಡಿ.

ಮುಂಬ : ಎಲೆಬಳ್ಳಿಗೆ ನೆಲವನ್ನು ಸಿದ್ಧಪಡಿಸುವ ಒಂದು ಮಾದರಿ. ಇದು 'ಮುಂಬಿ'ನ ಪದ್ಧತಿ (ಕ. ಅಫ್. ಕ.)

ಹಾಡ (ಮ) : ಇದು ಎಲೆ ಬಳ್ಳಿಯ ನೆಲವನ್ನು ಸಿದ್ಧಪಡಿಸುವ ಇನ್ನೊಂದು ಮಾದರಿ. ಇದಕ್ಕೆ 'ಹಾಡಿ'ನ ಪದ್ಧತಿಯೆನ್ನುವರು. ಸಾಮಾನ್ಯವಾಗಿ ಏಳು ಮಡಿಗಳ ನೆಲಕ್ಕೆ ಒಂದು ಹಾಡು ಎನ್ನುವರು. ಮೂರು ಹಾಡುಗಳಿದ್ದರೆ ಒಂದು ಇರ್ಫ. (ಕ. ಅಫ್. ಕ.)

II) ಸಂರಕ್ಷಣೆಯ ಬೇಲಿ ಮತ್ತು ಅದರ ಉಪಯುಕ್ತ ಗಿಡಗಳು :

ಎಲೆಬಳ್ಳಿ ತುಂಬ ಕೋಮಲವಾದ ಬೆಳೆ : —ಇವನ್ನು ಹೆಚ್ಚು ಬಿಸಿಲು, ಗಾಳಿ ಸೋಂಕದಂತೆ ಸುತ್ತಲೂ ವಿಶಿಷ್ಟವಾದ ಕೆಲವು ಗಿಡಗಳನ್ನು ಬೆಳಸಿ ನೆರಳಿನಿಂದ ಸಂರಕ್ಷಿಸುವರು. ಈ ಬೇಲಿಗಿರುವ ಹೆಸರುಗಳು ಇಂತಿವೆ :

ನೆರಕಿ : 'ನೆರವು' ಆಶ್ರಯ ಎಂಬರ್ಥದಿಂದ ನೆರ + ಕಿ(ಭಾ. ನಾ.) ಎಲೆಬಳ್ಳಿಗೆ ಗಾಳಿ ಹತ್ತಬಾರದೆಂದು ಸುತ್ತಲೂ ಸಜ್ಜೆಯ ಕಣಿಕೆ, ತೊಗರಿ ಕಟ್ಟಿಗೆಗಳಿಂದ ನಿರ್ಮಿಸಿದ ಬೇಲಿ. ಉ. ನೆರ್ಕಿ **ಪರ್ಯಾ :** ಕೇರ, ಒಂದಾಟಿ (ಕ. ಅಫ್. ಕ.), (ಕ. ಅ. ಕ.)

ನುಗ್ಗಿ : ಎಲೆಬಳ್ಳಿ ತೋಟದಲ್ಲಿನ ಒಂದು ಗಿಡ.

ಪಾಂಗರಿ : ಒಂದು ವಿಧದ ಗಿಡ. ಇದಕ್ಕೆ ಎಲೆಬಳ್ಳಿಯು ಆಶ್ರಯ ವಿರುತ್ತದೆ. ಇದರಿಂದ ಕೇರ ಕಟ್ಟಲು ಬರುತ್ತದೆ.

ಬೆಲಗ : ತೋಟದ ಒಂದು ಪ್ರಕಾರದ ಗಿಡ. ಇದಕ್ಕೆ ಎಲೆಬಳ್ಳಿ ಏರುತ್ತಾ ಹೋಗುತ್ತದೆ. ಈ ಗಿಡ ನೀಟಾಗಿ ಬೆಳೆಯು ವದರಿಂದ ಇವನ್ನು ಕಡಿದು ಈಸು ಮುಂತಾದ ಉಪಕರಣ ಗಳನ್ನು ತಯಾರಿಸುವರು.

ಜೊಗಚಿ : ಇದೊಂದು ಗಿಡ. ಎಲೆಬಳ್ಳಿ ಈ ಗಿಡದ ಸುತ್ತ ಹಬ್ಬುತ್ತ ಹೋಗುವದು. ಈ ಗಿಡಕ್ಕೆ ಹೂವಾಗುತ್ತವೆ. ಇವನ್ನು ಕಾಯಿಪಲ್ಯೆಗೆ ಉಪಯೋಗಿಸುವರು.

ಬಾಳಿ : ಇದು ವಿಲಾಯತಿ ಬಾಳಿ. ಎಲೆಬಳ್ಳಿ ತೋಟಕ್ಕೆ ಸುತ್ತಲೂ ಬೆಳಸುವರು. **'ಥಡಪಾಲ್'** ಎಂದೂ ಇದಕ್ಕೆ ಹೆಸರು (ಕ. ಅಫ್. ಕ)

ಕೊಡಗ : ಎಲೆಬಳ್ಳಿಯನ್ನು ಹಚ್ಚುವ ಕಾಲದಲ್ಲಿ ಮತ್ತು ಅದು ಬೆಳೆದು ದೊಡ್ಡದಾದ ಮೇಲೆ ಆ ಭಾಗವನ್ನೆಲ್ಲಾ ಕೆಳಕ್ಕೆ ಇಳುಹಿ, ಒಂದು ತಗ್ಗಿನಲ್ಲಿ ಸಿಂಬಿಯಾಕಾರದಲ್ಲಿ ನೆಲದಲ್ಲಿ ಹಾಕುವ ದಕ್ಕೆ ಕೊಡಗವೆಂಬ ಹೆಸರು (ಧಾ. ಗ. ಕ.) **ಪರ್ಯಾ :** ಸಿಂಬಿ (ಕ. ಕ.)

ಬೆಲಗು : ತೋಟದ ಬೇಲಿ ಬಾಗಿದಾಗ ಅದನ್ನು ಎರಡು ಕೋಲಿನಿಂದ ಬಿಗಿದು ಕಟ್ಟುವದಕ್ಕೆ ಬೆಲಗು ಎನ್ನುವರು.

ಮಡ್ಡ : ಎಲೆಬಳ್ಳಿಯನ್ನು ಬಾಳೆಯ ರೆಂಬೆಯಲ್ಲಿ ಬಿಗಿದು ಕಟ್ಟುವ ದಕ್ಕೆ ಮಡ್ಡ ಎಂದು ಹೆಸರು (ಧಾ. ಗ. ಕ.) ಪರ್ಯಾ : ಹೊರಿ (ಕ. ಕ.)

ಆಪ : ನೀರಿನಲ್ಲಿ ಬೆಳೆಯುವ ದೇಟು. ಇದನ್ನು ಎಲೆಬಳ್ಳಿಯನ್ನು ಕಟ್ಟಲು ನಾರಿನಂತೆ ಉಪಯೋಗಿಸುವರು.

ಮುಂಡಿಗೆ : ಎಲೆಬಳ್ಳಿ ಆಶ್ರಯಕ್ಕೆ ಉಪಯೋಗಿಸುವ ಯಾವುದೇ ಗಿಡಕ್ಕೆ ಮುಂಡಗೆ ಎಂದು ಹೆಸರು (ಧಾ.ಗ.ಕ.). ಮುಂಡಿಗೆ-ತಲೆ, ಎತ್ತರವಾದ ಗಿಡಕ್ಕೆ ಎಲೆ ಬಳ್ಳಿಯನ್ನು ಸುತ್ತಿ ಕಟ್ಟು ವದರಿಂದ ಈ ಪ್ರಯೋಗವಿರಬೇಕು.

III) ಉಪಕರಣಗಳು :

ಉಗುರು : <ಉಕಿರ್ (ತ) ಗೋರು (ತೆ) ಉಗರು (ಕ). ಎಲೆಯನ್ನು ಕೊಯ್ಯಲು ಹೆಬ್ಬೆರಳಿಗೆ ಕಬ್ಬಿಣದಿಂದ ಮಾಡಿದ ಹರಿತವಾದ ಉಗುರನ್ನು ಹಾಕಿಕೊಳ್ಳುವರು. ಇದಕ್ಕೆ 'ಉಗುರು' ಎಂದು ಹೆಸರು. ಎಲೆ ತೋಟದಲ್ಲಿ ಎಲೆ ಕೊಯ್ಯುವ ವ್ಯವಸಾಯ ಮಾಡುವ ಜನಕ್ಕೆ ಪ್ರಾಚೀನ ಶಾಸನಗಳಲ್ಲಿ 'ಉಗರು ಮೂನೂರರ್ವರು' ಎಂದು ಹೆಸರಿಸಲಾಗಿದೆ. ಇವರು ತಮ್ಮ ಹೆಬ್ಬರಳಿನ ಉಗುರನ್ನೇ ಬೆಳಸಿ ಆದರಿಂದ ಎಲೆಗಳನ್ನು ಹರಿಯುತ್ತಿದ್ದರು.

ಏಣಿ : <ಶ್ರೇಣಿ (ಸಂ.) ಏರಲು ಮಾಡಿದ ಬಿದಿರಿನ ಹಲ್ಲುಗಳ ಉಪಕರಣ. **ಪರ್ಯಾ :** (i) ಸಿಡಿ (ii) ನಿಚ್ಚಣಿಕೆ, **ಉ.** ನಿಚ್ಚುಣಿಕೆ, ನಿಚ್ಚಣ್ಕೆ (ಕ. ಕ.) ಇದನ್ನು ಹತ್ತಿ ಎಲೆ ಬಳ್ಳಿಯನ್ನು ಗಿಡಕ್ಕೆ ಏರಿಸುವರು.

ಮೋಡಿಗೆ : ಎಲೆಗಳನ್ನು ಕೊಯ್ದು ಬಳಿಕ ಅದನ್ನು ಬಾಳೆಯ ರೆಂಬೆಯಿಂದ ದುಂಡಾಗಿ ಸುತ್ತಿ ಮಾಡಿದ ಒಂದು ಬುಟ್ಟಿಯಲ್ಲಿ ಹಾಕುವರು. ಆ ಬುಟ್ಟಿಗೆ ಮೋಡಿಗೆ ಎಂದು ಹೆಸರು. (ಧಾ. ಗ. ಕ) **ಪರ್ಯಾ :** ಖಡೆ (ಕ. ಕ.)

ನಾರಗತ್ತಿ : ಬೆಳ್ಳಿ ಕಟ್ಟುವದಕ್ಕೆ ಬೇಕಾಗುವ ಸಣ್ಣ ಕತ್ತಿ. ಇದರಲ್ಲಿ ದೊಡ್ಡದು ಗಿಡಗಳ ಮೇಲಿನ ಪೇವು ಕತ್ತರಿಸಲು ಉಪಯೋಗವಾಗುವದು. (ಕ. ಕ.)

ಅಟ್ಟಿಕೋಲ : ಎಲೆಡಾಗನ್ನು ಕಟ್ಟಲು ಬೇಕಾಗುವ ಕಟ್ಟಿಗೆಯ ಗೋಲಾಕೃತಿಯ ಕೋಲು.

ಡೊಳ್ಳೆಡಿಗಿ : ಎಲೆಗಳನ್ನು ತುಂಬುವ ಬುಟ್ಟಿ. (ಕ.ಕ.)

ಜೇಕಿನ ಸೂಡು : ಬಳ್ಳಿಯನ್ನು ಗಿಡಕ್ಕೆ ಕಟ್ಟಲು ಬೇಕಾಗುವ ಜೇಕಿನ ಎಲೆಗಳ ಕಟ್ಟು.

ಚರಿ : ಝುರಿ (ಕ.ಕ.) ಇದು ಹುಣಸಿ ಗಿಡದ ದೇಟು. (ಕ. ಕ.) ಇದರಿಂದ ಕೇರನ್ನು ಬಿಗಿದು ಕಟ್ಟುವರು.

ನಟಿ : 'ಸಿಡು' ಧಾತುವಿನಿಂದ ಪ್ರಯುಕ್ತವಾದ ಪದ. ಎಲೆ ಬಳ್ಳಿಗೆ ಆನಿಕೆಯಾಗಿ ಬೆಳೆಸಿದ ಒಂದು ಗಿಡ ಮುರಿದಲ್ಲಿ ಅದೇ ಜಾಗ

ದಲ್ಲಿ ಮತ್ತೊಂದು ಗಿಡವನ್ನು ನಡೆಸಿ ಬೆಳೆಸುವರು. ಅದಕ್ಕೆ ನಟಿ ಎನ್ನುವರು (ದಾ.ಗ.ಕ.) **ಪರ್ಯಾ :** ಕಟಿಗಿ (ಕ.ಕ.).

ಸಿಂಬಿ : ಸಿವುಡು (ಕ.ಶ.ಮಂ.) ಎಲೆಬಳ್ಳಿ ಒಂದು ಗಿಡದೆತ್ತರ ಬೆಳೆದು ಅದಕ್ಕೂ ಹೆಚ್ಚು ಬೆಳೆಯುಹತ್ತಿದಾಗ ಅದನ್ನು ಇಳುಹಿ ಅದರ ಕೆಳಕ್ಕೆ ಒಂದು ತೆಗ್ಗಿನಲ್ಲಿ ಕೆಲವು ಭಾಗ ಹುಗಿದು ಮತ್ತೆ ಮೊದಲಿನಂತೆ ಕಟ್ಟುವರು. ಎಲೆ ಬಳ್ಳಿಯನ್ನು ಸಿಂಬಿಯಾಕಾರಮಾಡಿ ಹುಗಿಯುವದರಿಂದ 'ಸಿಂಬಿಕಟ್ಟು' ಪದವು ಬಳಿಕೆಯಲ್ಲಿದೆ. **ಪರ್ಯಾ :** ಕೊಡಗ. (ಧಾ.ಗ.ಕ.)

IV) ಎಲೆಗಳ ಪ್ರಕಾರಗಳು :

ಅಂಬಾಡಿ : ಎಲೆಯ ಒಂದು ಪ್ರಬೇಧ. **ಉ.** ಅಂಬೋಡಿ ಇದರ ಎಲೆ ಕೋಮಲ. ಇದನ್ನು ಹೆಚ್ಚಾಗಿ ಊಟವಾದ ಮೇಲೆ ಮೆಲ್ಲುವರು. ಮಸಾಲೆ ಪಾನಿಗಾಗಿ ಇದನ್ನು ಹೆಚ್ಚಾಗಿ ಉಪಯೋಗಿಸುವರು.

ಕರಿಯೆಲಿ (ಕರಿಬಳ್ಳಿ) : ಇದರ ಎಲೆ ಮಧ್ಯಮವಾಗಿ ದೊಡ್ಡದು, ಬಿರುಸು, ಇದನ್ನು ಹೆಚ್ಚಾಗಿ ತಂಬಾಕು ತಿನ್ನುವವರು ಉಪಯೋಗಿಸುತ್ತಾರೆ.

ಕೈಮಾರಿ : ಎಲೆಬಳ್ಳಿಯಲ್ಲಿ ಮಗ್ಗಲು ಒಡೆದು ಹುಟ್ಟಿಕೊಂಡ ಎಲೆಗಳಿಗೆ ಈ ಹೆಸರು. ತೋಟಿಗರು ಮಾರಾಟಕ್ಕೆ ತರುವ ಮುಖ್ಯ ಎಲೆಗಳೆಂದರೆ ಇವೇ.

ದೇಶೀ : ಎಲ್ಲ ಕಡೆಗೂ ದೊರಕುವ ಸಾಮಾನ್ಯ ಎಲೆ.

ಕುಂಬಳ ಬಳ್ಳಿ : ಕುಂಬಳಬಳ್ಳಿಯಾಕಾರದಲ್ಲಿ ದೊಡ್ಡದಾಗಿ ಬೆಳೆಯುವ ಎಲೆ. ಮೈಸೂರು ಭಾಗದಲ್ಲಿ ಇದನ್ನು ಬೆಳೆಯುವರು. ಇದರ ಬಣ್ಣ ಹಚ್ಚಹಸಿರಾಗಿರುತ್ತದೆ.

ನಾಗಬಳ್ಳಿ : ನಾಗರಹಾವಿನ ಹೆಡೆಯಾಕೃತಿಯಲ್ಲಿ ಬೆಳೆಯುವ ಎಲೆಗಳಿಗೆ 'ನಾಗಬಳ್ಳಿ' ಎಲೆ ಎನ್ನುವರು. ಇವು ಕರ್ಪೂರ ವಾಸನೆಯುಳ್ಳಂತಹ ಎಲೆಗಳು. ಪ್ರಾಚೀನ ಶಿಲಾಶಾಸನಗಳಲ್ಲಿ ಈ ಪ್ರಕಾರದ ಎಲೆಗಳನ್ನು ಉತ್ಪಾದಿಸುವ ಎಲೆ ತೋಟಗಾರರಿಗೆ; 'ಎಲೆಯ ಭೊಜಂಗ', ಎಂದು ಕರೆದಿರುವದು ಗಮನಾರ್ಹ. 'ಭುಜಂಗ' ಎಂದರೆ **ಸರ್ಪ**, ಸರ್ಪದ ಹೆಡೆ ಎಂಬರ್ಥ

ಗಳಿವೆ, 'ಐನೂರು ನಾಲ್ವರು ಭೋಜಂಗರು,' ಎಂಬ ಪದ ಇದನ್ನು ಬೆಳೆಯುವ ವ್ಯಕ್ತಿಗಳ ಸಂಖ್ಯೆಗಳನ್ನು ಹೇಳುತ್ತದೆ. (Kar. ins. Vol. V. No. 32 p. 128–29) ('ನಾಗಲತೆ'-ಅನಂತನಾಥ ಪುರಾಣ 3-11) **ಪ್ರ.:** (1) ಕರಿನಾಗಬಳ್ಳಿ (2) ಬಿಳಿನಾಗಬಳ್ಳಿ (ಕಾ.ಕ.) (3) ಮುಂಡ ಬಳ್ಳಿ (ದ.ಕ.) (4) ಪಂಚವಳ್ಳಿ (ದ.ಕ.)

ಕಣಗಿಲು ಬಳ್ಳಿ : ಕಣಗಿಲು ಎಲೆಯಾಕೃತಿಯವು. ಇವುಗಳ ಬಣ್ಣ ಸಾದಾ ಹಸಿರು. ಎಲೆಗಳು ಚಿಕ್ಕವು ಮತ್ತು ಅಗಲ ತುಂಬ ಕಡಿಮೆ. ರುಚಿಯೂ ಸಹ ಸಪ್ಪೆ. ಇದರಂತೆಯೇ ಕರ್ನಾಟಕದಲ್ಲಿ ನೆಲದ ಗುಣ, ಹವಾಮಾನ, ನೀರು ಪೂರೈಕೆಯ ಮೇಲಿಂದ ಒಂದೊಂದು ಭಾಗದಲ್ಲಿ ಬೆಳೆಯುವ ಬಳ್ಳಿಗಳಿಗೆ ಆಯಾ ಭಾಗದ ಪ್ರಾದೇಶಿಕ ಹೆಸರುಗಳಿರುವದು ಕಂಡುಬರುತ್ತದೆ, ಎಲಿಶಿರೂರು ಎಂಬ ಗ್ರಾಮ ಈ ಬೆಳೆಯಿಂದಲೇ ಪ್ರಸಿದ್ಧವಾಗಿದೆ. (ಧಾ.ಗ.ಕ.)

ಕಲಕತ್ತಾ ಎಲೆ : ಬಂಗಾಲ ಪ್ರದೇಶದಲ್ಲಿ ಬೆಳೆಯುವ ಈ ಎಲೆಗೆ ಈ ಹೆಸರು. ಇವು ಅತ್ಯುತ್ತಮವಾದ ಮತ್ತು ಹೆಚ್ಚು ಬೆಲೆಯುಳ್ಳ ಎಲೆಗಳು. ಬಂಗಾಲದಲ್ಲಿ ಇದರ ಇಳುವರಿಯೂ (Yield) ಹೆಚ್ಚು. ಒಂದು ಎಕರೆ ನೆಲದಲ್ಲಿ 80 ಲಕ್ಷ ಎಲೆಗಳನ್ನು ಉತ್ಪಾದಿಸುವದಾಗಿ ಲೇಖಕ ಮುಖರ್ಜಿ ಹೇಳುತ್ತಾರೆ. ಇದು ಅಚ್ಚ ಹಸಿರು, ಮತ್ತು ದೊಡ್ಡದಾದ ಎಲೆ. ಇದರಂತೆ ದೊರಕುವ ಮತ್ತಿತರ ಎಲೆಗಳೆಂದರೆ (1) **ಮದ್ರಾಸ** (2) **ಬನಾರಸ** ಮುಂತಾದವು. ಈ ಎಲೆಗಳನ್ನು ಜರ್ದಾ ಪಾನಿಗಾಗಿ ಹೆಚ್ಚಾಗಿ ಬಳಸುವರು.

ಎಲೆಯ ಬಣ್ಣಗಳು : ಹಸಿರು, ಕಪ್ಪು, ಪಿವ್ಳಾ, ಹಳದಿ, ಮುಂತಾದವು.

V) ಎಲೆಗಳ ಎಣಿಕೆ :

ಅಂಡಿಗೆ : ಭಾರವಾದ ಗಂಟು. ಹನ್ನೆರಡು ಸಾವಿರ ಎಲೆಗಳ ಗಂಟಿಗೆ ಒಂದು ಅಂಡಿಗೆ ಎನ್ನುವರು (ಧಾ.ಗ.ಕ.)

ಕವಳಿಗೆ : 400 ಎಲೆಗಳಿಂದ ಕೂಡಿದ್ದು ಒಂದು ಕವಳಿಗೆ ಅಥವಾ ಕವಳು.

ಕೈ : 100 ಎಲೆಗಳ ಎಣಿಕೆ (ಕ. ಅಫ್. ಕ) **ಪರ್ಯಾ :** ಚಟ್ಟಿ. (ಧಾ. ಗ. ಕ).

ಡಾಗ : 50 ಕವಳು, ಎಂದರೆ 20,000 ಎಲೆಗಳು.

ಪಿಚ್ಚಿ : 200 ಎಲೆಗಳಿಗೆ ಒಂದು ಪಿಚ್ಚಿ (ಧಾ. ಗ. ಕ) ಎಂದು ಹೆಸರು.

ವಜ್ಜಿ : 200 ಕವಳಿಗೆ ಒಂದು ವಜ್ಜಿ (ಕ. ಕ.)

ಹೇರು : <ಪೇಜು=ಹೇರು. ಎಣಿಕೆಯ 64 ಸಾವಿರ ಎಲೆಗಳಿಗೆ ಒಂದು ಹೇರು. ಇದಕ್ಕೆ 'ಡಾಗ' ಎಂದೂ ಕೆಲವು ಭಾಗಗಳಲ್ಲಿ ಕರೆಯುವರು (ಕ. ಕ.)

VI) ಕೆಲವು ವಿಶಿಷ್ಟ ಕ್ರಿಯಾಸೂಚಕಗಳು :

ಬೋದ ಮಾಡು : ನೆಲವನ್ನು ಎಲೆ ಬಳ್ಳಿ ಹಚ್ಚಲು ಉಪಯುಕ್ತವಾಗುವಂತೆ ಉದ್ದ ಇಲ್ಲವೆ ಅಡ್ಡಾಗಿ ಸಾಲುಗಳನ್ನು ನಿರ್ಮಿಸುವದು.

ಬಳ್ಳಿ ಹಚ್ಚು : ಎಲೆ ಬಳ್ಳಿಯನ್ನು ನಾಟಿ ಮಾಡುವದಕ್ಕೆ 'ಹಚ್ಚು' ಇಲ್ಲವೆ 'ಹಾಕು' ಎನ್ನುವರು. ಇದು ಅಗಸ್ಟ ತಿಂಗಳಲ್ಲಿ ನಡೆಯುವದು.

ಮಂಟಿ ಹಾಕು : ಬಳ್ಳಿ ಬೆಳೆದಾಗ ಅದನ್ನು ಇಳುಹಿ ಸಿಂಬಿಯಲ್ಲಿ ಸುತ್ತುವದು. ಇದು ಫೆಬ್ರುವರಿ ತಿಂಗಳ ಸುಮಾರಿಗೆ ನಡೆಯುವದು.

ಉಸಿರು ಬಿಡು : ಎಲೆಬಳ್ಳಿಗೆ ಆನಿಕೆಯಾಗಿ ನಿಂತ ಗಿಡವನ್ನು ಮೇಲಿನ ಚಂಡಿ ಕಡಿಯುವಾಗ ಒಂದು ಟೊಂಗೆಯನ್ನು ಬಿಟ್ಟು ಕಡಿಯುವದಕ್ಕೆ 'ಉಸಿರು ಬಿಡು' ಎನ್ನುವರು.

ಸಿಡಿಬರು : ಬಳ್ಳಿಗೆ ಆಶ್ರಯವಾಗಿರುವ ಗಿಡ ಒಣಗಿದರೆ ಅದಕ್ಕೆ 'ಸಿಡಿ ಬರು' ಎನ್ನುತ್ತಾರೆ.

ದಣಿ ಹಾಕು : ಎಲೆ ತೋಟದಲ್ಲಿ ಬೆಳೆಸಿರುವ ಒಂದು ಮೂಲೆಯ ಗಿಡಗಳನ್ನು ಒಂದೆಡೆಗೆ ಕೂಡಿಸಿ ದಾರದಿಂದ ಕಟ್ಟುವದಕ್ಕೆ 'ದಣಿ ಹಾಕು' ಎಂದು ಹೆಸರು.

ಬಳ್ಳಿ ಇಳು : ಬೆಳೆದ ಬಳ್ಳಿಯನ್ನು ಇಳಿಸುವದು.

ಚಿಗುರು : ಬಳ್ಳಿ ಬೆಳೆದು ಮುಂದೆ ಬರುವದು.

ವಡಿ : ಬಳ್ಳಿಯ ಎಲೆಗಳು ಬೇರೆ ಬೇರೆ ಭಾಗಗಳಾಗಿ ಹೊರಬರುವಿಕೆ.

ಬೀಳ್ಕೊಡು (?) : 'ಬೀಳ್ಕೊಡುವಿಕೆ' ಇದು ವೀಳೆಯವನ್ನು ಕೊಡುವದು ಎಂಬರ್ಥದಲ್ಲಿರಬೇಕು ಎಂದು ಕೆಲವರ ಅನ್ನಿಸಿಕೆ.[1] ಆದರೆ ಮೇಲುನೋಟಕ್ಕೆ ಇಲ್ಲಿ ರೂಪು ಸಾಮ್ಯವಿದ್ದಂತೆ ಕಂಡು ಬಂದರೂ ಇವೆರಡೂ ಪದಗಳ ರಚನೆ ಭಿನ್ನ ಭಿನ್ನ. 'ವೀಟಿಕೆ' ಪದದ ತದ್ಭವ ವೀಳೆಯ (ಶ. ಮ. ದ.) 'ಬೀಟ್' ಎಂಬ ಅಚ್ಚಗನ್ನಡ ಕ್ರಿಯಾಧಾತುವಿಗೂ 'ವೀಳೆಯ'ಕ್ಕೂ ಯಾವ ಸಂಬಂಧವೂ ಇಲ್ಲ. ಬೀಟುಕೊಡು to give leave to go, to bid good bye ಎಂಬರ್ಥದಲ್ಲಿ ಪ್ರಯೋಗವಾಗಿರುವದಕ್ಕೆ ಸಾಕಷ್ಟು ನಿದರ್ಶನಗಳಿವೆ. (ಕಿಟೆಲ್ ಕೋಶ ಪು. 1197) 'ಅಸ್ತ್ರಂಗಳಂ ಕುಡೆ ಕೊಣ್ಡು ಪರುಶರಾಮನಂ ಬೀಟ್ಕೊಂಡು' (ಪಂಪ ಭಾರತ 2–46 ವಚನ) ಅದೇ ರೀತಿ 'ಬೀಟ್ಕೊಳಿಸು', (ಪಂಪ ರಾಮಾಯಣ 7–84 ವಚನ) 'ಬೀಟ್ಗೊಳ್' (ಬಸವ ಪುರಾಣ 4–49) ಬಹುಶಃ 'ಬಿಡು' ಕ್ರಿಯಾಧಾತುವಿನ ಆದೇಶರೂಪ 'ಬಿಟ್' ಎಂದಾಗಿ ಅದುವೇ ಟ್‌ದ ಅಪಭ್ರಂಶದಿಂದಾದ ಜಟಿ ಸಂಯುಕ್ತವಾಗಿ 'ಬೀಜ್' ಎಂದಾಗಿರಬೇಕು. 'ಬಿಟ್ಟುಕೊಡು' ಎಂಬುದರಿಂದ 'ಬೀಟ್ಕೊಡು.'

ವೀಳೆಯ ತಾ : ಕುಮಾರವ್ಯಾಸ ಭಾರತದಲ್ಲಿ ಈ ಪ್ರಯೋಗವಿದೆ. ಇದೊಂದು ಬಗೆಯ ವೀರ ಆಹ್ವಾನ (a challenge) ವನು ಸ್ವೀಕರಿಸುವದು.

ವೀಳೆಯ ಹಾಕು : ಅಪ್ಪಣೆ ಕೊಡು, ಆಜ್ಞಾಪಿಸು. ಇದೂ ಸಹ ಕು. ವ್ಯಾ. ಭಾ ಪ್ರಯೋಗ.

ವೀಳೆಯ ಕೊಡು : ಆಮಂತ್ರಿಸು ಎಂಬರ್ಥದಲ್ಲಿ. ಇದು ಸಾಮಾಜಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಮಹತ್ವದ ಪದ.

VII) ಬಳ್ಳಿಯ ಬೆಳವಣಿಗೆಯ ಹಂತಗಳು :

ಗಣಿಕಿ : ಬಳ್ಳಿಯ ಅತಿ ಸಣ್ಣದಾದ ದೇಟು.

ಕೈಮಾರಿ : ಎಲೆಬಳ್ಳಿಯಲ್ಲಿ ಮುಂದೆ ಚಿಗುರಿರುವ ಎಲೆಗಳು.

---

1. ದಕ್ಷಿಣ ಕನ್ನಡ ಜಿಲ್ಲೆಯ ನನ್ನ ಮಿತ್ರ ಶ್ರೀ ವಿಷ್ಣು ಭಟ್ ಅವರು ತಿಳಿಸಿದ್ದು.

ಸಿಂಪಿ ಮೋಡಿ : ಸಣ್ಣ ಪ್ರಮಾಣದ ಕೈಮಾರಿ ಎಲಿ.

ದಗಳ ಮೋಡಿ : ದೊಡ್ಡ ಪ್ರಮಾಣದ ಎಲಿ.

ಬಿರಸ ಮೋಡಿ : ಕೊಯ್ಯಲು ಬರುವ ಎಲಿ.

ಕೊಂಡಿ : ಬಳ್ಳಿ ಚಿಗುರುವಾಗ ಅನೇಕ ಕೊಂಡಿಗಳು ಕಾಣಿಸುವವು. ಇವನ್ನು ಒಡೆದು ಸಿಂಪಿ ಮೋಡಿಗೆ ಬರುತ್ತದೆ.

ಕಸಿ : ಕೈಮಾರಿ ಗಣಿಕೆಯು ಬೆಳೆಯುವಾಗ ಭೂಮಿಯ ಹೆಚ್ಚು ಸತ್ವದಿಂದ ಕೇದಗಿ ಎಲೆಯಂತೆ ಹುಟ್ಟಿದ ಎಲೆಬಳ್ಳಿಯ ಕೆಳಗಿನ ಭಾಗ.

ಕುಡಿ : ಎಲೆಬಳ್ಳಿ ಚಿಗುರುವ ಭಾಗ

VIII) ಎಲೆಬಳ್ಳಿಗೆ ಅಂಟುವ ರೋಗಗಳು :

ಗಾರು : ಅತಿ ತಂಪು ಹವೆ (Freezy Cold) ಯಿಂದ ಎಲೆಗಳು ಮುದುಡಿ ಹಾಳಾಗುತ್ತವೆ.

ಚಿಕ್ಕಿ : ಎಲೆಗಳ ಮೇಲೆ ಚಿಕ್ಕಿ ಹಾಕುವದು. ಇದರಿಂದ ಎಲೆಗಳ ಬೆಲೆ ತಗ್ಗುವದು.

ನುಸಿ : ಇದರಿಂದ 'ಎಲೆ ಚುಕ್ಕೆ' ರೋಗ ಬರುವದು.

ಹೇನು : ಇದು ಎಲೆಗಳನ್ನು ಕೆಡಿಸುವ ಸಾಮಾನ್ಯ ಕೀಟ.

IX) ಎಲೆಗಾರ ವೃತ್ತಿ ಜೀವನ, ನಂಬುಗೆ ಮತ್ತು ಸಂಪ್ರದಾಯಗಳು :

ಎಲೆಗಾರ : ಎಲೆಯನ್ನು ಮಾರುವವ, **ಉ :** ಯಲೆಗಾರ, ಯಲಗಾರ ಅಡಪವಳಂ, ತಂಬುಲಿಗ (ಶ. ಮ. ದ. ಸೂ 199,200) +**ಇತಿ**=ಎಲೆಗಾರ್ತಿ, ಎಲೆ ಮಾರುವವನ ಹೆಂಡತಿ.

ಎಲೆಯಡಕಿ : ಎಲೆ+ಅಡಕೆ=ಯಲ್ಯಡಕಿ. (ದ್ವಂದ್ವ ಸಮಾಸ) ಊಟವಾದ ಮೇಲೆ ಎಲೆ ಮತ್ತು ಅಡಕೆಯನ್ನು ಸುಣ್ಣ, ಕಾಚು, ಬಡೆ ಸೋಪು, ಲವಂಗ, ಏಲಕ್ಕಿ, ಆದ್ರಕ, ಚಮನ್, ಕೊಬ್ಬರಿ ಚೂರು ಇತ್ಯಾದಿ ಸಹಿತ ಸೇವಿಸುವದು ಪದ್ಧತಿ. ಇದು ತೆಲುಗಿನ 'ಆಡಕ್ಯಾಮುದು' (ಅಡಕ್ಕೈ+ಅಮುದು) ಎಂಬು ದಕ್ಕೂ (S. I. I.V 66) ಹಿಂದಿಯ 'ಪಾನ ಸುಪಾರಿ'

ಗ್ರಯೋಗಕ್ಕೂ ಸಮಾನಾರ್ಥಕವೆಂದು ಹೇಳಬಹುದು. ವಿಜಯನಗರದಲ್ಲಿ 'ಪಾನ ಸುಪಾರಿ ಬಝಾರ' ಇದ್ದ ಸ್ಥಳವನ್ನು ಈಗಲೂ ಅಲ್ಲಿ ಕಾಣುತ್ತೇವೆ. ತಾಂಬೂಲವೆಂದು ಇದನ್ನು ಪ್ರಾಚೀನ ಸಾಹಿತ್ಯದಲ್ಲಿ ಕರೆದಿದೆ. 'ಮಾದಾರ ಚನ್ನಯ್ಯನ ಬಾಯ **ತಾಂಬೂಲವ** ಮೆಲುವೆ.' (ಅಂಖಿಡೇಶ್ವರ ವಚನ) 'ಬಾಯ್ದುಂಬಲಿಕ್ಕೆ ಕೈಯಾನು' (ಕು. ಪ್ಯಾ. ಭಾ.) ಇದು ಸೇವೆಗೈ ಎಂಬರ್ಥದಲ್ಲಿದೆ. 'ಖದಿರ ತಾಂಬೂಲಮ್'/ಕೈರದಂಬೂಲಮಂ (ಶ. ಮ. ದ. ಸೂ 297) ತಂಬುಲಿಗಳು (ಮೋಹನ ತರಂಗಣಿ) 'ಪರಿಮಳ ತಾಂಬೂಲ' (ಚಂದ್ರ ಪ್ರಭ ಪುರಾಣ). ತಾಂಬೂಲವನ್ನು ಮೆಲ್ಲುವದು ಕೆಲವರಿಗೆ ಚಟ. ಹಲವರಿಗೆ ಆರೋಗ್ಯಕ್ಕೆ ಹಿತ. ಇದರಲ್ಲಿ B ಮತ್ತು C ಜೀವನಸತ್ವಗಳಿರುತ್ತವೆ. ಪ್ರಾಚೀನ ಕಾವ್ಯಗಳಲ್ಲಿ ಇದು ಹೆಚ್ಚಾಗಿ ನಲ್ಲ–ನಲ್ಲೆಯರ ಪ್ರಣಯದ ಸಂಕೇತವಾಗಿ ವರ್ಣಿತವಾಗಿದೆ.

ಹಡಪ (ರಾ.ಶೇ.ಐ.) : ಎಲೆಅಡಕಿ ಹಾಕುವ ಪೆಟ್ಟಿಗೆ. ಪ್ರಾಚೀನ ಕಾವ್ಯ, ಶಾಸನಗಳಲ್ಲಿ ಈ ಹಿಂದೆ ಇದಕ್ಕೆ ಅಡಪ **ಉ :** ಹಡಪ ಎಂದಾಗಿ ಸಂಭೋದಿಸಿದೆ. ಅಡಪ+ವಳ (ಶ. ಮ. ದ. ಸೂ. 199) ಎಲೆಯಡಿಕೆ ಮಾರುವ ವೃತ್ತಿಯವನು. ಉಚ್ಚಾರಣೆಯಲ್ಲಿ ಪದಾದಿಯಲ್ಲಿ 'ಹ'ಕಾರ ಸೇರಿ ಇದು 'ಹಡಪ' ಎಂದಾಗಿದೆ. ಕೆಲವು ಶರಣರ ವೃತ್ತಿ ಇದಾಗಿತ್ತು. ಹಡಪದಪ್ಪಣ್ಣ, ಹಡಪದ ರೇಚಣ್ಣ. ಇಲ್ಲಿ 'ಹಡಪ'ವೆಂದರೆ (The person who carries the pouch containing betel and betelnuts for the Master or King) ಎಂಬರ್ಥ ಕಿಟೆಲ್ ಕೋಶದಲ್ಲಿದೆ. (ಪು. 1700) ಹಡಪದ ಅಪ್ಪಣ್ಣನು ಬಸವಣ್ಣನವರಿಗೆ ಊಟವಾದ ಮೇಲೆ ವೀಳೆಯವನ್ನು ಕೊಡುವ ಕಾಯಕದಲ್ಲಿದ್ದನು. ಅದೇ ರೀತಿ ಹಡಪದ ರೇಚಯ್ಯ ಚೆನ್ನಬಸವಣ್ಣಸಿಗೆ ತಾಂಬೂಲು ಕೊಡುವ ಕಾಯಕದ ಶರಣನಾಗಿದ್ದ, (ಶಿ. ಕ. ರ, ಕೋ.). ಆದರೆ ಈಗ 'ಹಡಪದ' ಎಂಬುದಕ್ಕೆ ಕ್ಷೌರಿಕನ ಪೆಟ್ಟಿಗೆ ಎಂಬರ್ಥ ಬಂದಿದೆ. ಈ ಶರಣರ ಹೆಸರಿನಲ್ಲಿ ಕೆಲವೊಂದು 'ನಾಟಿತರ

ಸಂಘ,' ಸಮಾಜಗಳೂ ಹುಟ್ಟಿಕೊಂಡಿವೆ. ಆದರೆ ಈ ಶರಣರು ಮೂಲತಃ ನಾಪಿತ ಸಮಾಜದವರಲ್ಲವೆಂಬುದು ಇಲ್ಲಿ ಗಮನಾರ್ಹ.

ವೀಳೆದೆಲೆ : (ವೀಳೆಯ+ದ+ಎಲೆ) ಉ: ವೀಳೇಯದೆಲೆ > ವೀಳೆಯ > ವೀಳ್ಯವೆಂದರೆ ತಾಂಬೂಲ, ಎಲೆ ಎಂದೇ ಅರ್ಥ. ಆಹ್ವಾನ ಸನ್ಮಾನ, ಶುಭಕಾರ್ಯ ಹಾಗೂ ದೇವತಾ ಕಾರ್ಯಗಳಲ್ಲಿ ವೀಳೆಯನ್ನು ಕೊಡುವದು ಸಂಪ್ರದಾಯವಾಗಿ ಬಂದಿದೆ. ಸಾಂಸ್ಕೃತಿಕವಾಗಿ ಇದು ಬಳಕೆಗೊಳ್ಳುವ ಹಲವು ಸಂದರ್ಭಗಳನ್ನಿಲ್ಲಿ ಉಲ್ಲೇಖಿಸಬಹುದು.

(i) **ರಣ ವೀಳ್ಯ :** ಯುದ್ಧಕ್ಕೆ ಹೊರಡುವ ಮುನ್ನ ಸ್ವೀಕರಿಸುವದು,

(ii) **ವಿಭೂತಿ ವೀಳ್ಯ :** ಭೋಜನ ಮುಂತಾದ ಸಮಾರಂಭಗಳಲ್ಲಿ ಆಮಂತ್ರಿಸುವದಕ್ಕಾಗಿ ಕೊಡುವ ವೀಳ್ಯ.

(iii) **ಉಡುಗೊರೆ ವೀಳ್ಯ :** ಓಲಗ ಮುಗಿದ ಮೇಲೆ ವೀಳ್ಯೆಯ ಉಡುಗೊರೆಯನ್ನು ಹಿಂದಿನ ರಾಜ-ಮಹಾರಾಜರು ಕೊಡುತ್ತಿದ್ದರು. (ಕಂಠೀರವನರಸರಾಜವಿಜಯ-ಗೋವಿಂದ ವೈದ್ಯ.)

(iv) **ಸಮಾಜ ವೀಳ್ಯ :** ಊಟ ಮುಗಿದ ಮೇಲೆ ಬಂದ ಎಲ್ಲ ಅತಿಥಿ ಜನಗಳಿಗೆ ಕೊಡುವ ವೀಳ್ಯ. ಇದನ್ನು "ಕರ್ಪೂರದ ಸಮಾಜ ವೀಳ್ಯ"ವೆಂದು ಗೋವಿಂದ ವೈದ್ಯ ಕವಿ ಉಲ್ಲೇಖಿಸಿದ್ದಾನೆ. (ಕಂ. ನ. ವಿ.) ವೀಳೆಲೆಯನ್ನು ಮುತ್ತೈದೆಯವರಿಗೆ ಉಡಿ ತುಂಬುವಾಗ ಅವರಿಗೆ ಕೊಡುವದುಂಟು. ಕನ್ಯಾ ನಿಶ್ಚಯವಾದ ಕಾಲದಲ್ಲಿ ಎಲೆ, ಸಕ್ಕರೆಯನ್ನು ಹಂಚುವ ವಿಧಾನವೂ ಇದೆ. ಯಾವುದೇ ಶುಭ ಕಾರ್ಯ, ದೇವತಾಕಾರ್ಯಗಳಲ್ಲಿ ಐದು ವೀಳೆಯಗಳನ್ನಿಡುವದು ಸಂಪ್ರದಾಯವಾಗಿದೆ. ಮದುವೆಯ ಕಾಲದಲ್ಲಿ ಬೀಗರು ಪರಸ್ಪರ ವೀಳ್ಯೆಲೆಯನ್ನು ವಿನಿಮಯ ಮಾಡಿಕೊಳ್ಳುವದು ರೂಢಿಯಾಗಿ ಬಂದಿದೆ.

ಎಲಿ ಪೂಜೆ : ದೇವರಿಗೆ ಸುತ್ತಲೂ ಎಲೆಯಿಂದ ಅಲಂಕರಿಸುವದು ಎಲಿ ಪೂಜೆ. ಇದಕ್ಕೆ 'ಎಲಿಪೂಜೆ ಗಟ್ಟಿಸುವದು' ಎನ್ನುವರು.

ಪಾಲಕಿ ಎಲಿ : ಎಲೆಬಳ್ಳಿ ತೋಟದಲ್ಲಿ ಕಳಸದಾಕೃತಿಯಲ್ಲಿ ಬೆಳೆಯುವ ಒಂದು ಎಲೆಯ ಪ್ರಕಾರ. ಈ ಬಳ್ಳಿಯ ಎಲೆಗಳನ್ನು ಅವರು ಕಡಿಯುವದಿಲ್ಲ. ಅದಕ್ಕೆ ಪೂಜೆ ಸಲ್ಲಿಸುವ ನಿಯಮವಿದೆ.


ಕಳಶದ ಎಲಿ : ವಿವಾಹ, ಜಾತ್ರೆ ಮುಂತಾದ ಮೆರವಣಿಗೆಯ ಸಂದರ್ಭಗಳಲ್ಲಿ ಕಳಸಗಿತ್ತಿಯರು ಕಳಸವಲ್ಲಿಡುವ ಎಲೆಗಳಿಗೆ ಈ ಹೆಸರು. ಪ್ರಾಚೀನ ಕಾವ್ಯಗಳಲ್ಲಿ ಕಳಸಗಿತ್ತಿಯರು ಓಲಗದಲ್ಲಿ ಮತ್ತು ದೇವಾಲಯಗಳಲ್ಲಿ ಸೇವೆ ಸಲ್ಲಿಸುತ್ತಿದ್ದ ವರ್ಣನೆ ಬಂದಿದೆ.

ಚಂಚಿ : <ಸಂಚಿ [ಸ>ಚ (Free Variation)] ಎಲಿ ಅಡಿಕೆಯನ್ನಿಡುವ ಚೀಲ. ಇದರಲ್ಲಿ ಎಲೆ, ಅಡಕೆ, ಸುಣ್ಣ ಮತ್ತು ತಂಬಾಕವನ್ನು ಬೇರೆಬೇರೆಯಾಗಿಡುವ ವ್ಯವಸ್ಥೆ ಇರುತ್ತದೆ. ಸುರುಳಿಸುತ್ತಿ ಇದನ್ನು ಗಂಡಸರು ಅಂಗಿಯ ಜೇಬಿನಲ್ಲಿ ಹಾಕಿಕೊಳ್ಳುವರು. ಹೆಂಗಸರು ಸರಕಿಯ ಕಸಿ ಕಟ್ಟಿದ ಈ ಚೀಲವನ್ನು ನಡುವಿಗೆ ಸಿಕ್ಕಿಸಿಕೊಳ್ಳುವರು. 'ಹದಿಬದೆಯ ಧರ್ಮ' ಎಂಬ ನೀತಿ ಗ್ರಂಥವನ್ನು ಬರೆದ ಹೊನ್ನಮ್ಮ ತನ್ನನ್ನು 'ಸಂಚಿಯ ಹೊನ್ನಮ್ಮ' ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾಳೆ. ಆಕೆ ಮೈಸೂರಿನ ಚಿಕ್ಕದೇವರಾಯ ಒಡೆಯರ ಆಸ್ಥಾನದಲ್ಲಿ (ಕ್ರಿ. ಶ. 1672) 'ಸಂಚಿಯ' ಊಳಿಗದಲ್ಲಿದ್ದು ಉತ್ತಮ ಕವಯಿತ್ರಿಯಾಗಿದ್ದಳು. ಈಗ ಅದು ಪೆಟ್ಟಿಗೆಯಾಗಿರದೆ ಚೀಲದ ರೂಪದಲ್ಲಿ ಹೆಚ್ಚು ಪ್ರಚಾರದಲ್ಲಿದೆ.


ಬೂಳ್ಯ : 'ವೀಳೆಯ' ಪದ ಧ್ವನಿವ್ಯತ್ಯಾಸದಿಂದ 'ಬೂಳ್ಯ' ವೆಂದಾಗಿದೆ. ದಕ್ಷಿಣಕನ್ನಡ ಜಿಲ್ಹೆಯಲ್ಲಿ ಭೂತಗಳ ಉತ್ಸವದಲ್ಲಿ ಎರಡು ಎಲೆಗಳನ್ನು ಮಡಚಿ ಅದಕ್ಕೆ ನಡುವೆ ಗಂಧ ಹಚ್ಚಿ ಕೊಡುವ ಪ್ರಸಾದಕ್ಕೆ 'ಬೂಳ್ಯ' ಎನ್ನುವರು.

ಅನುಬಂಧ-೧

ಎಲೆ ಬಳ್ಳಿ ತೋಟದ ಎರಡು ಮಾದರಿ ಆಕೃತಿಗಳು



ಆಕೃತಿ : ೧



ಆಕೃತಿ : ೨

ಅನುಬಂಧ-೨

ವೀಳ್ಳೆದೆಲೆ ಪೈರಿನ ವಿವರ

Colonel Mackenzie ಅವರು ಕ್ರಿ. ಶ. 1821 ರ ಅವಧಿಯಲ್ಲಿ ಸಂಗ್ರಹಿಸಿದ 'Local Records' ವಿಭಾಗದಲ್ಲಿ ಬರುವ ನೂರಾರು ವಿಷಯಗಳಲ್ಲಿ ವೀಳೆಯ ಎಲೆ ತೋಟಗಾರಿಕೆಯ ವಿಷಯವೂ ಸೇರಿದೆ. ನಾನು ಸಂಗ್ರಹಿಸಿದ ಮಾಹಿತಿ ಒಂದು ಪ್ರದೇಶದ್ದು. ಬೇರೊಂದು ಪ್ರದೇಶದಲ್ಲಿನ ಭಾಷೆ ಈ ವೃತ್ತಿಗೆ ಸಂಬಂಧಿಸಿದಂತೆ ಬೇರೆ ಸ್ವರೂಪವನ್ನು ಪಡೆದಿರುತ್ತದೆ. ಮೆಕೆಂಜಿ ಸಂಪುಟ (VoL XLIX, P. 81–82 M. No. 357 G. O. M. L.) ದಲ್ಲಿ ಕೊಟ್ಟಿರುವ ವೀಳೆಯ ಎಲೆ ತೋಟದ ಒಂದು ಪ್ರದೇಶದ ವಿವರ ಇಂತಿದೆ.+ ಇಲ್ಲಿನ ಪಾಠ ಮೂಲವನ್ನೇ ಅನುಸರಿಸಿದೆ.

"ವೀಳ್ಳೆದೆಲೆ ಪೈರು ವಳ್ಳೆ ವುತ್ತಮ ಭೂಮಿ ಸಾಗುಮಾಡಿ, ಸುತ್ತಲೂ **ಬೇಲಿ** ಕಟ್ಟಿ, ನೀರು ಯಿದ್ದ ಸ್ಥಳನೋಡಿ ಭಾವಿ ತಗೆದು, **ಡೋಣಿ** ಕಟ್ಟಿ ವೀಳ್ಳೆದೆಲೆ ಬಳ್ಳಿ ಶ್ರಾವಣ ಮಾಸದಲ್ಲಿ **ಕೊಡಗು** ಮೆ(ಕ)ಟ್ಟಿ ಗೊಬ್ಬರ ಹಾಕಿ ನೆಳಲಿನ ಬಗ್ಯೆ ಮಾವಿನ **ಸೊಪ್ಪಲ** ತಂದು ನಿಲ್ಲಿಸಿ **ನೆಟೀ** ಹರುವ ಪರಿಯಂತ್ರ ದಿನಕ್ಕೆ ಮೂರು **ದಫಾ** ನೀರು ಹಾಕಿ ಆಚೆ ಯೀಚೆ ಬದಿಗೆ **ಹಾರಿವಾಣದ** ಬೀಜಹಾಕಿ ಯಿದು ಸರಿಯಾಗಿ ವಂದು ಆಳವುದ್ದ ಆಗಬೇಕಾದರೆ ವಂದು ವರ್ಷ ಬೇಕಾಗುತ್ತದೆ. ಆ ಪರಿಯಂತ್ರ ಯಲೆಬಳ್ಳಿ ಮ್ಯಾಲಕ್ಯೆ ಹತ್ತಬೇಕಾದರೆ ಆಳ ಉದ್ದನೆ ಕಟ್ಟಿಗೆ ನಿಲ್ಲಿಸಿ ಯೀ ಬಳ್ಳಿಯನ್ನು ಕಳಗೆ ಬೀಳದ ಹಾಂಗೆ ಬಳ್ಳಿ ನಾರಿನಲ್ಲಿ ಗೇಣಿಗೆ ವಂದು ಕಟ್ಟಿನ ಪ್ರಕಾರ ಆ ಕಟ್ಟಿಗೆ ಕಟ್ಟುತ್ತ ಹೋಗಬೇಕು. ಆ ಕಟ್ಟಿಗೆ ಉದ್ದ ಬಳ್ಳಿ ಬೆಳೆದ ಬಳಿಕ ಆ ಕಟ್ಟುಗೆಳೆಲ್ಲ ಬಿಚಿ (ಚ್ಚಿ) ಆ ಹರಿವಾಣದ ಮರಕ್ಕೆ ಬಳ್ಳಿ ಹತ್ತಬೇಕಾದರೆ ವಂದು ವರುಷ ಬೇಕಾಗುತ್ತದೆ. ಆ ಮೇಲೆ ಚೈತ್ರ-ವೈಶಾಖದಲ್ಲಿ ಆ ಡೋಣಿಗಳ ಯಾವತ್ತು ವಡದು ನಿಘಾ ಮಾಡಿ ನೆಲ ಸಮನಾಗಿ ಚೌಕ ಮಾಡಿ ಬಳ್ಳಿ ಸುತ್ತಲು ನೆಲ **ಕೊಚ್ಚಿ** ಬಳ್ಳಿ ಬುಡದಲ್ಲು ನೀರು ನಿಲ್ಲುವ ಹಾಂಗೆ ಕೊಡಗು ಕಟ್ಟಿ ಗೊಬರ ಹಾಕಿ ಮೇಲೆ **ಸಾನೋ ಹುಲ್ಲು** ಮುಚ್ಚಿ ನೀರು ಬಿಡು ಬಗ್ಯೆ ಕಾಲಿವೆ ಮಾಡಿ ಯೆಂಟು ದಿನಕ್ಕೆ ವಂದಾವರ್ತಿ **ಗೂಡೆ** ಹಾಕಿ ನೀರು ಹಾಯಿಸಬೇಕು. ತಿಂಗಳಿಗೆ ಮೂರಾವರ್ತಿ ಕಳೆ ತೆಗವುತ್ತ ವರುಷಕ್ಕೆ ಮೂರು ವ್ಯಾಳ್ಯೆಗೆ ಗೊಬರ ಹಾಕುತ್ತ ಬಳ್ಳಿ ಬೆಳದ ಮೇರ ಕಟ್ಟಿಕೊಳ್ಳುತ್ತ. ಕೆಳಗಿನ ಕಟ್ಟು ಕೊಳತು ಕೆಟ್ಟುಹೋದರೆ ಪುನಹ ಹೊಸ ಕಟ್ಟು ಹಾಕುತ್ತ ಹೋಗಬೇಕು. ಮಳಗಾಲದಲ್ಲಿ **ಚವುಳು ನೀರು** ಹರಿದು

+ ಈ ವಿಷಯದ ಅವಲೋಕನೆಗೆ ಅವಕಾಶವಿತ್ತ ಮದ್ರಾಸ ಗೌವ್ಹರ್ನಮೆಂಟ ಪ್ರಾಚ್ಯ ಹಸ್ತಪ್ರತಿ ಗ್ರಂಥಭಂಡಾರದ ಕ್ಯೂರೇಟರ್ ಹಾಗೂ ಅಲ್ಲಿನ ಪಂಡಿತ ಶ್ರೀಧರ ಮೂರ್ತಿಗಳಿಗೆ ನನ್ನ ಕೃತಜ್ಞತೆಗಳು.

ಹೋಗುವ ಬಗ್ಗೆ ಯೆರಡು ಸಾಲಿಗೆವಂದು **ಕಪ್ಪು ಕೆಂಡಿ** (?) ನೀರು ಹೊರಗೆ ಹೋಗುವಂತೆ ಮಾಡಬೇಕು. **ಮುಂಡಘಾಳಿ** ಬಡಿಯದಂತೆ ತೋಟದ ಬೇಲಿಗೆ ಘಾಳಿ ಮಗ್ಗುಲಿಗೆ **ನೆರಕಿ** ಕಟ್ಟಬೇಕು. ಆ ಮೇಲೆ ಆಶ್ವಿಜ-ಕಾರ್ತಿಕದಲ್ಲಿ ಬಾಳೀ **ಗುದ್ದ** ಕಡದು ನೆಳಲು ಆಗುವ ಬಗ್ಗೆ ಬಾಳಿಸಸಿ ಸುತ್ತಲೂ ವಳಬೇಲಿ ವಳಗೆ ಹಾಕಬೇಕು. ಆ ಮೇಲೆ ಬಳ್ಳಿ ಹಾಕಿದ ಹದಿನೆಂಟು ತಿಂಗಳಿಗೆ ಯೆಲೆ ಕೊಯುವ ಮಟ್ಟಿಗೆ ಬರುತ್ತದೆ. ಯಿದೇ ವರುಷಕ್ಕೆ ಯೆರಡು ಮೂರು ವ್ಯಾಳ್ಯೆ ಕೊಯಿಬೇಕು. ಆ ಮೇಲೆ ಬಳ್ಳಿ ಉದ್ದವಾಗಿ ಮೇಲಕ್ಕೆ ಹೋಗುವದರಿಂದ ಬಳ್ಳಿ ಯಿಳಿಸಿ ಯೀಚೆ ಬಳ್ಳಿ ಆಚೆ ಮರಕ್ಕೆ ನೆಲದಲ್ಲಿ ಕೊಯ್ದು ಹಚ್ಚಬೇಕು. ಆಚೆ ಬಳ್ಳಿ ಯಿದೇ ಪ್ರಕಾರ ಯಿಳಿಸಿ ಈಚೆ ಮರಕ್ಕೆ ಹಚ್ಚಬೇಕು".

****

ಸಮೂಹ ಸಾಕ್ಷರತಾಕಾರ್ಯ ಕ್ರಮವಿಧಾನ

● ಜಯವಂತ ಕುಳ್ಳಿ
● ವಿ. ಆಯ್. ಸುಬ್ರಮಣ್ಯಂ

1961ರ ಜನಗಣತಿಯ ಪ್ರಕಾರ ಒಂದು ದಿನವೂ ಶಾಲೆಗೆ ಹೋಗದ ಅನಕ್ಷರಸ್ಥರ ಸಂಖ್ಯೆ ಭಾರತದಲ್ಲಿ 40 ಕೋಟಿ. ಇದು ದೇಶದ ಒಟ್ಟು ಜನಸಂಖ್ಯೆಯ ಪ್ರತಿಶತ 65. ಇದು 16–18 ವರ್ಷಗಳ ಮೇಲಿನ ಅನಕ್ಷರಸ್ಥರಿಗೆ ಅನ್ವಯಿಸುವ ಸಂಖ್ಯೆ. ಇಂಥ ವ್ಯಕ್ತಿಗಳಿಗೆ ಕಾನೂನು ಮತ್ತಿತರ ಕಾರ್ಯಗಳಿಗೆ ತಮ್ಮ ಹೆಬ್ಬಟ್ಟಿನ ಮುದ್ರೆಯೇ ಏಕೈಕ ಸಂಪರ್ಕ ಸಾಧನ. ವಸ್ತುಸ್ಥಿತಿಯ ಅರಿವು ಇಲ್ಲದೆ ಇರುವುದರಿಂದ ದಲ್ಲಾಳಿಗಳು, ಆಫೀಸರರು, ರಾಜಕಾರಣಿಗಳು ಮುಂತಾಗಿ ಎಲ್ಲರೂ ಅವರಿಗೆ ಮೋಸ ಮಾಡುವ ಸಂಭವ ಹೆಚ್ಚು. ಅವರ ಸುಧಾರಣೆಗಾಗಿ ಸರಕಾರ ಕೈಕೊಳ್ಳುವ ಕಾರ್ಯಕ್ರಮಗಳೂ ಅವರಿಗೆ ಅರ್ಥವಾಗುವುದು ಕಡಿಮೆ; ಕಾರಣ, ಯಾವುದೇ ರಚನಾತ್ಮಕ ಕಾರ್ಯಕ್ರಮವನ್ನೂ ಅವರು ವಿರೋಧ ಭಾವನೆಯಿಂದ ಕಾಣುವುದರಿಂದ, ಸರಕಾರದ ಬಗೆಗೆ ವಿರೋಧ ಭಾವನೆ ಬೆಳೆಯುತ್ತಾ ಹೋಗುವ ಸಾಧ್ಯತೆ ಹೆಚ್ಚು.

ಅನಕ್ಷರಸ್ಥರಿದ್ದರೂ ಅನೇಕರಲ್ಲಿ ಸಂಘಟನಾ ಹಾಗೂ ನಿರ್ಮಾಣ ವಿಚಾರಕ್ಕೆ ಸಂಬಂಧಿಸಿದ ಉಚ್ಚಸ್ತರದ ಸಾಮರ್ಥ್ಯವಿರುವುದು ಸುಳ್ಳಲ್ಲ. ಆದರೆ ಅನಕ್ಷರಸ್ಥರಿರುವುದರಿಂದ. ಸಮಾಜ ಹಾಗೂ ಸರಕಾರದ ಸೇವೆಗಾಗಿ ಆ ಸಾಮರ್ಥ್ಯ ವಿಕಸಿತವಾಗುವುದಿಲ್ಲ. ಹೀಗಾಗಿ ರಾಷ್ಟ್ರಕ್ಕೆ ಅವರ ಕೊಡುಗೆ ಏನೂ ಇಲ್ಲದಾಗುತ್ತದೆ. ಅನಕ್ಷರಸ್ಥರಲ್ಲಿ ಹೆಚ್ಚಿನವರು ಮಹಿಳೆಯರು. ಇವರು ತಮ್ಮ ಮೂಢಭಾವನೆಗಳನ್ನು, ನಿತ್ಯ ತಮ್ಮ ಸುತ್ತಮುತ್ತ ನಡೆಯುತ್ತಿರುವ ಬದಲಾವಣೆಗಳಿಗೆ ವಿರೋಧವಾಗಿರುವುದನ್ನು ತಮ್ಮ ಮಕ್ಕಳಲ್ಲಿಯೂ ಬಿತ್ತಿ, ಅವನ್ನು ಮುಂದುವರಿಸುತ್ತಾರೆ. ‘ಅನಕ್ಷರಸ್ಥ ಕುಟುಂಬ ಅನಕ್ಷರಸ್ಥ ಪೀಳಿಗೆಯನ್ನೇ ನಿರ್ಮಿಸುತ್ತದೆ’ ಎಂಬ ಹೇಳಿಕೆಯೇ ಇದೆ. ಸಾಮಾನ್ಯ ಜನರನ್ನು ಸುಶಿಕ್ಷಿತರನ್ನಾಗಿ ಮಾಡುವುದರ ಬಗೆಗೆ ಬೇಕಾದಷ್ಟು ಹೇಳಲಾಗಿದೆ. ಸಮಾಜವಾದವನ್ನು ಸ್ವೀಕರಿಸಿ, ಜನತೆಯ ಅಭ್ಯುದಯವನ್ನೇ ತನ್ನ ಗುರಿಯಾಗಿಸಿಕೊಂಡ ಸರಕಾರ, ತನ್ನ ಪ್ರಜೆಗಳಲ್ಲಿ ಪ್ರತಿಶತ 65ರಷ್ಟು ಜನತೆಯನ್ನು ಅನಕ್ಷರಸ್ಥರನ್ನಾಗಿ ಉಳಿಯಗೊಟ್ಟಿದೆ: ಆರ್ಥಿಕ ಅಭಿವೃದ್ಧಿಯಾಗಿದ್ದರೂ ಅಕ್ಷರಜ್ಞಾನವಿಲ್ಲದುದರಿಂದ ಅವರಿಗೆ ಅದರ ಫಲ ದೊರೆಯದೇ ಹೋಗಿದೆ.

ಅನಕ್ಷರಸ್ಥರ ವಿಧಗಳು :

ಒಂದು ದಿನವೂ ಶಾಲೆಗೆ ಹೋಗದ ಅನಕ್ಷರಸ್ಥರದು ಮೊದಲ ವಿಧ. ಎರಡನೆಯ ವಿಧದ ಅನಕ್ಷರಸ್ಥರೆಂದರೆ, ಒಂದೆರಡು ವರ್ಷ ಶಾಲೆಗೆ ಹೋಗಿ ಆಮೇಲೆ ಅಕ್ಷರಜ್ಞಾನವನ್ನು ಸಂಪೂರ್ಣ ಮರೆತವರು. ಒಂದನೆಯ ವಿಧದ ಜನರಿಗಿಂತ ಇವರೇನು ಬಹಳ ಭಿನ್ನರಲ್ಲ. ಆದರೆ ಬರಹ, ಓದು ಮುಂತಾದವುಗಳನ್ನು ಕಲಿಯುವಲ್ಲಿ ಅವರಿಗೆ ಮೊದಲಿನವರಿಗಿಂತ ಹೆಚ್ಚಿನ ಅನುಕೂಲವಿರುತ್ತದೆ. ಅಲ್ಪಶಿಕ್ಷಣ ಹೊಂದಿದ ಜನರ ಜ್ಞಾನ ಮಟ್ಟವನ್ನು ಎತ್ತರಿಸಲು ವಿಶ್ವವಿದ್ಯಾಲಯ ಮತ್ತಿತರ ಸಂಸ್ಥೆಗಳು ವ್ಯಾಸಂಗವಿಸ್ತರಣ ಮುಂತಾದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಆದರೆ ಇವು ಕೆಳಗಿನ ಮಟ್ಟವನ್ನು ತಲುಪಲು ಸಾಧ್ಯವಾಗಿಲ್ಲ. ಇದಕ್ಕೆ ಕಾರಣ ಅವರಿಗೆ ಅಕ್ಷರಜ್ಞಾನವಿಲ್ಲದಿರುವುದು. ವಯಸ್ಕಶಿಕ್ಷಣದ ಘೋಷಣೆ—'ಒಬ್ಬನು ಒಬ್ಬನಿಗೆ ಕಲಿಸುವುದು', ವಯಸ್ಕಶಿಕ್ಷಣಕ್ಕೆ ಯಾವುದೇ ಪ್ರಯೋಜನವನ್ನು ಉಂಟುಮಾಡಿಲ್ಲ. ಅನೇಕ ರಾಜ್ಯಗಳಲ್ಲಿ ವಯಸ್ಕಶಿಕ್ಷಣ ಕಾರ್ಯಕ್ರಮಗಳು ಯಾವುದೇ ಪ್ರಗತಿ ಸಾಧಿಸಿಲ್ಲ; ಇನ್ನೂ ಕೆಲವು ರಾಜ್ಯಗಳಲ್ಲಿ ಅಲ್ಪಸ್ವಲ್ಪ ಪ್ರಗತಿ ಕಂಡುಬಂದರೂ, ಸಂಯೋಜನೆ ಹಾಗೂ ಆರ್ಥಿಕ ಕಾರಣಗಳ ಮೂಲಕ ಕುಂಠಿತವಾಗಿವೆ. ರಾಜ್ಯಸರಕಾರಗಳು ತಮ್ಮ ಎಲ್ಲ ಗ್ರಾಮಗಳನ್ನು ಸಂಪೂರ್ಣ ವಿದ್ಯುತ್ತೀಕರಣ ಮಾಡಿವೆಯೆಂದು ಸಾರಿವೆ; ಆದರೆ ಒಂದು ರಾಜ್ಯವೂ ಸಂಪೂರ್ಣ ವಯಸ್ಕಶಿಕ್ಷಣ ಕಾರ್ಯಕ್ರಮ ಮುಗಿದಿದೆಯೆಂದು ಸಾರಿಲ್ಲ. ಇದೀಗ ಕೇಂದ್ರ ಶಿಕ್ಷಣಮಂತ್ರಿಗಳು ಇದು ರಾಷ್ಟ್ರೀಯ ಸಮಸ್ಯೆಯೆಂಬುದನ್ನು ಮನಗಂಡು, ರಾಷ್ಟ್ರದ ಎಲ್ಲ ಹಳ್ಳಿಗಳಲ್ಲಿ ನಿರ್ದಿಷ್ಟ ಅವಧಿಯಲ್ಲಿ ಎಲ್ಲರನ್ನೂ ಸಾಕ್ಷರರನ್ನಾಗಿ ಮಾಡುವ ಕಾರ್ಯಕ್ರಮಗಳನ್ನು ಗಂಭೀರವಾಗಿ ಹಮ್ಮಿಕೊಂಡಿರುವುದು ಸಂತೋಷದ ವಿಷಯ.

ಸಾಕ್ಷರತೆಯ ಗುರಿ :

ಮೊದಲನೆಯ ವಿಧದ ಅನಕ್ಷರಸ್ಥರನ್ನು ಸಾಕ್ಷರರನ್ನಾಗಿ ಮಾಡುವದು ಸಹಜವಾಗಿಯೇ ಕನಿಷ್ಠ ಗುರಿ. ಆ ಗುರಿಯೆಂದರೆ ಸಾಧಾರಣ ಬರಹ ಸಾಮರ್ಥ್ಯ, ಆ ಜನ ತಮ್ಮ ಮಾತೃಭಾಷೆಯಲ್ಲಿ ವರ್ತಮಾನ ಪತ್ರವನ್ನು ಅಥವಾ ಸರಕಾರಿ ಆಜ್ಞೆಗಳನ್ನು ಓದುವುದು, ತಮ್ಮ ದೈನಂದಿನ ಜೀವನಕ್ಕೆ ಅವಶ್ಯಕವಾದ ಅಂಕಗಣಿತ ಹಾಗೂ ವಿಜ್ಞಾನಗಳನ್ನು ಅರಿಯುವುದು. ಇದರಿಂದ ಅವರ ಅಜ್ಞಾನದ ದುರುಪಯೋಗ ಪಡಿಸಿಕೊಳ್ಳುವ ಜನರಿಂದ ಎಚ್ಚರಿಕೆ ಹೊಂದುವ ಸಾಮರ್ಥ್ಯ ಅವರಿಗೆ ಬರಬೇಕು. ಯುನೆಸ್ಕೊ ಪ್ರಕಾರ ಕಾರ್ಯಾತ್ಮಕ ಸಾಕ್ಷರತೆಯ ಮಟ್ಟ 5 ವರ್ಷದ ಪ್ರಾಥಮಿಕ ಶಿಕ್ಷಣದಷ್ಟಿರಬೇಕು. ಈ ಗುರಿಯನ್ನು ಸಾಧಿಸುವ ಒಂದು ರೀತಿಯೆಂದರೆ, ಇಂಥವರನ್ನು 5 ವರ್ಷ ಪ್ರಾಥಮಿಕ ಶಾಲೆಗೆ ಕಳಿಸುವುದು. ಇದು ಆರ್ಥಿಕವಾಗಿಯೂ, ವ್ಯಾವಹಾರಿಕವಾಗಿಯೂ ಅಸಾಧ್ಯವಿಷಯ. ಇನ್ನೊಂದು ರೀತಿಯೆಂದರೆ, 5 ವರ್ಷಗಳವರೆಗೆ ಪ್ರಾಥಮಿಕ ಶಾಲೆಯಲ್ಲಿ ಕಲಿಸುವ ಪಾಠ

ಗಳನ್ನು ಸಂಕ್ಷೇಪಿಸಿ. 3-4 ತಿಂಗಳಲ್ಲಿ ಕಲಿಸಲು ಸಾಧ್ಯವಾಗುವಷ್ಟಕೆ ಇಳಿಸುವುದು. ಕೆಲವು ಪ್ರೌಢರು ತಮ್ಮ ಇಳಿವಯಸ್ಸು ಹಾಗೂ ಅಸಮರ್ಪಕ ಆಹಾರದ ಮೂಲಕ ಕಲಿಯುವಲ್ಲಿ ನಿಧಾನವಾಗರುತ್ತಾರೆ. ಇಂಥ ಪ್ರಸಂಗಗಳಲ್ಲಿ ಓದು ಹಾಗು ಬರಹದ ಮಟ್ಟವನ್ನು ಕೆಳಗಿಳಿಸುವುದು ವಿಹಿತ. ಉದಾಹರಣೆಗೆ ಅವರು ತಮ್ಮ ಮಾತೃಭಾಷೆಯಲ್ಲಿ ವೃತ್ತಪತ್ರವನ್ನು. ಕಥೆಯನ್ನು ಓದುವ ಮಟ್ಟಕ್ಕೆ ಬಂದರಾಯಿತು. ಇದಕ್ಕಿಂತ ಹೆಚ್ಚಿನ ಗುರಿಯೆಂದರೆ, ಅಂಕಗಣಿತ-ವಿಜ್ಞಾನ ಇತ್ಯಾದಿ ದೈನಂದಿನ ಅವಶ್ಯಕತೆಗಳಿಗಾಗಿ ಸಾಕಾಗುವಷ್ಟು ಜ್ಞಾನ ಪಡೆಯುವಂತೆ ಮಾಡುವುದು, ಮೊದಲನೆಯ ಗುರಿಯನ್ನು ಪ್ರತಿದಿನ ಮುಂಜಾನೆ ಅಥವಾ ಸಂಜೆ ಒಂದು-ಒಂದುವರೆ ತಾಸಿನಂತೆ ವಾರಕ್ಕೆ ನಾಲ್ಕು ದಿವಸ ಕಲಿಸಿದರೆ 3-4 ತಿಂಗಳಲ್ಲಿ ಮುಟ್ಟಬಹುದು. ಇಂಥವರಲ್ಲಿ ಭರವಸೆ ಮೂಡಿಸುವ ವಕ್ತಿಗಳಿದ್ದು, ಅವರು ಶಿಕ್ಷಣ ಮುಂದುವರಿಸುವ ಆಶೆ ಹೊಂದಿದ್ದರೆ, ಅಂಥವರಿಗೆ ಇನ್ನಷ್ಟು ಮೇಲಿನ ಮಟ್ಟದ ಸಾಮೂಹಿಕ ಸಾಕ್ಷರತಾ ಕಾರ್ಯಕ್ರಮವನ್ನು ಅಳವಡಸಬಹದು; ಇಲ್ಲವೆ ಮುಕ್ತ ವಿಶ್ವವಿದ್ಯಾಲಯ ಪದ್ಧತಿಯಂತೆ, ಮುಕ್ತ ಮಾಧ್ಯಮಿಕ ಅಥವಾ ಉಚ್ಚ ಮಾಧ್ಯಮಿಕ ಶಿಕ್ಷಣ ಪದ್ಧತಿಯನ್ನು ಪ್ರಾರಂಭಿಸಬಹುದು. ಇಂಥ ಶಾಲೆಗಳು ಸಂಜೆ ಕಲಿಸುವ ಸೌಲಭ್ಯದೊಂದಿಗಿರಬೇಕು. ಈ ಕಾರ್ಯಕ್ರಮಗಳು ದೇಶದ ಅಭ್ಯುದಯಕ್ಕೆ ನೇರವಾಗಿ ಸಂಬಂಧಿಸಿಸುವುದರಿಂದ ತೀವ್ರ ಕಾರ್ಯಕ್ರಮ ಕೈಕೊಳ್ಳುವುದು ಅವಶ್ಯವಿದೆ. ಅವಧಿ ಬಹಳವಾದರೆ ಕಲಿಯುವವರು, ಕಲಿಸುವವರು ಕೂಡಿಯೇ ಆಸ್ಥೆ ಕಳೆದುಕೊಳ್ಳುವ ಸಂಭವವಿದೆ. ಮನುಷ್ಯ, ಸಾಮಗ್ರಿ ಮುಂತಾದ ಎಲ್ಲವನ್ನೂ ಬಳಸಿ, ಅತಿ ಕಡಿಮೆ ಅವಧಿಯಲ್ಲಿ ಅಂದರೆ ಒಂದು ವರ್ಷದೊಳಗೆ ಇಂಥ ಗುರಿಯನ್ನು ಮುಟ್ಟಬೇಕಾದುದು ಅತ್ಯಾವಶ್ಯಕ.

ಕಲಿಸುವ ವಸ್ತು :

ಪ್ರಾಥಮಿಕ ಹಂತದಲ್ಲಿ ಹಾಗೂ ಸಾಮೂಹಿಕ ಸಾಕ್ಷರತೆಗಾಗಿ ಮಾತೃಭಾಷೆಯೇ ಮಾಧ್ಯಮವಾಗಿರಬೇಕೆಂಬುದು ನಮ್ಮ ದೇಶದ ಘಟನೆಯಲ್ಲಿಯೇ ಒಪ್ಪಿತವಾಗಿ, ಸ್ಪಷ್ಟವಾಗಿ ಉಲ್ಲೇಖಿತವಾಗಿದೆ. ನಮ್ಮ ಘಟನೆ ಮನ್ನಿಸಿದ 15 ಭಾಷೆಗಳಲ್ಲಿ ಸಂಸ್ಕೃತ ಹಾಗೂ ಆಂಗ್ಲ ಭಾಷೆಗಳು ಬಹುಜನರ ಮಾತೃಭಾಷೆಗಳಲ್ಲ. 1971 ರ ಜನಗಣತಿ ಪ್ರಕಾರ 15000 ಕ್ಕೂ ಹೆಚ್ಚು ಜನ ಮಾತನಾಡುವ 1051 ಭಾಷೆಗಳಿವೆಯೆಂದು ತಿಳಿದುಬಂದಿವೆ. ಇನ್ನೂ 601 ಭಾಷಾಪ್ರಭೇದಗಳೋ ಭಾಷೆಗಳೋ ಉಪಭಾಷಗಳೋ ಎಂಬುದು ನಿರ್ಧಾರವಾಗದೇ ಉಳಿದಿದೆ. ಮೇಲಿನ ಭಾಷೆಗಳಲ್ಲಿ ಪ್ರತಿ ಪ್ರಮುಖ ಭಾಷೆಯೂ ಉಪಭಾಷೆಗಳನ್ನು ಹೊಂದಿದೆ. ಇವುಗಳನ್ನು ಅದೇ ಭಾಷೆಯ ಇನ್ನೊಂದು ಉಪಭಾಷೆಯನ್ನು ಬಳಸುವ ಜನರು ಸ್ವಲ್ಪ ತೊಂದರೆ ತೆಗೆದುಕೊಂಡರೆ ತಿಳಿದುಕೊಳ್ಳಬಹುದು. ಹರಿಜನ ಮತ್ತು ಇತರ ಹಿಂದುಳಿದ ಜನ ಶಾಲೆಯಲ್ಲಿ ಪ್ರಮಾಣಭೂತ ಉಪಭಾಷೆಯಲ್ಲಿ ಅಭ್ಯಾಸ ಮಾಡುವಾಗ ಬಹಳ ತೊಂದರೆಯಾಗುತ್ತದೆ. ಕೆಲವೊಮ್ಮೆ

ಒಂದು ಹೊಸ ಭಾಷೆಯನ್ನೇ ಕಲಿಯುವಷ್ಟು ತೊಂದರೆ ಅವರಿಗಾಗುತ್ತದೆ. ಇವರನ್ನು ಮೇಲಿಂದ ಮೇಲೆ ತಿದ್ದಿದರೆ ಅವರು ಶಾಲೆಯನ್ನೇ ಬಿಟ್ಟುಬಿಡುತ್ತಾರೆ. ಹರಿಜನ ಹಾಗೂ ಇತರ ಹಿಂದುಳಿದವರು ಶಾಲೆ ಬಿಡುವುದಕ್ಕೆ ಆರ್ಥಿಕ ಹಾಗೂ ಸಾಮಾಜಿಕ ಕಾರಣ ಗಳಲ್ಲದೆ ಪ್ರಮಾಣಭೂತ ಉಪಭಾಷೆಯ ವೈಚಿತ್ರ್ಯವೂ ಕಾರಣ. ಈ ದೇಶದಲ್ಲಿ ಲಕ್ಷಾವಧಿ ಅನಕ್ಷರಸ್ಥರ ಮಾತೃಭಾಷೆಗಳನ್ನು ಕಲಿಸುವುದರ ಜೊತೆಗೆ ಈ ಉಪಭಾಷೆಯ ಸಮಸ್ಯೆಯನ್ನೂ ಕೈಗೆತ್ತಿಕೊಳ್ಳಬೇಕು.

ಇಲ್ಲಿ ಇನ್ನೊಂದು ಗಂಭೀರ ಸಮಸ್ಯೆಯೆಂದರೆ, ಅನೇಕ ಮಾತೃಭಾಷೆಗಳಿಗೆ ಬರಹ ವ್ಯವಸ್ಥೆ ಇಲ್ಲ. ಇಂಥ ಭಾಷೆಗಳಿಗೆ ಬರಹವನ್ನು ಕಲ್ಪಿಸುವದು, ಇಲ್ಲವೆ ಇಂಥ ಭಾಷೆ ಗಳಿಗೆ ಪ್ರಸ್ತುತ ಅಕ್ಷರ ಪದ್ಧತಿಯನ್ನು ಉಪಯೋಗಿಸುವುದರ ಬಗೆಗೆ ನಿರ್ಧಾರ ಕೈಕೊಳ್ಳುವುದು ಅವಶ್ಯ. ಆದಿವಾಸಿ ಜನರಿಗೆ ಕಲಿಸುವಾಗ ಬಳಸಿದ ಅಕ್ಷರಪದ್ಧತಿಯ ಸೀಮಿತ ಅನುಭವದ ಮೇಲೆ ಹೇಳುವುದಾದರೆ, ಆಯಾ ರಾಜ್ಯದ ಪ್ರಾದೇಶಿಕ ಅಕ್ಷರ ಪದ್ಧತಿಯನ್ನು ಬಳಸಬೇಕು. ಇದರಿಂದ ಅವರ ಐಕ್ಯ ಸರಾಗವಾಗಿ ಆದಷ್ಟು, ಇಡೀ ದೇಶದ ತುಂಬ ರೋಮನ್ ಅಥವಾ ದೇವನಾಗರಿ ಪದ್ಧತಿಯನ್ನು ಬಳಸಿದರೆ ಆಗುವದಿಲ್ಲ. ಉದಾಹರಣೆಗೆ, ದ್ರಾವೀಡ ಭಾಷೆಯನ್ನು ಮಾತನಾಡುವ, ಬಿಹಾರದಲ್ಲಿ ವಾಸಿಸುವ, ಮಾಲ್ತೊ ಜನರಿಗೆ ಅಕ್ಷರದ ಅವಶ್ಯಕತೆಯುಂಟಾದರೆ, ದೇವನಾಗರಿ ಅಕ್ಷರ ಪದ್ಧತಿಯನ್ನು ಬಳಸುವುದು ವಿಹಿತ. ಯಾಕಂದರೆ ಆ ಪ್ರದೇಶದ ಅಕ್ಷರ ಪದ್ಧತಿ ದೇವನಾಗರಿ, ಕರ್ನಾಟಕದ ಜೇನುಕುರುಬರಿಗೆ ಕನ್ನಡ ಅಕ್ಷರಗಳ ಮೂಲಕವೂ, ನೀಲಗಿರಿಯ ತೋಡರಿಗೆ ತಮಿಳ ಅಕ್ಷರಗಳ ಮೂಲಕವೂ, ಅವಶ್ಯಕ ಬದಲಾವಣೆಗಳೊಂದಿಗೆ, ಕಲಿಸಬಹುದು.

ಉಪಭಾಷೆಗಳ ವಿಷಯದಲ್ಲಿ ಹೇಳಬೇಕೆಂದರೆ, ಆವಶ್ಯಕ ಬದಲಾವಣೆಗಳೊಂದಿಗೆ ಆಯಾ ಪ್ರಾದೇಶಿಕ ಭಾಷೆಗಳ ಅಕ್ಷರಮಾಲೆಯನ್ನು ಬಳಸಬಹುದು. ಇದರಿಂದ ಭಾಷೆ ಯನ್ನು ಹೊಸದಾಗಿ ಕಲಿಯುವ ಪ್ರೌಢರು ರಾಜ್ಯದ ರಚನಾತ್ಮಕ ಕಾರ್ಯಗಳಲ್ಲಿ ಭಾಗ ವಹಿಸಲು ಸಾಧ್ಯವಾಗುತ್ತದೆ. ಯಾಕೆಂದರೆ, ಅಕ್ಷರಸಾದೃಶ್ಯದ ಮೂಲಕ, ಅವರು ರಾಜ್ಯದ ಭಾಷೆಯಲ್ಲಿ ವಿಷಯವನ್ನು ಓದಲು ಅನುಕೂಲವಾಗಿರುತ್ತದೆ.

ಈ ಸನ್ನಿವೇಶದಲ್ಲಿ ಭಾಷಾಶಾಸ್ತ್ರಜ್ಞರು ಅಕ್ಷರವ್ಯವಸ್ಥೆ ಹೊಂದಿರದ ಭಾಷೆ ಹಾಗೂ ಉಪಭಾಷೆಗಳಿಗೆ ಅಕ್ಷರವ್ಯವಸ್ಥೆ ಕಲ್ಪಿಸಬಲ್ಲರು, ಹಾಗೂ ಕಲಿಸುವ ಸರಳ ಸಾಮುಗ್ರಿ ಯನ್ನು ಸಿದ್ಧಪಡಿಸಬಲ್ಲರು. ಅವರು ಸಿದ್ಧಪಡಿಸಿದ ಸಾಮುಗ್ರಿಯನ್ನು ಈ ಉದ್ದೇಶಕ್ಕಾಗಿ ಲಾಭದಾಯಕವಾಗಿ ಬಳಸಿಕೊಳ್ಳಬಹುದ.

ಪಠ್ಯ ಸಾಮುಗ್ರಿ :

ಲಕ್ಷಾವಧಿ ಜನರಿಗೆ ಈ ರೀತಿ ಸಾಕ್ಷರತಾ ಜ್ಞಾನಕೊಡುವ ಪ್ರಯತ್ನ ನಡೆದಾಗ ಒಂದು ಪ್ರಮಾಣವನ್ನು ನಿರ್ಮಿಸುವಾಗ ತೀವ್ರಗತಿಯ ಇಂಥ ಕಾರ್ಯಕ್ರಮವನ್ನು ಬಹು

ಖಚಿತವಾಗಿ ವ್ಯಾಖ್ಯಾನಿಸಬೇಕು. ಯಾಕೆಂದರೆ, ತನ್ನ ಲಕ್ಷಾವಧಿ ಜನರನ್ನು ಸಾಕ್ಷರರನ್ನಾಗಿ ಮಾಡುವ ರಾಷ್ಟ್ರದ ಕಾರ್ಯ ಅವರಿಗೆ ನಿಜವಾದ ಫಲಕೊಡಬೇಕು. ಮಾತೃಭಾಷೆಯಲ್ಲಿ ಶಿಕ್ಷಣ ಕೊಡಬೇಕಾಗಿರುವುದರಿಂದ ಆ ಭಾಷೆಯನ್ನು ಮಾತನಾಡುವ ಪ್ರದೇಶದ, ಅದನ್ನು ಚೆನ್ನಾಗಿ ಅರಿತ ಶಿಕ್ಷಕರೇ ಇರಬೇಕೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಒಂದು ಭಾಷೆಗೆ ಅಥವಾ ಉಪಭಾಷೆಗೆ ಒಂದು ಅಕ್ಷರವ್ಯವಸ್ಥೆಯನ್ನು ಕಲ್ಪಿಸುವ ಶಿಕ್ಷಕ ಅದನ್ನು ಚೆನ್ನಾಗಿ ಅರಿತು, ಬಳಸಬಲ್ಲವನಾಗಿರಬೇಕು. ಇಂಥ ಕಾರ್ಯಕ್ರಮವನ್ನು ಪ್ರಾರಂಭಿಸುವುದಕ್ಕಿಂತ ಮುಂಚೆ ಪ್ರಾಸ್ತಾವಿಕ ಕಾರ್ಯ ಹಾಗೂ ತರಬೇತಿ ಅವಶ್ಯ. ಪ್ರಾರಂಭದಲ್ಲಿ, ಶಿಕ್ಷಣದ ವಸ್ತು ಹೊಸದಾಗಿ ಕಲ್ಪಿಸಿದ ಅಥವಾ ಈಗಾಗಲೇ ಇದ್ದ ಅಕ್ಷರವ್ಯವಸ್ಥೆಯನ್ನು ಕಲಿಸುವುದು ಹಾಗೂ ಅದರ ಮುಖಾಂತರ ಓದು ಕಲಿಸುವುದು. ಉದಾಹರಣೆಗೆ, ತಮ್ಮ ಹಾಗೂ ತಮ್ಮ ಬಂಧುಗಳ ಹೆಸರು ಬರೆಯುವುದು; ಅದೇ ರೀತಿ ಅಂಥ ಹೆಸರುಗಳನ್ನು ಓದುವುದು ಇತ್ಯಾದಿ.

ಪ್ರಾಥಮಿಕ ಶಾಲೆಗಳ ಮೊದಲನೆಯ ವರ್ಗದ ಪುಸ್ತಕಗಳಲ್ಲಿಯ ಸಣ್ಣ ಪಾಠಗಳನ್ನು ಅಕ್ಷರ ಕಲಿಸುವಾಗ ಉಪಯೋಗಿಸಿಕೊಳ್ಳಬಹುದು. ಇದಾದ ಮೇಲೆ, ಎರಡನೆಯ ಘಟ್ಟವೆಂದರೆ ಎರಡನೆಯ ತಿಂಗಳು 50–100 ಶಬ್ದಗಳುಳ್ಳ ಮೊದಲಿನದರಿಗಿಂತ ಸ್ವಲ್ಪ ದೊಡ್ಡ 5–10 ಪಾಠಗಳನ್ನು ಕಲಿಸಬೇಕು. ಇದರಲ್ಲಿ ಹಳ್ಳಿಗಳಲ್ಲಿ ಪ್ರಚಲಿತವಿರುವ ಸಾಮಾನ್ಯ ಕಥೆಗಳು ಮತ್ತು ಅವರಿಗೆ ಪರಿಚಿತವಾಗಿರುವ ದೇವರು ಹಾಗೂ ಸ್ಥಾನಿಕ ವೀರರ ಬಗೆಗಿನ ಆಖ್ಯಾಯಿಕೆಗಳಿರಬೇಕು. ಪಂಚತಂತ್ರ ಕಥೆಗಳು, ಹಾಸ್ಯ ಸನ್ನಿವೇಶಗಳು, ಪತ್ರಬರೆಯುವುದು ಮುಂತಾದವುಗಳು ಇಲ್ಲಿ ಬರಬೇಕು. ಒಟ್ಟು ಪಾಠಗಳು 10ಕ್ಕೆ ಮೀರಬಾರದು. ವ್ಯಾಕರಣವು ಕಾರ್ಯಾತ್ಮಕ ರೀತಿಯದಿದ್ದು, ಪಾರಿಭಾಷಿಕತೆಯನ್ನು ಸಾಧ್ಯವಿದ್ದಷ್ಟೂ ಕಡಿಮೆ ಮಾಡಿ, ಕಲಿಯುವವರ ಭಾಷೆಯಲ್ಲಿ ಬಳಕೆಯಲ್ಲಿರುವ ಪ್ರಯೋಗಗಳನ್ನೇ ಉದಾಹರಣೆಯಾಗಿ ಬಳಸಿಕೊಳ್ಳಬೇಕು. ಇದರ ಸಂಗಡವೇ ಸಂಕಲನ, ಗುಣಾಕಾರಗಳ 10 ಗಣಿತ ಅಭ್ಯಾಸಗಳನ್ನು ಪ್ರಾರಂಭಿಸಬೇಕು. ಅದೇ ರೀತಿ, ಕಲಿಯುವವನ ಪರಿಸರ, ಅವನ ಕುಟುಂಬ, ಮೀನುಗಾರಿಕೆ, ಒಕ್ಕಲುತನ, ನೇಕಾರಿಕೆ ಮುಂತಾದ ತಂತ್ರಗಳನ್ನು ಕುರಿತ ಸಣ್ಣ ಸಣ್ಣ ಪಾಠಗಳನ್ನು ಪ್ರಾರಂಭಿಸಬೇಕು. ಮೂರನೆಯ ಘಟ್ಟದಲ್ಲಿ, ರಾಜ್ಯ ಹಾಗೂ ಕೇಂದ್ರ ಸರಕಾರಗಳ ಪ್ರಗತಿಪರ ಚಟುವಟಿಕೆಗಳನ್ನು ಕುರಿತ ಪಾಠಗಳು, ಅವರ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಧಾರ್ಮಿಕ ಜೀವನವನ್ನು ಕುರಿತ ಪಾಠಗಳನ್ನು ಪ್ರಾರಂಭಿಸಬೇಕು. ದಿನನಿತ್ಯದ ಜೀವನಕ್ಕೆ ಅವಶ್ಯಕವಾದ ಗಣಿತದ ಸಮಸ್ಯೆಗಳನ್ನು, ಆರೋಗ್ಯಕ್ಕೆ ಸಂಬಂಧಿಸಿದ ಸಣ್ಣ ಪಾಠಗಳು, ರೋಗಕಾರಣಗಳು, ಅವುಗಳ ಪರಿಹಾರವನ್ನು ಕುರಿತ ಸಣ್ಣಸಣ್ಣ ಪಾಠಗಳು, ಗೊಬ್ಬರ, ಬೆಳೆಗಳ ಹಾಗೂ ಪ್ರಾಣಿಗಳ ರೋಗಗಳನ್ನು ತಡೆಗಟ್ಟುವುದು ಮುಂತಾದವುಗಳನ್ನು ಕುರಿತ ಪಾಠಗಳನ್ನು ಪ್ರಾರಂಭಿಸಬೇಕು. ಪ್ರತಿವಾರ ಆ ವಾರದ ಅಭ್ಯಾಸದ ಔಪಚಾರಿಕ ಪರೀಕ್ಷೆ ಹಾಗೂ

ಮೌಲ್ಯಮಾಪನವಿರಬೇಕು. ಹೊರಗಿನಿಂದ ಒಬ್ಬ ಪರೀಕ್ಷಕ ತಿಂಗಳಿಗೊಮ್ಮೆ ಪರೀಕ್ಷೆ ತೆಗೆದುಕೊಳ್ಳಬೇಕು. ಶಿಕ್ಷಕ ಹಾಗೂ ವಿದ್ಯಾರ್ಥಿಗಳ ಸಹಕಾರದಿಂದ ಅಂತಿಮ ಪರೀಕ್ಷೆ ಬಾಹ್ಯ ಪರೀಕ್ಷಕನಿಂದ ನಡೆಯಬೇಕು. ಇಂಥ ಪ್ರೌಢವಯಸ್ಸಿನ ವಿದ್ಯಾರ್ಥಿಗಳಿಗೆ ದೈನಂದಿನ ಭತ್ತೆ, ಸರ್ಟಿಫಿಕೇಟ, ಬಹುಮಾನ ಇತ್ಯಾದಿ ಉತ್ತೇಜನಗಳಿರಬೇಕು.

ಕಾರ್ಯಾಚರಣೆ :

ಪ್ರೌಢ ಸಾಕ್ಷರತಾ ಯೋಜನೆಯ ಅತ್ಯಾವಶ್ಯಕ ಸಂಗತಿಗಳೆಂದರೆ, ಕಲಿಸಲು ಪಠ್ಯ ಸಾಮಗ್ರಿ ತಯಾರಿಸುವುದು ಹಾಗೂ ಶಿಕ್ಷಕರನ್ನು ತರಬೇತಿಗೊಳಿಸುವುದು. ಇಂಥ ಸಾಮಗ್ರಿಯನ್ನು ಸಿದ್ಧಪಡಿಸುವ ಮೊದಲು ಒಂದು ಗುಂಪನ್ನು ಆಯಾ ಪ್ರದೇಶಕ್ಕೆ ಕಳುಹಿಸಿ, ಅಲ್ಲಿಯ ರೂಪಗಳನ್ನು ಟೇಪ ರಿಕಾರ್ಡಿನಲ್ಲಿ ರಿಕಾರ್ಡ ಮಾಡಿಕೊಂಡು ಅಥವಾ ಅಂತರ್ರಾಷ್ಟ್ರೀಯ ಲಿಪಿಯ ಆಧಾರದ ಮೇಲೆ ಪಾಠಗಳನ್ನು ತಯಾರಿಸಬೇಕು. ಇಂಥ ಪರಿವೀಕ್ಷಣೆ ಒಂದು ವಾರ ನಡೆದರೂ ಎಲ್ಲ ಸ್ಥಳಗಳಿಗೆ ಹೋಗಬೇಕಾದುದರಿಂದ ಅದು ಅತಿ ವೆಚ್ಚದಾಯಕವಾಗುತ್ತದೆ. ಅದಕ್ಕಾಗಿ ನಮ್ಮ ಸೂಚನೆಯೆಂದರೆ, ಕಲಿಸುವುದನ್ನು ಬರವಣಿಗೆಯಿಂದ ಪ್ರಾರಂಭಿಸಬೇಕು. ಆದರೆ ಬರಹ ವ್ಯವಸ್ಥೆಯಿಲ್ಲದ ಭಾಷೆ, ಉಪಭಾಷೆಗಳ ವಿಷಯದಲ್ಲಿ ಇಂಥ ಕ್ಷೇತ್ರಕಾರ್ಯ ಅನಿವಾರ್ಯವಾಗುತ್ತದೆ. ಶಿಕ್ಷಕ ಕಲಿಸುತ್ತಿರುವಾಗಲೇ ತನ್ನ ಬಿಡುವಿನ ಅವಧಿಯಲ್ಲಿ ಭಾಷೆ-ಉಪಭಾಷೆಯ ರೂಪಗಳನ್ನು ಗಮನಿಸಿ, ಸ್ವತಂತ್ರ ಕ್ಷೇತ್ರಕಾರ್ಯ ಸಾಧ್ಯವಿಲ್ಲದಲ್ಲಿ, ಇಂಥ ರೂಪಗಳನ್ನು ತನ್ನ ಪಾಠಗಳಲ್ಲಿ ಸೇರಿಸಿಕೊಳ್ಳಬೇಕು. ಸಾಕ್ಷರತಾ ಯೋಜನೆಯನ್ನು ಪ್ರಾರಂಭಿಸುವ ಮೊದಲಿನ ಹಂತವೆಂದರೆ ಈ ರೀತಿ ಪಾಠ ಸಾಮಗ್ರಿಯನ್ನು ಸಿದ್ಧಪಡಿಸುವುದು. ಗಣಿತ ಹಾಗೂ ವಿಜ್ಞಾನಗಳಿಗೆ ಸಂಬಂಧಿಸಿದ ಕೆಲವು ಪಾಠಗಳಲ್ಲಿ ಆ ಹಳ್ಳಿಗಳಲ್ಲಿ ಸಿಗುವ ವಿವರಗಳನ್ನು ಸೇರಿಸಿ, ತಾನು ಪಾಠಗಳನ್ನು ಹೇಳುವಾಗ ಬಳಸಿಕೊಳ್ಳಬೇಕು. ಇಂಥ ಪಾಠಗಳ ಅನೇಕ ಪ್ರತಿಗಳನ್ನು ಮಾಡುವ ಸೌಲಭ್ಯವಿರಬೇಕು; ಹಾಗೂ ಈ ಪಾಠಗಳನ್ನು ಕಲಿಸಿದ ಅನುಭವದಿಂದ ಒಳ್ಳೆಯವೆಂದು ಸಿದ್ಧವಾದ ಮೇಲೆ ಅವನ್ನು ಮುದ್ರಿಸಬೇಕು. ದೇಶದ ತುಂಬೆಲ್ಲ ಬಳಕೆಯಾಗುವ ಅಕ್ಷರಪಟಗಳನ್ನು ಯಾವುದೇ ಭಾಷೆಯ ಅಕ್ಷರಗಳಿಲ್ಲದೆ ಮುದ್ರಿಸಿ, ಈ ವಿದ್ಯಾರ್ಥಿಗಳಿಗೆ ಹಂಚಬೇಕು.

ಇಂಥ ಶಿಕ್ಷಣ ಪ್ರಾರಂಭವಾಗುವುದಕ್ಕಿಂತ ಮೊದಲು ಕಲಿಸುವ ರೀತಿ, ಪರೀಕ್ಷಾ ವಿಧಾನ, ಆ ಜನರ ಸಾಮಾಜಿಕ, ಧಾರ್ಮಿಕ ಪರಿಸರಗಳಲ್ಲಿ ಬೆರೆಯುವ ವಿಧಾನ ಮುಂತಾದವುಗಳಲ್ಲಿ ಶಿಕ್ಷಕನಿಗೆ ಒಂದೆರಡು ವಾರ ತರಬೇತಿ ನೀಡಬೇಕು. ಇಂಥ ಶಿಕ್ಷಕನು ಕಲಿಸುವ ಒಂದು ಕೋರ್ಸು ಮುಗಿಸಿದ ಕೂಡಲೇ, ಅವನ ಪಾಠಗಳ ಮೌಲ್ಯಮಾಪನ, ವಿದ್ಯಾರ್ಥಿಯ ಅನುಭವಗಳು ಹಾಗೂ ಅವನ ಅನುಭವಗಳು ಇವುಗಳನ್ನು ಮೌಲ್ಯೀಕರಣ ಮಾಡಲು ಒಂದು ರಿಫ್ರೆಶರ ಕೋರ್ಸು ಇರಬೇಕು. ಇದರ ಅವಧಿ ಒಂದುವಾರ ಸಾಕು. ಮೂರು ತಿಂಗಳ ಕೋರ್ಸಿಗಾಗಿ ಮೂರು ವಾರಗಳ ಈ ರೀತಿಯ ತರಬೇತಿ ಅವಶ್ಯಕ.

ಪ್ರತಿ ಶಿಕ್ಷಕ 10-15 ವಿದ್ಯಾರ್ಥಿಗಳನ್ನೊಳಗೊಂಡ ಎರಡು ವರ್ಗಗಳನ್ನು ತೆಗೆದು ಕೊಳ್ಳಬೇಕು; ವರ್ಗಗಳಲ್ಲಿ ಒಂದು ಮುಂಜಾನೆ, ಮತ್ತೊಂದು ಸಂಜೆ ನಡೆಯಬೇಕು. ವಿದ್ಯಾರ್ಥಿಗಳಿಗೆ ಪಾಟಿ-ಪೆನ್ಸಿಲು, ಶಿಕ್ಷಕರಿಗೆ ಕರಿಹಲಗೆ-ಖಡು-ಪೆಟ್ರೋಮ್ಯಾಕ್ಸ ಮತ್ತು ಇತರ ಬೋಧನಾಸಾಮಗ್ರಿ ಮುಂತಾದವುಗಳನ್ನು ಒದಗಿಸಬೇಕು. ಮಹಿಳೆಯರಿಗೆ ಕಲಿಸಲು ಮಹಿಳಾಶಿಕ್ಷಕರೇ ಇರುವುದು ಒಳಿತು. ಶಿಕ್ಷಕನು ತಾನು ಕಲಿಸುವ ಗ್ರಾಮದಲ್ಲಿಯೇ ಇರುವುದು ಅಪೇಕ್ಷಣೀಯ. ಇದರಿಂದ ಗ್ರಾಮದ ಚಟುವಟಿಕೆಗಳಲ್ಲಿ ಅವನು ಭಾಗ ವಹಿಸಿ, ಅವರೊಡನೆ ಬೆರೆಯಲು ಅನುಕೂಲವಾಗುತ್ತದೆ.

ಶಿಕ್ಷಕರ ತರಬೇತಿ :

ಭಾಷಾಶಾಸ್ತ್ರಜ್ಞರು, ಸಾಮಾಜಿಕ ಮಾನವಶಾಸ್ತ್ರಜ್ಞರು ಹಾಗೂ ಶಿಕ್ಷಕರು ಮೂರು ವಾರಗಳ ತರಬೇತಿಯಲ್ಲಿ ಭಾಗವಹಿಸಬೇಕು. ತರಬೇತಿ ಹೊಂದುವ ಶಿಕ್ಷಕರಿಗೆ ಈ ಅವಧಿಯಲ್ಲಿ ಸಮಾನ ವಿಷಯ ಸಾಮಗ್ರಿಗಳನ್ನೊದಗಿಸಬೇಕು. ರಿಫ್ರೆಶರ ಕೋರ್ಸಿನ ನಿರ್ದೇಶಕ ತತ್ವಗಳನ್ನು ಸಿದ್ಧಪಡಿಸುವ ಅವಶ್ಯಕತೆಯೂ ಇಲ್ಲಿದೆ. ರಿಫ್ರೆಶರ ಕೋರ್ಸಿನಲ್ಲಿ ಈ ಶಿಕ್ಷಕರಿಗೆ ಕೋರ್ಸಿಗೆ ಬೇಕಾಗುವ ಸಾಮಗ್ರಿಯನ್ನು ತಯಾರಿಸುವ ವಿಶಾಲ ತಳಹದಿಯ ತತ್ವಗಳನ್ನು ತಯಾರಿಸಬೇಕು.

ಆಡಳಿತ :

ಆಡಳಿತಸಂಯೋಜನೆ ಹಾಗೂ ನಿಯಂತ್ರಣ ನೇರವಾಗಿರಬಾರದು. ತರಬೇತಿ ಹೊಂದಿದ ಶಿಕ್ಷಕನಿಗೆ ಅವಶ್ಯಕ ಹಣವನ್ನು ಖರ್ಚುಮಾಡುವ ಅಧಿಕಾರವಿರಬೇಕು. ತನ್ನ ಕ್ಲಾಸು ನಡೆಸಲು ಅವಶ್ಯವಾದ ಹಣಕಾಸಿನ ಬಗೆಗೆ ಮೇಲಿನವರ ಮಂಜುರಾತಿಯನ್ನು ಕಾಯುತ್ತ ಕೂಡ್ರುವುದು ಸರಿಯಲ್ಲ. ಪ್ರತಿ ಇಪ್ಪತ್ತು ಶಿಕ್ಷಕರಿಗೊಬ್ಬರಂತೆ ಸಹಾಯಕ ಸಂಯೋಜಕನಿರಬೇಕು; ಅವನು ತಿಂಗಳಿಗೊಮ್ಮೆ ವರ್ಗಗಳನ್ನು ಸಂದರ್ಶಿಸಿ, ಶಿಕ್ಷಕನ ಸಹಕಾರದಿಂದ ವರ್ಗಗಳಲ್ಲಿ ಭಾಗವಹಿಸಬೇಕು; ಅಲ್ಲದೆ ಆ ವರ್ಗದ ಬಾಹ್ಯ ಪರೀಕ್ಷಕನಾಗಿ ಅದರ ಮೌಲ್ಯಮಾಪನ ಮಾಡಬೇಕು. ಇಪ್ಪತ್ತು ಸಹಾಯಕ ಸಂಯೋಜಕರಿಗೆ ಒಬ್ಬ ಉಪ-ಸಂಯೋಜಕನಿರಬೇಕು. ಪ್ರತಿ ಕ್ಯಾಂಪಿನ ಕೆಲಸದ ಬಗೆಗೆ ಹಾಗೂ ಪಾಠಸಾಮಗ್ರಿಯ ರಚನೆಯ ಪ್ರಗತಿಯ ಬಗೆಗೆ ಅವನು ಸಹಾಯಕ ಸಂಯೋಜಕರಿಂದ ರಿಪೋರ್ಟ ಪಡೆಯಬೇಕು. ಆರ್ಥಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ವಿವರಗಳ ಸಂಗ್ರಹಣ ಕಾರ್ಯದ ಮೇಲ್ವಿಚಾರಣೆಯೂ ಅವನ ಕೆಲಸ. ಸಾಕ್ಷರತಾ ಕಾರ್ಯಕ್ರಮಗಳಿಗೆ ಸಹಾಯ-ಸಹಕಾರ ಪಡೆಯಲು ಅವನು ಪಂಚಾಯತ ಹಾಗೂ ಜಿಲ್ಲಾ ಅಧಿಕಾರಿಗಳೊಡನೆ ಸಂಪರ್ಕ ಹೊಂದಬೇಕು. ಸಾಮಾನ್ಯವಾಗಿ, ಪ್ರತಿ ಜಿಲ್ಲೆಗೆ ಒಬ್ಬ ಉಪ-ಸಂಯೋಜಕ ಹಾಗೂ ನಾಲ್ವತ್ತು ಸಹಾಯಕ ಸಂಯೋಜಕರಿರಬೇಕು. ಜಿಲ್ಲೆಯಲ್ಲಿ 800 ಶಿಕ್ಷಕರು 3 ತಿಂಗಳಲ್ಲಿ 8000-12000 ಜನರಿಗೆ, ಅವರು ಎರಡು ಕ್ಲಾಸು ತೆಗೆದುಕೊಂಡರೆ 16000-24000 ಜನರಿಗೆ ಶಿಕ್ಷಣ ಕೊಡಬಹುದು. ಪ್ರತಿರಾಜ್ಯದಲ್ಲಿ ಒಬ್ಬ ಸಂಯೋ

ಜಕ ಅಧಿಕಾರಿಯೂ ಅವನಿಗೆ ಸಹಾಯ ಮಾಡಲು ಇಬ್ಬರು ಸಹ-ಸಂಯೋಜಕರೂ ಇರಬೇಕು. ಇವರು ಕಾರ್ಯಕ್ರಮ ನಿರ್ವಹಣೆಯಲ್ಲಿ ಸಹಾಯಕರು. ಸಿಬ್ಬಂದಿ-ಸಾಮಗ್ರಿ ಒದಗಿಸುವುದು, ಶಿಕ್ಷಕರ ಈ ತರಬೇತಿಗೆ ಅವಶ್ಯಕ ಹಣಕಾಸು ದೊರಕಿಸುವುದು, ಹಾಗೂ ನಿಯಮಿತವಾಗಿ ಕಾರ್ಯಕ್ರಮ ನಡೆಯುವಂತೆ ನೋಡಿಕೊಳ್ಳುವುದು ಇವರ ಹೊಣೆ. ಸಾಕ್ಷರತಾಪ್ರಸಾರದಲ್ಲಿ ಹೆಸರು ಪಡೆದವರೂ, ಹಾಗೂ ಅದಕ್ಕಾಗಿ ಸಮರ್ಪಣ ಭಾವ ದಿಂದ ದುಡಿದವರೂ ಆದ ವಿದ್ವಾಂಸರನ್ನು ಪ್ರತಿರಾಜ್ಯದಲ್ಲಿ ಸಂಯೋಜಕಾರಿಗಳಾಗಿ ನಿಯಮಿಸಬೇಕು. ಯಾಕೆಂದರೆ, ಇಡೀ ರಾಜ್ಯದ ಸಾಕ್ಷರತಾಯೋಜನೆಯ ಯಶಸ್ಸಿಗೆ ಅವರೇ ಮೂಲಾಧಾರ. ಅವರು ವಯಸ್ಕಶಿಕ್ಷಣಸಮಿತಿಯಲ್ಲಿರಬಹುದು, ಅಥವಾ ಸರಕಾರ ಇಲ್ಲವೆ ವಿಶ್ವವಿದ್ಯಾಲಯ ಶಿಕ್ಷಣವಿಭಾಗದ ವ್ಯಕ್ತಿಗಳಾಗಿರಬಹುದು. ಆದರೆ ಅವರು ಸಾಕ್ಷರತಾ ಕಾರ್ಯಕ್ಕಾಗಿ ದುಡಿದು ಹೆಸರು ಪಡೆದಿರಬೇಕು. ಸಹ-ಸಂಯೋಜಕ ರನ್ನು ಸರಕಾರದ ವಿಭಾಗಗಳಿಂದ ಪಡೆಯಬಹುದು. ಇವರು ಹಣಕಾಸು ಹಾಗೂ ದೈನಂದಿನ ಆಡಳಿತ ನಡೆಸಿಕೊಂಡು ಹೋಗಬೇಕು. ಉಪ-ಸಂಯೋಜಕರನ್ನು ವಿಶ್ವ ವಿದ್ಯಾಲಯಗಳಿಂದ ತೆಗೆದುಕೊಳ್ಳಬಹುದು. ಸಹಾಯಕ ಸಂಯೋಜಕರನ್ನು ಶಾಲೆಗಳಿಂದ ತೆಗೆದುಕೊಳ್ಳಬಹುದು. ಶಿಕ್ಷಣ ಕೊಡುವ ಶಿಕ್ಷಕರನ್ನು ಪ್ರಾಥಮಿಕ ಶಾಲೆಗಳಿಂದ ಇಲ್ಲವೆ ನೌಕರಿ ಇಲ್ಲದ ಪದವೀಧರರನ್ನು ತೆಗೆದುಕೊಳ್ಳಬಹುದು. ಇಲ್ಲವೆ ಸೂಟಿ ದಿನಗಳಲ್ಲಿ ಕಾಲೇಜ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಬಹುದು. ರಾಷ್ಟ್ರಮಟ್ಟದಲ್ಲಿ ಕೇಂದ್ರ ಸಂಯೋ ಜಕ ಅಧಿಕಾರಿಯಿರಬೇಕು. ಧೋರಣೆ ರೂಪಿಸುವುದು, ಹಣಕಾಸು ಒದಗಿಸುವುದು, ಮತ್ತು ರಾಜ್ಯ ಹಾಗೂ ಸ್ವಾಯತ್ತ ಸಂಸ್ಥೆಗಳ ಮೂಲಕ ಕಾರ್ಯಕ್ರಮವನ್ನು ಜಾರಿಗೆ ತರುವುದು ಅವನ ಕೆಲಸ. ಅವನು ಸಂಯೋಜನೆ ಹಾಗೂ ಕಾರ್ಯದ ವಿಶಿಷ್ಟ ಸಾಮರ್ಥ್ಯ ಹೊಂದಿದ್ದು, ಪ್ರಸಿದ್ಧ ಶೈಕ್ಷಣಿಕ ಆಡಳಿತಗಾರನಾಗಿರಬೇಕು.

(ಕೇಂದ್ರ ಸರಕಾರ ಈಗಾಗಲೇ ಹಣಕಾಸನ್ನು ಎಲ್ಲ ರಾಜ್ಯಗಳಿಗೂ ಅನುದಾನ ಮಾಡಿದ್ದು, ಆ ವಿಷಯವನ್ನು ಈಗ ವಿವೇಚಿಸುವ ಅವಶ್ಯಕತೆ ಉಳಿದಿಲ್ಲ. ಕಾರಣ, ಆ ವಿಷಯವನ್ನು ಇಲ್ಲಿ ವಿವೇಚಿಸಿಲ್ಲ.)

ಈ ಯೋಜನೆಯ ಅನ್ಯಲಾಭಗಳು :

ತೀವ್ರ ಕಾರ್ಯಕ್ರಮವನ್ನು ಹಮ್ಮಿಕೊಂಡು, ಸಮರ್ಪಣಭಾವದಿಂದ ಅದನ್ನು ಕೃತಿಗಿಳಿಸಿದರೆ, ಸಾಕ್ಷರತಾ ಪ್ರಸಾರ ಮಾಡುವುದರ ಜೊತೆಗೆ ಪ್ರತಿಗ್ರಾಮದಲ್ಲಿ ಸಂಬಂಧ ಪಟ್ಟ ಶಿಕ್ಷಕರು ಭಾಷೆ, ಸಂಸ್ಕೃತಿ, ಸಮಾಜ, ಆರ್ಥಿಕ ಅಭಿವೃದ್ಧಿ, ಕೃಷಿ ಹಾಗೂ ವೃತ್ತಿ ಚಟುವಟಿಕೆಗಳ ವಿವರಗಳನ್ನು ಸಂಗ್ರಹಿಸಬಹುದು. ಅವರಿಗೆ ಒದಗಿಸಿದ ಯೋಗ್ಯ ಪ್ರಶ್ನಾವಳಿಗಳನ್ನು ತುಂಬಿ ಕಳಿಸುವುದರ ಮೂಲಕ ಅವರು ಆರ್ಥಿಕ, ಸಾಮಾಜಿಕ ಹಾಗೂ ಜನಸಂಖ್ಯೆಯ ಗಣತಿ ಮಾಡಿದಂತಾಗುತ್ತದೆ. ಇಂಥ ವಿವರಗಳನ್ನು ಸಂಗ್ರಹಿಸಲು ಹೆಚ್ಚಿನ ವೆಚ್ಚವೇನೂ ಬರುವುದಿಲ್ಲ. ಅದರ ವಿವರಗಳು ಮಾತ್ರ ವಿದ್ವತ್ ಪ್ರಪಂಚ ಹಾಗೂ ಸರಕಾರ ಎರಡಕ್ಕೂ ಅಮೂಲ್ಯ ಸಾಮಗ್ರಿಗಳಾಗುತ್ತವೆ.

ಪ್ರಚಾರ ಅವಶ್ಯ :

ಸಾಂಪ್ರದಾಯಕ ಬುದ್ಧಿಯ ಹಳ್ಳಿಗನು ಆತನಿಗೆ ಲಾಭದಾಯಕ ಕಾರ್ಯಕ್ರಮ ಗಳಿದ್ದರೂ ಸಂಶಯ ದೃಷ್ಟಿಯಿಂದಲೇ ನೋಡುತ್ತಾನೆ. ಅದಕ್ಕಾಗಿ ಸಾಕ್ಷರತಾ ಯೋಜನೆಯನ್ನು ಪ್ರಾರಂಭಿಸುವುದಕ್ಕಿಂತ ಮೊದಲು ಅನಕ್ಷರಸ್ಥರಿಗಾಗುವ ತೊಂದರೆ, ಸುಶಿಕ್ಷಿತರಿಗೆ ಒದಗುವ ಅಭ್ಯುದ್ಧಿಯ ಅನುಕೂಲತೆಗಳು, ಸುಶಿಕ್ಷಿತ ಹಳ್ಳಿಗನಿಗೆ ಆಗುವ ಆರ್ಥಿಕ ಅನುಕೂಲತೆ, ಅಶಿಕ್ಷಿತ ಹಳ್ಳಿಗನಿಗೆ ಮಾಡುವ ಮೋಸ, ಮಕ್ಕಳಿಗೆ ಶಿಕ್ಷಣ ಕೊಡುವುದರ ಮಹತ್ವ, ಶಿಕ್ಷಣದಿಂದ ಕುಟುಂಬ ಜೀವನದಲ್ಲಿ ಆಗುವ ಮಾರ್ಪಾಡು ಮುಂತಾದವುಗಳನ್ನು ಸಮೂಹ ಮಾಧ್ಯಮಗಳ ಮೂಲಕವೂ, ಚಿತ್ರಪಟಗಳ ಮೂಲಕವೂ ಹಳ್ಳಿಗರಿಗೆ ಬಿಂಬಿಸಬೇಕು. ಈ ರೀತಿ ಸಾಕ್ಷರತಾ ಯೋಜನೆಯನ್ನು ಪ್ರಾರಂಭಿಸುವುದ ಕ್ಕಿಂತ ಮುಂಚೆ ಅನುಕೂಲ ವಾತಾವರಣವನ್ನು ನಿರ್ಮಿಸಬೇಕು. ಹಣಕಾಸಿನ ಪ್ರೋತ್ಸಾ ಹಕ್ಕಿಂತ ಅವರ ಮನಃಪ್ರವೃತ್ತಿಯ ಬದಲಾವಣೆ ಅವರನ್ನು ಇಂಥ ಶಿಕ್ಷಣಕ್ಕೆ ಬೇಗ ಪ್ರೇರೇಪಿಸುತ್ತದೆ.

ನೈಶಿಷ್ಟ್ಯಪೂರ್ಣ ಗ್ರಾಮೀಣ ಕ್ಯಾಂಪನ್ನು ಕೆಳಗಿನಂತೆ ಸಂಘಟಿಸಬಹುದು : **ಮೊದಲನೆಯ ಘಟ್ಟ**– 2–3 ದಿನಗಳ ವರೆಗೆ ಸಾಕ್ಷರತಾ ಪ್ರಚಾರ ಚಿತ್ರಪಟ ಗಳನ್ನೂ ಗ್ರಾಮ ಮುಖಂಡರೊಡನೆ ಪ್ರಚಾರವನ್ನೂ ಸಾಗಿಸಬೇಕು. ಇದರ ಕಾರಣ ವಾಗಿ ಹಳ್ಳಿಗರೇ ಶಿಕ್ಷಕರನ್ನು ಕಲಿಸಲಿಕ್ಕೆಂದು ಕರೆಯಬಹುದು. **ಎರಡನೆಯ ಘಟ್ಟ**– ಶಿಕ್ಷಕ ಹಳ್ಳಿಗೆ ಹೋಗಿ ಒಂದೆರಡು ದಿನ ಇದ್ದು, ಸ್ಥಾನವನ್ನು ನಿರ್ದಿಷ್ಟಪಡಿಸಿ, ಗ್ರಾಮಸ್ಥ ರೊಡನೆ ಸ್ನೇಹ ಬೆಳೆಸಿ, ಅಲ್ಲಿಯ ಭಾಷೆ ಅಥವಾ ಉಪಭಾಷೆಯ ಟಿಪ್ಪಣೆ ಮಾಡಿಕೊಂಡು ಗ್ರಾಮದ ಮುಖಂಡನ ಮೂಲಕ ವರ್ಗವನ್ನು ಉದ್ಘಾಟಿಸಬೇಕು. ಆ ಹಳ್ಳಿಯ ಜನರ ಹೆಸರುಗಳನ್ನು ಬರೆಯುವ ಪರಿಮಿತ ಪ್ರಾರಂಭಿಕ ಗುರಿಯೊಡನೆ ತನ್ನ ವರ್ಗವನ್ನು ಪ್ರಾರಂಭಿಸಬೇಕು. ಇದರಿಂದ, ಬರೆಯುವಲ್ಲಿ ಅವರ ಆಸ್ಥೆ ಬೆಳೆಯುತ್ತದೆ. ಸಾಂದರ್ಭಿಕ ವಾಗಿ, ವರ್ಗದಲ್ಲಿ ಓದು–ಬರಹ ಕಲಿತರೆ ಆಗುವ ಲಾಭಗಳನ್ನು ಕುರಿತ ಕತೆಗಳನ್ನೂ ಅದರಿಂದ ಅವರ ಮಕ್ಕಳಿಗಾಗುವ ಅನುಕೂಲಗಳನ್ನೂ ಹೇಳುತ್ತಿರಬೇಕು. **ಮೂರನೆಯ ಘಟ್ಟ**– ಒಂದೆರಡು ದಿವಸಗಳಲ್ಲಿ ಸಾಮಾನ್ಯ ಅಕ್ಷರವ್ಯವಸ್ಥೆಯನ್ನು ಪ್ರಾರಂಭಿಸಬೇಕು. ಹಾಗೂ ಈಗಾಗಲೇ ತನಗೆ ಒದಗಿಸಿದ ಸಾಮಗ್ರಿಯ ಆಧಾರದ ಮೇಲೆ ಶಿಕ್ಷಕನು ಪಾಠ ಗಳನ್ನು ಪ್ರಾರಂಭಿಸಿ, ಅದರ ಪ್ರತಿಕ್ರಿಯೆಯನ್ನು ಗಮನಿಸಬೇಕು. **ನಾಲ್ಕನೆಯ ಘಟ್ಟ** : ಸಹಾಯಕ ಸಂಯೋಜಕ ಹಾಗೂ ಇತರರೊಡನೆ ಮೌಲ್ಯಮಾಪನ ವರ್ಗವನ್ನು ಸಂಘಟಿಸುವಲ್ಲಿ, ಕಲಿಸುವುದನ್ನು ಮುಂದುವರಿಸುವಲ್ಲಿ ಹಾಗೂ ಮೌಲ್ಯಮಾಪನ ಮಾಡು ವಲ್ಲಿ ಗ್ರಾಮಸ್ಥರ ಸಹಕಾರ ಪಡೆಯುವಲ್ಲಿ ಅವನಿಗೆ ದೊರೆತ ಯಶಸ್ಸಿನ ಮೇಲೆ ಇಡೀ ಯೋಜನೆಯ ಯಶಸ್ಸು ಅಡಗಿದೆ.

****

ಶೆಟವಿ ಹಾಡು

● ಶಂಕರಗೌಡ ಬಿರಾದಾರ

ಪೂರ್ವದ ಗೆರಿ ಪೂರ ಇತರಿಗೆ ತಪ್ಪದು
ನರಮನುಷರಿಗಿದು ಪಾಡೇನು
ಪರಮಾತ್ಮಗ ಇದಿ ಬಂದು ಕಾಡಿಲ್ಲೇನು
ಹರಿಶ್ಚಂದ್ರ ಕಾಯ್ದ ಸುಡುಗಾಡವನು
ಮೂರುಲೋಕ ಬರೆಯುವಂತ ಶೆಟವಿಗಿ ತನ್ನ
ಮಗಳಾಯುಷ್ಯ ತಿಳಿಲಿಲವೇನುಽಽ । ಬರದ ಲಿಖಿತವನುಽಽ ॥ ೧ ॥

ಹರಿಹರ ಬ್ರಹ್ಮಗದಾರಿಗೆ ಬಿಟ್ಟಿಲ್ಲ
ಇದಿ ಬಂದು ಕಾಡಿತು ತಿಳಿಗೊಡದೆ
ಕಿನ್ನರಿ ಕಿಂಪುರುಷರ ಪ್ರಾಲಬ್ಧ
ಅಷ್ಟದಿಕ್ಪಾಲಕರಿಗಾರ ಸೂರ್ಯಚಂದರ
ಬ್ರಹ್ಮ ತನ್ನ ಮಗನ ಆಯುಷ್ಯ ಬರದಾನ
ಲಗ್ನಸಂಭ್ರಮದೋಳು ಸಾವುದಾಽಽ । ತಿಳಿದ ಮುಂದಿಂದಾಽಽ ॥ ೨ ॥

ಹನ್ನೆರಡ ವರಸ ತಪ ಮಾಡಿ ಸಾಂಭಗ
ಶೆಟವಿ ಹೆಣ್ಣಮಗಳ ಬೇಡಿದಾಳ
ಪಲ್ಲಂಗಧರನೆ ಕೊಡಬೇಕ ಇಂದ
ಚಿಲ್ಮಾಯಿ ಚಲ್ವಿಕಿರೂಪ ಹೆಚ್ಚಿಂದಾ
ಕೊಡತೇನಂತ ಸಾಂಭ ವರವ ಕೊಟ್ಟಾನ
ತಿರಗಿ ಬಂದಾಳೋ ಬಹಳ ಖುಸಿಯದಿಂದಽಽ । ಸಂತೋಷದಿಂದಽಽ ॥ ೩ ॥

ಸಾಂಭನ ಕೃಪದಿಂದ ದಾರಿಗೆ ತಿಳಿಯದೆ
ಬಂಕಿ ಕಾಡ್ಯಾವ ಪರಿಪರಿದಿಂದ
ಆಕಿ ಬಸರವಾದಳು ಅಲ್ಲಿಂದ
ನೌಮಾಸ ತುಂಬಿ ಹಡದಾಳ ಇಂದ
ಹುಟ್ಟಿದ್ಯೆದ ದಿವಸಕ ಆಯುಷ್ಯ ಬರದಾಳ
ಎಷ್ಟಂತ ಕಲ್ಪಣ ತಗತಗದಾऽऽ । ಆಕಿ ಪೂರ್ವದಾऽऽ ॥ ೪ ॥

ಆಯುಷ್ಯ ಬರದಾಳ ನಿರ್ಮಲಮಾಡಿ
ದೈವ ಬಲು ಖೋಡಿ ಶೆಟವಿಗಿ ತಿಳಿಲಿಲऽऽ
ತನ್ನ ಮಗಳದು ಬರದಾಳಲ್ಲಾऽऽ
ಬೆಳವುತಾಳ ದಿನದಿನಕ ಶಿವನ ಕವತೂಕ
ಕೇಳಿರಿ ಸುಳ್ಳಲ್ಲಾऽऽ ಪರವುದ್ದಾದಳು ಸಖಿಮಿಲऽ
ಹುಡುಗರಗೂಡ ಬಣದೋಣಕಿ ಹಿಡಿದು
ಆಡುತ್ತ ನಡದಿತ್ತ ಅದು ಹಗಲೆಲ್ಲಾ
ರೂಪದಲ್ಲಿ ಇದ್ದಳು ಮಿಗಿಲಾऽऽ ॥ ೫ ॥

ಆಕಿ ಆಟನೋಡಿ ತಾಯಿಗೆ ಸರಿಯಿಲ್ಲ
ಅಳತಾಳ ಮಗಳ ಮಾರಿಯ ನೋಡಿ
ಹಗಲಿರಳು ಮಾಡುವೆ ಸಂತಾಪವನು
ಚಿಂತಿಯೊಳಗೆ ಸಣ್ಣ ಈ ದೇಹವನು
ಮೂರುಲೋಕ ಬರೆಯುವಾತ ಶೆಟವಿಗಿ ತನ್ನ
ಮಗಳಾಯುಷ್ಯ ತಿಳಿಲಿಲ್ಲವೇನುऽऽ । ಬರದ ಲಿಖಿತವನುऽऽ ॥ ೬ ॥

॥ ಒಂದು ಚೌಕ ॥

ಹೊರಗಿಂದ ಬರವುತ ಅಳಲುತ ಬಳಲುತ
ನೋಡಿ ನೋಡಿ ಕಣ್ಣೀರ ಸುರಿಸುತ
ಮಗಳ ಏನ ಪಡದ ಬಂದಿ ನೀ ಇಲ್ಲಿ
ತಾಯಿ ಅಳುದು ಕೇಳಿ ಮಗಳ ಕೇಳತಾಳ
ಹೇಳಿಕೊಡವ ಇದರ ನೆಲಿಕುಲಿऽऽ । ಯಾಕ ಅಳವುತಲಿऽऽ ॥ ೭ ॥

ಮಗಳ ಹೇಳತೀನಿ ಕೇಳ ನಿಂದ
ನಿನ್ನದೈವದಂದು ಕೇಳ ಮನಸಿಟ್ಟು
ಸಮಗಾರ್ನ ಹೋಗುದು ಮನಿಬಿಟ್ಟು
ನಿನ್ನ ಹೊಟ್ಟಿಲಿ ಹುಟ್ಟಿದಂಥ ಮಗನ
ಭೋಗಿಸಬೇಕು ಹೇಳತೀನಿ ಸ್ಪಷ್ಟ
ಬಸರಾಗಿ ಹಡದು ಘಟ್ಟಿಮುಟ್ಟssನ ॥ ೮ ॥

ಹನ್ನೆರಡ ವರುಸ ಮದಗಜಗಮಣಿ
ಪ್ರಾಯಕ ಬಂದಳು ಚಣದಲಿ
ಮಗಳ ಮಾರಿ ನೋಡಿ ತಾಯಿ ಅಳುತಲಿ
ಎದಿ ಭುಗಿಲಭುಗಿಲಂಬುದು ಕಾಣುತಲಿ
ಕೊಟ್ಟ ಸಾಂಭ ನನ್ನ ಗುರಿ ಮಾಡಿದನು
ಎಷ್ಟಂತ ಇಕಿ ದೈವವನು ಯಾರಿಗ್ಹೇಳಲಿss । ನೆಟ್ಟಗ ಬರಿಯುದಕss ॥ ೯ ॥

ಎಟ್ಟಿ ಯಜ್ಞ ಮಾಡಿದರು
ಕೆಟ್ಟದಾದಿತ ಇಕಿ ಫಣಿಯಲ್ಲಿss ಮಗಳ
ಹುಟ್ಟುತ ಸಾಯಲಿಲ್ಲ ಹ್ಯಾಂಗ ಮಾಡಲಿs
ಈ ಅದೃಷ್ಟಾ ಏನಾದಿತ ಜಗದಲ್ಲಿ
ದತ್ತಗೇಡಿ ದೈವ ಖೊಟ್ಟಿನಾದಿತೋ
ತಪ್ಪ ತಾಸ ಇಲ್ಲೋ ಫಣಿಯಲ್ಲಿss । ಪೃಥ್ವಿಯ ಮ್ಯಾಲೆss ॥ ೧೦ ॥

ದಾರೇನು ಮಾಡ್ಯಾರ ನಿನ್ನದೈವಕ
ಬ್ರಹ್ಮನು ಬರೆಯುದಕ ಅಧಿಕಾರ
ಅಂವ ಹೇಳಿದಂಗ ಬರದೆನು ಹಣಿಬಾರ
ನಿನ್ನ ಹಿಂದಿನ ಕರ್ಮವ್ವ ಮಜಪೂರ
ಮಾಡಿದಟ್ಟ ಉಣವುದ ಬೇಡಿದಟ್ಟ ಬರುವುದು
ಖೋಡಿ ನಿನ್ನ ದೈವ ಸುಮಾರss । ಬಿಡಿಸವರ್‍ಯಾರss ॥ ೧೧ ॥

ತಾಯಿ ಆಡುದು ಕೇಳಿ ತಾನೆ ನಡದಾಳ
ಕಾನನ ಗುಂಟ ನಡುವಳ
ಮಾನವ ಮೊದಲು ಇಲ್ಲದಲ್ಲಿ ಯಾರು
ಸ್ವಾಮಿ ಮುನದ ಅಂತಾಳ ನನಗ ಭಗವಾನಾ
ನಾಯಿ ನರಿಗೋಳು ಹುಲಿಕರಡಿಗಳು
ಮೈಮ್ಯಾಲ ಬರತಾವ ಅಂವಸರss । ಇಲ್ಲ ಆಸರಾss ॥ ೧೨ ॥

ಘೋರ ಅರ್ಣ್ಯಾಣಬಿಟ್ಟು ಘೋರಾಡ್ತ ನಡದಾಳ
ಊರ ಕಂಡಳು ಒಂದು ದೊಡ್ಡ ಶಹರ
ಅಲ್ಲಿ ಹರವುದು ಮಲಗಂಗ ಸಾಗರ
ನಾರಿ ನದಿದಂಡಿಮ್ಯಾಲ ನಿಂತಕೇರSS
ಸ್ನಾನ ಮಾಡಲಿಕೆ ಸಮುಗಾರ ಬಂದಿದ
ನೋಡಿದಾನ ನಿಂತು ಕಣ್ಣಾರಾSS । ಮನಸ ಹೊಯ್ತು ಪೂರಾSS ॥ ೧೩ ॥

ಮಲಕ ತಗದು ಹಾಕತಾನ ಚೌಕ
ಮಾಡತಾನ ಜಳಕ ಮನಸ ಆಕಿಮ್ಯಾಲSS
ನೀ ಯಾವೂರಕಿ ಅಂತಾನ ಬಾಲಿ
ನೀ ಕೇಳಬ್ಯಾಡಪ್ಪ ನನ್ನ ಕೆಣಕಿ
ಒಂದೂರಕ್ಕಿ ಬಂದಿನಿ ನಾ ಇಲ್ಲಿ
ತಾಯಿ ತಂದಿ ನಮುಗ ಇಲ್ಲದಲ್ಲಿSS
ಮದವಿ ಮಾಡಿ ಕೊಟ್ಟಿಲ್ಲ ಹಡದವರು
ಸತ್ತುಹೋಗ್ಯಾರ ಕೇಳರಿ ಸೆಲಿಕುಲಿSS । ನದಿ ಜೀಳಲಿಕ್ಕ ಬಂದೀನಿಲ್ಲಿSS ॥ ೧೪ ॥

ಯಾತ್ರಕಿ ನಾರಿ ನೀನು ಕುಲವೇನ ಚಲವೇನ
ಕೇಳ್ತೀನಿ ಹೇಳಬೇಕ ಜಾತಿ
ಆಕಿ ಅಂತಾಳ ಶಿವಶಾರ್ದಕಿ ನಾನು
ಭ್ರಾಂತಿ ಬಡದ ನಿಂತ ಸಮುಗಾರವನು
ಮೂರು ಲೋಕ ಬರೆಯುವಂತ ಶಟವಿಗಿ ತನ್ನ
ಮಗಳಾಯುಷ್ಯ ತಿಳಿಲಿಲ್ಲವೇನುSS । ಬರದ ಲಿಖಿತವನುSS ॥ ೧೫ ॥

[ಎರಡು ಚೌಕ]

ಕುಲದಲ್ಲಿ ಯಾರು ತಗೆಂಗಿಲ್ಲ
ನಾ ಲಗ್ನ ಆಗಲ್ದೆ ಹಂಗೆ ಇದ್ದೇನಲ್ಲ
ನಮ್ಮನಿಗಿ ಬಾರ ನೀ ಇನ್ನಮ್ಯಾಲಾ
ಮುತ್ತು ರತ್ನಗಳು ಮತ್ತ ಮಾಣಿಕಗಳು
ವಸ್ತ್ರಾ ಬಂಗಾರೊಡಿ ಮೈಮ್ಯಾಲೇನು ಕಡಿಮಿಲ್ಲ
ಸ್ವಸ್ತಾಗಿರು ನಡಿ ನನಮನಿಯಲ್ಲಿSS । ಭಯುವಿಲ್ಲಲ್ಲಿSS ॥ ॥ ೧೬ ॥

ಮನ್ನುಸಿ ಆಕಿನ್ನ ಕರಕೊಂಡು ನಡದಾನ
ತನ್ನ ಮನಿಗಿ ಹೊಗಿದ್ದಾನಲ್ಲಿ
ಸೊನ್ನಿ ಮಾಡಿ ಮನ್ಯಾಗ ಹೇಳಿದನಲ್ಲಾss
ತನ್ನ ಜಾತಿ ಆಕಿಗಿ ತಿಳಿಗೊಡಲಿಲ್ಲ
ಹ್ವಾದ ಚಣದಲಿ ಲಗ್ನವಾದನು
ತೀವ್ರದಿ ಆದನು ಖುಸಿಯಾಲಾss । ಅದು ತಪ್ಪಲಿಲ್ಲಾ ॥ ॥ ೧೭ ॥

ವರಸ ಆರ ತಿಂಗಳ ಇರವ ಹೊತ್ತಿಗಿ
ಬಸರಾಗಿ ಗಂಡಮಗನ ಹಡದಾಳಲ್ಲs
ಆನಂದದಿಂದ ಇದ್ದಾಳು ಭಯವಿಲ್ಲ
ಆಕಿಗೊಂದು ಮನಿಕೊಟ್ಟುs
ಬ್ಯಾರೊಂದು ಮನಿಯಾಗss
ಹೋಗಿ ಮುಚ್ಚಿ ಹೊಲಿಯುವನಲ್ಲss । ದಿನಗಳೆಯುವನಲ್ಲss ॥ ॥ ೧೮ ॥

ಐದು ವರುಸದವನು ಮಗನಾದ
ತಂದಿ ಹಿಂದ ಹ್ವಾದ ಒಂದೆ ಹಿಂಬಾಲಾ
ಅಪ್ಪ ಹೊಲವುದ ನೋಡಿದನಲ್ಲಾss
ತಾನು ತಕ್ಕೊಂಡಾನು ಒಂದು ಜೋಡಾ
ಬಗಲಾಗ ಹಿಡಕೊಂಡು ಮನಿಗಿ ಬಂದಾನಲ್ಲಾss
ತಮ್ಮ ತಾಯಿಗಿ ತೋರ್ಸ್ಯಾನಲ್ಲಾ
ಇವು ಯಾವಲ್ಲಿ ತಂದೆಪ್ಪ ನೀನೆ
ಹೇಳ ನನ್ನ ಮಗನೆ ಕೇಳತಾಳಲ್ಲಾ
ಅಪ್ಪ ಹೊಲುವತಿದ್ದ ತಂದೀನಲ್ಲಾss ॥ ೧೯ ॥

ಸಣ್ಣ ನಾದುನಿಗಿ ಕರದು ರಮ್ಮಿಸಿ ಕೇಳತಾಳ
ಯಾವ ಕುಲದವರು ಇದ್ದೀರಿ ನೀವು
ನಾವು ಸಮಗಾರರಂತ ತಿಳಿ ಯಿನ್ನಮ್ಯಾಲಾss
ನಮ್ಮ ಅಣ್ಣ ತಮ್ಮ ಹೊಲಿಯುವ್ರs ಪಾದರಾಕ್ಷಿಯನು
ಮೂರು ಲೋಕ ಬರೆಯುವಂಥ ಶೆಟವಿಗಿ ತನ್ನ
ಮಗಳಾಯುಷ್ಯ ತಿಳಿಲಿಲ್ಲವೇನುs । ಬರದ ಲಿಖಿತವನುss ॥ ೨೦ ॥

[ಮೂರು ಚೌಕ]

ಒಣಕಿ ತಗೊಂಡು ಕೂಸಿನ ತಲಿಯ
ಒಡಿಯಬೇಕೆಂಬುದು ಭೇತಾ
ಕೊಲ್ಲಿ ನಾಡವ್ಯಾಲ ಹೋಗಬೇಕೆಂಬ ಮಸಲಾತಿ।
ತಲಿ ಒಡದು ಮೈಯೆಲ್ಲಾ ಆಗಿತ್ತೊ ರಕ್ತಾ
ಅಟೋತಿಗಿ ಆಕಿ ಗಂಡ ಬಂದಾನ
ನಂದ ಕೂಸಿನ ಕೊಂದಿದ ವ್ಯರ್ಥss। ಇದು ಯೇನಂತss॥ ॥ ೨೧ ॥

ಮೋಸಮಾಡಿ ನನ್ನ ಲಗ್ನವಾಗಿದಿ
ಜಾತಿ ಹೇಳಲ್ದೆ ಮಾಡಿದಿ ಘಾತಾ
ಈ ಕೂಸಿನಾಸಿ ನನಗೇನಂತ
ವಂಶ ಉರಿಯಲಿಕ್ಕೆ ಮಾಡಿದಿ ಮಸ್ತ
ನಿನ್ನ ಮನಿಯಾಗ ಮುನ್ನನಿರುವಣೆಲ್ಲ
ತಾನೆ ನಡದಾಳ ಹಣಿ ಹಣಿ ಬಡಕೋತಾs। ಸ್ವಾ ಪಕೊಡವ್ವಾsತss ॥ ೨೨ ॥

ಯಾರು ಹೇಳಿದರ ಕೇಳಲಿಲ್ಲ ನಾರಿ
ಹೊಂಟಾಳ ಹಣಿ ಹಣಿ ಬಡಕೋತ
ತಾಯಿ ಬರದದ ತಪ್ಪಲಿಲ್ಲ ಈ ಲಿಖಿತ
ದೇಶಬಿಟ್ಟು ಪರದೇಶಕ್ಕೆ ಹ್ವಾದಳು
ಖಾಸನಗರ ಕಂಡಾಳು ತುರ್ತಾss। ಆದಳು ಶಾಂತss॥ ॥ ೨೩ ॥

ನಗರ ಹೊಕ್ಕು ನೋಡ್ಯಾಳ ದೊಡ್ಡ ಶಹರ
ಪಗಡಿ ಬಾಜಾರ ಕಾಣುದು ಹಾರುತಿs
ಅಲ್ಲಿ ಇರಬೇಕೆಂಬು ಸ್ರತೀ
ನಡುಪ್ಯಾಟ್ಯಾಗ ಮನಿ ಹಿಡಿದಾಳು
ಗಾಯನ ಮಾಡುವಳು ನಿತ್ಯದಿನಂಪ್ರತಿ
ಉತ್ತಿ ಮನಸಗೊಂಡಾಳ ಗುಣವತಿs ॥ ೨೪ ॥

ತಾಯಿ ಹ್ವಾದಮ್ಯಾಲ ತಂದಿ ಮಗನಿಗಿ
ಬುಂದೆ ಬೇಸನ ತಿನಿಸಿದನಲ್ಲಾ
ಆನಂದದಿ ಕುಡಿಸಿದ ಸಕ್ಕರಿ ಹಾಲಾ
ಈ ಕಂದ ಆದನು ಪ್ರಭಲಾ
ಲಾಲಿಸಿ ಸಮಗಾರ ಬಾಲಕಗ ಹೇಳತಾನ
ಹೊಲಿಲಾಕ ಕಲಿಜೇಕ್ರಿ ಇನ್ನಮ್ಯಾಲss। ನಮ್ಮ ಕಸಬೆಲ್ಲಾss ॥ ॥ ೨೫ ॥

ಹೇಸಿ ಕೆಲಸ ನಾನು ಮಾಡುದಿಲ್ಲ ತಂದಿ
ಸಾಲಿಗ್ಹಾಕಬೇಕ ತಿಳಿ ಕುಶಲಾ
ಸಾಲಿ ಕಲಿತರ ನಮಗೇನು ಕಡಿಮಿಲ್ಲಾ
ಶಾಣೆನೆಂಬವರು ನನಗ ಜನರೆಲ್ಲಾ
ಹರುಷವಾಗಿ ತಂದಿ ಸಾಲಿಗಿ ಹಾಕಿದಾನಾ
ಹುಡುಗರೊಳಗ ಆದನು ಮಿಗಿಲಾऽऽ ।
ವಿದ್ಯಾದ ಕಮಲಾऽऽ ॥ ॥ ೨೬ ॥

ಹನ್ನೆರಡ ವರಸ ಸಾಲಿ ಕಲತಾನ
ಆರೆ ಕನ್ನಡ ಬಹಳ ಬರದಾನಲ್ಲऽऽ
ಮೀರಿದ ವಿದ್ಯ ಕಲಿತರೇನು ಉಳಿಲಿಲ್ಲ
ತಮ್ಮ ತಂದಿಗ್ಹೇಳತಾನ ಬಿದ್ದ ಪಾದದಮ್ಯಾಲ
ಮುತ್ತ ಮಾಣಿಕಗಳ ವ್ಯಾಪಾರಕ ಹೋಗತೀನ
ಎತ್ತ ನೂರಾರು ನನಗ ಬೇಕಲ್ಲಾऽऽ । ಹೋಗುವೆನಲ್ಲಾ ॥ ॥ ೨೭ ॥

ತಂದಿ ತಂದಕೊಟ್ಟಾನ ತುರ್ತಾ
ಬೇಕಾದಂತ ಎತ್ತಾ ಮಗನಿಗೆ ಒಪ್ಪಿಸಿದನು
ಬೇಕಾದಷ್ಟ ದುರವ್ಯ ಕೊಡತಾನು
ನನ್ನ ಹೊಟ್ಟೆಲಿ ಇದ್ದಿ ಒಬ್ಬವನೆ
ಹೇಳ ನನ ಮಗನೆ ಬರುವದೆಂದು ನೀನು
ನನ ಜೀವದಾಗಿಲ್ಲ ಸಮಾಧಾನ
ಎಂಟದಿನಕ ಬರುವೆನು ನಾನು
ತಂದಿಗ್ಹೇಳಿದಾನುऽऽ । ದಾರಿ ಹಿಡಿದಾನುऽऽ ॥ ॥ ೨೮ ॥

ಮುಂದಕೆ ಪ್ರಯಾಣ ಮಾಡಿದಾನು
ತಿಂಗಳ ದಾರಿಯು ಹ್ವಾದನು ಯಾಪಾರಕ
ಅದೇ ನಗರಕ ಇಳಿದಾನು ತಾನು
ಖರೀದಿ ಮಾಡಿದ ಮುತ್ತು ಮಾಣಿಕ ವಜ್ರವನು
ಬೆಲೆಯಿಲ್ಲದೆ ಮುತ್ತು ಮಾಣಿಕ ತುಂಬಿದನು
ಅಲ್ಲಿ ನಾಲ್ಗರು ಹುಡುಗರು ಕೂಡಿದರು ॥ ೨೯ ॥

ಗುಜರಿ ಹೊಕ್ಕ ನಾರಿ ಪಗಡಿ ಬಾಜಾರಕ
ಹೋಗಿ ಗಾಯನ ಮಾಡುದ ಕೇಳಿದರು
ಆಕಿಗ್ಯಾರಂದಾರು ಭಾಗ್ಯವಂತ ಅವನು
ಇಲ್ಲಿ ಇಲ್ಲ ಆಕಿ ಯಾರಿಗಿ ಕೆಟ್ಟಿಲ್ಲ
ಸ್ವಸ್ತವಾಗಿ ಇದ್ದಾಳು ತಾನು
ಗಾಯನ ಮಾಡುವಳ ನಿತ್ಯದಿಂದss । ಪ್ರತಿದಿನವನುss ॥ ೩೦ ॥

ಭ್ರಾಂತಿಬಡದು ಹ್ವಾದನು ಆಕಿ ಮನಿಗಿ
ಹೆಣ್ಣಿನ ಸುಂದರ ತನಗನ್ನು ದಂಗಾಲಾದಾನು
ಕಾಂತಿ ನಿನ್ನ ಬೆಲಿ ಏನ ಹೇಳಂದಾನು
ಆಕಿ ಅಂತಾಳ ಇಂಥ ಕೆಲಸ ಇಲ್ರಿ ನಾನು
ಪುಲ್ಲಲೋಚನಿ ಒಲ್ಲೆನುಬ್ಯಾಡಾs
ನಿನ್ನಮ್ಯಾಲ ನನ್ನ ಪ್ರೀತಿಯನುss । ಮನತಾಪವನುss ॥ ೩೧ ॥

ಮನಜ್ಯೋಡ್ಸಿ ಮಾಡ್ಯಾಳ ನೀರನೀರ
ಬಾರೋ ಮನೋಹರಾ
ಮಂಚಕ ಕರದಾಳೋ ಗಜಗಮಣಿ
ಮುತ್ತ ಕೊಡತಾಳೋ ಒತ್ತಿ ಒತ್ತಿ
ತೆಕ್ಕಿ ಮುಕ್ಕಿ ಬಿದ್ದಾರ ಖಬರಿಲ್ಲss
ಭೋಗ ಯಾಪಾರಲ್ಲಿss । ನಡದಿತ ಸುಖದಲಿss ॥ ೩೨ ॥

ಶಾಂತ ಮನದೋಳು ತೆಲಿಮ್ಯಾಗಿನ
ಕಚ್ಚ ನೋಡ್ಯಾಳುs ಆಕಿ ಅಂತಾಳು
ನೀವು ಯಾವೂರವರು ಹೇಳ್ರಿ ಅಂದಾಳು
ನಾ ಸಮುಗಾರ್ನ ಮಗನಂದ ಕೇಳ
ನಮ್ಮ ತಾಯಿ ಹೊಟ್ಟಕ್ಕಿ
ಸಮುಗಾರ್ನ ಮದವಿಯಾಗಿ ನನ್ನ ಹಡದಾಳೋss
ಐದು ವರಸದವನ ಬಿಟ್ಟಾಳೋss ॥ ೩೩ ॥

ಅಟೋಕಿಗೆ ಬೆಳಗಾದಿತು ಬೇಗನೆ
ಹಿಡದಾನ ತವರ್ಮೂರ ದಾರಿಯನು
ಇಕಿ ಗಾಬ್ರಾಗಿ ಕುಂತಾಳ ಇಲ್ಲ ಚೈನಾ
ಶ್ರೀಹರಿ ಮುನದಾನ ಭಗವಾನಾ
ಮೂರು ಲೋಕ ಬರೆಯುವಂತ ಶೆಟವಿಗಿ ತನ್ನs
ಮಗಳಾಯುಷ್ಯ ತಿಳಿಲಿಲ್ಲವೇನುss । ಬರದ ಲಿಖಿತವನುss । ॥ ೩೪ ॥

[ನಾಲ್ಕು ಚೌಕ]

ಅದೇ ಗರ್ಭಿಣವಾಗಿ ಬಸರಾದಳೋ
ವಸುಧಿಯೊಳಗೆ ಶಿಶುವ ಕೇಳ್ರಿ ಜನಾ
ದಿನ ದಿನಕ ಬೆಳೆವುದೋ ಸಾಗರ
ನೌಮಾಸ ತುಂಬಿ ಹಡದಾಳ ಕಂದ
ಹುಟ್ಟಿದೈದ ದಿವಸಕ ಬಣ್ಣದ ತೊಟ್ಟಿಲ ಕಟ್ಟಿ
ಮಾಡ್ಯಾರ ನಿತ್ಯನೇಮವನುss । ಹೆಸರಿಡುವರುss ॥ ॥ ೩೫ ॥

ಮಗನ ಮಗಾ ಬಾರ ಮೇಲಮಗಾ ಬಾರs
ಕರ್ಮದ ಮಗನೆ ಬಾರೋ ನೀನು
ಹೀಂಗ ಹಾಡ್ಯಾಡಿ ಇಡತಾರ ಜೋಗುಳವನು
ಇದು ನಾಡೊಳಾದಿತು ವಿಪರೀತನು
ಮಾಡಬಾರದ ಮಾಡೀನಂತ
ಭೋಗದೊಳಗ ಇದ್ದಿತೆಂತ ಕರ್ಮವನುss ।
ನನ್ನ ದೈವವನುss ॥ ॥ ೩೬ ॥

ಜೋಪಾನ ಮಾಡುತನಿದ್ದಾಳು
ಕರ್ಮ ಹೆಚ್ಚಾಯ್ತುss
ಧರ್ಮ ಹೋಗಿ ಅಡವಿ ಸೇರ್ರೈತಿ
ಎಲ್ಲ ಕೆಟ್ಟನಿಂತಾದ ಸರುವನಾಡ
ಪಾಪದ ಪ್ಯಾಡು ಕೇಳ್ರಿ ಜನದೊಳು
ನಾವೇನು ನಿಮಗ ಹೇಳುವದೈತಿ
ತಾಯಿ ತಂದಿಗಿ ಮಗ ನೋಡುವದಿಲ್ಲs
ಮಡದಿ ಮ್ಯಾಲ ಖ್ಯಾಲ ಹಿಂಗ ನಡದೈತಿss ।
ಅದರಿಂದ ಮಳಿಬೆಳಿ ಕಡಿಮೈತಿss ॥ ॥ ೩೭ ॥

ಪೂರ್ವದ ಗೆರಿ ಪೂರ ಇತರಿಗೆ ತಪ್ಪದು
ನರಮನುಷರಿಗದು ಪಾಡೇನುs
ಪರಮಾತ್ಮಗ ಇದಿ ಬಂದು ಕಾಡಿಲ್ಲೇನು
ಹರಿಚಂದ್ರ ಕಾಯ್ದ ಸುಡುಗಾಡವನು
ಮೂರು ಲೋಕ ಬರೆಯುವಂತ ಶೆಟವಿಗಿ ತನ್ನ
ಮಗಳಾಯುಷ್ಯ ತಿಳಿಲಿಲ್ಲವೇನುss ।
ಬರದ ಲಿಖಿತವನುss ॥ ॥ ೩೮ ॥

[ಐದು ಚೌಕ]

ಹಾಡಿದವರು : ಶ್ರೀಮತಿ ಗುರಶಾಂತಮ್ಮ ನಾಳಕೋಟಗಿ
ಮು।ಅಂ : ಸಾಲೋಟಗಿ ತಾ. : ಇಂಡಿ ಜಿ. : ಬಿಜಾಪೂರ

****

ಕ್ರಾಂತಿಕಾರಿ ಸಾಹಿತಿ 'ಅಜ್ಞೇಯ'

● ಟಿ. ಆರ್. ಭಟ್

1978ರ ಜ್ಞಾನಪೀಠ ಪ್ರಶಸ್ತಿಗೆ ಪಾತ್ರರಾದ ಹಿಂದಿ ಸಾಹಿತಿ ಸಚ್ಚಿದಾನಂದ ಹೀರಾನಂದ ವಾತ್ಸ್ಯಾಯನರು ಆಧುನಿಕ ಹಿಂದಿ ಸಾಹಿತ್ಯದ ಸರ್ವಾಧಿಕ ವಿವಾದಾಸ್ಪದ ವ್ಯಕ್ತಿ ಮತ್ತು ಕ್ರಾಂತಿಕಾರಿ ಕವಿಯೆನಿಸಿಕೊಂಡಿದ್ದಾರೆ. 'ಅಜ್ಞೇಯ' ಎಂಬ ಕಾವ್ಯನಾಮದಿಂದಲೇ ಅವರು ಪ್ರಸಿದ್ಧರಾಗಿದ್ದಾರೆ. ಅವರ ಕ್ರಾಂತಿ ಕೇವಲ ಸಾಹಿತ್ಯ ಪರಂಪರೆ ಬಗೆಗೆ ಮಾತ್ರವಲ್ಲ, ಸಾಮಾಜಿಕ ಮತ್ತು ವೈಯಕ್ತಿಕ ದೃಷ್ಟಿಯಿಂದ ಕೂಡ ಕ್ರಾಂತಿ; ಇದೇ 'ಅಜ್ಞೇಯ'ರ ಕಾವ್ಯ ಪ್ರಕ್ರಿಯೆಯ ಮೂಲ ಚೇತನವಾಗಿದೆ. ಅವರು ಸಮರ್ಥ ಮತ್ತು ಸತ್ವಶಾಲಿ ಕವಿಗಳಾಗಿರುವಂತೆ ಅಷ್ಟೇ ಸಮರ್ಥ ಮತ್ತು ಸಫಲ ಗದ್ಯಲೇಖಕರು, ಅವರ 'ಶೇಖರ: ಏಕ ಜೀವನೀ' ಎಂಬ ಕಾದಂಬರಿ ಪ್ರೇಮಚಂದರ 'ಗೋದಾನ' ಕಾದಂಬರಿಯ ನಂತರ ಹಿಂದಿಯಲ್ಲಿ ಬಂದ ಶ್ರೇಷ್ಠ ಕಾದಂಬರಿಗಳಲ್ಲಿ ಅಗ್ರಸ್ಥಾನ ಪಡೆದಿದೆ. ಸರ್ವೋಚ್ಚ ಕಾವ್ಯಪ್ರತಿಭೆಯನ್ನು ಪಡೆದ ಕವಿ ವಾತ್ಸ್ಯಾಯನರು ಶ್ರೇಷ್ಠ ಕಾದಂಬರಿಕಾರರು ಹಾಗೂ ಸಮರ್ಥ ಪತ್ರಿಕೋದ್ಯಮಿಗಳೂ ಆಗಿದ್ದಾರೆ.

ಅಜ್ಞೇಯರಲ್ಲಿ ಸದಾ ಹುಡುಕುವ ಆಸಕ್ತಿ. ತಮ್ಮ ಸಮಕಾಲೀನ ಪ್ರಯೋಗ-ಶೀಲ ಕವಿಗಳನ್ನು ಒಂದೆಡೆ ಸೇರಿಸಿ ಅವರ ಕವಿತೆಗಳನ್ನು 'ತಾರಸಪ್ತಕ'ವೆಂಬ ಪುಸ್ತಕ ರೂಪದಲ್ಲಿ ಪ್ರಕಟಗೊಳಿಸಿದರು. ಹಿಂದಿ ಕಾವ್ಯ ಪರಂಪರೆಗೆ ಒಂದು ಹೊಸ ತಿರುವು ಕೊಡುವದರಲ್ಲಿ ಭಗೀರಥ ಪ್ರಯತ್ನ ಮಾಡಿದ ಶ್ರೇಯಸ್ಸು ಅಜ್ಞೇಯರಿಗೆ ದೊರಕಿದೆ. ಇವರ ಪ್ರಯತ್ನದಿಂದ ಅನೇಕ ನವ್ಯ ಕವಿಗಳು ಪ್ರೇರಣೆ ಪಡೆದು ಬೆಳಕಿಗೆ ಬಂದರು.

ಹೋರಾಟದ ಬದುಕು :

ಅಜ್ಞೇಯರು ತಮ್ಮ ಜೀವನದುದ್ದಕ್ಕೂ ಸತತ ಹೋರಾಡುತ್ತ ಬಂದಿದ್ದಾರೆ. ಜನ್ಮತಃ ಕ್ರಾಂತಿಕಾರರಾದ್ದರಿಂದ ಎಲ್ಲವನ್ನೂ ಎದುರಿಸುತ್ತ ಮುಂದೆ ಬಂದರು. ದೇವರಿಯಾ ಜಿಲ್ಲೆಯ 'ಕಸಿಯಾ'ವೆಂಬ ಹಳ್ಳಿಯಲ್ಲಿ ಸನ್ 1911 ರ ಮಾರ್ಚ 7ರಂದು ಅವರ ಜನನ. ತಂದೆ ಪುರಾತತ್ವಶಾಸ್ತ್ರದ ಅಖಂಡ ವಿದ್ವಾಂಸರು. ಪ್ರಾರಂಭಿಕ ಶಿಕ್ಷಣ ಮನೆಯಲ್ಲಿ ನಡೆಯಿತು. ಕಾರಣ ಶಾಲೆಯ ಬಗ್ಗೆ ಅವರಿಗೆ ಅರುಚಿಯಿತ್ತು. ಆರಂಭ ದಿಂದಲೂ ಅವರಲ್ಲಿ ವಿದ್ರೋಹಪ್ರವೃತ್ತಿ ಮತ್ತು ನಿಯಮಗಳನ್ನು ಪಾಲಿಸದ ಹಟವಿತ್ತು. ಬಾಲ್ಯ ಜೀವನದ ಬಹಳಷ್ಟು ಕಾಲ ಲಖನೌದಲ್ಲಿ ಕಳೆದು ನಂತರ ಮದ್ರಾಸ ಮತ್ತು ಲಾಹೋರಿನಲ್ಲಿ ಶಿಕ್ಷಣ. 1929 ರಲ್ಲಿ ಬಿ. ಎಸ್. ಸಿ. ಪದವಿ. ತಂದೆಯಿಂದ ಸಂಸ್ಕೃತ ಸಾಹಿತ್ಯ ಮತ್ತು ಭಾರತೀಯ ಕಲೆಗಳ ಅಭ್ಯಾಸ ಮಾಡಿದರು. ಸಾಹಿತ್ಯದ ಜೊತೆಗೆ ಬಾಂಬು ತಯಾರಿಕೆ ಮತ್ತು ವಿಷಪೂರ್ಣ ರಸಾಯನಗಳ ಅಧ್ಯಯನ ಮಾಡಹತ್ತಿದರು. ಮುಂದೆ ಇದೇ ಕಾರಣದಿಂದ ಬಂಧಿಸಲ್ಪಟ್ಟು 'ಮುಹಮ್ಮದ ಬಕ್ಸ' ಎಂಬ ಹೆಸರಿನಿಂದ ತಪ್ಪಿಸಿಕೊಂಡರು. ಇಂಗ್ಲೀಷ ಸಾಹಿತ್ಯದಲ್ಲಿ ಎಂ. ಎ. ಓದುತ್ತಿದ್ದಾಗ ಸ್ವಾತಂತ್ರ್ಯ ಆಂದೋಲನದಲ್ಲಿ ಧುಮುಕಿದರು. ಆಗಿನ ಸರಕಾರ ಇವರನ್ನು ಬಂಧನದಲ್ಲಿಟ್ಟಿತು. 4 ವರ್ಷಗಳ ವರೆಗೆ ಸೆರೆಮನೆವಾಸ. ಲಾಹೋರ ಜೈಲಿನಲ್ಲಿ ಕೆಲವು ತಿಂಗಳು, ಆಮೇಲೆ ದಿಲ್ಲಿ ಮತ್ತು ಪಂಜಾಬದ ಕಾರಾಗ್ರಹದಲ್ಲಿ ಕಳೆದರು. 1935-36ರಲ್ಲಿ 'ಸೈನಿಕ.' 'ಆಗ್ರಾ', 'ಬಿಜಲಿ,' ಮತ್ತು 'ವಿಶಾಲಭಾರತ', ಪತ್ರಿಕೆಗಳ ಸಂಪಾದನೆ. 1943-45 ರ ಅವಧಿಯಲ್ಲಿ ಭಾರತೀಯ ಸೈನ್ಯದಲ್ಲಿ ಸೇರಿ ಆಸಾಮದ ಗಡಿಪ್ರದೇಶದಲ್ಲಿ ಕೆಲಸ. ನಂತರ ಪಂಜಾಬದ ಗಡಿಯಲ್ಲಿ ಸೇವೆ. 1946-51 ರಲ್ಲಿ ಅನೇಕ ಪತ್ರಿಕೆಗಳ ಸಂಪಾದನೆ. 1952-55ರಲ್ಲಿ ಆಕಾಶವಾಣಿಯಲ್ಲಿ ನೌಕರಿ. 1955ರಲ್ಲಿ ಯುರೋಪ ದೇಶಗಳ ಪ್ರವಾಸ. ಆ ಮೇಲೆ ಮತ್ತೆ ಹಿಂದಿ ಮತ್ತು ಇಂಗ್ಲೀಷ ಪತ್ರಿಕೆಗಳ ಸಂಪಾದನೆ ಹಾಗೂ ಜೋಧಪುರ ವಿಶ್ವವಿದ್ಯಾಲಯದಲ್ಲಿ ತುಲನಾತ್ಮಕ ಸಾಹಿತ್ಯ ಮತ್ತು ಅನುಶೀಲನ ವಿಭಾಗ ದಲ್ಲಿ ಕೆಲಸ. ಆ ಮೇಲೆ 'ದಿನಮಾನ' ಮತ್ತು 'ಪ್ರತೀಕ' ಪತ್ರಿಕೆಗಳ ಸಂಪಾದಕರಾಗಿ ಖ್ಯಾತಿ ಪಡೆದರು. ಇಂದು 'ನವಭಾರತ ಟೈಮ್ಸ್' ಪತ್ರಿಕೆಯ ಪ್ರಧಾನ ಸಂಪಾದಕರು.

ಅಜ್ಞೇಯರು ತಮ್ಮ ಜೀವನದ ಬಹು ಭಾಗವನ್ನು ಪ್ರವಾಸದಲ್ಲಿಯೇ ಕಳೆದರು. ಇದರಿಂದ ತಮ್ಮ ಒಂಟಿ ಜೀವನವನ್ನು ಮತ್ತಷ್ಟು ಸಮೃದ್ಧಗೊಳಿಸಿದರು. ಇವರಿಗೆ ಪ್ರಕೃತಿಯ ಬಗ್ಗೆ ಅಪಾರ ಪ್ರೇಮ. ದೇಶಾದ್ಯಂತ ತುಂಬ ಅಲೆದಾಡಿದ ಇವರು ಜನ್ಮತಃ ಪ್ರವಾಸಿಯೆಂದು ತಾವೇ ಒಪ್ಪಿಕೊಳ್ಳುತ್ತಾರೆ. 'ಅರೇ ಯಾಯಾವರ, ರಹೇಗಾ ಯಾದ ?' (ಅಯ್ಯಾ ಪ್ರವಾಸಿ ! ನೆನಪಿರುವದೋ ?) ಎಂಬ ಪುಸ್ತಕದಲ್ಲಿ ಪ್ರವಾಸದ ಬಗ್ಗೆ ವಿಶದವಾಗಿ ಬರೆದಿದ್ದಾರೆ. ಹುಟ್ಟು ಕ್ರಾಂತಿಕಾರರಾದ್ದರಿಂದ ಸಮಾಜದ ಕಟ್ಟು ನಿಟ್ಟುಗಳನ್ನು ಸದಾ

ವಿರೋಧಿಸುತ್ತ ಬಂದಿದ್ದಾರೆ. ತಮ್ಮ ವೈವಾಹಿಕ ಜೀವನದಲ್ಲೂ ಇವರಿಗೆ ಹೋರಾಡ ಬೇಕಾಯಿತು. 1940 ರಲ್ಲಿ, ವಿವಾಹವಾದ ಒಂದು ತಿಂಗಳಲ್ಲಿಯೇ ಪತ್ನಿಯೊಂದಿಗೆ ವಿವಾಹವಿಚ್ಛೇದನೆ ಪಡೆದು ಮುಂದೆ ಜೀವನದ ತುಂಬ ಕ್ರಾಂತಿಕಾರರಾಗಿ ಅಲೆದಾಡಿದರು. ಇದರಿಂದ ಅವರಿಗೆ ಸಮಾಜ ಮತ್ತು ಜೀವನವನ್ನು ಕಣ್ಣಾರೆ ನೋಡುವ ಪ್ರಸಂಗ ಒದಗಿ ಬಂತು. ಪರಿಣಾಮವಾಗಿ, ಇವರ ರಚನೆಗಳಲ್ಲಿ ಸಮಾಜದ ನೋವುಗಳಿಗೆ ಅಭಿ ವ್ಯಕ್ತಿ ದೊರಕಿದೆ.

ಕಾವ್ಯ ವಿಕಾಸ :

ಅಜ್ಞೇಯರು ಮೂಲತಃ ಕವಿಗಳು, ಹುಟ್ಟುಕವಿಗಳು. ಚಿಕ್ಕವರಿರುವಾಗಲೇ ಕವಿತೆ ಬರೆಯುವದರಲ್ಲಿ ತುಂಬ ಆಸಕ್ತಿ. 11 ವರ್ಷದವರಿರುವಾಗಲೇ ಇಲಿಯಟ್ ಹಾಗೂ ಟೆನಿಸನ್ ಇವರ ಪ್ರಿಯ ಕವಿಗಳಾದರು. ಆಗಲೇ ಇವರು ಬರೆದ ಹಿಂದಿ ಕವನ ಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡವು. ಕಾರಾಗ್ರಹವಾಸದ ನಂತರವಂತೂ ಕಾವ್ಯಸೃಷ್ಟಿ ಯಲ್ಲಿ ನಿರಂತರ ತೊಡಗಿದರು. 'ಭಗ್ನದೂತ' (1933) ಅಜ್ಞೇಯರ ಮೊದಲನೇ ಕಾವ್ಯಸಂಗ್ರಹ. ಇದು ನವೋದಯ ಕಾವ್ಯ. 'ಕವಿ'ಯೆಂಬ ಕವಿತೆಯಲ್ಲಿ ಕವಿ ಹೀಗೆ ನುಡಿದಿದ್ದಾರೆ—

ಒಂದು ತೀಕ್ಷ್ಣ ಕಟಾಕ್ಷದಿಂದ ಹುಟ್ಟುವದು ಕವನ.
ಒಂದು ಚುಂಬನದಿ ಫಲಿಸುವದು ಪ್ರಣಯ.
ಆದರೆ ನಾನು ಅಖಿಲ ವಿಶ್ವದ ನೋವನ್ನು ಸಂಗ್ರಹಿಸುವೆ.
ಕಾರಣ, ನಾನು ಬಾಳಿನ ಕವಿ.

ಇಲ್ಲಿ ಕವಿ ನವೋದಯುದ ಕಾವ್ಯದಾರಿಯನ್ನು ದಾಟಿ ನವ್ಯದ ಕಡೆಗೆ ಸಾಗಿದ್ದಾರೆ. ಇದರಲ್ಲಿ ಅನೇಕ ಸುಂದರ ಭಾವಗೀತೆಗಳಿವೆ. 'ಚಿಂತಾ' (1942) ಇದು ಎರಡನೇ ಕಾವ್ಯಸಂಗ್ರಹ. ಇದರಲ್ಲಿ ಕವಿ ನಾಟಕೀಯ ಭಾಷೆಯಲ್ಲಿ ಪುರುಷ-ಸ್ತ್ರೀ ಇಬ್ಬರ ನಡುವಿನ ಸಂಘರ್ಷ ಚಿತ್ರಿಸಿದ್ದಾರೆ. ಇಲ್ಲಿಯ ಗೀತೆಗಳಲ್ಲೂ ನವೋದಯ ಕಾವ್ಯದ ವಿಶೇಷತೆ ಕಂಡುಬರುವದು. 'ಇತ್ಯಲಮ್' (1946) ಸಂಗ್ರಹದ ಎಲ್ಲ ಕವಿತೆಗಳು ಕಾರಾಗ್ರಹ ಜೀವನದ ಅನುಭವದ ಆಧಾರದ ಮೇಲಿವೆ. ಇಲ್ಲಿ ಕವಿ ಜೈಲು ಜೀವನದ ಕವಿಯೆನಿಸುತ್ತಾರೆ. ಇವುಗಳಲ್ಲಿ ಸಾಮಾಜಿಕ ಪ್ರಜ್ಞೆ ವ್ಯಕ್ತಗೊಂಡಿದೆ. ಆದರೂ ಇಲ್ಲಿ ನವೋದಯ ಕಾವ್ಯದ ರೂಪ ಕಾಣಸಿಗುವದು. 'ಹರಿ ಘಾಸ್ ಪರ್ ಕ್ಷಣ ಭರ್' (1949) ಮತ್ತು 'ಬಾವರಾ ಅಹೇರಿ' (1954) ಈ ಸಂಕಲನಗಳ ಕವಿತೆಗಳಲ್ಲಿ ವಸ್ತು, ಶೈಲಿಗಳ ದೃಷ್ಟಿಯಿಂದ ಪರಿ ವರ್ತನೆ ತೋರುತ್ತದೆ. ಇಲ್ಲಿ ಅವರು ನಿಸರ್ಗದ ಕಡೆಗೆ ಹೆಚ್ಚಾಗಿ ಒಲಿದು ಸಮಾಜ ವಿರೋಧಿಗಳಾದಂತೆ ಕಾಣುತ್ತದೆ. ಇಲ್ಲಿ ಪ್ರಕೃತಿಯಲ್ಲಿ ಅವರಿಗೆ ಆತ್ಮೀಯತೆ ದೊರಕಿದೆ.

ಆತ್ಮಾನ್ವೇಷಣೆ ಮತ್ತು ನಿಸರ್ಗದ ಮುಖಾಂತರ ಸತ್ಯಶೋಧನೆಯಲ್ಲಿ ತೊಡಗುತ್ತಾರೆ. ಈ ಸತ್ಯ ಎಲ್ಲರಲ್ಲಿದೆ ಮತ್ತು ಇದು ಅಖಂಡ ಜೀವನದ ಚೇತನ –ಹೀಗೆ ಕವಿಯು ಕಾವ್ಯದಲ್ಲಿ ರಹಸ್ಯ ಪ್ರವೃತ್ತಿ ಹೆಚ್ಚುತ್ತ ಹೋಗುತ್ತದೆ. ಇವು ಕವಿಯು ಕಾವ್ಯದ ಮಧ್ಯಕಾಲದ ವಿಶಿಷ್ಟತೆಗಳು.

'ಇಂದ್ರಧನುಷ ಕಾಂಧೆ ಹುಏ' (1957) 'ಅರಿ ಓ ಕರುಣಾ ಪ್ರಭಾಮಯ' (1959) 'ಆಂಗನಕೆ ಪಾರ ದ್ವಾರ' (1961) ಈ ಕಾವ್ಯಗಳಲ್ಲಿ ವೈಚಾರಿಕತೆ ಮತ್ತು ಆತ್ಮವಿಶ್ಲೇಷಣೆಗೆ ಮಹತ್ವ ದೊರಕಿದೆ. ಆತ್ಮಶೋಧನೆ, ಸಮರ್ಪಣ ಭಾವದ ಕಾರಣದಿಂದಾಗಿ ಕವಿ ಒಬ್ಬ ಸಾಧಕರಾಗಿ ಕಾಣುತ್ತಾರೆ. ಈ ಮೂರೂ ಸಂಗ್ರಹಗಳಲ್ಲಿ ಅಜ್ಞೇಯರ ಕಾವ್ಯವಿಕಾಸ ಹೊಸ ಸ್ಥಿತಿಯನ್ನು ಪ್ರತಿನಿಧಿಸುತ್ತದೆ.

'ಕಿತನಿ ನಾವೊಂಮೇ ಕಿತನೀ ಬಾರ' (1967) (ಎಷ್ಟೊಂದು ದೋಣಿಗಳಲ್ಲಿ ಎಷ್ಟೊಂದು ಬಾರಿ) ಇದು ಕವಿಯ ಒಂದು ಪ್ರೌಢ ಕೃತಿ. ಇದೇ ಕಾವ್ಯಕ್ಕೆ 1978ರ ಭಾರತೀಯ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. ಈ ಕಾವ್ಯದಲ್ಲಿ ಕವಿ ಮಾನವನ ಬಗೆಗೆ ಇದ್ದ ತನ್ನ ಸಂವೇದನೆಗೆ ಹೊಸ ಸಂಸ್ಕಾರ ಕೊಟ್ಟಿದ್ದಾರೆ. ಕಾವ್ಯದ ಪ್ರಮುಖ ಭಾವದಲ್ಲಿ ತನ್ನನ್ನೇ ಸಮರ್ಪಿಸಿಕೊಂಡಿದ್ದಾರೆ. ಇದು ಕವಿಯ ಕಾವ್ಯವಿಕಾಸಕ್ಕೆ ಹೊಸ ತಿರುವು ಕೊಟ್ಟ ಕೃತಿ. ವಸ್ತು ಮತ್ತು ಶೈಲಿಗಳ ದೃಷ್ಟಿಯಿಂದ ಇದು ಹಿಂದಿನ ಕೃತಿಯಂತಿದ್ದರೂ ಬೇರೆ ಮಾದರಿಯದು. ಬೇರೆಯೆನಿಸಿದರೂ ಹಿಂದಿನ ಕೃತಿಗಳೊಂದಿಗೆ ಹೊಂದಿಕೊಂಡಿದೆ. ಕವಿ ಇಲ್ಲಿ ಹೊಸ ಕ್ಷೇತ್ರ, ಹೊಸ ಮಾರ್ಗ, ಹೊಸ ದಿಕ್ಕುಗಳನ್ನು ಅರಸುತ್ತ ಸಾಗಿದ್ದಾರೆ. ಸಿಕ್ಕಿದ್ದನ್ನು ಪ್ರಸಾದವೆಂದು ಸ್ವೀಕರಿಸಿ ಮುಂದೆ ಸಾಗಿದ್ದಾರೆ. ಕವಿಗೆ ಎಲ್ಲಿಯೂ ಕೊನೆಯೆಂಬುದಿಲ್ಲ. 'ಕಿತನೀ ನಾವೊಂಮೆ ಕಿತನೀ ಬಾರ' ಇದು ಕಾವ್ಯದ ಒಂದು ಕವಿತೆ. ಅದರ ಕೆಲವು ಪಂಕ್ತಿಗಳ ಭಾವಾನುವಾದ ಹೀಗಿದೆ :

ಎಷ್ಟೊಂದು ದೂರದಿಂದ ಎಷ್ಟೊಂದು ಬಾರಿ
ಎಷ್ಟೊಂದು ಹೊಯ್ದಾಡುವ ದೋಣಿಗಳಲ್ಲಿ ಕುಳಿತು
ನಿನ್ನೆಡೆಗೆ ಬಂದಿದ್ದೇನೆ,
ಓ ನನ್ನ ಪುಟ್ಟ ಜ್ಯೋತಿ !
ಕೆಲವೊಮ್ಮೆ ಮಂಜು ಮುಸುಕಿನ ಕಾರಣ
ನಾ ನಿನ್ನ ನೋಡಲಾರೆ.
ಆದರೆ ಅದಕ್ಕೆಂಥ ಪ್ರಭಾವಳಿ!
ನಿನ್ನ ಜ್ಯೋತಿಯನರಸುತ್ತ ಸಾಗುತಲಿದ್ದೇನೆ
ಎಷ್ಟೊಂದು ಬಾರಿ!
ಓ ನನ್ನ ತಿಳಿಯಲಾರದ ಸತ್ಯ ! ಎಷ್ಟೊಂದು ಸಲ....

ಈ ಸಂಗ್ರಹದ ನಂತರ 'ಕ್ಯೋಂಕಿ ಮೈ ಉಸೆ ಜಾನತಾ ಹೂಂ' (1970) 'ಸಾಗರ ಮುದ್ರಾ' (1970) 'ಮಹಾವೃಕ್ಷ ಕೆ ನೀಚೆ' (1977) ಎಂಬ ಕಾವ್ಯಗಳು ಪ್ರಕಟಗೊಂಡಿವೆ. ಈ ನವ್ಯ ಕವಿತೆಗಳಲ್ಲಿ ಕವಿಗೆ ಸಾಕಷ್ಟು ಪರಿಪಕ್ವತೆ ಲಭಿಸಿದೆ ಮತ್ತು ಅರ್ಥ ಗಾಂಭೀರ್ಯ ಹೆಚ್ಚುತ್ತ ಹೋದರೂ ಕ್ಲಿಷ್ಟತೆ ಕಡಿಮೆಯಾಗಿದೆ. ಸಹಜ ಸೌಂದರ್ಯದ ಬೆಡಗು ಇವುಗಳಿಗಿದೆ.

ಹೀಗೆ ಅಜ್ಞೇಯರ ಕಾವ್ಯ ವಿಕಾಸಕ್ರಮದಲ್ಲಿ ನಾವು ಮೂರು ಹಂತಗಳನ್ನು ಕಾಣಬಹುದು. 'ಭಗ್ನದೂತ', 'ಚಿಂತಾ' ಮತ್ತು 'ಇತ್ಯಲಮ್' ಇವು ನವೋದಯ ರಚನೆಗಳಾದರೆ 'ಇತ್ಯಲಮ್' 'ಹರಿ ಘಾಸ್ ಪರ್ ಕ್ಷಣ ಬರ್', ಮತ್ತು 'ಬಾವರಾ 'ಅಹೇರಿಯ' ಕವನಗಳು ನವ್ಯ ಕಾವ್ಯದ ಆರಂಭದ ರಚನೆಗಳಾಗಿವೆ. 'ಇಂದ್ರ ಧನುಷ ಕಾಂದೇ ಹುಏ'ದಿಂದ ಹಿಡಿದು 'ಮಹಾವೃಕ್ಷ ಕೆ ನೀಚೆ' ವರೆಗಿನ ರಚನೆಗಳು ನವ್ಯಕಾವ್ಯದ ಪ್ರೌಢ ರಚನೆಗಳಾಗಿವೆ.

ಒಟ್ಟಿನಲ್ಲಿ ವಾತ್ಸ್ಯಾಯನರು ವ್ಯಕ್ತಿನಿಷ್ಠ ಕವಿಯೆನಿಸಿದರೂ ಅವರ ಕಾವ್ಯದ ಸ್ವರ ಇನ್ನುಳಿದ ನವ್ಯಕವಿಗಳಿಗಿಂತ ವೈವಿಧ್ಯಪೂರ್ಣವಾಗಿದೆ. ಅವರ ಕಾವ್ಯದಲ್ಲಿ ಸ್ವಾನುಭೂತಿ, ಸಾಮಾಜಿಕ ಪ್ರಜ್ಞೆ, ಪ್ರೇಮ, ದರ್ಶನ, ವೈಜ್ಞಾನಿಕ ಚೇತನ, ಯಾಂತ್ರಿಕ ಸಭ್ಯತೆ, ಜಾನಪದ ವಾತಾವರಣ, ಕ್ರಾಂತಿಕಾರಿ ಕೂಗು, ನಿಸರ್ಗ ಸೌಂದರ್ಯ ಮತ್ತು ಮಾನವೀಯ ಸೌಂದರ್ಯ ಇವೆಲ್ಲವುಗಳಿಗೆ ಅಭಿವ್ಯಕ್ತಿ ದೊರಕಿದೆ. ಭಾಷೆಯ ದೃಷ್ಟಿಯಿಂದ ವಾತ್ಸ್ಯಾಯನರು ಹಿಂದೀಭಾಷೆಯ ಅದ್ಭುತ ಶಿಲ್ಪಿ. ತಮ್ಮ ವಿಚಾರಗಳನ್ನು ಪ್ರತೀಕಗಳ ಮಾಧ್ಯಮದಿಂದ ಅತ್ಯಂತ ಸಮರ್ಥವಾಗಿ ವ್ಯಕ್ತಪಡಿಸುತ್ತಾರೆ.

ಕಥೆ ಕಾದಂಬರಿಗಳು :

ಗದ್ಯ ಸಾಹಿತ್ಯದಲ್ಲಿ ಅಜ್ಞೇಯರದು ಪಳಗಿದ ಕೈ. ಅಜ್ಞೇಯರು ಹಿಂದಿಯ ಸರ್ವಶ್ರೇಷ್ಠ ಕಾದಂಬರಿಕಾರರು. ಅವರ ಮೂರು ಕಾದಂಬರಿಗಳಲ್ಲಿ 'ಶೇಖರ-ಏಕ ಜೀವನಿ' (ಶೇಖರ: ಒಂದು ಜೀವನ ಚರಿತ್ರೆ) ಹಿಂದಿಯಲ್ಲಿ ಬಂದ ಒಂದು ಯುಗ ಪ್ರವರ್ತಕ ಕಾದಂಬರಿ. ಮನೋವೈಜ್ಞಾನಿಕ ಚಿತ್ರಣ ಮತ್ತು ಹೊಸ ಶೈಲಿಯ ಕಾರಣ ಹಿಂದೀ ಕಾದಂಬರಿಯ ಸಂಕ್ರಾಂತಿ ಕಾಲದಲ್ಲಿ ಇದರ ಸೃಷ್ಟಿ. ಕಾದಂಬರಿಯ ನಾಯಕ ಶೇಖರನ ಬಾಳಿನ ಕಥೆ ಇದರಲ್ಲಿದೆ. ಲೇಖಕರು ಶೇಖರನ ಜೀವನದ ಒಂದು ವಿಶಿಷ್ಟ ದರ್ಶನದ ಪ್ರತಿಪಾದನೆಯನ್ನು ಇಲ್ಲಿ ಮಾಡಿದ್ದಾರೆ. ಇದು ಹುಟ್ಟುಕ್ರಾಂತಿಕಾರಿಯ ದರ್ಶನ. ಈ ಕಾದಂಬರಿ ಹಿಂದಿ ಕಾದಂಬರಿಯ ಹಳೆಯ ಪರಂಪರೆ ಮತ್ತು ಸ್ವರೂಪಕ್ಕೆ ಒಂದು

ಹೊಸ ತಿರುವು ಕೊಟ್ಟಿದೆ. ಇಲ್ಲಿ ಸ್ತ್ರೀ ಮತ್ತು ಪುರುಷ ಪ್ರಕೃತಿಯ ಎರಡು ರೂಪಗಳು. ಇವರನ್ನು ಅಣ್ಣತಂಗಿಯೆಂದು ಕಲ್ಪಿಸುವದು ಪ್ರಕೃತಿಯನ್ನು ಅಪಮಾನಗೊಳಿಸಿದಂತೆ. ಈ ಸಮಾಜ ನಿಸರ್ಗದ ಪುತ್ರನ ಮೇಲೆ ನಿಯಂತ್ರಣ ವಿಧಿಸುತ್ತದೆ. ಹೀಗಾಗಿ ಅವನ ಶಕ್ತಿಯೆಲ್ಲವೂ ಸಮಾಜದೊಡನೆ ಹೋರಾಡಿ ನಷ್ಟವಾಗುವದು. ಇದರ ಪರಿಣಾಮ ವಾಗಿ ಶೇಖರನ ಪ್ರೇಯಸಿ ಶಶಿ ಗತಿಸಿದಳು. ಕೊನೆಗೆ ಅವನಿಗೂ ಅದೇ ಸ್ಥಿತಿ ಬಂತು.

'ನದೀ ಕೆ ದ್ವೀಪ' (ನದಿಯ ದ್ವೀಪ) ಇದು ವ್ಯಕ್ತಿಚರಿತ್ರೆಯ ಕಾದಂಬರಿ. ಇದು ಭುವನ ಮತ್ತು ರೇಖಾ ಇವರಿಬ್ಬರ ಪ್ರೇಮ ಕಥೆಯಾಗಿದೆ. ಇದರಲ್ಲಿ ವಿಚಾರದ ವಿಕಾಸ ಕಾಣಬಹುದು. ಇಲ್ಲಿ ಕ್ರಾಂತಿಯಿಲ್ಲ. ಸಂಭವಿಸುವ ಘಟನೆಗಳ ಬಗ್ಗೆ ಸಮಾಜದ ಆಸಕ್ತಿಯೂ ಇಲ್ಲ, ನಿರ್ಬಂಧವೂ ಇಲ್ಲ. ರೇಖಾಳನ್ನು ಗಂಡ ತ್ಯಜಿಸುತ್ತಾನೆ. ಪತಿ ಬೇರೆಯೊಬ್ಬಳನ್ನು ಇಟ್ಟುಕೊಳ್ಳುತ್ತಾನೆ. ರೇಖಾ ಭುವನನಿಂದಾಗಿ ಗರ್ಭವತಿಯಾಗಿ ಗರ್ಭಪಾತ ಮಾಡಿಸಿಕೊಳ್ಳುತ್ತಾಳೆ. ಆ ಮೇಲೆ ಡಾಕ್ಟರನೊಂದಿಗೆ ವಿವಾಹ ಮಾಡಿ ಕೊಂಡರೂ ಸಮಾಜ ಮೌನ ತಾಳುತ್ತದೆ. ಭುವನನ ಗೌರಾ ಎಂಬ ವಿದ್ಯಾರ್ಥಿನಿ ಯುವತಿಯಾದ ಮೇಲೆ ಇಬ್ಬರೂ ಪರಸ್ಪರ ಆಕರ್ಷಿತರಾದರೂ ಸಮಾಜದಲ್ಲಿ ಬೊಬ್ಬೆ ಯೇಳುವದಿಲ್ಲ. ಇವರಿಗೆ ಸಮಾಜದ ಭಯವಿಲ್ಲ. ಇಲ್ಲಿ ವಿದ್ರೋಹದ ಭಾವನೆ ಹುಟ್ಟು ವದಿಲ್ಲ. ಇದರಲ್ಲಿ ಲೇಖಕರು ಪತ್ರಾತ್ಮಕ ಶೈಲಿಯನ್ನು ಬಳಸಿದ್ದಾರೆ.

'ಅಪನೆ ಅಪನೆ ಅಜನಬಿ' (ತನಗೆ ತಾನೇ ಅಪರಿಚಿತ) ಅಜ್ಞೇಯರ ಮೂರನೇ ಕಾದಂಬರಿ. ಹಿಂದಿಯಲ್ಲಿ ಇದೊಂದು ಹೊಸ ಪ್ರಯೋಗ. ಹೆಸರು, ಶೈಲಿ, ಸಮಸ್ಯೆ, ಘಟನೆ, ಸಂಘರ್ಷ ಮತ್ತು ಕಾರ್ಯ ಮೊದಲಾದ ತಾತ್ವಿಕ ದೃಷ್ಟಿಯಿಂದ ಈ ಕಾದಂಬರಿ ಅಜ್ಞೇಯರ ಪ್ರಯೋಗಶೀಲ ಪ್ರಗತಿಯ ಸಂಕೇತವಾಗಿದೆ. ಮನೋವೈಜ್ಞಾನಿಕ ಸಮಸ್ಯೆಯು ಇದರ ಆಧಾರ. ಇದು ಲೇಖಕರ ವಿಲಕ್ಷಣ ಗದ್ಯಕೃತಿ. ಇಲ್ಲಿ ನಾಟಕೀಯತೆಯಿದ್ದರೂ ಇದು ನಾಟಕವಲ್ಲ; ಆತ್ಮಕಥಾತ್ಮಕ ಶೈಲಿಯಲ್ಲಿ ಬರೆದ ಚರಿತ್ರಪ್ರಧಾನ ಕಾದಂಬರಿ.

ಒಟ್ಟಿನಲ್ಲಿ ಹೇಳುವದಾದರೆ, ಅಜ್ಞೇಯರು ಮನೋವೈಜ್ಞಾನಿಕ ಕಾದಂಬರಿಕಾರರು, ಘಟನೆಗಳಿಗಿಂತ ಪಾತ್ರಗಳ ಮನೋವಿಶ್ಲೇಷಣೆಯ ಕಡೆಗೆ ವಿಶೇಷ ಗಮನ ಕೊಟ್ಟಿದ್ದಾರೆ. ಇವರ ಈ ಮೂರೂ ಕಾದಂಬರಿಗಳು ಹಿಂದೀ ಸಾಹಿತ್ಯದಲ್ಲಿ ತಮ್ಮದೇ ಆದ ಅಸ್ತಿತ್ವ ಮತ್ತು ಮಹತ್ವ ಪಡೆದುಕೊಂಡಿವೆ.

ಇವರು ಶ್ರೇಷ್ಠ ದರ್ಜೆಯ ಕಥೆಗಾರರೂ ಕೂಡ. ಇವರ ಕಥೆಗಳು ಅನೇಕ ಸಂಕಲನ ಗಳಲ್ಲಿ ಪ್ರಕಟಗೊಂಡಿವೆ. 'ವಿಪಥಗಾ' 'ಪರಂಪರಾ' 'ಕೋಠರೀ ಕಿ ಬಾತ' 'ಶರಣಾರ್ಥಿ'

'ಜಯದೋಲ' 'ಯೇ ತೇರೆ ಪ್ರತಿರೂಪ' ಇವೇ ಇವರ ಪ್ರಸಿದ್ಧ ಕಥಾಸಂಕಲನಗಳು. ಇವುಗಳಲ್ಲಿ ಕೆಲವು ಕಥೆಗಳ ವಿಷಯ ಪ್ರೇಮ, ಕೆಲವು ಕ್ರಾಂತಿವಿಷಯಕ, ಇನ್ನು ಕೆಲವು ಕಾರಾಗ್ರಹವಾಸಕ್ಕೆ ಸಂಬಂಧಪಟ್ಟವುಗಳಾಗಿವೆ. ಸಮಸ್ತಯುಗ, ಜೀವನ, ಇತಿಹಾಸ, ಧರ್ಮ, ರಾಜನೀತಿ ಮೊದಲಾದವುಗಳನ್ನು ಅಜ್ಞೇಯರು ವ್ಯಕ್ತಿದೃಷ್ಟಿಯಿಂದ ನೋಡುತ್ತಾರೆ. ಆದರೂ ಕಥೆಗಳಲ್ಲಿಯ ಅವರ ಪಾತ್ರಗಳು ವರ್ಗವಾದಿಗಳಾಗದೇ ತಮ್ಮವೇ ಆದ ವ್ಯಕ್ತಿತ್ವ ಕಾದುಕೊಂಡಿವೆ.

ಕಥೆ, ಕಾದಂಬರಿಗಳಲ್ಲದೆ ವಾತ್ಸ್ಯಾಯನರು ಪ್ರಬಂಧಗಳನ್ನೂ ಬರೆದಿದ್ದಾರೆ, 'ತ್ರಿಶಂಕು', 'ಆತ್ಮನೇ ಪದ', 'ಅರೇ ಯಾಯಾವರ, ರಹೇಗಾ ಯಾದ ?' 'ಏಕ ಬೂಂದ್ ಸಹಸಾ ಮಛಲೀ' ಈ ಸಂಕಲನಗಳಲ್ಲಿ ಅವರ ಪ್ರಬಂಧಗಳು, ಪ್ರವಾಸ ಲೇಖನಗಳು ಪ್ರಕಟಗೊಂಡಿವೆ. ಇವು ಮನೋವೈಜ್ಞಾನಿಕ ಪ್ರಬಂಧಗಳಾಗಿವೆಯಲ್ಲದೆ ವ್ಯಕ್ತಿನಿಷ್ಠವೂ ಆಗಿವೆ.

ಹೀಗೆ ಅಜ್ಞೇಯರ ಸಾಹಿತ್ಯ ವೈವಿಧ್ಯಪೂರ್ಣವಾಗಿದೆ. ಆಧುನಿಕ ಹಿಂದೀ ಕಾವ್ಯದಲ್ಲಿ ಹೊಸ ಆಂದೋಲನವಾದ 'ಪ್ರಯೋಗವಾದ'ದ ಪ್ರವರ್ತಕರಾಗಿ ಯುಗದ ವಿಚಾರಧಾರೆಗೆ ಸಶಕ್ತ ಅಭಿವ್ಯಕ್ತಿಯನ್ನು ಕೊಟ್ಟಿದ್ದಾರೆ. ಕಾವ್ಯಕ್ಷೇತ್ರದಲ್ಲಿ ಹೊಸ ಪ್ರಯೋಗ ಮಾಡಿದಂತೆ ಗದ್ಯಕ್ಷೇತ್ರದಲ್ಲೂ ನವೀನ ಪ್ರಯೋಗ ನಡೆಸಿ ಎರಡರಲ್ಲೂ ಹೊಸ ಮಾರ್ಗವನ್ನು ಹುಡುಕಿಕೊಟ್ಟಿದ್ದಾರೆ. ಇದೇ ಕಾರ್ಯವನ್ನು ಕನ್ನಡದಲ್ಲಿ ಗೋಪಾಲಕೃಷ್ಣ ಅಡಿಗರು ಮಾಡಿದ್ದಾರೆ. ಕನ್ನಡಕಾವ್ಯದಲ್ಲಿ ಅಡಿಗರು ಮಾಡಿದ ಐತಿಹಾಸಿಕ ಕಾರ್ಯವನ್ನು ಹಿಂದಿಯಲ್ಲಿ ವಾತ್ಸ್ಯಾಯನರು ಮಾಡಿದ್ದಾರೆ. ಅವರ ಕಾವ್ಯದ ಕ್ಲಿಷ್ಟತೆಯಿಂದಾಗಿ ಅಜ್ಞೇಯರು ಜನಸಾಮಾನ್ಯರ ಕವಿಯಲ್ಲವೆಂಬ ಆಕ್ಷೇಪಕ್ಕೂ ಗುರಿಯಾಗಿದ್ದಾರೆ. ಇದರಲ್ಲಿ ಸತ್ಯಾಂಶವಿದ್ದರೂ ಅವರು ಸಾಮಾನ್ಯರ ಜೀವನದಿಂದ ದೂರ ಸರಿದಿಲ್ಲ. ಬಾಳಿನಲ್ಲಿ ಸದಾ ಹೋರಾಡಿದ್ದಾರೆ. ದೇಶದ ತುಂಬ ಅಲೆದಾಡಿದ್ದಾರೆ. ನಿಜಜೀವನದ ಈ ಅನುಭವಗಳೆಲ್ಲ ಅವರ ಸಾಹಿತ್ಯದಲ್ಲಿ ಮೂಡಿವೆ. ವ್ಯಕ್ತಿ ತಾನು ದೊಡ್ಡವನಾಗದೆ ತನ್ನ ಸಮಾಜವನ್ನು ದೊಡ್ಡದು ಮಾಡುವದು ಸಾಧ್ಯವಿಲ್ಲ ಎಂಬುದು ಅವರ ಜೀವನದೃಷ್ಟಿ.

ನವೋದಯ ಸಾಹಿತ್ಯ ಮತ್ತು ಲೇಖಕರ ಬಗೆಗೆ ಕ್ರಾಂತಿಕಾರಿ ಅಜ್ಞೇಯರಿಗೆ ಅಗೌರವವಿಲ್ಲ. ಭಾರತೀಯ ಸಂಸ್ಕೃತಿ, ಶಾಸ್ತ್ರ, ಸಾಹಿತ್ಯ, ಜ್ಞಾನವಿಜ್ಞಾನಗಳ ಬಗ್ಗೆ ಅಜ್ಞೇಯರಿಗೆ ಆಳವಾದ ವಿಶ್ವಾಸ ಮತ್ತು ಶ್ರದ್ಧೆಯಿದೆ. ಅವರ ಕಾವ್ಯ ಹಿಂದೀ ಸಾಹಿತ್ಯದ ಚಿರಸಂಪತ್ತು. ಅವರ ಕಥೆ, ಕಾದಂಬರಿಗಳು ಹಿಂದೀ ಕಾದಂಬರಿ ವಿಕಾಸಕ್ಕೆ ಹೊಸ ತಿರುವು ಕೊಟ್ಟವುಗಳು. ಅನೇಕ ಪತ್ರಿಕೆಗಳ ಸಂಪಾದಕರಾಗಿ ಹಿಂದೀ ಪತ್ರಿ

ಕೋದ್ಯಮವನ್ನೂ ಚೆನ್ನಾಗಿ ಬೆಳೆಸಿದರು. ಇಂಥ ಪ್ರತಿಭಾಸಂಪನ್ನ ಕ್ರಾಂತಿಕಾರಿ ಸಾಹಿತಿಗಳು ಹಾಗೂ ಸಾಹಿತಿ ಹಿಂದಿಯಲ್ಲಿ ಮಾತ್ರವಲ್ಲದೆ ಭಾರತೀಯ ಸಾಹಿತ್ಯದಲ್ಲಿಯೇ ವಿರಳ. ಆದ್ದರಿಂದಲೇ ಹಿಂದೀ ಸಾಹಿತ್ಯಕ್ಕೆ ಅಜ್ಞೇಯರ ಕೊಡುಗೆ ಮಹತ್ತರವಾದುದು, ವಿಶಿಷ್ಟವಾದುದು.

****

ಜನಪದ ಕವಿಚರಿತೆ

● ಮಲ್ಲಿಕಾರ್ಜುನ ಲಕ್ಕೊ

೮೫. ಹೊಂಗಲದ ಬಸವ (೧೭೮೦-೧೮೭೦)

ಬೆಳಗಾವಿ ಜಿಲ್ಲೆಯಲ್ಲಿ ಬೈಲಹೊಂಗಲ ಒಂದು ತಾಲೂಕು ಸ್ಥಳವಾಗಿದೆ. ಇದಕ್ಕೆ ಹೊಂಗಲ ಎಂದೂ ಕರೆಯುವರು. ಬಸವನೆಂಬ ಕವಿ ಈ ಗ್ರಾಮದಲ್ಲಿ ಹುಟ್ಟಿ ಬೆಳೆದವನಾಗಿದ್ದಾನೆ. 'ವೃಷಭ' ಎನ್ನುವುದು ಈತನ ಕಾವ್ಯನಾಮವಾಗಿರುತ್ತದೆ. ಕಿತ್ತೂರ ಸಂಸ್ಥಾನದ ಇತಿಹಾಸವನ್ನು ಪೂರ್ಣ ಅರಿತ ಕವಿ ಇವನಾಗಿದ್ದಾನೆ. ಅಂತೆಯೇ ಈತನು ರಚಿಸಿದ ಮಲ್ಲಸರ್ಜ ದುಂದುಮಿ -ಒಂದು ಉನ್ನತ ಖಂಡಕಾವ್ಯವಾಗಿರುತ್ತದೆ. ಜಾನಪದ ಸಾಹಿತ್ಯ ಕ್ಷೇತ್ರದಲ್ಲಿ ಈ ದುಂದುಮಿಗೆ ವಿಶೇಷವಾದ ಸ್ಥಾನವಿದೆ. ವೃಷಭ ಕವಿ ಒಟ್ಟು ಮೂರು ದುಂದುಮಿಗಳನ್ನೂ, ನೂರಾರು ಲಾವಣಿಗಳನ್ನೂ ರಚಿಸಿದ್ದಾನೆ. ಲವಕುಶರ ಲಾವಣಿಯ ಹಸ್ತಪ್ರತಿಯೊಂದರಲ್ಲಿ ಕೊನೆಗೆ 'ಹೇಮಗಲಾಖ್ಯವೆಂಬುದೀ ಪುರವ ಅಲ್ಲಿ। ಸೋಮಧರನ ಸಮಯಪ್ರೇಮಿ ವೃಷಭನೆಂಬ। ನಾಮದ ಸೇವಕ ಪೇಳಿದ ಕೃತಿಯ ॥' ಎಂದು ಕವಿ ತನ್ನ ಬಗ್ಗೆ ಹೇಳಿಕೊಂಡಿದ್ದಾನೆ. ಇವುಗಳ **ಪ್ರತಿಮಾಡಿದ ಶಕೆ ೧೭೯೨** ಪ್ರಮೋಧೂತ ಸಂವತ್ಸರ ಕಾರ್ತಿಕ ಮಾಸ ಎಂದಿರುವುದ ರಿಂದ ಮಧುರಚೆನ್ನ ಮತ್ತು ದೊಡ್ಡಭಾವೆಪ್ಪ ಮೂಗಿ ಅವರು ಈ ಕವಿ ದುಂದುಮಿ ಗಳನ್ನು ಬಹುಶಃ ೧೯ನೇ ಶತಮಾನದ ಆದಿಯಲ್ಲಿ ರಚಿಸಿರಬೇಕೆಂದು ಊಹಿಸಿದ್ದಾರೆ. ಆದ್ದರಿಂದ ಕವಿ ಅದಕ್ಕೂ ಮೊದಲು ೨೦ ವರುಷ ಅಂದರೆ ಸು. ೧೭೮೦ ರಿಂದ ೧೮೭೦ ಅವಧಿಯಲ್ಲಿ ಬಾಳಿರಬೇಕೆಂದು ಹೇಳಬಹುದಾಗಿದೆ.

ಬಾಜಿರಾಯನು ಹೊಂಗಲಕ್ಕೆ ಬಂದಾಗ ಕವಿ ತನ್ನ ಊರಿನ ಸೌಂದರ್ಯವನ್ನು ಮನಸಾರೆ ಹೊಗಳಿದ್ದಾನೆ. ತನ್ನನ್ನು ಸರಿಗಟ್ಟುವವರು ಮತ್ತೆ ಯಾರೂ ಇಲ್ಲವೆಂದು ಆತ್ಮಾಭಿಮಾನ ತಾಳಿದ್ದಾನೆ.

> 'ನೆರವಿಕೋ ಹೊಂಗಲ। ದರಸು ವೃಷಭರಾಜ
> ಸರಿ ನಿನ್ಹೊರತು ಮತ್ಯಾರ್ನರಿಯೆ ಲೋಕದಲಿ'

ಹೊಂಗಲ ಗ್ರಾಮಕ್ಕೆ ಹೇಮ (ಹೊನ್ನ) ಗಲಾ (ಗಲ-ಕಂಠ) ಗಲಾಖ್ಯ ಎಂದೂ ಕರೆದಿದ್ದಾನೆ. ಬಹುಶಃ ದುರದುಂಡೀಶ ಕವಿ ಈತನನ್ನು ಅನುಸರಿಸಿಯೇ ತಾನು 'ಕನಕಕಂಠ ಗ್ರಾಮ' ಎಂದು ಕರೆದಿರಬೇಕು. ಮಲ್ಲಸರ್ಜ ದುಂದುಮಿಯಲ್ಲಿ ಬರುವ ಈ ಕವಿಯ ಕೆಲವು ಪದ್ಯಗಳಿವು :

"ಪಾತ್ರದವರನು ಪದದ । ಸೂತ್ರವಿಡಿದ್ದಾಡುತಲಿ ।
ನೇತ್ರದೊಳು ಭಾವ ತೋರಿಸುತೆ ॥
ಏರುವರಾನೆ ಕುದುರೆಗಳ ತೋಫುಗ । ಳ್ಹಾರುವವು ಧಡಧಡಲ್ಲೆನ್ನುತಲಿ ।
ಆಗ ।
ದಾರಿನ ಜನರು ಕವಾಯ್ತುದಲಿ । ಇದ್ದು ಸೂರ್ಯಗಡರುವ ಬಾಣಬಿಡವುತಲಿ
ತರಿಕಿಟವೆಂದು ತಧ್ಧಿಮಿತವೆಂದು ಜಣಜಣತೆಂದು । ಕಾದಿ
ವಾರಿಜಾಕ್ಷಿಯರು ಒಯ್ಯಾರದಲಿ ।ನೃತ್ಯ।
ಚಾರುತನದ ನಾಂಟ್ಯವಾಡುತಲಿ ।ಹೀಂಗೆ।
ಶೋರಿ ತೆರಳುವ ಸೈನ್ಯ ಮೀರಿ ಶೋಭಿಸುತೆ ಶ್ಯಂ ।
ಗಾರವಾಗಲು ನೋಡ್ಯುಲ್ಲಾಸದಿ ದೊರೆಯು ।
ಕ್ಷೇತ್ರದೊಳು ಭಾವತೋರಿಸುತೆ ವೈಭವದ ವಿ ।
ಚಿತ್ರಗಳಿಗೊಲಿದು ನಲಿವುತಲಿ ॥
ಹತ್ತುವರ್ ಪಲ್ಲಕ್ಕಿ ಮುಂದೆ । ತಲಿಮ್ಯಾಲೆ ।
ಸತ್ತಿಗ್ಹಿಡಿವರು ಚೆಂದದಿಂದೆ ।..............."

ಎರಡು ತಲೆಮಾರಿನ ಹಿಂದೆ ಬದುಕಿದ ಈ ಕವಿಯ ವಿಷಯಕ್ಕೆ ಇನ್ನೂ ಹೆಚ್ಚಿನ ಮಾಹಿತಿ ದೊರೆಯಬೇಕಾಗಿದೆ.

೮೬. ನಿಂಬರಗಿಯ ನಾರಾಯಣ : (೧೭೯೦-೧೮೭೫)

ಸು. ೧೭೯೦ರಲ್ಲಿ ಸೊಲ್ಲಾಪುರದ ಸೋದರ ಮಾವನ ಮನೆಯಲ್ಲಿ ನಾರಾಯಣನು ಹುಟ್ಟಿದನು. ಇವನ ಉದ್ಯೋಗ ನೇಕಾರಿಕೆಯಾಗಿತ್ತು. ೨೫ ವರುಷದವನಾಗಿದ್ದಾಗ ಒಮ್ಮೆ-ಹೋಳಿ ಹಬ್ಬದಲ್ಲಿ ಹುಡುಗಾಟಿಕೆ ಮಾಡಿದ್ದಕ್ಕೆ ತಂದೆಯಿಂದ 'ಛೀ' ಹಾಕಿಸಿಕೊಳ್ಳುತ್ತಾನೆ. ಅವಮಾನವಾಗಿ ಮನೆಯಿಂದ ದೂರ ಹೋಗುತ್ತಾನೆ. ಪಂಢರಪುರದಲ್ಲಿ ಹೀಗೆ ತಿರುಗಾಡುತ್ತಿದ್ದಾಗ-ಒಮ್ಮೆ ಸ್ವಪ್ನದಲ್ಲಿ 'ಸಿದ್ಧಗಿರಿಗೆ ಹೋಗು' ಎಂದು ದೃಷ್ಟಾಂತವಾಗುತ್ತದಂತೆ. ಅದೇ ಪ್ರಕಾರವಾಗಿ ಈ ನೇಕಾರ ನಾರಾಯಣನು ಸಿದ್ಧಗಿರಿಗೆ ತೆರಳಿ ಅಲ್ಲಿಯ 'ಮುಪ್ಪಿನ ಮುನಿ'ಗಳಿಂದ ದೀಕ್ಷೆ ಪಡೆಯುತ್ತಾನೆ. ೧೮೨೫ರ ಸುಮಾರಿಗೆ ನಾರಾಯಣನು ಕುರಿಕಾಯುವ ಕೆಲಸ ಪ್ರಾರಂಭಿಸುತ್ತಾನೆ. ಅವುಗಳನ್ನು ಅಡವಿಯಲ್ಲಿ

ಮೇಯಲು ಬಿಟ್ಟು ಧ್ಯಾನಾಸಕ್ತನಾಗುತ್ತಿರುತ್ತಾನೆ. 'ಗುರು–ಲಿಂಗ–ಜಂಗಮ' ಇವನ ಅಂಕಿತನಾಮವಾಗಿರುತ್ತದೆ. ನಾಥಸಂಪ್ರದಾಯಕ್ಕಂಟಿಕೊಂಡ ನಾರಾಯಣನು 'ಗುರು ಲಿಂಗ ಜಂಗಮ ಮಹಾರಾಜ' ನೆನಿಸುತ್ತಾನೆ. ಹಲವಾರು ತತ್ವದ ಪದಗಳನ್ನು ರಚಿಸುತ್ತಾನೆ. ೧೮೮೫ರ ಸುಮಾರು ಶಿವಾಧೀನನಾಗುತ್ತಾನೆ.

ಅಂದಿಲ್ಲ ಸ್ವಾಮಿ ಇಂದಿಲ್ಲ
ಎಂದಿಗಾದರು ನಿಮ್ಮನಗಲಿ ನಾ ಇಲ್ಲ । ಪಲ್ಲ ।
ನಿರ್ಬೈಲನು ನೀನು ನಿರ್ವಿಕಾರನು ನಾನು ।
ಸಗುಣರೂಪ ನೀನು–ಶರಣ ಮಾಡುವೆ ನಾನು । ಅ. ಪ ।
ಪಂಚವದನ ನೀನು ಪಾದ ನಂಬಿದೆ ನಾನು
ಜಗಭರಿತ ನೀನು ಜಗದ ಒಳಗೆ ನಾನು
ಪ್ರಣವಸ್ವರೂಪ ನೀನು ಪರಿಸಿ ನೋಡುವೆ ನಾನು
ಗುರುಲಿಂಗ ಜಂಗಮ ನೀನೆ–ನಾನೂ ನೀನೇ । ೧ ।

೮೭. ಹೆಬ್ಬಳ್ಳಿಯ ಪುಂಡ ಬಸವಕಂದ : (೧೮೦೦–೧೮೭೦)

ಲಾವಣಿಕಾರರಲ್ಲಿ ಹೆಬ್ಬಳ್ಳಿಯ 'ಪುಂಡ ಬಸವಕಂದ' ಎಂಬ ಅಂಕಿತದ ಜನಪದ ಕವಿಯೂ ಒಬ್ಬನಾಗಿದ್ದಾನೆ. ಇವನ ವಿಷಯಕ್ಕೆ ಹೆಚ್ಚಿನ ಮಾಹಿತಿ ತಿಳಿದು ಬಂದಿಲ್ಲ. ಕಿತ್ತೂರ ಸಂಸ್ಥಾನ ಹಾಳಾದ ತರುವಾಯದಲ್ಲಿ ಈ ಕವಿ ಬಹುಶಃ ಆ ಕಥೆಯನ್ನೆಲ್ಲಾ ಜನರ ಬಾಯಿಂದ ಕೇಳಿಯೋ ಚಿಕ್ಕಂದಿನಲ್ಲಿ ಕಣ್ಣಾರೆ ಕಂಡೋ ಕಿತ್ತೂರ ಸಂಸ್ಥಾನದ ದೊರೆಗಳ ಮೇಲೆ ಲಾವಣಿಗಳನ್ನು ರಚಿಸಿರಬೇಕು. ದೊಡ್ಡ ಭಾವೆಪ್ಪ ಮೂಗಿ ಅವರೂ ಕೂಡ 'ಕಿತ್ತೂರಿನ ಪ್ರಕರಣವೆಲ್ಲ ಕೊನೆಗೊಂಡಾಗ ಈತನು ಜನರ ಬಾಯಿಂದ ಕೇಳಿದ ಕಥೆಯನ್ನೇ ಲಾವಣಿಯಲ್ಲಿ ಹೆಣೆದಿದ್ದಾನೆ' ಎಂದಿದ್ದಾರೆ. ಹೊಂಗಲದ ಬಸವನ ಶಿಷ್ಯ ಮಗನಾಗಿರಬೇಕೆಂದು ಮಧುರಚೆನ್ನರು ಊಹಿಸಿದ್ದಾರೆ. 'ಸುಂದರ ಹೆಬ್ಬಳ್ಳಿ' **'ಬಸವನ ಕಂದ'** ಕಂಡಂತೆ ಕವಿ ಮಾಡಿದ ವಿಸ್ತಾರ' –ಎಂಬ ಈತನ ಹಾಡುಗಳ ಕೊನೆಗೆ ಬರುವ ಚರಣದಲ್ಲಿ 'ಬಸವನ ಕಂದ' ಎಂದಿದೆ. ಬಹುಶಃ ಮಧುರಚೆನ್ನರು ಹೇಳಿದಂತೆ, ಹೊಂಗಲದ 'ವೃಷಭ' –ಬಸವ ಕವಿಯ ಶಿಷ್ಯನಾಗಿರಬೇಕೆಂದು ಒಪ್ಪಿಕೊಳ್ಳಬಹುದಾಗಿದೆ.

'ಪುಂಡ ಬಸವಕಂದ'ನು –ಸಂಗೊಳ್ಳಿರಾಯಣ್ಣ, ಮಲ್ಲಸರ್ಜ, ಚೆನ್ನಮ್ಮ– ಮೊದಲಾದವರ ಕುರಿತು ಲಾವಣಿ ರಚಿಸಿದ್ದಾನೆ.

'ಕಿತ್ತೂರ ಚೆನ್ನವ್ವನ ಸೊಸಿ। ಹೊಂಗಲ ಬಿಟ್ಟು ಹೋಗುವಾಗೆ ಮಾಡತಾಳೆ ಮಾದುಃಖಾ ।
ಮತ್ತ ನಮ್ಮ ಮಲ್ಲಸರ್ಜ ಸತ್ತುಹೋಗದಿದ್ದರಿಂತು ಹೊತ್ತು ಹೋಗುದೇಕೆ ನಮ್ಮ ಬದುಕು । ಪ ।

....
ದಾನಧರ್ಮವ ಕೊಟ್ಟು ನೇಮನಿತ್ಯ ತೀರಿಸಿ। ಮನ್ಯ ಮುಕ್ತಿ ಕೊಡೆಂದು
ಚನ್ನವನ ಸೊಸಿ ಮಣ್ಣೊಳಗಿಟ್ಟ ತಿರುಗಿದರು................"

೮೮. ಕಳಸದ ಗೋವಿಂದಭಟ್ಟ : (೧೮೦೦-೧೮೭೦)

ಧಾರವಾಡ ಜಿಲ್ಲೆಯ ಶಿಗ್ಗಾಂವ ತಾಲೂಕಿನ ಕಳಸದ ಗ್ರಾಮದಲ್ಲಿ ಗೋವಿಂದಭಟ್ಟ ಹುಟ್ಟಿದನು. ಸ್ಮಾರ್ತ ಬ್ರಾಹ್ಮಣನಿದ್ದು ಜ್ಯೋತಿಷ್ಯಶಾಸ್ತ್ರ ಬಲ್ಲವನಾಗಿದ್ದನು. ಸಂಸ್ಕೃತ ಪಂಡಿತನೂ ಆಗಿದ್ದನು. ಗುಡಗೇರಿಯ ಕಲ್ಮೇಶ್ವರ ದೇವಾಲಯ ಪೂಜಾರಿಯೂ ಆಗಿದ್ದನು. ಅಲ್ಲಿಯೇ ಗಾಂವಠಿ ಶಾಲೆಯೊಂದರ ಶಿಕ್ಷಕನೂ ಆಗಿದ್ದನು. ಇವನ ಬಳಿ ಅಭ್ಯಾಸ ಮಾಡಲು ನೂರಾರು ವಿದ್ಯಾರ್ಥಿಗಳು ಬರುತ್ತಿದ್ದರು. ಇಂಥ ಶಿಷ್ಯ ಬಳಗದಲ್ಲಿ ಶಿಶುನಾಳ ಶರೀಫನೂ ಒಬ್ಬನು. ಕೇವಲ ಅಕ್ಷರಾಭ್ಯಾಸದ ಗುರುವಾಗಿರದೆ, ಆಧ್ಯಾತ್ಮದನುಭವವನ್ನು ಅರುಹಿ ಅವನ ಜೀವನದಲ್ಲಿ ಅಳವಡುವಂತೆ ಮಾಡಿದ ಶ್ರೇಯಸ್ಸು ಗೋವಿಂದ ಭಟ್ಟ ಗುರುವಿಗೆ ಸಲ್ಲುವಂತಹದು. ಯೋಗಾಭ್ಯಾಸದಲ್ಲೂ ಗೋವಿಂದಭಟ್ಟ ನಿಪುಣನಿದ್ದನು.

ಇದರ ಹೊರತಾಗಿ ಗೋವಿಂದಭಟ್ಟನಲ್ಲಿ ಜಾನಪದ ಹಾಡುಗಾರಿಕೆ ಕರತಲಾಮಲಕವಾಗಿತ್ತು. ಅದರ ಲಯ, ಗತ್ತು, ಧಾಟಿಗಳನ್ನು ಬಲ್ಲವನಾಗಿದ್ದುದರಿಂದ ನೂರಾರು ಅನುಭವದ ಪದಗಳನ್ನು ರಚಿಸಿದ್ದುಂಟು. ಗುರುವಿನ ಈ ಶಕ್ತಿಯೇ ಶರೀಫನಲ್ಲಿ ಹರಿದು 'ಶರೀಫ'-ಭಜನಾ ಹಾಡುಗಳ ಭಂಡಾರಿಯೆ ಆದದ್ದನ್ನು ಇಲ್ಲಿ ಸ್ಮರಿಸಬಹುದು.

'ಗುಡಿಪುರ'ದ ಅಂದರೆ ಗುಡಿಗೇರಿಯ 'ಕಲ್ಮೇಶ್ವರ' ಈತನ ಹಾಡುಗಳಲ್ಲಿ ಬರುವ ಅಂಕಿತವಾಗಿದೆ.

"ಗುರುಸೇವಾ ಮಾಡೋ ನೀನು। ಪಾಮರ ಮೂಢಾ ।ಪ।
ಗುರುಸೇವಾ ಮಾಡದೆ। ನರಸೇವಾ ಮಾಡುವಿ।
ತಾರಿಸುವವರ ಕಾಣೆ ತಾಮಸ ನಿನ್ನದು ।೧।

ಬಂದೇನು ಇಲ್ಲಿ ಕಂಡೀ। ಹಿಂದಿನ ಕರ್ಮವೆಲ್ಲ ಇಲ್ಲೇ ಉಂಡಿ
ಮುಂದಿನ ಮಾರ್ಗವ ತಿಳಕೋ ಹುಚ್ಚಮುಂಡೀ ।೨।
ಸದಮಲ ಗುಡಿಪುರ ಕಲ್ಮನ ಕಾಣವೆ। ಕಾಲನ ವಶನಾಗಿ ಕೈಸೆರೆ
ಸಿಗುವಿಯಲ್ಲೊ ॥

೮೯. ಕುಂದಗೋಳ ಬಸಲಿಂಗಯ್ಯ (೧೮೦೦-೧೮೮೦)

ಕುಂದಗೋಳ ಧಾರವಾಡ ಜಿಲ್ಲೆಯ ಒಂದು ತಾಲೂಕು ಸ್ಥಳ. ಒಕ್ಕಲುತನ, ವ್ಯಾಪಾರಕ್ಕೆ ಪ್ರಸಿದ್ಧಿ ಪಡೆದಂತೆ ಸಂಗೀತ-ಸಾಹಿತ್ಯಕಲೆಗೂ ಜನ್ಮಭೂಮಿಯಾಗಿದೆ. ಈ ಗ್ರಾಮದ ಬಸಲಿಂಗಯ್ಯನು ೧೯ನೇ ಶತಮಾನದಲ್ಲಿ ಬಾಳಿದವನಾಗಿದ್ದಾನೆ. ಹೋಳಿ ಪದಗಳನ್ನು ರಚಿಸುವಲ್ಲಿ ಎತ್ತಿದ ಕೈ.

ಈತನು ರಚಿಸಿದ ಹಾಡುಗಳು ನೂರಾರು. ಅದರಲ್ಲಿ ನಾಲ್ಕನ್ನು ಡಾ. ಎಂ. ಎಸ್. ಸುಂಕಾಪುರ ಅವರು ಈಗಾಗಲೇ ಜೀವನಜೋಕಾಲಿಯಲ್ಲಿ ಪ್ರಕಟಿಸಿದ್ದಾರೆ. (ಕೃಷ್ಣಾರ್ಜುನರ ಕಾಳಗ, ಕೃಷ್ಣಗೊಲ್ಲತಿ, ವೀರ ಅಭಿಮನ್ಯು ಮುಂ.) ಕೃಷ್ಣಾರ್ಜುನರ ಕಾಳಗವನ್ನು ಬಯಲಾಟದ ರೂಪದಲ್ಲಿ ಈಗಲೂ ಆಡುವುದುಂಟು. ಹುಬ್ಬಳ್ಳಿಯ ರಾಜೇಂದ್ರ ಮಾಲಗತ್ತಿ ಎನ್ನುವವರ ಬಯಕೆಯ ಮೇರೆಗೆ ಈ ಬಯಲಾಟದ ಕಥೆಯನ್ನೇ ಹೋಳಿ ಹಾಡಿನ ಧಾಟಿಯಲ್ಲಿ ಹೆಣೆದುಕೊಟ್ಟನಂತೆ. ಈ ವಿಷಯ ತಿಳಿದ ನಾನು ಕುಂದಗೋಳದಲ್ಲಿ ಕವಿಯ ವಿಷಯಕ್ಕೆ ಹೆಚ್ಚಿನ ಮಾಹಿತಿಗೆಂದು ಹೋದರೆ ಅಲ್ಲಿ ಯಾವ ಸುಳಿವೂ ದೊರೆಯಲಿಲ್ಲ.

ಈತನ ಹಾಡುಗಳಲ್ಲಿ 'ಕುಂದುಗೋಳ ಶ್ರೀ ಗುರುಸಖ', ಶ್ರೀ ಕುಂದುಗೋಳ ಅಸಮಾಕ್ಷ ಗುರುಪ್ರದ ಕರುಣದಲ್ಲಿ –ಬಸಲಿಂಗ ರಚಿಸಿದ', 'ವರಕುಂದಗೋಳದ ತವೆ ಗುರುಕರುಣದಿಂದುಸುರ್ದೆ ಸಾರವನು' 'ಕವಿ ಬಸಲಿಂಗಯ್ಯನಿಲ್ಲೆ ಬಂದು' . ಹೀಗೆ ಕವಿಯ ಅಂಕಿತಗಳನ್ನು ಗುರುತಿಸಬಹುದಾಗಿದೆ.

'ಪುಂಡ ಪ್ರಚಂಡ ಉದ್ದಂಡ ಕ್ಷತ್ರಿಯ ಕುಲ
ಗಂಡರಿಕುಲ ಪಾರ್ಥನಂದನನು ಪಿತನ
ಕಂಡಡೆ ಕಮಲದ್ವಂದ್ವವನು ದೀರ್ಘ
ದಂಡ ಶರಣು-ಶರಣೆಂದವನು ಭೂ
ಮಂಡಲ ಪತಿಯಪ್ಪಣೆ ಕೊಟ್ಟು ಕಳುಹೊ ನೀ ।
ಭಂಡ ಬಲವನೆಲ್ಲ ಖಂಡಿಸಿ ಬರುವೆ'

೯೦. ಗೋಕಾಕದ ಅನಂತಾಚಾರ್ಯ (೧೮೦೦-೧೮೮೦)

ಗೋಕಾಕ ಬೆಳಗಾಂವಿ ಜಿಲ್ಲೆಯ ತಾಲೂಕ ಸ್ಥಳವಾಗಿದೆ. ಇಲ್ಲಿ ಹಲವಾರು ಜನಪದ ಕವಿಗಳೂ ಆಗಿ ಹೋಗಿದ್ದಾರೆ. ಕ್ರಿ.ಶ. ಸು. ೧೮೦೦ರಲ್ಲಿ ಹುಟ್ಟಿ ೮೦ ವರುಷಗಳ ತುಂಬು ಜೀವನ ಬದುಕಿದ ಅನಂತಾಚಾರ್ಯ –'ಅನಂತಾದ್ರೀಶ' ಎಂಬ ಮುದ್ರಿಕೆಯಲ್ಲಿ ನೂರಾರು ಅನುಭವ ಪದಗಳನ್ನು ರಚಿಸಿದ್ದಾನೆ. ಈತನು ಸಂಸ್ಕೃತ ಪಂಡಿತನೂ.

ಸಂಗೀತ ಶಾಸ್ತ್ರಜ್ಞನೂ ಆಗಿದ್ದನೆಂದು ತಿಳಿದು ಬರುತ್ತದೆ. ಶ್ರೀ ಸಾಮಾನ್ಯರಿಗೆ ತಿಳಿಯುವ ಭಾಷೆ ಬಳಸಿ, ಜನಪದ ಧಾಟಿಯಲ್ಲ ಹಲವಾರು ಕೃತಿಗಳನ್ನೂ ಬರೆದಿದ್ದನೆಂದು ತಿಳಿದು ಬರುತ್ತದೆ. ಹತ್ತಾರು ಬಯಲಾಟಗಳೂ ಈತನಿಂದ ಸೃಷ್ಟಿಯಾಗಿರುತ್ತವೆ. ಪಾರಿಜಾತ ಆಟದಲ್ಲಂತೂ ಇವನಿಗೆ ವಿಶೇಷ ಒಲವು. ಕೃಷ್ಣಪಾರಿಜಾತದಂತೆ ಶಿವಪಾರಿಜಾತವೊಂದನ್ನು ರಚಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. ನೂರಾರು ಲಾವಣಿಗಳನ್ನೂ ಬರೆದಿದ್ದಾನೆ.

ಕವಿಯ ವಿಷಯಕ್ಕೆ ಹೆಚ್ಚಿನ ಮಾಹಿತಿಗೆಂದು ಸ್ನೇಹಿತರಾದ ಈಶ್ವರ ಮಿಣಚಿ ಅವರೊಂದಿಗೆ ಗೋಕಾಕ ಊರನ್ನೆಲ್ಲ ಸುತ್ತು ಹಾಕಿದರೂ ಅವನ ಸುಳಿವು ಗೊತ್ತಾಗಲಿಲ್ಲ.

ಹ್ಯಾಂಗ ಮಾಡಲೆವ್ವಾ ನಾನು ಏ ಮಾತನಾ । ಇ
ನ್ಹ್ಯಾಂಗ ಮಾಡಲೆವ್ವ ನಾನು ।ಪ।
ಹ್ಯಾಂಗ ಮಾಡಲೆವ್ವ ನಾನು ।
ಹೋಗಿ ಸವತಿ ಮನಿ ಸೇರಿದ ।
ಭೋಗಮಂದಿರ ಬೇಸರಾಯಿತು ।
ಬೇಗ ಈಗಲೆ ಹೋಗಿ ಕರೆಯೆ । ।ಅ–ಪ।

ನೀರಿನೊಳಗ ಮನಿಯು ಮಾಡಲ್ಯಾ ಅಲ್ಲ್ಯವನು ಪೊತ್ತ
ಭಾರ ಬೆನ್ನೊಳು ಪೊತ್ತು ತಾಳಲ್ಯಾ
ಬೇರು ತಿನಿಸಿ ಮರುಳಮಾಡಿ ಕ್ರೂರ ಬುದ್ಧಿ ಜಿಡಿಸಲೇನ
ಯಾರ ಮುಂದ ಹೇಳಲಿನ್ನ ದಾರ ಮಾತು ಕೇಳಲೊಲ್ಲ ॥೧॥

....

ಕಂತು ಪಿತಾನಂತಾದ್ರೀಶ ನಿಂತನಲ್ಲೆ ನಾಚಿಕೆ ಬಿಟ್ಟು
ಭ್ರಾಂತಳಾಗಿ ಕುಳಿತೆ ಆತಗೆ ಎಂಥ ಕುದುರಿ ಕಳುಹಲಮ್ಮ''

೯೧. ಮುಲ್ಲಿಗವಾಡದ ನರಸಪ್ಪ (೧೮೦೦–೧೯೦೦)

ಧಾರವಾಡ ಜಿಲ್ಲೆಯ ಕುಲಕರ್ಣಿ ನರಸಪ್ಪ ಗೃಹಸ್ಥ, ಶಾನಭೋಗ. ಅದೇ ಊರ ಸೋಮೇಶ್ವರನ ಭಕ್ತನೂ ಆಗಿದ್ದನು. ೧೯ನೇ ಶತಮಾನದ ಉದ್ದಕ್ಕೂ ಬದುಕಿದ ನರಸಪ್ಪ ಕುಲಕರ್ಣಿಕೆಯನ್ನು ಮಾಡುತ್ತಿದ್ದನು. ಮನೆಗೆ ಇವನೇ ಹಿರಿಯ ಮಗನಾಗಿದ್ದನು.

ಇದ್ದಕ್ಕಿದ್ದಂತೆ ಪ್ರಪಂಚವನ್ನು ತ್ಯಾಗಮಾಡಿ ವೈರಾಗ್ಯ ತಾಳುತ್ತಾನೆ. ಊರೂರು ಅಡ್ಡಾಡುತ್ತ ಹಲವಾರು ಶಿಷ್ಯಬಳಗದೊಂದಿಗೆ ಶ್ರೀ ಸಾಮಾನ್ಯರಿಗೂ ತಿಳಿಯುವ ಭಾಷೆಯಲ್ಲಿ ಅನುಭವದ ಪದಗಳನ್ನು ಹಾಡಿ ಧನ್ಯನಾಗಿದ್ದಾನೆ. ಇವನ ಹಾಡುಗಳನ್ನು ಕೃಷ್ಣರಾಯ ತಾಪಸ ಅವರು ೧೯೫೭ರಲ್ಲಿ ಅಚ್ಚು ಹಾಕಿಸಿ 'ಭವತಾರಕ ಗೀತಗಳು' ಎಂಬ

ಹೆಸರಿನಲ್ಲಿ ಪ್ರಕಟಿಸಿದ್ದುಂಟು. ನರಸಪ್ಪನ ಶಿಷ್ಯಬಳಗಕ್ಕಂತೂ ಲೆಕ್ಕವಿಲ್ಲ. ಅವರಲ್ಲಿ ಕಲಿವಾಳದ ನಿಂಗಪ್ಪ, ಕೋಳಿವಾಡದ ಹುಲಗಪ್ಪ-ಮೊದಲಾದವರು ಅಚ್ಚುಮೆಚ್ಚಿನವರು.

ನರಸಪ್ಪ ಮಹಾ ಮಹಿಮಾಶಾಲಿಯಾಗಿದ್ದನು. 'ಭವತಾರಕ' ಎಂಬುದು ಇವನ ಗೀತೆಗಳಲ್ಲಿ ಬರುವ ಮುದ್ರಿಕೆಯಾಗಿರುತ್ತದೆ.

'ಇದು ಏನೋ ನಿನ್ನ ಗುಡಿಗುಡೀ । ಒಳಗಿನ ಕಸವನು ಹೊಡೀ ಹೊಡೀ।
॥ ಪ ॥
ಹಗಲಿರುಳು ನೀ ಬದಕ ಮಾಡಿ । ಏನು ಗಳಸಿದ್ಯೋ ಹುಡೀ ಹುಡೀ ।
ಜಗದೊಳು ದೇವನ ತಿಳಿಯಲೊಲ್ಲಿ । ತಿಳಿದೀತೊ ಅಲ್ಲಿಗೆ ನಡೀ ನಡೀ ।
ಹಸಿದು ಬಂದು ನೀ ವಸ್ತಿಯಾಗಿಳಿದರೆ ಮತ್ತೆನಾರ ಕೊಡೂ ಕೊಡೂ ।
ಅಸ್ತಮಯಾದೀತು ಉದಯಲೆದ್ದು ತಪ್ಪದೆ ಇಲ್ಲೆಂದೊ ನುಡೀ ನುಡೀ ।
ನಾಕು ಕಾಯದೊಳು ಎರಡಿಟ್ಟನು ನೀ ಎರಡನೆ ದೇವರಿಗೋಡೀ ಓಡೀ ।
ಲೋಕಪಾಲಕ ಭವತಾರಕನಂಘ್ರಿಯ । ಈ ಕಾಯದಿ ದಯಾ ಪಡೀ ಪಡೀ ।

ಕಲಿವಾಳದ ನಿಂಗಪ್ಪನ ಕುರಿತಾದ ಹಾಡಂತೂ ಕಲಿತ ಬುದ್ಧಿ ಕಡೆಯಲಿ ಕೆಲಸಕ್ಕೆ ಬಾರದೆಂದು ಹೇಳಿ ಭಕ್ತರ ಕೃಪೆಯನ್ನು ಸಂಪಾದಿಸಲು ನರಸಪ್ಪ ಉಪದೇಶಿಸಿದ್ದು ನರ ಮನುಷ್ಯರನ್ನೆಲ್ಲಾ ಎಚ್ಚರಿಸುವಂತಿದೆ.

'ಕಲಿಯುಗದೊಳು ಕಂಡೆನು ನಿನ್ನೊಬ್ಬನ । ಕಲಿವಾಳದ ನಿಂಗಪ್ಪ ॥
ಕಲಿತ ಬುದ್ಧಿಯು ಕಡೆಯಲಿ ನಿನ್ನ । ಕೆಲಸಕೆ ಏನೂ ಬಾರದಪ್ಪ । ಪ ।

ಎತ್ತು ಎಮ್ಮಿ ಆಕಳಹೋರಿ । ಜತನ ಮಾಡಿದೆಪ್ಪ ।
ಮೃತ್ಯುದೇವತೆಗೆ ತುತ್ತು ಇದರೊಳು । ಮುಕ್ತಿ ನಿನಗಿಲ್ಲಪ್ಪ । ೧ ।

ಹೊಲಮನಿಯೆಂದು ನಲಿನಲಿದಾಡುತ । ಒಲಒಲಗುಟ್ಟುವೆಯಪ್ಪ ।
ಹೊಲಮನಿ ಸಾಧಿಸಿ ಸಂಗಡ ಒಯ್ದಿಲ್ಲಾ ನಿಮ್ಮಪ್ಪಾ । । ೨ ।

ಶುದ್ಧನಾಗಿ ನೀ ಕೋಶವ ಕಲಿತು । ಬದ್ಧವ ತಿಳಕೋಳಪ್ಪಾ ।
ಬುದ್ಧಿವಂತನು ನೀ ಸ್ವರ್ಗದ ಸುದ್ದಿಯು । ಸ್ವಲ್ಪವು ನಿನಗಿಲ್ಲಪ್ಪಾ । ೩ ।

ರೋಗವ ನೀಗಿಸಿ ಜನರಿಗೆ ಭೋಜನ । ಭೋಗವನ್ನು ನೀ ಪಡೆದೆಪ್ಪಾ ।
ಹೋಗದು ಕರ್ಮವು ಇದರಲಿ ಮುಂದಿನ । ಆಗಮಮಹಿಮೆಯ-
ತಿಳಕೋಳಪ್ಪಾ । ೪ ।

ಅಪರೂಪದ ನರದೇಹಕೆ ಬಂದು । ವಿಪರೀತವಿದ್ಯಾಕಪ್ಪ ।
ಗುಪಿತದಿ ಭವತಾರಕನ ಭಕ್ತರ । ಕೃಪೆಯನು ನೀ ಸಂಪಾದಿಸಪ್ಪಾ । ೫ ।

೯೨. ಹೊಂಗಲದ 'ದುರದುಂಡೀಶ' (೧೮೦೦-೧೮೭೦)

'ದುರದುಂಡೀಶ' ಎನ್ನುವುದು ಕವಿಯ ಕಾವ್ಯನಾಮವಾಗಿದೆ. ಬೆಳಗಾಂವ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಚಿವಟಗುಂಡಿ ಎಂಬ ಗ್ರಾಮದಲ್ಲಿ ಸುಮಾರು 1800 ರಲ್ಲಿ ಜನಿಸಿದ ಪಡದಯ್ಯನೇ ಈ ದುರದುಂಡೀಶ ಕವಿ.

ಚಿವಟಗುಂಡಿಯ ಪುರಾಣಿಕ ಮನೆತನದ ಶಿವಬಸವ ಶಿವಯೋಗೀಶ್ವರನಿಗೆ ಮಗನಾಗಿ ಜನಿಸಿದ ಪಡದಯ್ಯನು ಬೆಳೆದದ್ದು ಬೈಲಹೊಂಗಲದಲ್ಲಿ. ಈತನ ಸಂಬಂಧಿಕರು ಈಗ್ಗೆ ಬೈಲಹೊಂಗಲದಲ್ಲಿಯೇ ವಾಸಮಾಡಿಕೊಂಡಿದ್ದಾರೆ. ಅರಭಾವಿ ಪುಣ್ಯಾರಣ್ಯ ಶ್ರೀ ದುರದುಂಡೀಶ್ವರರ ಪರಮಭಕ್ತನಾದ ಪಡದಯ್ಯ ಕವಿ 'ದುರದುಂಡೀಶ' ಎಂಬ ಅಂಕಿತದಲ್ಲಿ ಹಲವಾರು ಯಕ್ಷಗಾನಗಳನ್ನು ರಚಿಸಿ ಜಾನಪದ ಸಾಹಿತ್ಯಕ್ಕೆ ಅಪಾರ ಕೊಡುಗೆ ಸಲ್ಲಿಸಿದ್ದಾನೆ. ಉತ್ತರ ಕರ್ನಾಟಕದಲ್ಲಿ ಯಕ್ಷಗಾನದ ರಚನೆಯಾಗಲಿ, ಪ್ರಯೋಗಗಳಾಗಲಿ ಇಲ್ಲ. ಆದರೆ ಪಡದಯ್ಯನವರ ಈ ಕೃತಿಗಳು ಆ 'ಇಲ್ಲ' ಎಂಬ ಶಂಕೆಯನ್ನು ಅಳಸಿ ಹಾಕಿ ಉತ್ತರ ಕರ್ನಾಟಕದಲ್ಲಿ ಯಕ್ಷಗಾನಗಳು ಸೃಷ್ಟಿಯಾಗಿವೆ ಎಂಬುದನ್ನು ಹೇಳುವಂತಾಗಿದೆ.

ಮುರಗೋಡದ ಶ್ರೀ ಡಿ. ಬಿ. ಸವದತ್ತಿಮಠ ಅವರ ಮನೆಯಲ್ಲಿ ಈ ಕವಿಯ ೮-೧೦ ಯಕ್ಷಗಾನದ ತಾಡವೋಲೆಪ್ರತಿಗಳು-ಸ್ವತಃ ಕವಿಯೇ ಬರೆದವುಗಳಿರಬೇಕು-ದೊರೆತವು. ಅವುಗಳನ್ನು ಬಳಕೆಗೆ ತಂದ ಪ್ರೊ. ಸಂಗಮೇಶ ಅವರು ನನಗೆ ತೋರಿಸಿದಾಗ ನಾನೂ ಆಚ್ಚರಿಪಟ್ಟುಕೊಂಡೆ. ಇಬ್ಬರೂ ಸೇರಿ ಅವುಗಳನ್ನು ಸಂಪಾದಿಸುವ ಕಾರ್ಯದಲ್ಲಿ ತೊಡಗಿದೆವು. ಅವಿನ್ನೂ ಪ್ರಕಟವಾಗಬೇಕಾಗಿವೆ.

೧) ಪ್ರಭುದೇವ ೨) ಶ್ರೀ ಕೃಷ್ಣಹರಣ ೩) ಬಭ್ರುವಾಹನ ೪) ಸುಧನ್ವ ೫) ಚೋಳಾಂಗನ ೬) ಸೀತಾಸ್ವಯಂವರ ಮೊದಲಾದ ಯಕ್ಷಗಾನ ಪ್ರಬಂಧಗಳು ಪ್ರಮುಖವಾಗಿವೆ. ಅಲ್ಲಿ ಕವಿ ಬಳಸಿದ ಭಾಷೆ ಜಾನಪದದ ಶ್ರೀಮಂತಿಕೆಯನ್ನು ಪ್ರದರ್ಶಿಸಿದೆ. ದೂತಿಯ ಪಾತ್ರದಲ್ಲಂತೂ ಹಾಸ್ಯರಸ ಚೆಲ್ಲವರಿದಿದೆ.

ಕವಿ ಬದುಕಿದ್ದುದು ಕಿತ್ತೂರ ಸಂಸ್ಥಾನದ ಕಾಲದಲ್ಲಿರಬೇಕು. ಕಿತ್ತೂರ ಸಂಸ್ಥಾನಿಕರ ಮೇಲೆ ಹಲವಾರು ಕೃತಿಗಳನ್ನು ರಚಿಸಿರಬೇಕು. ಲಾವಣಿ ರಚಿತವಾಗಿರಬೇಕು. ಆ ದೊರೆ ಈ ಮನೆತನದವರಿಗೆ ಎರಡು ಕೂರಿಗೆ ಭೂಮಿ ಉಂಬಳಿಯಾಗಿ ಕೊಟ್ಟಿದ್ದರಂತೆ. ಕವಿಯ ಯಕ್ಷಗಾನ ಕೃತಿಯಲ್ಲಿ ಬರುವ ಪದ್ಯ ಓದಿದಾಗ ಅವನ ಊರು, ತಂದೆ, ಹಾಗೂ ಯಕ್ಷಗಾನ ರಚನೆಯ ವಿಷಯ ತಿಳಿದುಬರುತ್ತದೆ.

"ಕನಕಕಂಠ ಗ್ರಾಮಸಂಸ್ಥಿತ
ವಿನುತಮಠ ಪಾರಾಣಿ ಶಿವಬಸ
ವೆನಿಪ ಶಿವಯೋಗೀಶ್ವರನ ತನುಜಾತನೆಂದೆನಿಪ
ಅನಂಘ ದುರದುಂಡೀಶ ಕವಿ ತಾ
ನನುವಿನಿಂದೀ ಯಕ್ಷಗಾನಂ
ದೆನಿಪ ಸತ್ಕವಿತಾಮೃತವನನುವರಿದು ವಿರಚಿಸಿದಂ"

ಹೊಂಗಲ ಗ್ರಾಮಕ್ಕೆ 'ಕನಕಕಂಠಗ್ರಾಮ' ಎಂದು ಕರೆದಿದ್ದಾನೆ. ಇದೇ ಗ್ರಾಮದ ಬಸವ ಕವಿಯ 'ಹೇಮಗಲಾಖ್ಯ' ಎಂಬ ಹೆಸರಿನಂತೆಯೇ ಈ ಕವಿಯೂ ಹೀಗೆ ಕರೆದಿರಬೇಕು, ಕೃಷ್ಣಹರಣ ಯಕ್ಷಗಾನದಲ್ಲಿ ಬರುವ ಮಾತಿನ ಮೋಡಿಯನ್ನು ಗುರುತಿಸಬಹುದಾಗಿದೆ.

"ಸತ್ಯಭಾಮಿನಿಗೆ ಮಾತ್ರ ಬಹಳ ಗರ್ವಬಂತು ರಂಡೇದು. ಬಹು ನಾರಿಯರ ನೆಲ್ಲಾ ಹಳಿಯಲ್ಕೆ ಪ್ರಾರಂಭ ಮಾಡಿದಳು. ಇವಳನ್ನು ಏನಾದರೂ ಪೇಚಿನೊಳಗೆ ತಂದು ಇವಳ ಗರ್ವಶಾಂತಿಮಾಡಬೇಕು. ಮಂಗ ಸೆಟವಿ ನಮ್ಮನು ಸುದ್ಧ ಜೇರಿನೊಳಗೆ ತಂದಿದ್ದಾಳೆ. ಇವಳಿಗೆ ಏನಾದರೂ ಪೇಚುತಂದು ಹಾಕಬೇಕಾದರೆ ನಾರದರ ಹೊರ್ತು ಇನ್ನೊಬ್ಬರಿಂದಾಗದು................"

೯೩. ಮಲ್ಲಾಬಾದಿ ಮಲ್ಲಪ್ಪ (೧೮೩೦-೧೯೦೦)

ಮಲ್ಲಾಬಾದಿ ಬೆಳಗಾಂವ ಜಿಲ್ಲೆಯ ಅಥಣಿ ತಾಲೂಕಿನ ಒಂದು ಹಳ್ಳಿ. ಇಲ್ಲಿಯ ಕುಂಬಾರ ಮನೆತನದ ಮಲ್ಲಪ್ಪ ಪ್ರಸಿದ್ಧ ಜಾನಪದ ಹಾಡುಗಾರನೆನಿಸಿದ್ದಾನೆ. ಸ್ವತಃ ಕವಿಯೂ ಆಗಿದ್ದನು. ಮೂರನೇ ಇಯತ್ತೆವರೆಗೆ ಮಾತ್ರ ಓದಿಕೊಂಡಿದ್ದನು. ಸಂಗಯ್ಯ ಗಂಗಯ್ಯ ಎಂಬ ಗುರುಗಳ ಮಾರ್ಗದರ್ಶನದಲ್ಲಿ ನೂರಾರು ಹಾಡು ರಚಿಸಿದ ಶ್ರೇಯಸ್ಸು ಇವನಿಗೆ. ಗಂಡು ಹೆಚ್ಚು ಎಂದು ಹೇಳುವ ಹರದೇಶಿ ಹಾಡುಗಳನ್ನೇ ಈತ ರಚಿಸಿದ್ದಾನೆ. ಈತ ತೀರಿಕೊಂಡು ಸುಮಾರು 80 ವರುಷಗಳಾಗಿರಬೇಕು. ಆಗ ಅವನು 70 ವರುಷ ದವನಿದ್ದನೆಂದು ತಿಳಿದು ಬರುತ್ತದೆ.

'ಹರದಾಸ ಮಲ್ಲ' ಎಂಬುದು ಈತನ ಮುದ್ರಿಕೆಯಾಗಿದೆ. ಹರದಾಸ ಮಲ್ಲ, 'ಮಲ್ಲಾಬಾದ್ಯಾಗ ಸಂಗಯ್ಯ-ಗಂಗಯ್ಯ ಹೇಳ್ಯಾರ ನಿಂತ' - ಎನ್ನುವ ಉಲ್ಲೇಖ ಈತನ ಹಾಡುಗಳಲ್ಲಿ ಬರುತ್ತದೆ.

'ಅಸಲಮಾತ (ಡಿ) ನಾನು ಕಸರ ಇಲ್ಲದ ಹೇಳತೀನ
ಲಕ್ಷವಿಟ್ಟು ಕೇಳರಿ ಸರ್ವರಿನ್ನು
ಟಸಿ ಹೊಡಿತ ನಾಡ ವಳಗ ಹುಸಿ ಅಲ್ಲ ಮಾತವಿದು
ಆರಮಂದಿ ಅಕ್ಕತಂಗೇರು ಒಂದೆ ಸವನ

ಮೂರಮಂದಿ ಮಾತ್ರ ಒಳೇ ಧೀರರಿಂದ ಇರತಾರವರು
ಸೂರ ಗಂಡಿನ ಕೂಡಿಕೊಂಡ ಬಾಳೆ ಮಾಡೂನು ।
ಆರು ಮಂದಿನ ನರಕದೊಳಗ ನೂಕಿಬಿಟ್ಟಾನು ।೧।''

ಇಂಥ ಒಂದೊಂದೂ ಹತ್ತಿಪ್ಪತ್ತರಷ್ಟು ನುಡಿಗಳು ಕೂಡಿಕೊಂಡ ಉದ್ದವಾದ ಹಾಡುಗಳಾಗಿವೆ. ತತ್ವಕ್ಕಂಟಿಕೊಂಡ ಪದಗಳನ್ನೇ ಹೆಚ್ಚು ರಚಿಸಿದ್ದದ್ದು ತಿಳಿದು ಬರುತ್ತದೆ.

೯೪. ಬೆಲ್ಲದಬಾಗೇವಾಡಿಯ 'ಬಾಳಗೋಪಾಳ' (೧೮೩೦–೧೯೧೦)

ಬೆಲ್ಲದಬಾಗೇವಾಡಿಯ 'ಬಾಳಗೋಪಾಳ' ಎಂದು ಪ್ರಸಿದ್ಧೀ ಪಡೆದ ಲಾವಣಿ ಕಾರನ ಕೆಲ ಹಾಡುಗಳನ್ನು ನಿಂಗಣ್ಣ ಸಣ್ಣಕ್ಕಿ ಅವರು ಈಗಾಗಲೇ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಬೆಲ್ಲದಬಾಗೇವಾಡಿ ಬೆಳಗಾಂವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಒಂದು ಸುಧಾರಿತ ಗ್ರಾಮವಾಗಿದೆ. ಇಲ್ಲಿಯ ಜಮೀನದಾರರೂ ಶ್ರೀಮಂತರೂ ಆದ ಭೀಮರಾಯರ ಮಗ ಗೋಪಾಲನೇ 'ಬಾಳಗೋಪಾಳ'. 'ಬಾಳಗೋಪಾಳ' ಎನ್ನುವುದು ಕವಿಯ ಅಂಕಿತವಾಗಿರುತ್ತದೆ. ಚಿಕ್ಕಂದಿನಲ್ಲಿ ಪ್ರೀತಿಯಿಂದ 'ಬಾಳ' ಎಂದು ಕರೆಯುತ್ತಿದ್ದುದ್ದರಿಂದ ಬಾಳಗೋಪಾಲನು ಮುಂದೆ 'ಬಾಳಗೋಪಾಳ' ನೆನಿಸಿ ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ಧಿ ಪಡೆದನು.

ಬ್ರಾಹ್ಮಣರಾದ ಭೀಮರಾಯರು ತಮ್ಮ ಮಗ ಒಳ್ಳೆಯ ಶಾಸ್ತ್ರಕಾರನಾಗಬೇಕೆಂದು ಅವನಿಗೆ ಯೋಗ್ಯ ಗುರುವಿನಿಂದ ವೈದಿಕಧರ್ಮದ ತಿಳುವಳಿಕೆ ಮಾಡಿಸಿಕೊಟ್ಟಿದ್ದರು. ಅಣ್ಣಾರಾವಜಿ ಎಂಬ ಗುರುಗಳಿಂದ ಆತ ಜ್ಞಾನ ಸಂಪಾದಿಸಿದ್ದನು. ಅಂತೆಯೇ ಕವಿ ಈ ಗುರುವನ್ನು ತನ್ನ ಹಾಡುಗಳಲ್ಲಿ ಸ್ಮರಿಸಿದ್ದಾನೆ.

'ಅಣ್ಣಾರಾವಜಿ ವಸ್ತಾದನ ಜ್ಞಾನಾ । ಚರಣದಲ್ಲಿ ಗುರುಬ್ರಹ್ಮಹರಾ ।
ಬಾಳಗೋಪಾಳನಿಂತ ಹಾಡತಾನಾ । ನಮ್ಮ ಮ್ಯಾಲ ಇರಬೇಕ ಕರುಣಾ ।'
''ಬಾಗೋಡಿ ಜಾಗ ರಂಗಲಾಲ ನಾಡನಾಡಿಗೆ ಸುರದಂಗ ರನ್ನಾ
ಅಣ್ಣಾರಾವಜಿ ಗುರುವಿನ ಹಾಡ................''

ತಂದೆ ಹಾಡುವುದಕ್ಕಾಗಲಿ, ಹಾಡುಕೇಳುವುದಕ್ಕಾಗಲಿ ಮಗನನ್ನು ಬಿಟ್ಟಿರದಿದ್ದರೂ ಆ ಜಾನಪದ ಗತ್ತನ್ನು ಗಿಟ್ಟಿಸಿಕೊಂಡ ಛಲವಂತ. ಕರ್ನಾಟಕ ಮಹಾರಾಷ್ಟ್ರಗಳಲ್ಲೆಲ್ಲಾ ಅಂದು ಹೆಸರು ಪಡೆದವನು. ಇಂಚಲದ ಕೆಂಚನಾಯ್ಕ, ಸಕ್ರನಾಯ್ಕರ ಜೊತೆಗೆ ಹಾಡುವವನಾಗಿದ್ದನು. ೧೮೩೦ ರಲ್ಲಿ ಜನಿಸಿ ೧೯೧೦ ರಲ್ಲಿ ಸ್ವರ್ಗವಾಸಿಯಾಗಿರಬೇಕು.

ಬಾಳಗೋಪಾಳನು ಮರಾಠಿಯನ್ನೂ ಬಲ್ಲವನಾಗಿದ್ದನು. ಮರಾಠಿಯಲ್ಲೂ ಕೂಡ ಹಲವಾರು ಲಾವಣಿ ರಚಿಸಿದ್ದನೆಂದು ಹೇಳುತ್ತಾರೆ. ಬೆಲ್ಲದಬಾಗೇವಾಡಿಯ 'ಜಡಿ ಸಿದ್ಧೇಶ್ವರ ಯೋಗಿ'ಗಳ ಪ್ರಭಾವವೂ ಇವನ ಮೇಲಾದದ್ದು ತಿಳಿದು ಬರುತ್ತದೆ.

'ಶ್ರೀ ಸಿದ್ಧೇಶ್ವರ ಸದ್ಗುರುವಿನ ದಯದಿಂದ ।
ಯಾರ್‍ಯಾರದಿಲ್ಲ ನಮಗ ಅಂಜಿಕೆ ।
ಕವಿ ಗೋಪಾಳ ಕಲಗಿ ಹಾಡವರ ।
ತೆಲಿಮ್ಯಾಗ ಅಗಳಿ ಜಡದಾ ಜಡದಾ'

ಬಾಳಗೋಪಾಳನು ಹರದೇಶಿ ಪಂಗಡದವನು. ಗಂಡು ಹೆಚ್ಚು ಎಂದು ಹಾಡು ಹೇಳುತ್ತಿದ್ದನು. ಕವಿಯಷ್ಟೇ ಅಲ್ಲ, ಜನಪ್ರಿಯ ಹಾಡುಗಾರನೂ ಆಗಿದ್ದನು.

''ಮಾನಗೇಡಿ ಮಾಡುದುಕ ಸೀರಿ ಕುಬಸಾ ಕಳಿಸಿ
ಸುಣ್ಣ ಕಾಮಣ್ಣ ಮುಸಡಿಗಿ ಬಡದ ಓಣ್ಯಾಗ ನಿಲ್ಲಿಸಿ
ಊರತುಂಬ ಮೆರಸಿದಾರ ಕತ್ತಿಮ್ಯಾಲ ಕೂಡ್ರಿಸಿ
ಬಿಳಿ ಗರತಿ ಹೆಣತಿನ ಮಾಡಿಕೊಂಡ ಪುರಮಾಸಿ
ಸುತ್ತನಾಡೊಳಗ ಬಾಗೋಡಿ ಊರ ಒಳೆ ಬೇಸಿ
ಕಲಗಿ ಇಟ್ಟ ಡಪ್ಪ ಓಡಿಹೋದಾಳ ನಾಗೇಶಿ''

ಮೊದಲಾದ ಹಾಡುಗಳಲ್ಲಿ ಕಲಗಿಯವರನ್ನು (ಹೆಣ್ಣು ಹೆಚ್ಚೆಂದು ಹಾಡುವವರು) ಗೇಲಿ ಮಾಡಿದ್ದು ತಿಳಿದುಬರುತ್ತದೆ.

೯೫. ಐಹೊಳಿಯ ಭೀಮಾಜಿ (೧೮೩೫–೧೯೧೫)

ಐಹೊಳೆ ಕರ್ನಾಟಕದಲ್ಲಿ ಪ್ರಸಿದ್ಧ ಐತಿಹಾಸಿಕ ಸ್ಥಳ. ವಿಜಾಪುರ ಜಿಲ್ಲೆಯ ಬದಾಮಿ ತಾಲೂಕಿನ ಒಂದು ಹಳ್ಳಿ. ಇಲ್ಲಿಯ ಕಲಾಕೃತಿಗಳಂತೆಯೇ ಜನಪದ ಕವಿಗಳೂ ಐಹೊಳೆಯ ಹೆಸರನ್ನು ಉಳಿಸಿಕೊಂಡು ಬಂದಿದ್ದಾರೆ. ರಾಘವೇಂದ್ರ ಕುಲಕರ್ಣಿ ಇವರ ಮಗ 'ಭೀಮಾಜಿ' —ಸು. ೧೮೩೫ರಲ್ಲಿ ಹುಟ್ಟಿ ೧೯೧೫ರಲ್ಲಿ ವೈಕುಂಠವಾಸಿಯಾದದ್ದು ತಿಳಿದು ಬರುತ್ತದೆ. ಭೀಮಾಜಿ ಬೆಳಗಾವಿಯ ಸರದಾರ ಹೈಸ್ಕೂಲಿನಲ್ಲಿ ಕೆಲವರುಷಗಳ ಕಾಲ ಶಿಕ್ಷಕನಾಗಿದ್ದನಂತೆ. ಆ ವೃತ್ತಿಗೆ ಶರಣುಹೊಡೆದು ತನ್ನ ಹಳ್ಳಿಯಲ್ಲಿಯೇ ನೆಲೆಸುತ್ತಾನೆ. ಅಲ್ಲಿ ಮುಂದೆ 'ಪಾರಿಜಾತ' ಆಟ ರಚಿಸಿ ಅದನ್ನು ಆಡುತ್ತ ನಡೆದನಂತೆ.

'ಐಹೊಳೆಯ ವೆಂಕಟೇಶ' ಇವನ ಅಂಕಿತನಾಮವಾಗಿರುತ್ತದೆ. ದೇವರನಾಮ, ಸುಳಾದಿ, ಉಗಾಭೋಗ. ಸುವ್ವಾಲೆಗಳನ್ನು ರಚಿಸಿದ ಶ್ರೇಯಸ್ಸು ಇವನಿಗೆ. ರಾಮಪಾರಿಜಾತ ಎಂಬ ಕೃತಿಯನ್ನು ರಚಿಸಿದ್ದು ತಿಳಿದುಬರುತ್ತದೆ. ರುಕ್ಮಾಂಗದ ಕಥೆ, ಅಂಬರೀಷ, ನಳರಾಜ, ಸುಭದ್ರೆ, ರುಕ್ಮಿಣಿ –ಮೊದಲಾದ ಆಟಗಳನ್ನು ರಚಿಸಿದ್ದಾನೆ.

೯೬. ಮೆಣಸಗಿಯ ದೇವೇಂದ್ರಗೌಡ (೧೮೪೫-೧೯೫೧)

ಮೆಣಸಗಿ ಬೆಳಗಾಂವ ಜಿಲ್ಲೆಯ ರಾಮದುರ್ಗ ತಾಲೂಕಿನ ಒಂದು ಹಳ್ಳಿ. ಇಲ್ಲಿಯ ವತನದಾರನಾದ ದೇವೇಂದ್ರಗೌಡ ಆಲೂರ ಪೋಲೀಸಪಾಟೀಲನಾಗಿದ್ದನು. ವೈದ್ಯಶಾಸ್ತ್ರ, ಜ್ಯೋತಿಷಶಾಸ್ತ್ರಗಳನ್ನೂ ಬಲ್ಲವನಾಗಿದ್ದನು. ಶಾಲಾ ಉಪಾಧ್ಯಾಯನೂ ಆಗಿದ್ದನು.

ದೇವೇಂದ್ರಗೌಡನು ಅನೇಕ ಲಾವಣಿ, ತತ್ವಪದ ಹಾಗೂ ದೊಡ್ಡಾಟಗಳನ್ನು ರಚಿಸಿದ್ದಾನೆ. ದೇವಾಂಗ ಪುರಾಣ ಹಾಗೂ ನಾಗಲಿಂಗ ಪುರಾಣಗಳನ್ನು ರಚಿಸಿದ್ದಾನೆ. ಕ್ರಿ. ಶ. ಸು. ೧೮೪೫ರಲ್ಲಿ ಹುಟ್ಟಿ ೨೦-೧೧-೫೧ರಲ್ಲಿ ಸ್ವರ್ಗವಾಸಿಯಾಗಿದ್ದು ತಿಳಿದು ಬರುತ್ತದೆ. ಕೃತಿಗಳಾಗಲಿ, ಹಾಡುಗಳಾಗಲಿ ನನಗೆ ದೊರೆತಿಲ್ಲ.

೯೭. ಇಂಚಲದ ಸಕ್ರನಾಯ್ಕ : (೧೮೪೭-೧೮೯೦)

ಬೆಳಗಾಂವಿ ಜಿಲ್ಲೆಯ ಇಂಚಲ ಗ್ರಾಮದ ಕೆಂಚನಾಯ್ಕನಂತೆ ಸಕ್ರನಾಯ್ಕನೂ ಜಾನಪದ ಕವಿಯಾಗಿ ಕಂಗೊಳಿಸಿದ್ದಾನೆ. ಜನಪದ ಹಾಡು ಹೆಣೆಯುವುದರ ಜೊತೆಗೆ ಕತ್ತಿ ತಿರುಗಿಸುವುದು, ಢಾಲು-ದಾಂಡಪಟ್ಟಿ ಆಡುವುದು ಮೊದಲಾದ ಜಾನಪದ ಕಲೆ ಗಳನ್ನೂ ಬಲ್ಲವನಾಗಿದ್ದನು.

ಇಂಚಲದ ಖನ್ನಿನಾಯ್ಕರ ಮನೆತನದ ಮಲ್ಲನಾಯ್ಕನಿಗೆ ಮಗನಾಗಿ ಸು. ೧೮೪೭ರಲ್ಲಿ ಜನಿಸಿದ ಸಕ್ರನಾಯ್ಕನು ಕೆಂಚನಾಯ್ಕನಿಗೆ ಸಹಾಯಕನಾಗಿದ್ದನು. ಉದ್ಯೋಗ ಒಕ್ಕಲು ತನವಾಗಿತ್ತು. ಕನ್ನಡ ೭ನೇ ಇಯತ್ತೆವರೆಗೆ ಮಾತ್ರ ಕಲಿತಿದ್ದನು. ಹುಟ್ಟುಕವಿ ಯೆನಿಸಿದ ಈತನು ಲಾವಣಿ, ಗೀಗೀ, ಕರ್ಬಲ ಹಾಡು, ತತ್ವಪದ ಹಾಗೂ ಬಯಲಾಟ ಗಳನ್ನು ರಚಿಸಿದ್ದಾನೆ. ಅರ್ಜುನ, ಪ್ರಮೀಳೆ ಮತ್ತು ಅಭಿಮನ್ಯು ಮೊದಲಾದ ಬಯ ಲಾಟಗಳು ಜನಪ್ರಿಯವಾಗಿವೆ.

ಕವಿಯ ತಂದೆ ಮಲ್ಲನಾಯ್ಕನಿಗೆ ನಾಲ್ಕು ಜನ ಹೆಂಡರಿದ್ದರು. ಮೂರನೆಯವ ಳಾದ ನೀಗವ್ವನ ಹೊಟ್ಟೆಯಿಂದ ಸಕ್ರನಾಯ್ಕ ಹುಟ್ಟಿದನು. ಸಕ್ರನಾಯ್ಕನಿಗೂ ಕೂಡ ಮೂವರು ಹೆಂಡರಿದ್ದರು. ಆದರೂ ಗಂಡುಮಕ್ಕಳಿದ್ದಿರಲಿಲ್ಲ. ಇಬ್ಬರು ಹೆಣ್ಣು ಮಕ್ಕಳು ಮಾತ್ರ ಇದ್ದರು. ಈತನಿಗೆ ಬೇಕಾದಷ್ಟು ಸಂಪತ್ತು ಇದ್ದರೂ ಎಲ್ಲವನ್ನೂ ತ್ಯಾಗ ಮಾಡಿದನು. ಸಾವಿರಾರು ಹಾಡು ರಚಿಸುತ್ತ ವಿರಾಗಿಯಾಗಿ ಕಾಲಕಳೆದನು. ಸೋದರ ಮಾವನ ಊರಾದ ಬುಡರಕಟ್ಟಿಯಲ್ಲಿ ೧೮೯೦ರಲ್ಲಿ ಸ್ವರ್ಗವಾಸಿಯಾದನು.

ಈತನ ಹಾಡುಗಳಲ್ಲಿ ಇಂಚಲದ 'ಬಂಕನಾಥ'ನ ಸ್ಮರಣೆ ಇದೆ. ಇದೇ ಈತನ ಅಂಕಿತವೂ ಆಗಿತ್ತು. ಜೊತೆಗೆ ಸಕ್ರನಾಯ್ಕ ಎನ್ನುವ ಹೆಸರೂ ಬರುತ್ತದೆ. ಗಾಂವಠಿ ಶಾಲೆಯೊಂದರಲ್ಲಿ ಕೆಲವರುಷ ಸಕ್ರನಾಯ್ಕನು ಶಿಕ್ಷಕನಾಗಿದ್ದನೆಂದು ತಿಳಿದುಬರುತ್ತದೆ.

ದಾಂಡಪಟ್ಟಿ ಆಡುವಾಗ ಕತ್ತಿ ತಿರುವುತ್ತ ನೆಲದ ಮೇಲಿಟ್ಟ ಕಾಯಿಯನ್ನು ಸಮವಾಗಿ ೨ ಭಾಗವಾಗಿ ಒಡೆಯುತ್ತಿದ್ದನಂತೆ. ನೀರೂ ಕೆಳಗೆ ಬೀಳುತ್ತಿದ್ದಿರಲಿಲ್ಲವೆಂದು ಹೇಳುತ್ತಾರೆ. ಇಂಚಲದ ಗೌಡಕಿ ಇವನಿಗಿದ್ದರೂ ಅದರಲ್ಲಿ ಆಸಕ್ತಿ ಇದ್ದಿರಲಿಲ್ಲ, ಬೇರೆಯವರಿಗೆ ಮಾಡಲು ಬಿಟ್ಟುಕೊಡುತ್ತಿದ್ದನಂತೆ.

ತನ್ನ ಅರಿವೇ ತನಗೆ ಗುರು ಎಂಬ ಉಕ್ತಿ ಸಕ್ರನಾಯ್ಕನಿಗೆ ಸರಿಹೋಲುವಂತಹದು. ಅವನ ಹಾಡುಗಳಲ್ಲೆಲ್ಲಾ ಅನುಭವ ತುಂಬಿತುಳುಕುತ್ತದೆ.

'ತತ್ವಜ್ಞಾನ ಮತ್ತಾರು ಕಲಿತಿಲ್ಲ, ಚಿತ್ತದೊಳಗ ಹುಟ್ಟಿ ಬರತೈತಿ ।
ಜ್ಞಾನ ತಿಳದ ಮ್ಯಾಲ ಓಂ ಶಿವಶಂಕರನ ಹೊಂದುವ ಹಾದಿ ದೊರವತೈತಿ । ಪ ।

ಹಿಂದೆ ಮಾಡಿದ ಪೂರ್ವಪುಣ್ಯದ ಫಲದಿಂದ ಬಂದಿಯೋ ನೀನು ಮಾನವ ಜನ್ಮಕ।
ಜ್ಞಾನ ಎಂಬ ಮಂತ್ರಕೊಟ್ಟ ಶಿವ ನಿನಗ ಚಲೊ ಕೆಟ್ಟದ್ದನ್ನ ತಿಳಿಯೋದಕ ।
ಚೌರ್‍ಯಾಅಂಶಿ ಲಕ್ಷಯೋನಿ ತಿರುಗಿಬಂದಿ ಜ್ಞಾನ ಇದ್ದಿಲ್ಲ ನಿನ್ನ ಹಂತೇಕ ।
ಇದೇ ಜನ್ಮದೊಳು ಸಾಧು ಸತ್ಪುರುಷರ ಪಾದ ಹಿಡಿದು ಹೋಗು ಸ್ವರ್ಗಕ ।
ಸ್ವರ್ಗ ನರ್ಕ ಇರುವವು ನಿನ್ನಲ್ಲಿ ನಿನ್ನಗುಣದಲ್ಲಿ ತಿಳಿಯೋಮಾನವಾ
ನರಕ ಕಂಡಾನು 'ನಾ' ಅಂದಾಂವಾ
ಹೆಂಡರ ಮಕ್ಕಳ ಹರದಾಟ, ಹೆಣ್ಣಿನ ಕೂಟದೊಳಗ ಬೆರೆತವ ನರಕದೊಳಗ
ಬೀಳತಾನ ಇಂವಾ ।
ಮಕ್ಕಳ್ಯಾತಕ್ಕ ಹೇಲ ಉಚ್ಚಿ ಬಳದ ಹೆಣತಿ ಮೈತೊಳದ ಸೀರಿ ಒಗೆಯುವಾ
ಇಂವಾ ನರಕದೊಳಗಿನ ಹುಳದ ಸಂವಾ ।
ಇದರ ಹೊರ್ತ ಮತ್ತೆಂಥ ನರ್ಕ ಛೀ ಮೂರ್ಖ ಮನುಜ, ಮಾಡಿಕೊಳ್ಳು ಅಳತಿ ।
ಜ್ಞಾನ ತಿಳಿದ ಮೇಲೆ ಓಂ ಶಿವಶಂಕರನ ಹೊಂದುವ ಹಾದಿ ದೊರುವತೈತಿ ।
....
ಮಾಯದೊಳು ಯಮನ ಪಾಶಕ್ಕ ಲತ್ತಿ ಹೊಡೆದು ಹಾಕ್ಯಾನು ನರಕಕ್ಕ ।
ಮಹಾಕ್ಷೇತ್ರ ಇಂಚಲಕ ಹೋಗಿ ಬಂಕನಾಥಗೆರಗಿ ಭಕ್ತಿಪೂರ್ವಕ ।
ಮುಕ್ತಿ ಹಿಡಿಯೋ ಇದೇ ಜನ್ಮಕ ।

'ಎಷ್ಟ ಹಾಡಿದರೇನ ಕಲಿತಷ್ಟ ಹಾಡುವರು ಕವಿ ಮಾಡಾಕ ಹ್ಯಾಂಗ ಬಂದೀತು ।
ಕಲಿಕಿ ಮಾತು ಕಟ್ಟಿದ ಬುತ್ತಿ ಎಷ್ಟದಿನ ಅದ ನಿಲಕೀತು ।'

ಇಂಥ ಹಲವಾರು ಹಾಡುಗಳಲ್ಲಿ ಕವಿಯ ಅನುಭವ ವೇದ್ಯವಾಗುತ್ತದೆ.

೯೮. ಗೋಕಾವಿಯ ಯಲ್ಲಪ್ಪ (೧೮೫೦-೧೯೦೦)

ಬೆಳಗಾಂವ ಜಿಲ್ಲೆಯ ಗೋಕಾಕ ಸಮೀಪದ ಗಿರಣಿಯೊಂದರಲ್ಲಿ ಕಾರ್ಮಿಕನಾಗಿ ದುಡಿಯುತ್ತಿದ್ದ ಯಲ್ಲಪ್ಪ ಬಹುಶಃ ಮೂಲತಃ ಅಡಬಟ್ಟಿ ಗ್ರಾಮದವನಿರಬೇಕು. ೧೮೭೦ ರ ಸುಮಾರು ನಡೆದ ಕಟ್ಟೀಚೆನ್ನನ ಚರಿತ್ರೆಯನ್ನು ಆಯ್ದುಕೊಂಡು ಲಾವಣಿಯಲ್ಲಿ ಹಾಡಿದ್ದಾನೆ. ಈತ ಬದುಕಿದ್ದುದು ಸುಮಾರು ೧೮೫೦ ರಿಂದ ೧೯೦೦ರ ಅವಧಿಯಲ್ಲಿ. ಹಲವಾರು ಲಾವಣಿಗಳನ್ನು ರಚಿಸಿದ್ದಾನೆ. 'ಅಡಬಟ್ಟಿ ಯಲ್ಲ' 'ಗಿರಣಿ ಯಲ್ಲಣ್ಣ' ಎಂಬ ಮುದ್ರಿಕೆಗಳು ಈತನ ಹಾಡುಗಳಲ್ಲಿ ಬರುತ್ತವೆ.

'ಕಟ್ಟಿಯ ಚೆನ್ನನ ಪ್ರಾಬಲ್ಯ ಎಷ್ಟಂತ ಹೇಳಲಿ ನಾನು ।
ಶ್ರೇಷ್ಟನಾಗಿ ಹೋದ ಅಂವ ಈ ಮರ್ತ್ಯದೊಳಗ ।
ದುಷ್ಟ ದುರ್ಯೋಧನನಕಿಂತ ಸಿಟ್ಟ ಅವನ ಹೊಟ್ಟಿಯೊಳಗ ಭಾಳ ।
ಬಂಟಸ್ತನದ ಪದವಿ ಇತ್ತ ಅವನ ಮನಸಿನೊಳಗ ।'

೯೯. ಸಂಬರಗಿ ಚನ್ನಪ್ಪ (೧೮೫೦-೧೯೫೦)

ಬೆಳಗಾಂವಿ ಜಿಲ್ಲೆಯಲ್ಲಿ ಸಂಬರಗಿ ವಿಮಾನನಿಲ್ದಾಣ ಸ್ಥಳವಾಗಿದೆ. ಇಲ್ಲಿಯ ಮರಾಠಾ ಜಾತಿಗೆ ಸೇರಿದ, ಓದು-ಬರಹ ಅರಿಯದ ಚನ್ನಪ್ಪನು ಜನಪದ ಹಾಡುಗಳನ್ನು-ಅದೂ ಕನ್ನಡದಲ್ಲಿ-ಸುಶ್ರಾವ್ಯವಾಗಿ ಹಾಡುತ್ತಿದ್ದನು. ಈತನ ಒಡನಾಟ ಹೆಚ್ಚಾಗಿ ಲಿಂಗವಂತರ ಜೊತೆಗೆ. ಮರಾಠಿ ಭಾಷೆಯಲ್ಲೂ ಜನಪದ ಹಾಡುಗಳನ್ನು ಹಾಡಿದ್ದುಂಟು. ಸಂಬರಗಿಯ ಬಸವೇಶ್ವರನು ಈತನ ಆರಾಧ್ಯದೇವತೆಯಾಗಿದ್ದಾನೆ. ಕನಸಿನಲ್ಲಿ ಒಮ್ಮೆ ಈ ಬಸವೇಶ್ವರ ದೇವರು ಬಂದು ಚನ್ನಪ್ಪನಿಗೆ ರಾಮಾಯಣದ ಕಥೆಯನ್ನು ಹೇಳಿದನಂತೆ. ಅದನ್ನೇ ಚನ್ನಪ್ಪ ಲಾವಣಿಯಲ್ಲಿ ಹಾಡಿಬಿಟ್ಟನೆಂದು ಹೇಳುತ್ತಾರೆ.

ಚನ್ನಪ್ಪನಿಗಿಂತ ೨೦–೨೫ ವರುಷ ಸಣ್ಣವನಾದ ನರಸಿಂಗನು ಚನ್ನಪ್ಪನ ಹಾಡುಗಳನ್ನು ಬರೆದಿಡುತ್ತಿದ್ದನಂತೆ. ಈ ನರಸಿಂಗನಿಂದ ಈ ಭಾಗದ ಹಲವಾರು ಜನರು ಈತನ ಹಾಡುಗಳನ್ನು ಕಲಿತುಕೊಂಡಿದ್ದಾರೆ. ಇಂಥವರಲ್ಲಿ ಮಾರಿಹಾಳದ ಕಲ್ಲಪ್ಪ (ವ–೮೫)ನೂ ಒಬ್ಬನು. ಚನ್ನಪ್ಪನು ತನ್ನ ಹಾಡುಗಳಲ್ಲಿ ಅಲ್ಲಲ್ಲಿ ಮಾರುತಿದೇವರನ್ನೂ ಸ್ಮರಿಸಿದ್ದಾನೆ. ಈತನ ಹಾಡುಗಳು ಹೆಚ್ಚಾಗಿ ತ್ರಿಪದಿಯಲ್ಲಿವೆ.

'ಸಂಬರಗಿ ಊರಾಗ ಮಾಡ್ಯಾರೊ ಈ ಕವಿ
ಶಂಭೊ ಮಾರುತಿ ದಯಾ ಅವರ ಮ್ಯಾಲ
ಕೇಳಿದವರಿಗಿ ಅಮೃತ ಕುಡದ್ಹಂಗ ।'

'ಸಂಬರಗಿ ಊರಾ ಸಿಸ್ತೊ ಟಿಕಾನಾ ।
ಶಿಸ್ತೊ ಟಿಕಾನಾ ನೆನದೊ ಬಸವಣ್ಣಾ
ಜಾತರಿ ಮಾಡತಾರೊ ಉಗಾದಿ ದಿನಾ ।
'ಊರ ಬಿಟ್ಟ ದೂರ ಜಾಗಾ ಆರಂಬ
ನೋಡಿ ನೆನದ ಬಸವೇಸೂರ ಚರಣಾ
ಚೆನ್ನಪ್ಪ ಮುಗದ ಇರಲೆಂದ ಅಂತಃಕರಣಾ । ಹಿಡದ ಅವನ ಚರಣಾ'

೧೦೦. ಹಲಸಂಗಿಯ ಸಿದ್ದು–ಶಿವಲಿಂಗ (೧೮೫೦–೧೯೧೦)

ನಾಗೇಶಿ ಪಂಗಡಕ್ಕೆ ಸೇರಿದ ಕವಿಗಳಲ್ಲಿ ಹಲಸಂಗಿಯ ಸಿದ್ದು-ಶಿವಲಿಂಗ ಕವಿಗಳು ಪ್ರಮುಖರು. ಹಲಸಂಗಿ ವಿಜಾಪುರ ಜಿಲ್ಲೆಯ ಒಂದು ಹಳ್ಳಿ. ಇಲ್ಲಿಯ ಸಿದ್ದು ಆರೇರವ ನಿದ್ದು, ಲಿಂಗವಂತನಾದ ಶಿವಲಿಂಗನ ಜೊತೆಗೂಡಿ ಹಾಡು ಕಟ್ಟುತ್ತಿದ್ದನು. ಹಾಗೆಯೇ ಜೊತೆಗೂಡಿ ಹಾಡೂ ಹಾಡುತ್ತಿದ್ದನು. ಸೀನಪ್ಪ ಎನ್ನುವ ಮಾಸ್ತರರು ಇವರಿಗೆ ಮಾರ್ಗದರ್ಶಕರಾಗಿದ್ದರಂತೆ. ಅವರು ಖಾಜಾಭಾಯಿಯ ಸಮಕಾಲೀನರಾಗಿದ್ದರಂತೆ. ಇವರ ಶಿಷ್ಯರು ರಾಮು ಮತ್ತು ರಾಮಪ್ಪ. ಗುಡು–ಬಾಳು ಎನ್ನುವವರೂ ಹಾಡುತ್ತಿದ್ದರು.

ಸಿದ್ದು-ಶಿವಲಿಂಗ ರಚಿಸಿದ ಲಾವಣಿಗಳಲ್ಲೆಲ್ಲ 'ಗಿಡ್ಡಪೋರಿ' ಶೃಂಗಾರರಸದ ಮಡುವಾಗಿದೆ. ಮಧುರಚೆನ್ನ, ಕಾಪಸೆ ರೇವಪ್ಪ, ಸಿಂಪಿ ಲಿಂಗಣ್ಣ, ಧೂಲಾಸಾಹೇಬ ಖಾಜಾಸಾಬ ಮೊದಲಾದವರಿಂದ **ಹಲಸಂಗಿ** ಜಾನಪದ ಕ್ಷೇತ್ರಕ್ಕೊಂದು ತವನಿಧಿ ಯಾಗಿದೆ.

'ನಿನ್ನ ಬೆಲಿ ಹೇಳ ಬಾಲಿ ಎಷ್ಟರದ ಹೋಗಬ್ಯಾಡ ಮುಂದ್ಕ ।
ವಸ್ತ ಭಂಗರದ ತಗೋ ನಿನ್ನ ತೂಕ ।
ಇದಕನುಮಾನ ಯಾಕಿನ್ನ ಬಿಡು ನಿನ್ನ ಮನದಾನ ತೊಡಕ ।
ಗುಡು ಬಾಳು ವಸ್ತಾದರ ಅಕಡಿ ನಡಗಟ್ಟಿ । ನಡಗಟ್ಟಿ
ಸಿದ್ದು-ಶಿವಲಿಂಗ ಹಾಡೂದು ವರಸಿ । ಧನಿ ಎತ್ತರಿಸಿ ।
ನುಡಿ ಕತ್ತರಿಸಿ । ಸುರಿದ್ಹಾಂಗ ಮುತ್ತ
ಶೇಕು ಬಾದಶಾ ಔಂದಶ ಹರದಾಸಿ ಕೇಳಿ ಅಂವ ಮರ್ತ
ಶ್ರೀ ಸಾನಿಧಪ ಪಧನಿಸ ಸರಿಗಮ ನಾರಿ ನಿನ್ನಗತ್ತ
ನಮ್ಮ ಕಂಡು ಹೋಗಬ್ಯಾಡ ಚದರಿ ।
ಓಡಿದಾಗ ಬೆದರಿ । ಕಾರ್ಲ್ಹುಣವಿ ಎತ್ತ ।'

****

ಒರೆಗಲ್ಲು

೧. ಘಳಿಗೆವಟ್ಟಲು :

ಅನೇಕ ಶುಭ ಕೆಲಸಗಳನ್ನು ಶುಭಘಳಿಗೆಯಲ್ಲಿ ಪ್ರಾರಂಭಿಸಬೇಕೆಂಬುದು ಜನರ ಒಂದು ನಂಬಿಕೆ. ಪ್ರಾಚೀನ ಕಾಲದಲ್ಲಿ ನೀರು ತೊಟ್ಟಿರುವ ಗಡಿಯಾರವು ಮಾನವನ ಸಂಗಾತಿಯಾಗಿತ್ತು. ಘಳಿಗೆವಟ್ಟಲಿನ ಉಪಯೋಗ ಅತ್ಯಂತ ಪ್ರಾಚೀನ ಕಾಲದಿಂದಲೂ ಇತ್ತು. "ಸಣ್ಣ ತೂತು ಮಾಡಿ ನೀರಿನಲ್ಲಿ ಇಟ್ಟು ಅದರಲ್ಲಿ ನೀರು ತುಂಬಿಕೊಳ್ಳುವಷ್ಟು ಕಾಲಕ್ಕೆ ಒಂದು ಘಳಿಗೆ ಎಂದು ನಿಶ್ಚಯಿಸಲು ಉಪಯೋಗಿಸುತ್ತಿದ್ದ ಪಾತ್ರೆ ಅಥವಾ ಬಟ್ಟಲಿಗೆ 'ಘಳಿಗೆವಟ್ಟಲು' ಎಂದು ಹೆಸರು" ಎಂದು ಇದಕ್ಕೆ ವಿವರಣೆ ದೊರೆಯುವುದು.[1] ಪಾತ್ರೆಯಲ್ಲಿ ನೀರು ಹನಿಹನಿಯಾಗಿ ಬೀಳುವುದರ ಮೂಲಕ ಕಾಲವನ್ನು ಗೊತ್ತುಪಡಿಸುತ್ತಿದ್ದರು. ಘಳಿಗೆವಟ್ಟಲಿನ ಸಹಾಯದಿಂದ ಕಾಲ ನಿರ್ಧಾರಮಾಡಿ ಹೇಳುತ್ತಿದ್ದವರಿಗೆ 'ಗಳಿಯಾರದವರು' 'ಘಳಿಯಾರಿಗಳು' ಎಂಬ ಹೆಸರುಗಳು ಇದ್ದುದಾಗಿ ಕಂಡು ಬರುತ್ತದೆ. "ಗಳಿಯಾರದವರ ಕರೆಸೆನಿತು ಘಳಿಗೆಯಾಯಿತೆನಲು."[2] "ಪೇಳಿವೆ ವೇಳೆ ವೇಳೆಗಿಳಿವಾಯವನೀ ಗಳಿಯಾರ"[3] ಸಿಂಗಿರಾಜ ಪುರಾಣದಲ್ಲಿ ಬರುವ ಇನ್ನೊಂದು ಸಂದರ್ಭ ಘಳಿಯಾರಿಗಳ ಕಾರ್ಯವ್ಯಾಪ್ತಿ, ಕಾರ್ಯಕುಶಲತೆಯನ್ನು ಸೊಗಸಾಗಿ ಚಿತ್ರಿಸುತ್ತದೆ. "....ತಿಥಿವಾರವಿಲ್ಲದೆಳೆವೆಜ್ಜೆನಿಂದ ದಿನಸಂಖ್ಯೆಗಳ ಪೇಳಲು ತಿಳಿದು ನೃಪ ಘಳಿಯಾರಿಗಳ ಕರಸಿ ಕೇಳಲ್ಕೆ ನಳಿನಾರಿನಿಂದುದಂ ನಾನೂಜಯಿಪ್ಪತ್ತು ಘಳಿಗೆಯ್ವೆವತ್ತಾಱುಜಾವದಿನವೇಳೆಯಾಯಿತೆನುತ."[4]

ಗಳಿಯಾರವನ್ನು ಘಟಿಯಂತ್ರವೆಂದೂ ಹೇಳುವರು. ಪ್ರಾಚೀನ ಭಾರತೀಯ ಸಂಸ್ಕೃತಿಯನ್ನು ಕುರಿತು ಹೇಳುತ್ತಾ ಡಾ॥ ಶ್ರೀಕಂಠಶಾಸ್ತ್ರಿಗಳು 'ಉಪನ್ಯಾಸ ಕಾಲವನ್ನು

---

1 ಕನ್ನಡ ಕನ್ನಡ ನಿಘಂಟು, ಸಂ. 3, ಪು. 2692

2 ಸಿಂಗಿರಾಜಪುರಾಣ, 16–23

3 ಅಪರಾಜಿತೇಶ್ವರ ಶತಕ, ಪದ್ಯ 58

4 ಸಿಂಗಿರಾಜಪುರಾಣ 22–25

ಘಟೀಯಂತ್ರದಿಂದ ನಿರ್ಣಯಿಸುತ್ತಿದ್ದರು' ಎಂದು ಹೇಳುವರು.[5] ವಿವಾಹ ಕಾಲದಲ್ಲೂ ಕೂಡ ಇಟ್ಟ ಲಗ್ನವನ್ನು ಸಾಧಿಸಲು ಸುಮುಹೂರ್ತಕ್ಕಾಗಿ ಘಳಿಗೆವಟ್ಟಲನ್ನು ನೋಡುತ್ತಾ ಕಾಯುತ್ತಿದ್ದರು. "...ಮದುಮಕ್ಕಳಿಗೆ ಕನ್ಯಾವರಣವಾದವು ಘಳಿಗೆವಟ್ಟಲಲಗ್ನದೊಂ ಪೂರ್ಣಾಹ ರಚನೆಯಲ್ಲಿ."[6]

ಹಿಂದಿನ ಕಾಲದಲ್ಲಿ ಎಲ್ಲರ ಮನೆಯಲ್ಲೂ ಘಳಿಯಾರವನ್ನು ಇಟ್ಟುಕೊಳ್ಳಲು ಸಾಧ್ಯವಿಲ್ಲದ್ದರಿಂದ ಅವುಗಳನ್ನು ಅಲ್ಲಲ್ಲಿ ಸ್ಥಾಪಿಸಿ ಅದರಿಂದ ವೇಳೆ ತಿಳಿದು ಭೇರಿ ಹೊಯ್ಸುತ್ತಿದ್ದರು. "ಘಳಿಯಾರದೊಳಗಾಗ ಜಯಘಂಟೆ ಠೊಂಣೆನೆ ಮೊಳಗಿತು ಜಾವದ ಸನ್ನೆ."[7] ವಿಜಯನಗರ ಕಾಲದಲ್ಲಿ ಜನರು ಪ್ರತಿದಿನವೂ ತಪ್ಪದೆ ವೇಳೆಯನ್ನರಿಯಲು, 'ನಗರ ಘಂಟೆ' ಗಳಿದ್ದು ತಪ್ಪದೆ ಭೇರಿ ಹೊಯ್ಸುತ್ತಿದ್ದರೆಂದು ಒಂದು ವರದಿ ತಿಳಿಸುತ್ತದೆ.[8] ಕನಕದಾಸರು ದ್ವಾರಕಾನಗರಿಯನ್ನು ವರ್ಣಿಸುತ್ತ ರಾಜಧಾನಿಯಲ್ಲಿ– "ಒಪ್ಪವಡೆದ ಯಾಗಶಾಲೆಗಳ ಗಳಿಹಾರದ ಉಪ್ಪರಿಗೆಯೊಳು ಜೋಯಿಸರಿದ್ದು ತಪ್ಪದೆ ಗಳಿಗೆಗೊಮ್ಮೆ ಭೇರಿಯನ್ನು ಹೊಯ್ಸುತ್ತಿದ್ದ"[9]ರೆಂದು ಹೇಳುವರು. "ತಾಸು ಬಾರಿಸುತ್ತಿದೆ ಕೇಳಿ ಹರಿದಾಸರೆಲ್ಲ"[10] ಎಂಬ ಪುರಂದರ ಕೀರ್ತನೆಯೂ ಈ ಸಂದರ್ಭದಲ್ಲಿ ಧ್ವನಿಪೂರ್ಣವಾಗಿದೆ.

ಹೀಗೆ ಘಳಿಗೆವಟ್ಟಲು, ಘಳಿಯಾರ, ಘಳಿಯಾರಿಗಳು —ಮುಂತಾದ ಪ್ರಯೋಗಗಳ ಬಗೆಗೆ ಸಾಹಿತ್ಯ ಕೃತಿಗಳಲ್ಲಿ ಉಪಯುಕ್ತ ಮಾಹಿತಿ ದೊರೆಯುವುದನ್ನು ಗಮನಿಸಬಹುದು.

---

5 ಭಾರತೀಯ ಸಂಸ್ಕೃತಿ. ಪು. 241

6 ತೊರವೆ ರಾಮಾಯಣ, ಬಾಲಕಾಂಡ. 16-46; ನೋಡಿ ಶಿವತತ್ವ ಚಿಂತಾಮಣಿ. 15–25

7 ಭರತೇಶವೈಭವ, 12–144, 16–125; ನೋಡಿ, ಮೋಹನ ತರಂಗಿಣಿ 20–49, 50; ಹರಿಕಥಾಮೃತಸಾರ, 3–25

8 T. V. Mahalingam, Administration and Social Life under Vijayanagar (1940) p. 81

9 ಮೋಹನ ತರಂಗಿಣಿ, 20-38; ನೋಡಿ ಬೆಟಗೇರಿ ಕೃಷ್ಣಶರ್ಮ, ಕರ್ಣಾಟಕ ಜನಜೀವನ. ಪು. 104

10 ಪುರಂದರದಾಸರ ಕೀರ್ತನೆ, 1–66

ಆಧಾರಗ್ರಂಥಗಳು :

1. ಸಿಂಗಿರಾಜ 1550 : ಸಿಂಗಿರಾಜ ಪುರಾಣ.
2. ರತ್ನಾಕರ 1560 : ಭರತೇಶ ವೈಭವ.
3. ಕನಕದಾಸರು 1550 : ಮೋಹನ ತರಂಗಿಣಿ.
4. ತೊರವೆ ನರಹರಿ 1500 : ತೊರವೆ ರಾಮಾಯಣ.
5. ಲಕ್ಕಣದಂಡೇಶ : ಶಿವತತ್ವ ಚಿಂತಾಮಣಿ.
6. ರತ್ನಾಕರ 1560 : ಅಪರಾಜಿತೇಶ್ವರ ಶತಕ.
7. ಪುರಂದರ ದಾಸರು 1550 : ಪುರಂದರದಾಸರ ಕೀರ್ತನೆಗಳು.
8. ಡಾ॥ ಶ್ರೀಕಂಠಶಾಸ್ತ್ರಿ: ಭಾರತೀಯ ಸಂಸ್ಕೃತಿ.

—ಕೆ. ಶ್ರೀಕಂಠಯ್ಯ

೨. ದೇವಚಂದ್ರ (1770-1841) ನ "ಭಕ್ತಿಸಾರ ಶತಕತ್ರಯ"

ರಾವಬಹದ್ದೂರ ಆರ್. ನರಸಿಂಹಾಚಾರ್ಯರು 'ಕರ್ಣಾಟಕ ಕವಿಚರಿತೆ', ತೃತೀಯ ಸಂಪುಟ (1929) ಪುಟ 147ರಲ್ಲಿ ದೇವಚಂದ್ರನ ಕೃತಿಗಳನ್ನು ಹೆಸರಿಸುವಲ್ಲಿ –"ಅಲ್ಲದೆ ರಾಜಾವಳೀ ಕಥೆಯಲ್ಲಿ 'ಪೂಜ್ಯಪಾದ ಚರಿತೆ, ಸುಮೇರುಶತಕ, ಯಕ್ಷಗಾನ ರಾಮಕಥಾವತಾರ, ಭಕ್ತಿಸಾರ ಶತಕತ್ರಯ........ಅಧ್ಯಾತ್ಮವಿಚಾರಾದಿಯಂ ಕರ್ಣಾಟಕ ಸಂಸ್ಕೃತ ಬಾಲನುಡಿಯಿಂ ವಿರಚಿಸಿದೆಂ' ಎಂದು ಹೇಳುವುದರಿಂದ ಈ ಗ್ರಂಥಗಳನ್ನೂ ಈತನು ಬರೆದಿರುವಂತೆ ತಿಳಿಯುತ್ತದೆ'' ಎಂದಿದ್ದಾರೆ.

ಹೀಗಾಗಿ ಕವಿಚರಿತೆಕಾರರಿಗೆ ದೇವಚಂದ್ರನ ಭಕ್ತಿಸಾರ ಕೃತಿ ದೊರೆತಿಲ್ಲವೆಂಬ ಅಂಶ ಸ್ಪಷ್ಟವಾಗಿದೆ. ಈಗ ದೇವಚಂದ್ರನ ಭಕ್ತಿಸಾರದ ಓಲೆ ಕೃತಿಯೊಂದು ಉಪಲಬ್ಧವಿದ್ದು 'ಕನ್ನಡ ಅಧ್ಯಯನ ಕೇಂದ್ರ' (ಬೆಂಗಳೂರು ವಿಶ್ವವಿದ್ಯಾಲಯ) ದಲ್ಲಿದೆ. ಆ ಕೃತಿಯ ಬಗೆಗೆ ಈ ಮುಂದೆ ಪರಿಚಯಿಸಲಾಗಿದೆ.

ದೇವಚಂದ್ರನ ಕೃತಿ ಭಾಮಿನಿ ಷಟ್ಪದಿಯಲ್ಲಿದ್ದು ಪ್ರತಿ ಶತಕದಲ್ಲೂ 125 ಪದ್ಯಗಳಂತೆ ಒಟ್ಟು 375 ಷಟ್ಪದಿಗಳಿವೆ. ಅರ್ಹತ್ಸ್ವಾಮಿಯ ಸ್ತುತಿಯಿಂದ ಕೃತಿ ಆರಂಭ

ವಾಗಿದೆ. ಅನಂತರ ಪಂಚಪರಮೇಷ್ಠಿಗಳ ಸ್ಮರಣೆ, ಶ್ರುತಿ, ಜಿನ ಬಿಂಬ, ಕೃತ್ರಿಮಾಕೃತ್ರಿಮ ಜಿನ ಚೈತ್ಯಗಳು, ವಾಣಿ, ನವಕೋಟಿ ಮುನಿಗಳು, ಕಲ್ಪಾಮರರು, ಶ್ರಾವಕತತಿ, ಕವೀಶ್ವರ ಸಮೂಹಾದಿ ಸ್ತುತಿಗಳಿವೆ. ಇಲ್ಲಿನ ಪ್ರತಿ ಪದ್ಯವೂ ಪ್ರಾಯಿಕವಾಗಿ 'ರಕ್ಷಿಸು ನೀನೆ ಅನವರತಾ', 'ರಕ್ಷಿಸನವರತಾ' ಎಂದು ಮುಗಿಯುತ್ತದೆ. ಶತಕತ್ರಯದ ಆದ್ಯಂತಗಳ ಹಾಗು ಕೃತಿಯಲ್ಲಿನ ಕೆಲವು ಪದ್ಯಗಳನ್ನು ಈ ಮುಂದೆ ಕೊಟ್ಟಿದೆ :

ಆದಿ :

× × [ಪ]ಂಕಜ ಯುಗಲ ರಂಜಿತ
ನಾದ ಬಿಂದು ಕಲಾಸಹಿತ ಓ[ಂ]ಕಾರ ರೂಪಧರಾ
ವೇದ ಸಿದ್ಧಾಂತಾದಿ ವಿಭು ನಿರು-
ಪಾಧಿವಿಮಲ ಸೌಖ್ಯಾ × × ದಾ
ರಾಧಿತಾರ್ಹತ್ಸ್ವಾಮಿ ರಕ್ಷಿಸು ನಮ್ಮನನವರತಾ (1-1)

ಅಷ್ಟಕರ್ಮಾರಾತಿ ದೂರರು
ಅಷ್ಟಸದ್ಗುಣವಾಂತ ಧೀರರು
ನಷ್ಟಮಲ ನಿ[ರ್ಮ]ಲರು ತಾವೇ ನಿರಾಕುಲೋಜ್ವಲರು
ಶಿಷ್ಟಜನ ಸೇವಿತರು ಜ್ಞಾನೋ-
ತ್ಕೃಷ್ಟ ನಿತ್ಯನಿರಂಜನರು ನಮ-
ಗಿಷ್ಟಸಂಸಿದ್ಧಿಯನು ಮಾಡುಗೆ ಸಿದ್ಧರನವರತಾ (1-2)

ಅಂತ್ಯ :

ಶ್ರೀಮದಖಿಲ ಜಗತ್ರಯಾನತ
ಸ್ವಾಮಿ ಜಿನಚಂದ್ರನ ಪದಾಂಬುಜ
ಕೀ ಮಹಾ [ಭಕ್ತಿ]ಯೊಳು ಪೊಳಗುತ ನಮಿಸುವೆನು ಸತತಾ
ರಾಮನಭಿವೃದ್ಧಿ ಪ್ರಸಿದ್ಧಿಯು
ಕ್ಷೇಮ ಜಯತುಷ್ಟಿ ಪ್ರಪುಷ್ಟಿ
ಶ್ರೀಮತಿಯನಿತ್ತಮರಚಂ[ದಿರ] ಪ್ರಭುವೆ ರಕ್ಷಿಪುದು (3-124)

ಇದು ನಮಿತ ವಿಬುಧೇಂದ್ರ ಶ್ರೀಜಿನ
ಪದಸರೋಜವಿಲೀನ ಷಟ್ಪದ
ಬುಧಜನಸ್ತುತ ದೇವಚಂದ್ರದ್ವಿ[ಜ]ನು ವಿರಚಿಸಿದಾ
ಅಧಿಕ ಸಂಪದವಿತ್ತು ಮುಕ್ತಿಯ
ಪದವಿಯೀಹ ಜಿನಭಕ್ತಿಸಾರದೊ-
ಳೊದಗೆಯತಿಶಯವಾದ ತೃತೀಯ ಸ [ಪಾದ] ಶತಕವಿದು (3-125)

ಕೃತಿಯ ಕೆಲವು ಪದ್ಯಗಳು :

ತಂದೆ ಭವ ಭವ ಬಂದೆ ದುರಿತಕೆ
ಸಂದು ನಾ ಬಹುನೊಂದೆ ಲೋಕದ
ಬಂಧು ಸದ್ಗುಣ ಸಿಂಧು ಸಲಹುವುದೆಂದು ನಾನಿಂದು
ವಂದಿಪೆನು ನೀನೆನ್ನ ಮರುಕದಿ
ಕಂದ ನೀನೇಳೆಂದು ಪರಮಾ–
ನಂದವನು ಕೊಟ್ಟರುಹ ರಕ್ಷಿಸು ನೀನೆ ಅನವರತಾ (1–22)

ಪರುಷ ಲೋಹವ ಸೋಂಕಿದರೆ ಪೊ–
ನ್ನರಸಲೇತಕೆ ನಿನ್ನ ಭಕ್ತಿಯ
ತೆರನೆರಡ ತಿಳಿದಾಗೆ ಮುಕ್ತಿಗೆ ಅರಸಲಿನ್ನುಂಟೆ
ಅರುಹ ತ್ರಿಜಗದ್ಗುರುವೆ ಕರುಣದ
ಕರುವೆ ಧರ್ಮವನೊರವೆ ಸೌಖ್ಯದೊ–
ಳಿರುವೆ ಬಿಡದೆನ್ನ ರಕ್ಷಿಸು ಭವ್ಯ ಸುರತರುವೇ (1–23)

ಆರು ಭೇದವ ಭಾವತತ್ವವ
ನಾರು ವಶ್ಯ ಕಲೇಶ್ಯ ಭೇದವ
ನಾರು ದ್ರವ್ಯದ ಕಾಯಪರ್ಯಾಪ್ತಿಯನು ನೀನೊರೆದಾ
ಆರು ಜೀವಾದಿಗಳ ಪೇಳಿದೆ
ಯಾರು ನಿನ್ನಂತಾಪ್ತರಿಳೆಯೊಳು
ಭೂರಿಸೌಖ್ಯವನೀವ ದಕ್ಷರು ರಕ್ಷಿಸನವರತಾ (1–49)

—ಎಸ್. ಶಿವಣ್ಣ

●

ಗ್ರಂಥಾವಲೋಕನ

● ವೀರಣ್ಣ ರಾಜೂರ

ಅಷ್ಟಕಗಳು (ಸಂಪುಟ–೧) :

ಸಂಪಾದಕರು : ಭೋಜರಾಜ ಪಾಟೀಲ, ಪ್ರಕಾಶಕರು : ಶ್ರೀಮತಿ ಲೀಲಾವತಿ ಪಾಟೀಲ, ಬಿ. ಎ. ಶಿವಬಸವ ಪ್ರಕಾಶನ, ಸ್ಟೇಷನ್ ರೋಡ, ಹಾವೇರಿ ಪುಟ : ೫೫ ; ಬೆಲೆ : ೧–೫೦.

ಕನ್ನಡ ಸರಸ್ವತಿ ಅನೇಕ ಸಾಹಿತ್ಯಪ್ರಕಾರಗಳ ಒಡತಿ. ಚಂಪೂ, ರಗಳೆ, ಶತಕ, ಕಂದ,, ಷಟ್ಪದಿ, ತ್ರಿಪದಿ, ಸಾಂಗತ್ಯ ಇತ್ಯಾದಿ ವೈವಿಧ್ಯಮಯ ಛಂದಸ್ಸುಗಳಲ್ಲಿ ರಚನೆಗೊಂಡ ವಿಪುಲ ಕೃತಿರತ್ನಗಳ ಮಾತೆ. ಇವುಗಳಲ್ಲಿ ಸಮಾವೇಶಗೊಳ್ಳುವ ಇನ್ನೊಂದು ಅತ್ಯಂತ ಪ್ರಾಚೀನ ಕಾವ್ಯಪ್ರಕಾರ 'ಅಷ್ಟಕ'. ಇದು ಸಂಸ್ಕೃತ ಸಾಹಿತ್ಯದಿಂದ ಕನ್ನಡಕ್ಕೆ ಎತ್ತಿ ತಂದ ಮುತ್ತಿನ ತೆನೆ. ಸು. 800 ರಲ್ಲಿದ್ದ ಗಂಗ ಅರಸು ಸೈಗೊಟ್ಟ ಶಿವಮಾರನಿಂದ ರಚಿತವಾದ 'ಗಜಾಷ್ಟಕ' ಕನ್ನಡದ ಪ್ರಥಮ ಅಷ್ಟಕ ಕೃತಿ. ಅಲ್ಲಿಂದ ಇಲ್ಲಿಯವರೆಗೆ ಈ ಸಾಹಿತ್ಯಪ್ರಕಾರ ಹುಲುಸಾಗಿ ಬೆಳೆಯುತ್ತ ಬಂದಿದೆ. ಈಗ ಕನ್ನಡದಲ್ಲಿ ಸು.150 ಅಷ್ಟಕಗಳು ಉಪಲಬ್ಧವಾಗಿವೆ. 8 ಪದ್ಯಗಳ ಕಿರಿಗಾತ್ರದ ಈ ಕೃತಿ ರಚನೆಯ ವಸ್ತು ಹೆಚ್ಚಾಗಿ ಭಕ್ತಿ, ಇಷ್ಟದೈವಸ್ತುತಿ. ಜೈನ, ವೀರಶೈವ. ಬ್ರಾಹ್ಮಣ-ಎಲ್ಲ ಮತದ ಕವಿಗಳೂ ಈ ಪ್ರಕಾರದಲ್ಲಿ ಕೃಷಿಗೈದಿದ್ದಾರೆ.

ಶ್ರೀ ಭೋಜರಾಜ ಪಾಟೀಲ ಅವರಿಂದ ಸಂಪಾದಿತವಾದ ಪ್ರಸ್ತುತ ಕೃತಿ ೧೫ ಅಷ್ಟಕಗಳನ್ನೊಳಗೊಂಡಿದೆ. ವಿನಾಯಕನ ಸುತ್ತಿಗೈದು ದೀಕ್ಷೆಹೊಂದಿ, ಪತ್ರಿ ಪುಷ್ಪಗಳಿಂದ ಇಷ್ಟಲಿಂಗದ ಪೂಜೆಮಾಡಿ, ಗಣವೃಂದವನ್ನು ನೆನೆದು, ಶಿವಮಹಿಮೆಯನ್ನು ಕೊಂಡಾಡಿ ಮಂಗಳಹಾಡಿ ಶಿವಸಾಕ್ಷಾತ್ಕಾರವನ್ನು ಪಡೆದುಕೊಳ್ಳುವವರೆಗಿನ ಅಷ್ಟಕಗಳು ಇಲ್ಲಿ ಮಾಲೆಗೊಂಡಿವೆ. ಇವುಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಬಹುದಿತ್ತು. ಆದರೆ ಕೆಲವು ಅಷ್ಟಕಗಳ ಕರ್ತೃ, ಕಾಲಗಳು ಅಜ್ಞಾತವಾಗಿರುವುದರಿಂದ ಸಂಪಾದಕರು ವಿಷಯಾನುಗುಣವಾದ ಈ ಮಾರ್ಗವನ್ನು ಅನುಸರಿಸಿರುವುದು ಯೋಗ್ಯವಾಗಿದೆ.

ಭಕ್ತಿಯೇ ಈ ಎಲ್ಲ ಅಷ್ಟಕಗಳ ಸ್ಥಾಯಿ. ಕಾವ್ಯಗುಣ ಇಲ್ಲಿ ಗೌಣ; ಭಕ್ತಿ ನಿರ್ಭರತೆಗೆ ಮಾತ್ರ ಅಗ್ರಸ್ಥಾನ. ಹೀಗಿದ್ದರೂ ಹೃದಯ ತುಂಬಿ ಹಾಡುವಾಗ ಕೆಲವು. ಕಾವ್ಯಾಂಶಗಳನ್ನೊಳಗೊಂಡ ಶ್ರೇಷ್ಠ ಭಾವಗೀತೆಗಳಾಗಿ ಮೂಡಿಬಂದಿವೆ.

ಈ ಸಂಕಲನದಲ್ಲಿ ಕೇವಲ ವೀರಶೈವ ಕವಿಗಳಿಂದ ರಚನೆಗೊಂಡ ಅಷ್ಟಕಗಳು ಸಂಗ್ರಹಿತವಾಗಿವೆ. ಇವು ವೃತ್ತ, ಕಂದ, ದ್ವಿಪದಿ ಹಾಗೂ ಸಾಂಗತ್ಯ ಛಂದಸ್ಸುಗಳಲ್ಲಿ ಮೈದಾಳಿವೆ.

ಈ ಅಷ್ಟಕಗಳನ್ನು ಅವುಗಳಲ್ಲಿ ಅಂತರ್ಗತವಾದ ವಿಷಯಗಳ ಮೇಲಿಂದ ನಾಲ್ಕು ವಿಭಾಗಗಳಾಗಿ ವಿಂಗಡಿಸಬಹುದು : ೧, ಶಿವ ಮತ್ತು ಶಿವಗಣಸ್ತುತಿ ೨. ಲಿಂಗಸ್ತುತಿ ೩. ನದಿ, ಪರ್ವತ ವರ್ಣನೆ ೪. ದೀಕ್ಷೆ.

ವಿನಾಯಕಾಷ್ಟಕ, ಶ್ರೀವಿರೂಪಾಕ್ಷಾಷ್ಟಕ, ಮಹಿಮಾಷ್ಟಕ, ಬಾಲಚಂದ್ರ ಶೇಖರಾಷ್ಟಕ, ತೇರಮಲ್ಲಾಷ್ಟಕ, ಚನ್ನಕೇಶವಾಷ್ಟಕ, ಶಿವದರ್ಶನಾಷ್ಟಕ, ಗಣಾಷ್ಟಕ, ಮಂಗಳಾಷ್ಟಕ, ಪುಷ್ಪಾಷ್ಟಕ ಇವು ಮೊದಲ ಗುಂಪಿಗೆ ಸೇರಿದರೆ ; ಇಷ್ಟಲಿಂಗಾಷ್ಟಕ, ಲಿಂಗಾಷ್ಟಕ ಎರಡನೆಯ ಗುಂಪಿಗೂ ; ಪರ್ವತಾಷ್ಟಕ, ತುಂಗಭದ್ರಾಷ್ಟಕ ಮೂರನೆಯ ಗುಂಪಿಗೂ ಮತ್ತು ದೀಕ್ಷಾಮಂಗಳಾಷ್ಟಕ ಕೊನೆಯ ಗುಂಪಿಗೂ ಸೇರುತ್ತವೆ.

ಪ್ರತಿಯೊಂದು ಅಷ್ಟಕದ ಪ್ರಾರಂಭದಲ್ಲಿ ಆ ಕೃತಿಯ ಕರ್ತೃ, ಕಾಲ, ವಸ್ತು, ಛಂದಸ್ಸುಗಳ ವಿಚಾರ, ಅದಕ್ಕೆ ಬಳಸಿಕೊಂಡ ಹಸ್ತಪ್ರತಿಗಳ ನಿರ್ದೇಶನ ಮಾಡಲಾಗಿದೆ. ಸಾಧ್ಯವಾದಷ್ಟು ಹಸ್ತಪ್ರತಿಗಳನ್ನು ಬಳಸಿಕೊಂಡು ಯೋಗ್ಯ ಪಾಠವನ್ನು ನಿರ್ಣಯಿಸಲು ವಹಿಸಿದ ಶ್ರಮ ಸಾರ್ಥಕವಾಗಿದೆ. ಆದರೂ ಕೆಲವೆಡೆ ಕೊಟ್ಟ ಪಾಠಕ್ಕಿಂತ ಕೆಳಗಿನವನ್ನು ಮೇಲಿರಿಸಿದ್ದರೆ ಹೆಚ್ಚು ಸಮರ್ಪಕವಾಗುತ್ತಿತ್ತು ಎನಿಸುತ್ತದೆ.

ಉದಾ :	ಪುಟ ೨೦,	ಪದ್ಯ ೭	[ನೆನೆದೂ] –ಇದಕ್ಕೆ ಬದಲು ಅಡಿಯಲ್ಲಿಯ 'ಸ್ಮರಿಸಿ' ಸರಿಯಿತ್ತು.
	ಪುಟ ೨೦,	ಪದ್ಯ ೯	'[ನೇತ್ರಾ]ರ್ಚಿ'–ಇದಕ್ಕೆ ಬದಲು 'ನಯನಾರ್ಚಿ' ಇದ್ದರೆ ಸರಿಯಿತ್ತು.
	ಪುಟ ೨೨,	ಪದ್ಯ ೫	'ನ' –ಇದರ ಬದಲು 'ನೇ' ಇದ್ದರೆ ಹೆಚ್ಚು ಸಮರ್ಪಕವಾಗುತ್ತಿತ್ತು.
	ಪುಟ ೩೧,	ಪದ್ಯ ೫	'ಸಲೆ' –ಇದಕ್ಕೆ ಬದಲು 'ಕಲಿ' ಇದ್ದರೆ ಸರಿಯಿತ್ತು.
	ಪುಟ ೩೯.	ಪದ್ಯ ೭	[ರ್ವಂತ] –ಇದಕ್ಕೆ ಬದಲು 'ರ್ವ' ಸರಿಯಾಗಿತ್ತು.
	ಪುಟ ೫೪,	ಪದ್ಯ ೪	[ಕ] –ಇದರ ಪಾಠಾಂತರ ೩×(ಗ)' ಹೀಗಿರಬೇಕಿತ್ತು.

ಇನ್ನೊಂದು ಎದ್ದು ಕಾಣುವ ದೋಷವೆಂದರೆ, ಪಾಠಾಂತರಗಳನ್ನು ಗುರುತಿಸಲು ಸೂಚಿಸಿದ ಅಂಕಿಗಳಲ್ಲಿ ಮತ್ತು ಚಿಹ್ನಗಳಲ್ಲಿ ಒಂದು ಕ್ರಮ ಇಲ್ಲದುದು. ಪ್ರತಿ ಪುಟಕ್ಕೆ ಪಾಠಾಂತರಕ್ಕೆ ಬೇರೆ ಅಂಕಿ ಪ್ರಾರಂಭಿಸಬೇಕು, ಇಲ್ಲವೆ, ಒಂದೊಂದು ನುಡಿಗಳಿಗೆ ಬೇರೆ ಬೇರೆ ಅಂಕಿ ಬಳಸಬಹುದು. ಅಥವಾ ಒಂದು ಅಷ್ಟಕ ಮುಗಿಯುವವರೆಗೆ ಅಂಕಿಗಳನ್ನು ಕ್ರಮವಾಗಿ ಬೆಳೆಸಬಹುದು. ಇವುಗಳಲ್ಲಿ ಯಾವುದೊಂದು ವಿಧಾನವನ್ನು ಅನುಸರಿಸಿದರೂ ಓದುಗರಿಗೆ ಸುಲಭವೇದ್ಯವಾಗುತ್ತದೆ. ಆದರೆ ಇಲ್ಲಿ ಹಾಗಿರದೆ ಗೊಂದಲಉಂಟಾಗಿದೆ. ಅದರಂತೆ ಚಿಹ್ನಗಳ ಬಳಕೆಯಲ್ಲಿಯೂ ಏಕ ಸ್ವರೂಪತೆ ಇಲ್ಲ.

ಉದಾ : ಪುಟ ೧೯, ಪದ್ಯ ೪. 'ಇ–ಫಲ' ಇದನ್ನು ಕೂಡಿಸಲು ಬಳಸಿದ್ದಾರೆ. ಆದರೆ ಪಾಠಾಂತರ ಶಾಸ್ತ್ರದಲ್ಲಿ ಈಗಾಗಲೇ ಕೂಡಿಸಲು + ಈ ಚಿಹ್ನವನ್ನೂ ಕಳೆಯಲು × ಈ ಚಿಹ್ನವನ್ನೂ ಬಳಕೆಗೆ ತರಲಾಗಿದೆ. ಅದಕ್ಕಾಗಿ, ಕೂಡಿಸುವದಿದ್ದರೆ 'ಇ+ಫಲ'– ಹೀಗೆ ಬರೆಯಬೇಕು.

ಪುಟ ೧೯, ಪದ್ಯ ೫. '೪–ವರ' ಇದು ೪+ವರ ಎಂದಾಗಬೇಕಿತ್ತು. ಒಂದು ವೇಳೆ ಸಂಪಾದಕರು ಕೂಡಿಸಲು '–' ಈ ಚಿಹ್ನವನ್ನೇ ಬಳಸಿಕೊಂಡಿದ್ದರೆ ಅದನ್ನು ಸಂಕೇತ ಸೂಚಿಯಲ್ಲಿ ಸ್ಪಷ್ಟಪಡಿಸಬೇಕಿತ್ತು; ಅಂದರೆ ಸಂದೇಹಕ್ಕೆ ಎಡೆ ಇರುತ್ತಿರಲಿಲ್ಲ.

ಇಂಥ ಒಂದೆರಡು ದೋಷಗಳನ್ನು ಬಿಟ್ಟರೆ, ಉಳಿದ ಸಂಪಾದನೆಯ ಕಾರ್ಯವೆಲ್ಲ ವ್ಯವಸ್ಥಿತವಾಗಿ ನಡೆದಿದೆ.

ಪ್ರಾರಂಭಕ್ಕೆ 'ಕೃತಿಯನ್ನು ಕುರಿತು' ಎಂಬ ವಿಭಾಗದಲ್ಲಿ ಅಷ್ಟಕದ ಚರಿತ್ರೆ, ಸ್ವರೂಪ, ಕನ್ನಡ ಸಾಹಿತ್ಯದಲ್ಲಿ ಅಷ್ಟಕದ ಬೆಳವಣಿಗೆಯನ್ನು ವಿಸ್ತಾರವಾಗಿ ವಿವೇಚಿಸಿದ್ದಾರೆ. ಕೊನೆಗೆ ಶಬ್ದಕೋಶ, ಪದ್ಯಗಳ ಅಕಾರಾದಿ ಕೊಟ್ಟಿದ್ದರೆ ಉತ್ತಮವಿತ್ತು. ಒಟ್ಟಿನಲ್ಲಿ, ಕೃತಿ ಸೊಗಸಾಗಿ ಹೊರಬಂದಿದೆ. ಓಲೆಗರಿ, ಕೋರಿಕಾಗದಗಳಲ್ಲಿ ಅಜ್ಞಾತವಾಸ ಅನುಭವಿಸುತ್ತಿದ್ದ ಈ ಚಿಕ್ಕ ಕೃತಿಯನ್ನು ಹುಡಿಕಿ ಪ್ರಥಮ ಬಾರಿಗೆ ಗ್ರಂಥಭಾಗ್ಯದೊರಕಿಸಿದ ಪ್ರೊ. ಪಾಟೀಲರ ಕಾರ್ಯ ಅಭಿನಂದನೀಯ. ಇದು ಅಷ್ಟಕದ ಪ್ರಥಮ ಸಂಪುಟ ಮುಂದೆ ಇನ್ನೂ ಕೆಲವು ಸಂಪುಟಗಳಲ್ಲಿ ಸಮಗ್ರ ಅಷ್ಟಕಗಳನ್ನು ಹೊರತರುವ ಉದ್ದೇಶವನ್ನು ಇಟ್ಟುಕೊಂಡಿರುವುದು ಸ್ತುತ್ಯ. ಹಳಗನ್ನಡ ಕಾವ್ಯರಾಶಿಯನ್ನು ಬೆಳಕಿಗೆ ತರುವ ಮಹದುದ್ದೇಶದಿಂದ ಹುಟ್ಟಿಕೊಂಡು ಈಗಾಗಲೇ ನಾಲ್ಕಾರು ಕೃತಿಗಳನ್ನು ಹೊರತಂದ ಶಿವಬಸವ ಪ್ರಕಾಶನವು ಎಲ್ಲ ಅಷ್ಟಕಗಳನ್ನು ಪ್ರಕಟಿಸಿದರೆ ಕನ್ನಡದಲ್ಲಿ ಅಷ್ಟಕ ಸಾಹಿತ್ಯದ ಬೆಳವಣಿಗೆ, ಅವುಗಳ ಮಹತ್ವ, ಶ್ರೀಮಂತಿಕೆ ಎಷ್ಟೆಂಬುದು ವೇದ್ಯವಾಗುತ್ತದೆ.

ಸಂಪಾದಕೀಯ

ಅಖಿಲ ಕರ್ನಾಟಕ ಆರನೆಯ ಜಾನಪದ ಸಮ್ಮೇಲನ

ಕನ್ನಡ ಅಧ್ಯಯನಪೀಠವು ಪ್ರತಿ ವರುಷವೂ ನಡೆಸುತ್ತಿದ್ದಂತೆ ಇದೇ ಕಳೆದ ದಿನಾಂಕ ೩,೪ ಡಿಸೆಂಬರ ೧೯೭೮-ಎರಡು ದಿನಗಳು ಆರನೆಯ ಜಾನಪದ ಸಮ್ಮೇಲನವನ್ನು ಇಲಕಲ್ಲಿನ ಶ್ರೀ ವಿಜಯಮಹಾಂತೇಶ ಮಹಾವಿದ್ಯಾಲಯದ ಆಶ್ರಯದಲ್ಲಿ ವೈಶಿಷ್ಟ್ಯಪೂರ್ಣವಾಗಿ ನೆರವೇರಿಸಿತು. ಇದುವರೆಗಿನ ಸಮಾಲೋಚನೆಗೆ ಜಾನಪದಸಾಹಿತ್ಯ ವೈವಿಧ್ಯಗಳನ್ನೇ ಎತ್ತಿಕೊಂಡಿದ್ದರೆ, ಈ ಸಲ ಜಾನಪದ ಜನಾಂಗಿಕ ಅಧ್ಯಯನದ ಹೊಚ್ಚಹೊಸ ಆಯಾಮಕ್ಕೆ ಒಲಿದಿದ್ದು ಅರ್ಥಪೂರ್ಣವೂ ಪ್ರಯೋಜಕವೂ ಆಗಿತ್ತು. ಸಮ್ಮೇಲನವನ್ನು ಉದ್ಘಾಟಿಸಿದ ಕುಲಪತಿ ಶ್ರೀ ಎಸ್. ಎಸ್. ಒಡೆಯರ ಅವರು ಇದನ್ನು ಬಹುವಾಗಿ ಪ್ರಶಂಸಿಸಿದ್ದರಲ್ಲಿ ಅಚ್ಚರಿಯಿಲ್ಲ.

ಉತ್ತರ ಕರ್ನಾಟಕದ ಜಾನಪದದ ಸಮರ್ಥ ಮತ್ತು ಅರ್ಹ ಪ್ರತಿನಿಧಿಗಳಾದ ಶ್ರೀ ಸಿಂಪಿ ಲಿಂಗಣ್ಣನವರ ಸರ್ವಾಧ್ಯಕ್ಷತೆಯಲ್ಲಿ ಜರುಗಿದ ಈ ಸಮ್ಮೇಲನವು **"ಉತ್ತರ ಕರ್ನಾಟಕದ ಜಾದಪದ ವೃತಿಕಾರರು"** (**ಜನಾಂಗಿಕ ಅಧ್ಯಯನ**)ಎಂಬ ವಿಷಯಕ್ಕೆಸಂಬಂಧಪಟ್ಟ ಮೂರು ಗೋಷ್ಠಿಗಳನ್ನು ನಿರ್ವಹಿಸಿತು. ಈ ಗೋಷ್ಠಿಗಳಲ್ಲಿ-ಗೊರವರು, ಗೊಂದಲಿಗರು, ಚೌಡಕಿಯುವರು, ಮುಂತಾದ **ಧಾರ್ಮಿಕ ಪರ** ; ಲಾವಣಿಕಾರರು, ಕಿಳ್ಳಿಕೇತರು, ವೇಷಗಾರರು ಮುಂತಾದ **ಕಲಾಪರ ;** ಕೊರವಂಜಿ, ಬುಡಬುಡಕಿ, ಜನಪದ ವೈದ್ಯ-ಮಾಟ, ಮಂತ್ರ, ತಂತ್ರ ಮುಂತಾದ **ನಂಬಿಗೆಪರ;** ಕವಲೆತ್ತಿನವರು, ಡೊಂಬರು, ಹಾವಾಡಿಗರು ಮುಂತಾದ **ಕೌಶಲ್ಯ ಪರ** – ಹೀಗೆ ವಿದಥ ೨೦ ವೃತ್ತಿಪರ ಜನಾಂಗಗಳ ಕುರಿತಾದ ಚರಿತ್ರೆ, ಸಂಪ್ರದಾಯ, ಕಲಾಪ್ರದರ್ಶನದ ರೀತಿ-ನೀತಿಗಳ ಕುರಿತಾದ ವಿವರಗಳನ್ನು ಅಷ್ಟೇ ಸಂಖ್ಯೆಯ ವಿದ್ವಾಂಸರು ಅಭ್ಯಾಸಪೂರ್ಣ ಪ್ರಬಂಧಗಳ ಮೂಲಕ ಸಾದರಪಡಿಸಿದರು. ಈ ಕಾಲಕ್ಕೆ ಕೆಲವು ವಿಷಯಗಳ ಕುರಿತಾದ ಮಹತ್ವದ ಅಂಶಗಳನ್ನು ಪರಿಶ್ರಮಪೂರ್ವಕವಾಗಿ ಮೊಟ್ಟಮೊದಲಿಗೆ ಸಂಗ್ರಹಿಸಿ ಪ್ರಕಟಿಸಿದ್ದು ನಿಜವಾಗಿಯೂ ಮೌಲಿಕವಾಗಿದ್ದಿತು. ಈ ಸಂಚಿಕೆಯ ಪುಟಮಿತಿಗಳಿಂದಾಗಿ ಇದರಲ್ಲಿ ಸಮ್ಮೇಲನದ ಕುರಿತಾದ ವಿವರವಾದ ವರದಿಯನ್ನು ಪ್ರಕಟಿಸಲಾಗದ್ದಕ್ಕಾಗಿ ನಾವು ವಿಷಾದಿಸುತ್ತೇವೆ.

ವಿಶ್ವವಿದ್ಯಾಲಯ 'ಶಿಲ್ಪಿ'

ಡಾ. ಡಿ. ಸಿ. ಪಾವಟೆ (1899–1979)



ವಿಶ್ವವಿದ್ಯಾಲಯ 'ಶಿಲ್ಪಿ' ಡಾ. ಪಾವಟೆಯವರಿಗೆ ಶ್ರದ್ಧಾಂಜಲಿ

ಈ ವಿಶ್ವವಿದ್ಯಾಲಯದ ಸಮರ್ಥ 'ಶಿಲ್ಪಿ'ಗಳಾಗಿದ್ದ ಡಾ. ದಾದಾಸಾಹೇಬ ಚಿಂತಾಮಣಿ ಪಾವಟೆಯವರು ಇದೇ ಕಳೆದ ೧೭-೧-೧೯೭೯ ರ ಮುಂಜಾನೆ ಹೃದಯಾಘಾತದಿಂದ ನಿಧನರಾದರೆಂಬ ಸುದ್ದಿ ಈ ಸಂಸ್ಥೆಗೆ ಸಂಬಂಧಪಟ್ಟ ಎಲ್ಲರಿಗೂ ಹೃದಯಾಘಾತಕರವಾಗಿಯೇ ಬಂದಿತು. ೧೯೫೪ ರಿಂದ ೧೯೬೭ರವರೆಗೆ ೧೩ ವರ್ಷಗಳ ಕಾಲ ಈ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಅವರು ಸಲ್ಲಿಸಿದ ಸೇವೆ, ದೊರಕಿಸಿಕೊಟ್ಟ ಸಾಧನೆಗಳು ಅವಿಸ್ಮರಣೀಯ. ಅವರು ಒಂದು ವ್ಯಕ್ತಿಯಲ್ಲ, ಶಕ್ತಿಯೆಂಬಂತೆ ದುಡಿದು ಬಾಲಾರಿಷ್ಟದಲ್ಲಿದ್ದ ಈ ವಿಶ್ವವಿದ್ಯಾಲಯವನ್ನು ದೃಢವಾಗಿ, ಘನವಾಗಿ ಬೆಳಸಿದರು. ಕಾಡು ಕುರುಚಲುಗಳಿಂದ ತುಂಬಿದ ಹಿಂದಿನ ಛೋಟಾ ಮಹಾಬಳೇಶ್ವರವು ಇಂದು ಸುಂದರ ವಿದ್ಯಾವಾಸವಾಗಿ ನೆಲೆಸಿದ್ದರೆ ಅದಕ್ಕೆ ಡಾ. ಪಾವಟೆಯವರ ಆಡಳಿತ ದಕ್ಷತೆ, ಪ್ರಾಧ್ಯಾಪಕತ್ವಕ್ಕೆ, ಅಧಿಕಾರಿ ವರ್ಗಕ್ಕೆ ಅರ್ಹರ ಆಯ್ಕೆಗಳೇ ಕಾರಣ. ಅವರ ಕರ್ತೃತ್ವ, ವ್ಯಕ್ತಿತ್ವದಿಂದಾಗಿಯೇ ಈ ವಿಶ್ವವಿದ್ಯಾಲಯ ಅಖಿಲ ಭಾರತ ಖ್ಯಾತಿ ಸಂಪಾದಿಸಿತು; ಅವರಿಗೆ ೧೯೬೭ರಲ್ಲಿ "ಪದ್ಮಭೂಷಣ" ರಾಷ್ಟ್ರಪ್ರಶಸ್ತಿಯೂ ಸಂದಿತು. ಖ್ಯಾತ ಶಿಕ್ಷಣವೇತ್ತರೂ, ಮೇಧಾವಿ ಗಣಿತಶಾಸ್ತ್ರಜ್ಞರೂ ಆಗಿದ್ದ ಅವರು ಆಡಳಿತದಲ್ಲೂ ನುರಿತವರಾಗಿದ್ದರಿಂದಲೇ ೧೯೬೭ರಲ್ಲಿ ಪಂಜಾಬದ ರಾಜ್ಯಪಾಲರಾಗಬೇಕೆಂದು ಆಮಂತ್ರಿತರಾಗುವ ವಿರಳ ಗೌರವಕ್ಕೂ ಪಾತ್ರರಾದರು. ವಿಶ್ವವಿದ್ಯಾಲಯವು ಕಳೆದುಕೊಂಡ ಅವರ ಸೇವೆ ರಾಷ್ಟ್ರ ಕಲ್ಯಾಣಕ್ಕೆ ಮೀಸಲಾಯಿತು. ಅಲ್ಲಿಯೂ ನುರಿತ ರಾಜಕಾರಣಿಗಳನ್ನೂ ಮೀರಿಸುವ ಚಾಣಾಕ್ಷತೆಯನ್ನು ತೋರಿದ ಅವರು ನಿವೃತ್ತಿಯ ನಂತರ ಬೆಂಗಳೂರಿನಲ್ಲಿ ನೆಲಸಿ ರಾಜಕಾರಣದಿಂದ ದೂರವಿದ್ದು ಶಿಕ್ಷಣ, ಸಂಸ್ಕೃತಿ ಪ್ರಯತ್ನಗಳಿಗೆ ಬೆಂಬಲವಾಗಿದ್ದರು. ಅವರ ನಿಧನದಿಂದಾಗಿ ರಾಷ್ಟ್ರವು ಶ್ರೇಷ್ಠಮಟ್ಟದ ಶಿಕ್ಷಣ ತಜ್ಞನನ್ನೂ, ಕರ್ನಾಟಕವು ಒಬ್ಬ ಪ್ರತಿಭಾವಂತ ಯೋಜಕ. ಸಂಘಟಕನನ್ನೂ, ಈ ವಿಶ್ವವಿದ್ಯಾಲಯವು ತಂದೆಯಂತಹ ವಾತ್ಸಲ್ಯಪೂರ್ಣ ಮಾರ್ಗದರ್ಶಕನನ್ನೂ ಕಳೆದುಕೊಂಡಂತಾಗಿದೆ. ಈ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ಎಲ್ಲ ವಿಭಾಗಗಳವರೂ ತಮ್ಮ ಹಾರ್ದಿಕ ಸ್ಮರಣೆ, ಶ್ರದ್ಧಾಂಜಲಿಗಳನ್ನರ್ಪಿಸುವದರಲ್ಲಿ 'ಭಾರತಿ'ಯೂ ಹನಿಗೂಡಿಸುತ್ತಿದೆ, ಧ್ವನಿಗೂಡಿಸುತ್ತಿದೆ.

●

ಸಾದರ ಸ್ವೀಕಾರ

೧. **ಕೆಂಪು ಕವನಗಳು :**
ಎಸ್. ಎಸ್. ಹಿರೇಮಠ. ಪ್ರ : ಸಮತಾ ಪ್ರಕಾಶನ, ಹೊಸಪೇಟೆ, ೧೯೭೮. ಪುಟ : ೨೨ ಬೆಲೆ : ರೂ. ೨-೦೦

೨. **ಕಾಡಿನಲ್ಲಿ ಕೈವಲ್ಯ** (ಕಾದಂಬರಿ) :
ಜಿ. ಎಚ್. ಹನ್ನೆರಡುಮಠ. ಪ್ರ : ಶ್ರೀ. ಜ. ಗ. ದ. ಪ್ರ. ಮಂಡಳ, ಮೂರುಸಾವಿರಮಠ, ಹುಬ್ಬಳ್ಳಿ, ೧೯೭೮. ಪುಟ : ೧೮೬, ಬೆಲೆ : ರೂ. ೬-೦೦

೩. **ಹೆಗ್ಗಣ** (ಕಥಾಸಂಕಲನ) :
ದೇ. ನಾ. ಶ್ರೀನಿವಾಸಮೂರ್ತಿ. ಪ್ರ : ಕರ್ನಾಟಕ ಸಂಘ, ಶೇಷಾದ್ರಿಪುರಂ ಕಾಲೇಜು, ಬೆಂಗಳೂರು, ೧೯೭೮. ಪುಟ : ೭೪, ಬೆಲೆ : ರೂ. ೬-೦೦

೪. **ಗ್ರಂಥಸಂಪಾದನಾಶಾಸ್ತ್ರ ಪರಿಚಯ :**
ಸೀತಾರಾಮ ಜಾಗೀರದಾರ್. ಪ್ರ : ಕನ್ನಡ ಸಾಹಿತ್ಯ ಸಂಘ, ರಂಗಂಪೇಟೆ (ಸುರಪುರ), ೧೯೭೮. ಪುಟ : ೨೨೦, ಬೆಲೆ : ರೂ. ೧೨-೦೦

೫. **ನಾನು ಕಂಡ ಗೆಳೆಯರ ಗುಂಪು,** ಭಾಗ-೧ (ಶಾಂತಿ-ನಿಕೇತನ) :
ಶೇ. ಗೋ. ಕುಲಕರ್ಣಿ. ಪ್ರ : ರಾಜಹಂಸ ಪ್ರಕಾಶನ, ರಜತಗಿರಿ ಧಾರವಾಡ-೪. ೧೯೭೮ ಪುಟ : ೨೦೮, ರೂ. ೧೦-೦೦

೬. **ಜೇನ್ ಆಸ್ಟಿನ್** (ಸಾಹಿತ್ಯ ವಿಮರ್ಶೆ) :
ಗೋಪಾಲ ಆಶ್ರಿತ. ಪ್ರ : ಗೃಹಸರಸ್ವತೀ ಗ್ರಂಥಮಾಲೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೮ ಪುಟ : xvi + ೧೬೨, ಬೆಲೆ : ರೂ. ೫-೦೦

ಕನ್ನಡ ಅಧ್ಯಯನಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟನೆಗಳು :

೭. **ದ್ವಿತೀಯ ಭಾಷಾಬೋಧನೆ** (ಭಾಷಾ ವಿಜ್ಞಾನ) :
ಬಿ. ಬಿ. ವೀರಭದ್ರಪ್ಪ. ಪುಟ : vi + ೧೮೦, ಬೆಲೆ : ರೂ. ೯-೦೦

೮. **ಸಂಪ್ರದಾಯದ ಹಾಡುಗಳು** (ಸಂಕಲನ) :
ಸಂ : ಬಿ. ಎಸ್. ಸರೋಜ, ಪುಟ : ೪೮೪, ಬೆಲೆ : ರೂ. ೨೦-೦೦

೯. **ಪರ್ವತದೇವ ವಿರಚಿತ ನನ್ನಯ್ಯ ಚಾರಿತ್ರ** (ಕಾವ್ಯ ಸಂಪಾದನೆ) :
ಸಂ : ಮಂಜಪ್ಪ ಶೆಟ್ಟಿ, ಪುಟ : x + L11 + ೩೯ ೪೧೧, ಬೆಲೆ : ರೂ. ೧೨-೦೦

೧೦. **ಪರಂಜ್ಯೋತಿಯತಿ ವಿರಚಿತ ಅನುಭವ ಮುಕುರ** (ಕಾವ್ಯ ಸಂಪಾದನೆ):
ಸಂ : ಕೆ. ಆರ್. ಶೇಷಗಿರಿ. ಪುಟ : ೨೫೧, ಬೆಲೆ : ರೂ. ೧೦–೦೦

ಪತ್ರಿಕೆಗಳು :

೧. ಕನ್ನಡನುಡಿ
೨. ಜೀವನ ವಿಕಾಸ
೩. ಪರಂಜ್ಯೋತಿ
೪. ಕನ್ನಡಿಗ (ದೀಪಾವಳಿಯ ಸಂಚಿಕೆ)
೫. KOREAN NEWS

ಈ ಸಂಚಿಕೆಯ ಲೇಖಕರು

೧. **ಶ್ರೀಮತಿ ಶಶಿಕಲಾ ಮೋಳದಿ :**
ಅಧ್ಯಾಪಿಕೆ, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಕಲಬುರ್ಗಿ–5.

೨. **ಡಾ. ವಿಲ್ಯಂ ಮಾಡ್ತ :**
ಪ್ರವಾಚಕರು, ಕನ್ನಡ ಅಧ್ಯಯನ ಪೀಠ, ಕ. ವಿ. ವಿ. ಧಾರವಾಡ.

೩. **ಡಾ. ಅ. ಸುಂದರ :**
ಪ್ರವಾಚಕರು, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರವಿಭಾಗ, ಕ. ವಿ. ವಿ. ಧಾರವಾಡ.

೪. **ಡಾ. ಎಸ್. ಆರ್. ಗುಂಜಾಳ :**
ಉಪಗ್ರಂಥಾಲಯಾಧಿಕಾರಿ, ಕ. ವಿ. ವಿ. ಧಾರವಾಡ.

೫. **ಶ್ರೀ ಟಿ. ಎಸ್. ಸತ್ಯನಾಥ್ :**
ಕನ್ನಡ ಅಧ್ಯಾಪಕರು, ಆಧುನಿಕ ಭಾರತೀಯ ಭಾಷಾವಿಭಾಗ, ದೆಹಲಿ ವಿಶ್ವವಿದ್ಯಾಲಯ, ದೆಹಲಿ–110 007.

೬. **ಶ್ರೀ ರಘುಪತಿ ಕೆಮ್ತೂರು :**
ಕನ್ನಡ ಉಪನ್ಯಾಸಕರು, ಜ್ಯೂನಿಯರ್ ಕಾಲೇಜು, ಮಣಿಪಾಲ, ದ. ಕ. 576119

೭. **ಶ್ರೀ ಎಸ್. ಪಿ. ಪಾಟೀಲ :**
ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕ. ವಿ. ವಿ. ಧಾರವಾಡ.

೮. **ಡಾ. ವಿ. ಶಿವಾನಂದ :**
ಸಂಶೋಧನ ಸಹಾಯಕರು, ಕನ್ನಡವಿಭಾಗ, ಮದ್ರಾಸ ವಿಶ್ವವಿದ್ಯಾಲಯ, ಮದ್ರಾಸ–5.

೯. **ಡಾ. ಜಿ. ಎಸ್. ಕುಳ್ಳಿ :**
ಪ್ರವಾಚಕರು, ಕನ್ನಡ ಅಧ್ಯಯನ ಪೀಠ, ಕ. ವಿ. ವಿ. ಧಾರವಾಡ.

ಡಾ. ವಿ. ಆಯ್. ಸುಬ್ರಹ್ಮಣ್ಯಂ :
ಮುಖ್ಯಸ್ಥರು, ಭಾಷಾವಿಜ್ಞಾನವಿಭಾಗ, ಕೇರಳ ವಿಶ್ವವಿದ್ಯಾಲಯ, ತಿರುವನಂತಪುರ.

೧೦. **ಶ್ರೀ ಶಂಕರಗೌಡ ಬಿರಾದಾರ :**
ಸಂಶೋಧನ ವಿದ್ಯಾರ್ಥಿ, ಕನ್ನಡವಿಭಾಗ, ಸ್ನಾತಕೋತ್ತರಕೇಂದ್ರ, ಕಲಬುರ್ಗಿ–5.

೧೧. **ಡಾ. ಟಿ. ಆರ್. ಭಟ್ :**
ಅಧ್ಯಾಪಕರು, ಹಿಂದೀ ವಿಭಾಗ, ಕ. ವಿ. ವಿ. ಧಾರವಾಡ.

೧೨. **ಡಾ. ಎಂ. ಎಸ್. ಲಠ್ಠೆ :**
ಅಧ್ಯಾಪಕರು, ಕನ್ನಡವಿಭಾಗ, ಸ್ನಾತಕೋತ್ತರ ಕೇಂದ್ರ, ಕಲಬುರ್ಗಿ–5.

೧೩. **ಡಾ. ಕೆ. ಶ್ರೀಕಂಠಯ್ಯ :**
ಅಧ್ಯಾಪಕರು, 393, ಜಯನಗರ I ಬ್ಲಾಕ್, ಬೆಂಗಳೂರು–11.

೧೪. **ಶ್ರೀ ಎಸ್. ಶಿವಣ್ಣ :**
ಸಂಶೋಧನ ಸಹಾಯಕರು, ಕನ್ನಡ ಅಧ್ಯಯನ ಕೇಂದ್ರ, ಬೆಂ. ವಿ. ವಿ. ಬೆಂಗಳೂರು.

೧೫. **ಡಾ. ವೀರಣ್ಣ ರಾಜೂರ :**
ಅಧ್ಯಾಪಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.